ಶುಕ್ರವಾರ, ಅಕ್ಟೋಬರ್ 6, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಮುಂಬೈನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಐಶ್ವರ್ಯಾ ರೈ ಬಚ್ಚನ್ ಪಾಲ್ಗೊಂಡಿದ್ದರು

ದಿ ಚೆನ್ನೈ ಸಿಲ್ಕ್ಸ್™

ಆಚರಣೆಗಳು ಪ್ರಾರಂಭವಾಗಲಿ!

ಭಾರತದ ಅತ್ಯಂತ ವಿಶ್ವಾಸಾರ್ಹ ಆಭರಣ ವ್ಯಾಪಾರಿ

ಶ್ರೀ ಕುಮರನ್ ತಂಗಮಾಳಿಗೈ ಜ್ಯುವೆಲ್ಲರ್ಸ್

ಚಿನ್ನ • ಬೆಳ್ಳಿ • ವಜ್ರ • ಪ್ಲಾಟಿನಂ

1 ಮಹಡಿ, ಲಕ್ಷ ರೇಷ್ಮೆ ಸೀರೆಗಳು

ದಸರಾ

ಹಬ್ಬದ ಶುಭಾಶಯಗಳು

3 ವಿಶಾಲವಾದ ಮಹಡಿಗಳಲ್ಲಿ ಅತಿ ಹೆಚ್ಚು ಆಭರಣಗಳ ಸಂಗ್ರಹಣೆಗಳು

ಉಡುಪು

ಸುಂದರವಾದ ರೇಷ್ಮೆ ಸೀರೆಗಳು, ಲೆಹೆಂಗಾ, ಫ್ಯಾನ್ಸಿ ರೇಷ್ಮೆ, ಮೈಸೂರು ರೇಷ್ಮೆ, ಹಾಗೂ ಬನಾರಸ್ ಸೀರೆಗಳು, ಮತ್ತು ಸಣ್ಣ ವಯಸ್ಸಿನ ಹುಡುಗ – ಹುಡುಗಿಯರ ಉಡುಪುಗಳ ಸಂಗ್ರಹಣೆಗಳು, ಶರ್ಟಿಂಗ್ ಮತ್ತು ಸೂಟಿಂಗ್ ಸೆಟ್ ಗಳು, ರೇಮಂಡ್ ಹಾಗೂ ಇತರೆ ಬ್ರಾಂಡ್ ಗಳ "ಪುರುಷರ" ಉಡುಪುಗಳ ಸಂಗ್ರಹಗಳು...

ರೇಷ್ಮೆ ಮತ್ತು ಆಭರಣ

@ಒಂದೇ ಸ್ಥಳದಲ್ಲಿ

ಆಭರಣ

ರಾಗಿಣಿ ಮದುವೆಯ ಆಭರಣ, ಎಥಿನಿಕ್ ನಾಗಾಸ್ ಆಭರಣ, ಹಾಗೂ "ಸಾಂಪ್ರದಾಯಿಕ" ಟೆಂಪಲ್ ಆಭರಣ, ಧೂಲಿಕಾಸ್ ವಜ್ರ, ಅರೋರಾ ಮದುವೆಯ ಸಿಲ್ವರ್,ರೋಸ್ ಗೋಲ್ಡ್ ಸಿಗ್ನೇಚರ್ ಸಂಗ್ರಹಣೆಗಳು,ಮತ್ತು ಇತ್ಯಾದಿ....

ಎಲೆಕ್ಟ್ರಾನಿಕ್ ಸಿಟಿಯಿಂದ 30 ನಿಮಿಷಗಳು

ಬೆಂಗಳೂರು ಹೆದ್ದಾರಿ, ಹೊಸೂರು. 96777 61978, 91675 27777.

ತಮಿಳುನಾಡು • ಕೇರಳ • ತೆಲಂಗಾಣ • ಪುದುಚೇರಿ

SCAN TO REACH US

ಇದೇ 15ರಿಂದ 24ರವರೆಗೆ ನಾಡಹಬ್ಬ • ಸಿಂಗಾರಗೊಳ್ಳುತ್ತಿದೆ ಸಾಂಸ್ಕೃತಿಕ ನಗರಿ • 18 ಉಪ ಸಮಿತಿಗಳ ರಚನೆ

ಮೈಸೂರು ದಸರೆಯ ವೈಭವಕ್ಕಿಲ್ಲ 'ಬರ'

• ಎಂ. ಮಹೇಶ

ಮೈಸೂರು: ಜಿಲ್ಲೆಯ 8 ತಾಲ್ಲೂಕು ಸೇರಿದಂತೆ ರಾಜ್ಯದ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಘೋಷಿಸಿರುವ ನಡುವೆಯೂ, ಮೈಸೂರು ದಸರೆಯ ವೈಭವಕ್ಕೆ 'ಬರ' ಇಲ್ಲವೆಂಬ ರೀತಿಯಲ್ಲಿ, ನಗರವನ್ನು ವೈಭವದಿಂದ ಸಿಂಗರಿಸಲಾಗುತ್ತಿದೆ. ಸಿದ್ಧತೆಗಳು ಭರದಿಂದ ಸಾಗಿವೆ.

'ದಸರೆಯನ್ನು ಅದ್ಧೂರಿಯಾಗಿ ಆಯೋಜಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ ಬಳಿಕ, ಬರಗಾಲದ ಘೋಷಣೆಯಾಗಿ, ಉತ್ಸವವನ್ನು ಸರಳವಾಗಿ ಆಚರಿಸಬೇಕು ಎಂಬ ಚರ್ಚೆ ನಡೆದಿತ್ತು. ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ 'ಸರಳವಾಗಿ ಉತ್ಸವ ನಡೆಸಲಾಗುವುದು' ಎಂದಿದ್ದರು.

ಕೆಲ ದಿನಗಳಲ್ಲೇ ಮಾತು ಬದಲಿಸಿದ ಅವರು, 'ಈ ಬಾರಿ ಸರಳವೂ ಅಲ್ಲದ, ಅದ್ಧೂರಿಯೂ ಅಲ್ಲದ ಸಾಂಪ್ರದಾಯಿಕ ದಸರಾ ಆಚರಿಸಲಾಗುವುದು' ಎಂದು ಹೇಳಿದರು.

ಕಾರ್ಯಕ್ರಮ ಕಡಿಮೆಯಾಗಿಲ್ಲ: ಈ ಬಾರಿಯೂ ಹಿಂದಿನ ವರ್ಷಗಳಷ್ಟೇ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಯಾವುದನ್ನೂ ಕೈಬಿಟ್ಟಿಲ್ಲ. ತಯಾರಿ, ವ್ಯವಸ್ಥೆ ಹಾಗೂ ಆಯೋಜನೆಗಾಗಿ ವಿವಿಧ 18 ಉಪ ಸಮಿತಿಗಳನ್ನು ರಚಿಸಲಾಗಿದೆ. ಯುವ ದಸರೆಗೆ ಪೂರ್ವಭಾವಿಯಾಗಿ 'ಯುವ ಸಂಭ್ರಮ' ಕಾರ್ಯಕ್ರಮ ಮಾನಸ ಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಅ.6ರಿಂದ ಅ.13 ರವರೆಗೆ ನಿತ್ಯ ಸಂಜೆ ನಡೆಯಲಿದೆ.

ಹೆಚ್ಚುವರಿ ವೇದಿಕೆಗಳು: ಹಿಂದಿನ ವರ್ಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹೆಚ್ಚುವರಿಯಾಗಿ ಹೊರವಲಯದ ಮೂರು ವೇದಿಕೆಗಳಿಗೆ ವಿಸ್ತರಿಸಲಾಗಿದೆ. ಅಂಬಾವಿಲಾಸ ಅರಮನೆ ಆವರಣ, ಪುರಭವನ, ಜಗನ್ಮೋಹನ ಅರಮನೆ, ಚಿಕ್ಕ ಗಡಿಯಾರ, ಕಲಾಮಂದಿರ, ಕಲಾಮಂದಿರ ಆವರಣದ ಕಿರು ರಂಗಮಂದಿರ, ನಾದಬ್ರಹ್ಮ ಸಂಗೀತ ಸಭಾ, ಗಾನಭಾರತಿ ವೇದಿಕೆ ಹಾಗೂ ನಂಜನಗೂಡಿನ ಅರಮನೆ ಮಾಳದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಬಾರಿ ರಾಮಕೃಷ್ಣ ನಗರದಲ್ಲಿರುವ 'ನಟನ' ರಂಗಶಾಲೆ ಹಾಗೂ ರಮಾಗೋವಿಂದ ರಂಗಮಂದಿರದಲ್ಲೂ ನಾಟಕ ಪ್ರದರ್ಶನವಿರುತ್ತದೆ.

5ಸಾವಿರಕ್ಕೂ ಹೆಚ್ಚು ಕಲಾವಿದರಿಗೆ ವೇದಿಕೆ ಒದಗಿಸಲಾಗುತ್ತಿದ್ದು, ಅದಕ್ಕಾಗಿಯೇ ₹2 ಕೋಟಿ ಅನುದಾನ ಕೇಳಲಾಗಿದೆ. ಕಲಾವಿದರ ಸಂಭಾವನೆಯೇ ₹1.60 ಕೋಟಿ ಆಗಲಿದೆ.

ಈ ಬಾರಿ, ಒಟ್ಟು 181 ರಸ್ತೆಗಳು (ಒಟ್ಟು 135 ಕಿ.ಮೀ.) ಹಾಗೂ 129 ವೃತ್ತಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ಒಟ್ಟು 33 ಪ್ರತಿಕೃತಿಗಳನ್ನು ಪ್ರದರ್ಶಿಸಲಾಗುವುದು. ಅದಕ್ಕಾಗಿ 1,31,805 ಯೂನಿಟ್ ವಿದ್ಯುತ್ ಬೇಕಾಗುತ್ತದೆ, ₹6.03 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜಿಸಲಾಗಿದೆ. ಸರ್ಕಾರದ ಗ್ಯಾರಂಟಿ ಕಾರ್ಯಕ್ರಮಗಳು, ಚಂದ್ರಯಾನ-3 ಹಾಗೂ ಜಿ-20 ಶೃಂಗಸಭೆಯ ಕಲಾಕೃತಿಗಳನ್ನು ಪ್ರದರ್ಶಿಸಲಾಗುತ್ತದೆ.

ಈ ಬಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗೆ ವಿಶೇಷ ಪೋಷಾಕು (ಸೆರಮೊನಿ ಡ್ರೆಸ್) ನೀಡಲು ತೀರ್ಮಾನಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಈ ಪದ್ಧತಿ ಇರಲಿಲ್ಲ.

ದಸರಾ ಹಿನ್ನೆಲೆಯಲ್ಲಿ ಮೈಸೂರಿನ ಚಾಮರಾಜ ವೃತ್ತಕ್ಕೆ ವಿದ್ಯುತ್ ದೀಪಾಲಂಕಾರ ಮಾಡಲು ಕಾರ್ಮಿಕರು ಗುರುವಾರ ತಯಾರಿ ನಡೆಸಿದರು ಪ್ರಜಾವಾಣಿ ಚಿತ್ರ- ಅನೂಪ್ ರಾಘ.ಟಿ.


ದಸರೆಯನ್ನು ಸಾಂಪ್ರದಾಯಿಕವಾಗಿ ಆಚರಿಸುತ್ತೇವೆ. ಹಿಂದಿನ ವರ್ಷಕ್ಕಿಂತ ಕಡಿಮೆ ಖರ್ಚು ಮಾಡುತ್ತೇವೆ. ನಂತರ ಲೆಕ್ಕ ಕೊಡಲಾಗುವುದು
ಡಾ.ಎಚ್.ಸಿ. ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ದಸರೆಯಿಂದ ಪ್ರವಾಸೋದ್ಯಮ, ಸಾರಿಗೆ, ಹೋಟೆಲ್ ಮೊದಲಾದ ಉದ್ಯಮಗಳಿಗೆ ಚೈತನ್ಯ ಸಿಗುತ್ತದೆ. ದುಂದು ವೆಚ್ಚ ಇಲ್ಲದಂತೆ, ನಾಡಹಬ್ಬದ ಘನತೆಗೆ ತಕ್ಕಂತೆ ನಡೆಸಲಾಗುವುದು
ಕೆ.ವಿ. ರಾಜೇಂದ್ರ, ಜಿಲ್ಲಾಧಿಕಾರಿ

15ರಂದು ಉದ್ಘಾಟನೆ

ಅ.15ರಂದು ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ಉತ್ಸವಕ್ಕೆ ಸಂಗೀತ ನಿರ್ದೇಶಕ ಹಂಸಲೇಖ ಚಾಲನೆ ನೀಡಲಿದ್ದಾರೆ. ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯು ಅ.24ರಂದು ನಡೆಯಲಿದೆ. ಅಂಬಾವಿಲಾಸ ಅರಮನೆ ಆವರಣದಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ ವಿಜಯದಶಮಿ ಮೆರವಣಿಗೆ ಇರಲಿದೆ. ಪಂಜಿನ ಕವಾಯತು ಕಾರ್ಯಕ್ರಮದೊಂದಿಗೆ ದಸರೆಗೆ ತೆರೆಬೀಳಲಿದೆ.

₹ 30 ಕೋಟಿಗೆ ಪ್ರಸ್ತಾವ

ಜಿಲ್ಲಾಡಳಿತದಿಂದ ₹ 30 ಕೋಟಿ ಅನುದಾನಕ್ಕೆ ಪ್ರಸ್ತಾವ ಸಲ್ಲಿಸಲಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ₹ 15 ಕೋಟಿ ದೊರೆತಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ₹ 10 ಕೋಟಿ, ಮೈಸೂರು ಅರಮನೆ ಮಂಡಳಿಯಿಂದ ₹ 5 ಕೋಟಿ, ಪ್ರಾಯೋಜಕತ್ವದಿಂದ ₹ 1 ಕೋಟಿ, ಟಿಕೆಟ್ ಮತ್ತು ಗೋಲ್ಡ್ ಕಾರ್ಡ್ ಮಾರಾಟದಿಂದ ₹ 76.98 ಲಕ್ಷ ನಿರೀಕ್ಷಿಸಲಾಗಿದೆ. ಕೋವಿಡ್ ಹಿನ್ನೆಲೆಯಲ್ಲಿ 2021ರಲ್ಲಿ ಸರಳವಾಗಿ ನಡೆಸಲಾಗಿತ್ತು. ಆಗ, ₹ 5.42 ಕೋಟಿ ವೆಚ್ಚವಾಗಿತ್ತು. 2022ರಲ್ಲಿ ಅದ್ಧೂರಿ ದಸರೆಗೆ ₹ 28.74 ಕೋಟಿ ವೆಚ್ಚವಾಗಿತ್ತು. ಈ ಬಾರಿಯೂ ವೆಚ್ಚ ₹ 25 ಕೋಟಿ ಮೀರುವ ಸಾಧ್ಯತೆ ಇದೆ.

ಸುದ್ದಿ 2 ನಿಮಿಷ

ಬಿಜೆಪಿ-ಜೆಡಿಎಸ್ ಮೈತ್ರಿಗೆ ಸೋಮಶೇಖರ್ ವಿರೋಧ

ಬೆಂಗಳೂರು: ಬಿಜೆಪಿ-ಜೆಡಿಎಸ್ ಮೈತ್ರಿಗೆ ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ವಿರೋಧ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮೇಲಿನವರು ಸುಲಭವಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಾರೆ. ಕೆಳಹಂತದ ಕಾರ್ಯಕರ್ತರು ಹಿಂಸೆ ಅನುಭವಿಸುತ್ತಾರೆ. ಉಸಿರುಕಟ್ಟುವ ವಾತಾವರಣ ಸೃಷ್ಟಿಯಾಗಿದೆ. ಮೈತ್ರಿಗೆ ವೈಯಕ್ತಿಕವಾಗಿ ನನ್ನ ವಿರೋಧವಿದೆ. ಅಧಿಕೃತ ಘೋಷಣೆ ಬಳಿಕ ಮುಂದಿನ ನಿರ್ಧಾರ ತೆಗೆದುಕೊಳ್ಳುವೆ' ಎಂದರು.

'ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಮೊದಲಿನಿಂದಲೂ ಪರಸ್ಪರ ವಿರುದ್ಧವಾಗಿ ಇದ್ದವರು. ಪಕ್ಷದ ಕಾರ್ಯಕರ್ತರು ಅನುಭವಿಸಿದ ಕಿರುಕುಳವನ್ನು ಹತ್ತಿರದಿಂದ ಕಂಡಿದ್ದೇನೆ. ಮೈತ್ರಿ ವಿರೋಧಿಸಿ ಹಲವು ಕಾರ್ಯಕರ್ತರು, ಬೆಂಬಲಿಗರು ಕಾಂಗ್ರೆಸ್ ಸೇರುವ ನಿರ್ಧಾರವನ್ನು ಈಗಾಗಲೇ ಮಾಡಿದ್ದಾರೆ. ಇದು ನನ್ನ ಕ್ಷೇತ್ರದ ಸಮಸ್ಯೆ ಮಾತ್ರವಲ್ಲ, ಇತರೆ ಶಾಸಕರೂ ತಮ್ಮ ಕ್ಷೇತ್ರಗಳಲ್ಲಿ ಇಂತಹ ಸಮಸ್ಯೆ ಎದುರಿಸುತ್ತಿದ್ದಾರೆ' ಎಂದು ಹೇಳಿದರು.

'ನಾನು ಸಹ 20 ವರ್ಷಗಳಿಂದ ಜೆಡಿಎಸ್ ಜತೆ ಸೆಣಸಾಟ ನಡೆಸಿಕೊಂಡು ಬಂದಿದ್ದೇನೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿಎಸ್ ಮಧ್ಯೆ ಹೊಂದಾಣಿಕೆಯಾದರೂ, ಕಾರ್ಯಕರ್ತರು ಪರಸ್ಪರ ಮತ ಚಲಾಯಿಸಲಿಲ್ಲ. ಇದರಿಂದ ಮೈತ್ರಿಕೂಟ ಎಷ್ಟು ಸ್ಥಾನದಲ್ಲಿ ಗೆಲುವು ಪಡೆಯಿತು ಎನ್ನುವುದು ಎಲ್ಲರಿಗೂ ಗೊತ್ತಿದೆ' ಎಂದು ಹಳೆಯ ಮೈತ್ರಿ ನೆನಪಿಸಿದರು.



'ಹಾಸನ ಕ್ಷೇತ್ರದಿಂದ ಬಿಜೆಪಿ ಸ್ಪರ್ಧೆ'

ಹಾಸನ: 'ಬರಲಿರುವ ಲೋಕಸಭೆ ಚುನಾವಣೆಯಲ್ಲಿ ಹಾಸನ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯೇ ಸ್ಪರ್ಧಿಸಲಿದ್ದು, ಜೆಡಿಎಸ್ ಬೆಂಬಲ ನೀಡಲಿದೆ' ಎಂದು ಮಾಜಿ ಶಾಸಕ ಪ್ರೀತಮ್ ಗೌಡ ಹೇಳಿದರು.

ನಗರದ ಸಿಟಿ ಬಸ್ ನಿಲ್ದಾಣ ಸಮೀಪದ ಗಣಪತಿ ಪೆಂಡಾಲ್‌ನಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 'ಬಿಜೆಪಿ- ಜೆಡಿಎಸ್ ಮೈತ್ರಿಯಲ್ಲಿ ಸೀಟು ಹಂಚಿಕೆ ಕುರಿತು ಇದುವರೆಗೂ ಅಂತಿಮ ನಿರ್ಣಯಗಳನ್ನು ಕೈಗೊಂಡಿಲ್ಲ. ಆದರೆ, ಎನ್‌ಡಿಎ ಜೊತೆಗೆ ಮೈತ್ರಿ ಮಾಡಿಕೊಂಡಿರುವ ಜೆಡಿಎಸ್, ಹಾಸನದಲ್ಲಿ ಬಿಜೆಪಿ ಅಭ್ಯರ್ಥಿಗೆ ಸಹಕಾರ ನೀಡಲಿದೆ' ಎಂದು ತಿಳಿಸಿದರು.

'ಎನ್‌ಡಿಎ ಮೈತ್ರಿಕೂಟದಲ್ಲಿರುವ ಆರ್‌ಪಿಐ ಕೂಡ ಹಾಸನದಲ್ಲಿ ಸ್ಪರ್ಧಿಸುವ ಬೇಡಿಕೆಯನ್ನು ಮುಂದಿಟ್ಟಿದ್ದು, ಮೂರು ಪಕ್ಷಗಳ ಪೈಕಿ ಒಂದು ಪಕ್ಷ ಮಾತ್ರ ಸ್ಪರ್ಧಿಸಬಹುದು. ಈ ವಿಚಾರದಲ್ಲಿ ಕೇಂದ್ರದ ನಾಯಕರೇ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ' ಎಂದರು.

ಜೈಲಿನಲ್ಲಿ ಸಾವು: ಪರಿಹಾರ

ಬೆಂಗಳೂರು: 'ಜೈಲುಗಳಲ್ಲಿ ಅಸಹಜವಾಗಿ ಸಾವನ್ನಪ್ಪಿದ ಕೈದಿಗಳ ಸಂಬಂಧಿ ಅಥವಾ ವಾರಸುದಾರರಿಗೆ ಪರಿಹಾರ ಪಾವತಿಸಲು ಸೂಕ್ತ ನೀತಿಯೊಂದನ್ನು ರೂಪಿಸಲಾಗಿದೆ' ಎಂದು ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ, ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಉತ್ತರಕ್ಕೆ ತೃಪ್ತಿ ವ್ಯಕ್ತಪಡಿಸಿದ ನ್ಯಾಯಪೀಠ, 'ಸ್ವಯಂಪ್ರೇರಿತ ಪಿಐಎಲ್ ಉದ್ದೇಶವು ಸರ್ಕಾರದ ಆದೇಶದೊಂದಿಗೆ ಈಡೇರಿದ್ದು ಈ ಪಿಐಎಲ್ ಅನ್ನು ಇತ್ಯರ್ಥಪಡಿಸಲಾಗಿದೆ' ಎಂದು ತಿಳಿಸಿತು.

ಆದೇಶದಲ್ಲಿ ಏನಿದೆ?: 'ಅಸಹಜವಾಗಿ ಸಾವನ್ನಪ್ಪಿದ ಕೈದಿಯ ಕುಟುಂಬದವರಿಗೆ ಆರ್ಥಿಕ ಸಹಾಯ ಮಾಡುವುದು ಮತ್ತು ಕೈದಿಗಳ ಮಧ್ಯೆ ಹೊಡೆದಾಟ ಸಂಭವಿಸಿ ಅದರಲ್ಲಿ ಕೈದಿ ಸಾವನ್ನಪ್ಪಿದರೆ ಆತನ ಕುಟುಂಬದವರಿಗೆ ₹7.50 ಲಕ್ಷ ಪಾವತಿಸಲಾಗುತ್ತದೆ. ಆತ್ಮಹತ್ಯೆ ಸೇರಿದಂತೆ ಅಸಹಜ ಸಾವು ಸಂಭವಿಸಿದರೆ ಅಂತಹ ಕೈದಿಯ ಕುಟುಂಬಸ್ಥರಿಗೆ ₹5 ಲಕ್ಷ ಪರಿಹಾರ ನೀಡಲಾಗುವುದು' ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಡಿಪ್ಲೊಮಾ ಪೂರೈಸಿ ಎಂಜಿನಿಯರಿಂಗ್‌ಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮೂರನೇ ಸುತ್ತಿನವರೆಗೂ ಸೀಟುಗಳ ಆಯ್ಕೆಗೆ ಅವಕಾಶ ಕೊಡಬೇಕು ಎಂದು ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ಗುರುವಾರ ಬೆಂಗಳೂರಿನ ಕೆಇಎ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಹಣ ವರ್ಗಾವಣೆ: ಏಜೆಂಟ್ ಸೆರೆ

ಸರ್ಕಾರದ ಜಾಲತಾಣ ಹ್ಯಾಕ್: ಶೇ 40ರಷ್ಟು ಕಮಿಷನ್ ಪಡೆದಿದ್ದ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಜಾಲತಾಣವನ್ನು ಹ್ಯಾಕ್ ಮಾಡಿ ಕೋಟ್ಯಂತರ ರೂಪಾಯಿ ದೋಚಿದ್ದ ಪ್ರಕರಣದಲ್ಲಿ ಆರೋಪಿ ಹರ್ವಿಂದರ್ ಸಿಂಗ್ (52) ಎಂಬಾತನನ್ನು ವಿಶೇಷ ತನಿಖಾ ದಳದ (ಎಸ್‌ಐಟಿ) ಅಧಿಕಾರಿಗಳು ಬಂಧಿಸಿದ್ದಾರೆ.

'ಪಂಜಾಬ್‌ನ ಹರ್ವಿಂದರ್ ಸಿಂಗ್, ಹಣ ಅಕ್ರಮ ವರ್ಗಾವಣೆ ದಂಧೆಯಲ್ಲಿ ತೊಡಗಿದ್ದ. ಅಂತರ ರಾಷ್ಟ್ರೀಯ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ ಜೊತೆ ಒಡನಾಟ ಇಟ್ಟುಕೊಂಡಿದ್ದ ಅರವಿಂದರ್, ಆತನ ಸೂಚನೆಯಂತೆ ಹಣ ವರ್ಗಾವಣೆ ಮಾಡಿಕೊಟ್ಟಿದ್ದ. ಇದಕ್ಕಾಗಿ ಶೇ 40ರಷ್ಟು ಕಮಿಷನ್ ಪಡೆದುಕೊಂಡಿದ್ದನೆಂಬ ಮಾಹಿತಿ ಇದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಇ – ಪ್ರೊಕ್ಯೂರ್‌ಮೆಂಟ್ ಜಾಲತಾಣ (https://eproc.karnataka.gov.in) ಹ್ಯಾಕ್ ಮಾಡಿ ಹಣ ದೋಚಿದ್ದ ಬಗ್ಗೆ ಘಟಕದ ಆರ್ಥಿಕ ಸಲಹೆಗಾರರಾದ ಎಸ್.ಕೆ. ಶೈಲಜಾ ಅವರು 2019ರಲ್ಲಿ ಸಿಐಡಿ ಸೈಬರ್ ಕ್ರೈಂ ವಿಭಾಗಕ್ಕೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದ ಸಿಐಡಿ ಪೊಲೀಸರು, ಪ್ರಮುಖ ಆರೋಪಿಯಾದ ಹ್ಯಾಕರ್ ಶ್ರೀಕೃಷ್ಣ ಹಾಗೂ ಸಂಚಿನಲ್ಲಿದ್ದ 10ಕ್ಕೂ ಹೆಚ್ಚು ಆರೋಪಿಗಳನ್ನು ಬಂಧಿಸಿದ್ದರು' ಎಂದು ಮೂಲಗಳು ಹೇಳಿವೆ. 'ಪ್ರಕರಣ ದಾಖಲಾಗುತ್ತಿದ್ದಂತೆ ಹರ್ವಿಂದರ್‌ಸಿಂಗ್ ತಲೆಮರೆಸಿಕೊಂಡಿದ್ದ. ರಾಜ್ಯದಿಂದ ರಾಜ್ಯಕ್ಕೆ ವಾಸ ಬದಲಿಸಿ, ತನ್ನ ಅಕ್ರಮ ದಂಧೆಯನ್ನು ಮುಂದುವರಿಸಿದ್ದ. ಇತ್ತೀಚೆಗೆ ಈತ ತನ್ನೂರಾದ ಪಂಜಾಬ್‌ನಲ್ಲಿರುವ ಮಾಹಿತಿ ಲಭ್ಯವಾಗಿತ್ತು. ಪಂಜಾಬ್‌ಗೆ ಹೋದ ವಿಶೇಷ ತಂಡದ ಅಧಿಕಾರಿಗಳು, ಸ್ಥಳೀಯ ಪೊಲೀಸರ ನೆರವಿನಿಂದ ಹರ್ವಿಂದರ್‌ನನ್ನು ಬಂಧಿಸಿ ನಗರಕ್ಕೆ ಕರೆತಂದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಬಿಟ್ ಕಾಯಿನ್ ಹಗರಣದ ತನಿಖೆ ಕೈಗೆತ್ತಿಕೊಳ್ಳುತ್ತಿದ್ದಂತೆ ಹ್ಯಾಕರ್ ಶ್ರೀಕಿ ವಿಚಾರಣೆ ನಡೆಸಲಾಗಿತ್ತು. ಈತನೇ, ಹಣ ಅಕ್ರಮ ವರ್ಗಾವಣೆ ದಂಧೆಯ ಏಜೆಂಟ್ ಹರ್ವಿಂದರ್ ಸಿಂಗ್ ಹೆಸರು ಬಾಯ್ಬಿಟ್ಟಿದ್ದ. ಜೊತೆಗೆ, ಆತನ ವಿಳಾಸದ ಬಗ್ಗೆಯೂ ಮಾಹಿತಿ ನೀಡಿದ್ದ' ಎಂದು ಹೇಳಿವೆ.

ವ್ಯವಸ್ಥಿತ ಜಾಲದಿಂದ ವರ್ಗಾವಣೆ: 'ಜಾಲತಾಣ ಹ್ಯಾಕ್ ಪ್ರಕರಣದಲ್ಲಿ ಶ್ರೀಕಿಯೇ ಪ್ರಮುಖ ಆರೋಪಿ. ಹ್ಯಾಕ್ ಮಾಡಲು ಸಂಚು ರೂಪಿಸಿದ್ದ ಶ್ರೀಕಿ ಹಾಗೂ ಇತರರು, ಅರವಿಂದರ್ ಹಾಗೂ ಇತರೆ ಏಜೆಂಟ್‌ಗಳಿಂದ ಮುಂಗಡವಾಗಿ ಬ್ಯಾಂಕ್ ಖಾತೆಗಳ ವಿವರ ಪಡೆದುಕೊಂಡಿದ್ದರು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಜಾಲತಾಣದ ಕೋಡಿಂಗ್ ಅನ್ನು ಡಿ–ಕೋಡಿಂಗ್ ಮಾಡಿ ತನ್ನ ತಾಂತ್ರಿಕ ಜ್ಞಾನದಿಂದ ಹ್ಯಾಕ್ ಮಾಡಿದ್ದ. ಜೊತೆಗೆ, ಸರ್ಕಾರದ ಖಾತೆಯಲ್ಲಿದ್ದ ₹11 ಕೋಟಿಗೂ ಹೆಚ್ಚು ಹಣವನ್ನು ಅರವಿಂದರ್ ಹಾಗೂ ಇತರ ಏಜೆಂಟರು ನೀಡಿದ್ದ ಖಾತೆಗಳಿಗೆ ವರ್ಗಾಯಿಸಿದ್ದ. ನೇರವಾಗಿ ತನ್ನ ಖಾತೆಗಳಿಗೆ ವರ್ಗಾವಣೆ ಮಾಡಿದರೆ ಸಿಕ್ಕಿಬೀಳುವ ಭಯ ಶ್ರೀಕಿಗಿತ್ತು.

'ಖಾತೆಗೆ ಹಣ ವರ್ಗಾವಣೆ ಆಗುತ್ತಿದ್ದಂತೆ ಹರ್ವಿಂದರ್ ಹಾಗೂ ಇತರರು, ಮಧ್ಯಪ್ರದೇಶ ಹಾಗೂ ಮಹಾರಾಷ್ಟ್ರದ ಇತರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದ್ದರು. ಕಮಿಷನ್ ಹಣ ಮುರಿದುಕೊಂಡು, ಶ್ರೀಕಿ ಹೇಳಿದ್ದ ಖಾತೆಗಳಿಗೆ ಉಳಿದ ಹಣ ಜಮೆ ಮಾಡಿದ್ದರು. ಹಣ ಅಕ್ರಮ ವರ್ಗಾವಣೆ ದಂಧೆಯಲ್ಲಿದ್ದ 7 ಮಂದಿಯನ್ನೂ ಈಗಾಗಲೇ ಬಂಧಿಸಲಾಗಿದೆ. ಹರ್ವಿಂದರ್, 8ನೇ ಏಜೆಂಟ್' ಎಂದು ಮೂಲಗಳು ಹೇಳಿವೆ.

ಹಲವು ಉದ್ಯಮಿಗಳ ಜೊತೆ ನಂಟು: 'ಏಜೆಂಟ್ ಹರ್ವಿಂದರ್, ಕಪ್ಪು ಹಣವನ್ನು ವರ್ಗಾವಣೆ ಮಾಡಿಕೊಡುತ್ತಿದ್ದ ದಂಧೆಯಲ್ಲೂ ಭಾಗಿಯಾಗಿದ್ದ. ಹಲವು ಉದ್ಯಮಿಗಳು ಹಾಗೂ ಶ್ರೀಮಂತರ ಜೊತೆ ಈತ ನಂಟು ಹೊಂದಿದ್ದನೆಂಬ ಮಾಹಿತಿ ಇದೆ' ಎಂದು ಮೂಲಗಳು ತಿಳಿಸಿವೆ.

ಪ್ರಾಥಮಿಕ ಆರೋಪ ಪಟ್ಟಿ ಸಲ್ಲಿಕೆ: 'ಜಾಲತಾಣ ಹ್ಯಾಕ್ ಸಂಬಂಧ ಶ್ರೀಕಿ ಹಾಗೂ ಇತರರ ವಿರುದ್ಧ ಈಗಾಗಲೇ ಪ್ರಾಥಮಿಕ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಈಗ ಸಿಕ್ಕಿಬಿದ್ದಿರುವ ಹರ್ವಿಂದರ್ ವಿರುದ್ಧ ಪ್ರತ್ಯೇಕವಾಗಿ ಆರೋಪ ಪಟ್ಟಿ ಸಲ್ಲಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಹಣ ವರ್ಗಾವಣೆ ತನಿಖೆ'

'ಹ್ಯಾಕರ್ ಶ್ರೀಕಿ, ಹಲವು ಏಜೆನ್ಸಿಗಳ ಸರ್ವರ್‌ನಲ್ಲಿದ್ದ ಬಿಟ್ ಕಾಯಿನ್‌ಗಳನ್ನು ಹ್ಯಾಕ್ ಮಾಡಿದ್ದ. ಅದೇ ಬಿಟ್ ಕಾಯಿನ್‌ಗಳನ್ನು ಆರೋಪಿ ಹರ್ವಿಂದರ್ ಹಾಗೂ ಇತರರಿಗೆ ವರ್ಗಾಯಿಸಿ, ಹಣ ಪಡೆದುಕೊಂಡಿರುವ ಅನುಮಾನವಿದೆ. ಆದರೆ, ಸದ್ಯಕ್ಕೆ ಯಾವುದೇ ಪುರಾವೆಗಳು ಸಿಕ್ಕಿಲ್ಲ. ಈ ಆಯಾಮದಲ್ಲಿ ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

'ಹ್ಯಾಕರ್ ಎಂಬುದು ಸುಳ್ಳು'

'ಆರೋಪಿ ಅರವಿಂದರ್, ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಬಳಕೆ ಮಾಡುತ್ತಾನೆ. ಆದರೆ, ಹ್ಯಾಕಿಂಗ್ ಬಗ್ಗೆ ಆತನಿಗೆ ಯಾವುದೇ ಜ್ಞಾನವಿಲ್ಲ. ಹ್ಯಾಕರ್ ಶ್ರೀಕೃಷ್ಣ ಹೇಳಿದಂತೆ ಹರ್ವಿಂದರ್ ಕೇಳುತ್ತಿದ್ದ. ಅರವಿಂದರ್ ಒಬ್ಬ ಹ್ಯಾಕರ್ ಎಂದು ಕೆಲವರು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ' ಎಂದು ಎಸ್‌ಐಟಿ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದರು.

ಸರ್ಕಾರದ ಜಾಲತಾಣ ಹ್ಯಾಕ್ ಪ್ರಕರಣದಲ್ಲಿ ಹರ್ವಿಂದರ್ ಸಿಂಗ್‌ನನ್ನು ಬಂಧಿಸಲಾಗಿದೆ. ಈತನನ್ನು ಕಸ್ಟಡಿಗೆ ಪಡೆದು ಮತ್ತಷ್ಟು ಮಾಹಿತಿ ಕಲೆಹಾಕಬೇಕಿದೆ ಮನೀಶ್ ಖರ್ಬೀಕರ್, ಎಸ್‌ಐಟಿ ಮುಖ್ಯಸ್ಥ

ಡಿಸಿಸಿ ಬ್ಯಾಂಕ್ ಅಧ್ಯಕ್ಷನ ಮನೆ, ಕಚೇರಿ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರೂ ಆದ ಕಾಂಗ್ರೆಸ್ ಮುಖಂಡ ಆರ್.ಎಂ. ಮಂಜುನಾಥಗೌಡ ಅವರ ತೀರ್ಥಹಳ್ಳಿಯ ಮನೆ, ಕಚೇರಿ, ಫಾರಂ ಹೌಸ್ ಹಾಗೂ ಶಿವಮೊಗ್ಗದ ಸಂಬಂಧಿಕರ ಮನೆಯ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳ ತಂಡ ಗುರುವಾರ ಬೆಳಿಗ್ಗೆ ಏಕಕಾಲದಲ್ಲಿ ದಾಳಿ ನಡೆಸಿತು.

ಮಂಜುನಾಥಗೌಡ

ಮಂಜುನಾಥಗೌಡ ಈ ಹಿಂದೆ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿದ್ದಾಗ ಶಿವಮೊಗ್ಗದ ಗಾಂಧಿ ಬಜಾರ್ ಶಾಖೆಯಲ್ಲಿ ನಕಲಿ ಚಿನ್ನಾಭರಣ ಅಡವಿಟ್ಟುಕೊಂಡು ₹ 62.77 ಕೋಟಿ ಅಡಮಾನ ಸಾಲ ಮಂಜೂರು ಮಾಡಿದ್ದಾರೆ ಎಂಬ ಪ್ರಕರಣದಲ್ಲಿ ಅವರ ಹೆಸರು ಸೇರಿತ್ತು. ಸರ್ಕಾರ ಆ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಿತ್ತು. ನಂತರ ಸಿಐಡಿ ಮಂಜುನಾಥಗೌಡರಿಗೆ ಕ್ಲೀನ್‌ಚಿಟ್ ನೀಡಿತ್ತು.

ಎರಡೂವರೆ ವರ್ಷಗಳಿಂದ ಡಿಸಿಸಿ ಬ್ಯಾಂಕ್ ಚಟುವಟಿಕೆಗಳಿಂದ ದೂರವಿದ್ದ ಮಂಜುನಾಥಗೌಡ, ವಾರದ ಹಿಂದಷ್ಟೇ ಬ್ಯಾಂಕಿನ ಅಧ್ಯಕ್ಷರಾಗಿ ಮತ್ತೆ ಅಧಿಕಾರ ವಹಿಸಿಕೊಂಡಿದ್ದರು.

ನಕಲಿ ಚಿನ್ನದ ಆಭರಣ ಅಡವಿಟ್ಟುಕೊಂಡು ಸಾಲ ನೀಡಿದ್ದ ಪ್ರಕರಣದ ಬಗ್ಗೆ ಇ.ಡಿ ಇತ್ತೀಚೆಗಷ್ಟೇ ಬ್ಯಾಂಕಿನಿಂದ ವರದಿ ಪಡೆದುಕೊಂಡಿತ್ತು. ಇ.ಡಿ ಅಧಿಕಾರಿಗಳ ತಂಡ ದಾಳಿ ನಡೆಸಿದ್ದ ವೇಳೆ ಮಂಜುನಾಥಗೌಡ ಮನೆಯಲ್ಲಿ ಇರಲಿಲ್ಲ. ಅವರು ಬೆಂಗಳೂರಿಗೆ ತೆರಳಿದ್ದರು ಎಂದು ಗೊತ್ತಾಗಿದೆ.

ತೀರ್ಥಹಳ್ಳಿಯ ಬೆಟ್ಟಮಕ್ಕಿಯಲ್ಲಿರುವ ಆರ್.ಎಂ. ಮಂಜುನಾಥ ಗೌಡ ಮನೆಯ ಮೇಲೆ ಇ.ಡಿ ಅಧಿಕಾರಿಗಳು ಗುರುವಾರ ಶೋಧಚರಣೆ ನಡೆಸಿದರು.

ಡಿಸಿಇಟಿ: ಮೂರನೇ ಸುತ್ತಿಗೆ ಎಬಿವಿಪಿ ಕಾರ್ಯಕರ್ತರ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಪ್ಲೊಮಾ ಪೂರೈಸಿ 'ಲ್ಯಾಟರಲ್ ಎಂಟ್ರಿ' ಮೂಲಕ ಎಂಜಿನಿಯರಿಂಗ್ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಮೂರನೇ ಸುತ್ತಿನ ಕೌನ್ಸೆಲಿಂಗ್ ನಡೆಸಬೇಕು ಎಂದು ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕಾರ್ಯಕರ್ತರು ಗುರುವಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮುಂದೆ ಪ್ರತಿಭಟನೆ ನಡೆಸಿದರು.

ಮೊದಲ ಹಾಗೂ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಕೆಲ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಕಾಲೇಜಿನಲ್ಲಿ ಪ್ರವೇಶ ಪಡೆಯುವುದಿಲ್ಲ. ಸೀಟುಗಳು ಖಾಲಿ ಉಳಿಯುತ್ತವೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೂರನೇ ಸುತ್ತಿಗೆ ಅವಕಾಶ ನೀಡದ ಕಾರಣ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳು ಉಳಿಕೆ ಸೀಟುಗಳನ್ನು ತೋರಿಸುವುದೇ ಇಲ್ಲ. ಇದರಿಂದ ಸಿಇಟಿ ಬರೆದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎಂದು ದೂರಿದರು.

ಅಲ್ಲದೇ, ಡಿಪ್ಲೊಮಾ ವಿದ್ಯಾರ್ಥಿಗಳಿಗೆ ನಡೆಸುವ ಪರೀಕ್ಷೆ, ಫಲಿತಾಂಶ ಪ್ರಕಟಿಸುವುದೂ ತಡವಾಗುತ್ತಿದೆ. 'ಲ್ಯಾಟರಲ್ ಎಂಟ್ರಿ' ವಿಳಂಬವಾಗುವುದರಿಂದ ಎಂಜಿನಿಯರಿಂಗ್‌ನ ತೃತೀಯ ಸೆಮಿಸ್ಟರ್‌ನ ಬಹುತೇಕ ಪಾಠಗಳು ಮುಗಿದಿರುತ್ತವೆ. ಇಂತಹ ಲೋಪಗಳನ್ನು ಕೆಇಎ ಸರಿಪಡಿಸಬೇಕು ಎಂದು ಸಂಘಟನೆಯ ಕಾರ್ಯದರ್ಶಿ ಪ್ರೇಮಶ್ರೀ ಜೋಡಿದಾರ್ ಆಗ್ರಹಿಸಿದರು.

ಶಾಲೆ ದುರವಸ್ಥೆಗೆ ಕೋರ್ಟ್ ಕಿಡಿ

ಬೆಂಗಳೂರು: 'ಅಗ್ನಿ ಸುರಕ್ಷತಾ ಪ್ರಮಾಣ ಪತ್ರ ಪಡೆಯದೆ ಪುಟ್ಟ ಮಕ್ಕಳ ಜೀವದ ಜತೆ ಚೆಲ್ಲಾಟವಾಡುವ ಶಾಲೆಗಳ ನಡೆಯನ್ನು ಸಹಿಸಲಾಗುವುದಿಲ್ಲ. ಅಂತೆಯೇ, ಶಾಲೆಗಳನ್ನು ವ್ಯಾಪಾರಿ ಕೇಂದ್ರವನ್ನಾಗಿಸಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ಕಿಡಿ ಕಾರಿದೆ.

'ಶಾಲೆಯ ಮೇಲ್ದರ್ಜೆಗೆ ಅವಕಾಶ ನಿರಾಕರಿಸಲಾಗಿದೆ' ಎಂಬ ಸಕ್ಷಮ ಪ್ರಾಧಿಕಾರದ ನಡೆಯನ್ನು ಪ್ರಶ್ನಿಸಿ ಮಂಡ್ಯದ ಹಾಲಹಳ್ಳಿ ಬಡಾವಣೆಯಲ್ಲಿರುವ, 'ಶ್ರೀ ಆದಿಶಕ್ತಿ ಸೇವಾ ಟ್ರಸ್ಟ್' ಕಾರ್ಯದರ್ಶಿ ಎಂ.ರವಿ ಸಲ್ಲಿಸಿದ್ದ ಸಿವಿಲ್ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರ ವಾದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಶಾಲೆಗೆ ಕಟ್ಟಡವಿದ್ದರೂ ಸರಿಯಾದ ಕೊಠಡಿ ವ್ಯವಸ್ಥೆ ಇಲ್ಲ. ಅಗತ್ಯವಾದ ಕ್ರೀಡಾಂಗಣ, ಗ್ರಂಥಾಲಯ, ಪ್ರಯೋಗಾಲಯ ಹಾಗೂ ಕಾಂಪೌಂಡ್ ಇಲ್ಲ. ಇಂತಹ ದುಃಸ್ಥಿತಿಯಲ್ಲಿ ಹೇಗೆ ತಾನೆ ಶಾಲೆ ನಡೆಸುತ್ತೀರಿ. ಶಾಲೆಯ ಮೇಲ್ದರ್ಜೆಗೆ ಅವಕಾಶ ನಿರಾಕರಿಸಿರುವ ಸಕ್ಷಮ ಪ್ರಾಧಿಕಾರದ ಕ್ರಮ ಸೂಕ್ತವಾಗಿಯೇ ಇದೆ' ಎಂದು ಕಟುವಾಗಿ ನುಡಿಯಿತು.

'ಇಂತಹ ಬೆಳವಣಿಗೆಯನ್ನು ನ್ಯಾಯಾಲಯಕ್ಕೆ ಬಂದು, ನೀವೂ ಮಧ್ಯಪ್ರವೇಶಿಸಿ ಎಂಬ ನಿಮ್ಮ ನಡೆಯನ್ನು ಸಹಿಸಲಾಗದು' ಎಂದು ಅರ್ಜಿ ವಜಾಗೊಳಿಸಿತು. 'ಶಿಕ್ಷಣ ಇಲಾಖೆ ಕೇಳಿರುವ ಎಲ್ಲ ದಾಖಲೆಗಳೊಂದಿಗೆ ಮನವಿ ಸಲ್ಲಿಸಿ ಅನುಮತಿ ಪಡೆದುಕೊಳ್ಳಿ' ಎಂದು ಆದೇಶಿಸಿತು.

'ನಾವು ಸನಾತನಿಗಳಲ್ಲ': ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸನಾತನವೆಂಬುದು ಬ್ರಾಹ್ಮಣ ಧರ್ಮ, ಇದು ಸಂವಿಧಾನಕ್ಕೆ ಸಂಪೂರ್ಣ ವಿರುದ್ಧವಾಗಿದೆ' ಎಂದು ಹೇಳಿದ ವಿಚಾರವಾದಿ ಕೆ.ಎಸ್. ಭಗವಾನ್, 'ನಾವು ಸನಾತನಿಗಳಲ್ಲ' ಎಂಬ ಜಾಗೃತಿ ಅಭಿಯಾನವನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುವುದು ಎಂದು ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಭಾರತದ ಸಂವಿಧಾನ ಯಾವುದೇ ಬೇಧ–ಭಾವ ಮಾಡದೇ ಸಮಾನತೆಯನ್ನು ಪ್ರತಿಪಾದಿಸುತ್ತದೆ. ಆದರೆ, ಸನಾತನ ಧರ್ಮದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಬೇರೆಲ್ಲರೂ ಕೀಳು ಎಂಬ ಮನೋಭಾವ ಇದೆ. ಎಲ್ಲ ಶೂದ್ರರು ಬ್ರಾಹ್ಮಣರ ಗುಲಾಮರು ಎಂದು ಪ್ರತಿಪಾದಿಸಲಾಗುತ್ತದೆ. ಈ ಧೋರಣೆಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವೇ' ಎಂದು ಪ್ರಶ್ನಿಸಿದರು.

'ಸನಾತನ ಧರ್ಮ, ಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದರ ಜೊತೆಗೆ ಅಸಮಾನತೆಯನ್ನು ಪೋಷಿಸುತ್ತದೆ. ಈ ಧರ್ಮದಲ್ಲಿನ ಅನಿಷ್ಟಗಳನ್ನು ತೊಲಗಿಸಲು ಬುದ್ಧ, ಬಸವ, ಗಾಂಧಿ ಮತ್ತು ಅಂಬೇಡ್ಕರ್ ಅವರು ಪ್ರಯತ್ನ ಮಾಡಿದ್ದರು. ಆದರೆ, ಇತ್ತೀಚಿನ ದಿನಗಳಲ್ಲಿ ಈ ಅನಿಷ್ಟಗಳು ಬಲವಾಗುತ್ತಿವೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಆಶಯದಂತೆ ಸನಾತನ ಧರ್ಮವನ್ನು ಬುಡಸಮೇತ ಕಿತ್ತು ಹಾಕಬೇಕು' ಎಂದು ಹೇಳಿದರು.

'ಹಿಂದೂ ಧರ್ಮದಲ್ಲಿ ಸಮಾನತೆ ಎಂಬುದಿಲ್ಲ. ದೇವಸ್ಥಾನಗಳಲ್ಲಿ ಬ್ರಾಹ್ಮಣರೇ ಅರ್ಚಕರಾಗಿದ್ದಾರೆ. ಆದರೆ ಬೇರೆ ಧರ್ಮಗಳಲ್ಲಿ ಈ ಅಸಮಾನತೆ ಇಲ್ಲ. ಸರ್ಕಾರದ ಅಧೀನದಲ್ಲಿರುವ ಎಲ್ಲ ದೇವಸ್ಥಾನಗಳ ಅರ್ಚಕರ ಹುದ್ದೆಗಳನ್ನು ಪರೀಕ್ಷೆ ಮೂಲಕ ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭಿಸಬೇಕು' ಎಂದು ಸಲಹೆ ನೀಡಿದರು.

ಎರಡು ಹುದ್ದೆಗಳಿಗೆ ಏಕಕಾಲದಲ್ಲಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮೈಸೂರು: ವಿವಿಧ ನಿಗಮ–ಮಂಡಳಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ದಿಂದ ನಡೆಸಲಾಗುವ ಪರೀಕ್ಷೆಗೆ ಪ್ರಕಟಿಸಲಾಗಿರುವ ವೇಳಾಪಟ್ಟಿಗೆ ಆಕಾಂಕ್ಷಿಗಳಿಂದ ಆಕ್ಷೇಪ ವ್ಯಕ್ತವಾಗಿದೆ. ಎರಡು ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವವರು ಒಂದು ಪರೀಕ್ಷೆಯನ್ನಷ್ಟೆ ತೆಗೆದುಕೊಳ್ಳಬಹುದು.

ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಹಾಗೂ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಹುದ್ದೆಗಳಿಗೆ ಅ.28, 29 ಹಾಗೂ 30ರಂದು ಸ್ಪರ್ಧಾತ್ಮಕ ಪರೀಕ್ಷೆ ನಿಗದಿಪಡಿಸಿ ತಾತ್ಕಾಲಿಕ ವೇಳಾಪಟ್ಟಿ ಪ್ರಕಟಿಸಲಾಗಿದೆ.

ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಸೀನಿಯರ್ ಅಕೌಂಟೆಂಟ್ ಹಾಗೂ ಕಾರ್ಮಿಕ ಇಲಾಖೆಯ ಫೀಲ್ಡ್ ಇನ್‌ಸ್ಪೆಕ್ಟರ್ ಹುದ್ದೆಗಳೆರಡಕ್ಕೂ ಅ.28ರಂದು ಮಧ್ಯಾಹ್ನ 2.30ರಿಂದ ಸಂಜೆ 4.30ರವರೆಗೆ ಪರೀಕ್ಷೆ (ಸೆಕೆಂಡ್ ಪೇಪರ್) ನಿಗದಿಪಡಿಸಲಾಗಿದೆ. ಅ. 29ರಂದು ಆಹಾರ ನಿಗಮದ ಎಸ್‌ಡಿಎ ಹಾಗೂ ಕಾರ್ಮಿಕ ಇಲಾಖೆಯ ಎಸ್‌ಡಿಎ ಹುದ್ದೆಗಳಿಗೆ ಏಕಕಾಲಕ್ಕೆ ಪರೀಕ್ಷೆ ನಡೆಯಲಿದೆ. ನಾಲ್ಕು ಹುದ್ದೆಗಳಿಗೂ ಅರ್ಜಿ ಸಲ್ಲಿಸಿರುವವರು ಯಾವುದಾದರೂ ಎರಡು ಹುದ್ದೆಯ ಪರೀಕ್ಷೆಯನ್ನಷ್ಟೇ ಬರೆಯಬಹುದು.

ಈ ಬಗ್ಗೆ ಪ್ರತಿಕ್ರಿಯೆಗೆ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿಕೆ

ರಾಗಿಗುಡ್ಡ ಗಲಭೆ: ನ್ಯಾಯಾಂಗ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಇಲ್ಲಿನ ರಾಗಿಗುಡ್ಡ ಪ್ರದೇಶದಲ್ಲಿ ಈದ್ ಮಿಲಾದ್ ಮೆರವಣಿಗೆ ವೇಳೆ ನಡೆದ ಗಲಭೆಯು ಪೂರ್ವ ನಿಯೋಜಿತ ತಂತ್ರ. ಈ ಕುರಿತು ಸರ್ಕಾರ ನ್ಯಾಯಾಂಗ ತನಿಖೆಗೆ ಮುಂದಾಗಲಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಆಗ್ರಹಿಸಿದರು.

ರಾಗಿಗುಡ್ಡದಲ್ಲಿ ನಡೆದ ಕಲ್ಲು ತೂರಾಟದಿಂದಾಗಿ ಹಾನಿಗೀಡಾದವರ ಮನೆಗಳಿಗೆ ಗುರುವಾರ ಬಿಜೆಪಿ ಸತ್ಯ ಶೋಧನಾ ತಂಡದೊಂದಿಗೆ ಭೇಟಿ ನೀಡಿದ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕು ಹಾಗೂ ಪೊಲೀಸರ ವೈಫಲ್ಯದಿಂದ ಈ ಕೃತ್ಯ ನಡೆದಿದೆ. ಮೆರವಣಿಗೆಗೆ ಪೊಲೀಸರ ಅನುಮತಿ ತೆಗೆದುಕೊಂಡಿಲ್ಲ. ಗಲಭೆ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೇಲೇ ದಾಳಿ ಮಾಡಲಾಗಿದೆ. ಪೊಲೀಸರ ಮೇಲೆಯೇ ದಾಳಿ ನಡೆದರೆ ಸಾಮಾನ್ಯ ಜನರ ರಕ್ಷಣೆ ಹೇಗೆ' ಎಂದು ಅವರು ಪ್ರಶ್ನಿಸಿದರು.

'ಗಲಭೆಯಲ್ಲಿ ಭಾಗಿಯಾಗದೆಯೂ ಬಂಧನಕ್ಕೆ ಒಳಗಾಗಿರುವವರು ಜಾಮೀನು ಪಡೆಯಲು ಸಹಾಯ ಮಾಡಲಾಗುವುದು. ಕಲ್ಲು ತೂರಾಟದಿಂದ ಹಾನಿಗೀಡಾದ ಮನೆಗಳಿಗೆ ಪಕ್ಷದ ವತಿಯಿಂದ ಪರಿಹಾರ ನೀಡುವ ಬಗ್ಗೆ ಪರಿಶೀಲಿಸಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ರಾಗಿಗುಡ್ಡದಲ್ಲಿ ನಡೆದಿದ್ದ ಈದ್ ಮಿಲಾದ್ ಮೆರವಣಿಗೆ ಮೇಲೆ ಬಜರಂಗದಳದ ಯುವಕನೊಬ್ಬ ಮೊದಲು ಕಲ್ಲು ತೂರಿದ್ದು, ಗಲಭೆಗೆ ಕಾರಣವಾಯಿತೇ ಎಂಬ ಪ್ರಶ್ನೆಗೆ, 'ತನಿಖೆಯ ದಿಕ್ಕುತಪ್ಪಿಸಲು ಇಂತಹ ವಿಚಾರ ಹರಡಲಾಗುತ್ತಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಗಣೇಶೋತ್ಸವ ಮೆರವಣಿಗೆಯಲ್ಲಿ ಭಾಗಿಯಾಗಿದ್ದ ಯುವಕರು ಹಾಗೂ ಮಹಿಳೆಯರನ್ನೇ ಗುರಿಯಾಗಿಸಿಕೊಂಡು ಮನೆಗಳ ಮೇಲೆ ಕಲ್ಲು ತೂರಾಟ ನಡೆಸಲಾಗಿದೆ' ಎಂದು ಆರೋಪಿಸಿದರು.

ಸಮಿತಿಯಲ್ಲಿ ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಆರಗ ಜ್ಞಾನೇಂದ್ರ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಎನ್. ಚನ್ನಬಸಪ್ಪ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ, ಬಿಜೆಪಿ ಜಿಲ್ಲಾ ಅಧ್ಯಕ್ಷ ಟಿ.ಡಿ.ಮೇಘರಾಜ್ ಇದ್ದರು.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಗಾಯಾಳುಗಳನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ನೇತೃತ್ವದ ಸತ್ಯಶೋಧನಾ ತಂಡವು ಗುರುವಾರ ಭೇಟಿ ಮಾಡಿ ಆರೋಗ್ಯ ವಿಚಾರಿಸಿತು

ವಿಳಾಸ ಕೇಳಿ ಭೇಟಿ ಕೊಟ್ಟರು...

ಬಿಜೆಪಿ ಸತ್ಯಶೋಧನಾ ತಂಡವು ಗಲಭೆ ಸಂತ್ರಸ್ತರ ಪೈಕಿ ಹಿಂದೂಗಳ ಮನೆಗಳಿಗೆ ಮಾತ್ರ ಭೇಟಿ ಕೊಟ್ಟಿತ್ತು. ಸಮಿತಿಯ ಸದಸ್ಯರು ಭೇಟಿ ಕೊಡಬೇಕಾದ ಮನೆಗಳ ಯಜಮಾನರ ಹೆಸರನ್ನು ಮೊದಲೇ ಚೀಟಿಯಲ್ಲಿ ಬರೆದುಕೊಂಡು ಬಂದಿದ್ದರು. ವಿಳಾಸ ಕೇಳಿಕೊಂಡು ಅವರ ಮನೆಗಳಿಗೆ ಹೋಗಿ ಮಾತುಕತೆ ನಡೆಸಿದರು.

ಕಪಿಲ್ ಶರ್ಮಗೆ ಇ.ಡಿ. ಸಮನ್ಸ್

ನವದೆಹಲಿ (ಪಿಟಿಐ): ಮಹಾದೇವ್ ಬೆಟ್ಟಿಂಗ್ ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆ ಹಾಜರಾಗುವಂತೆ ಹಾಸ್ಯಗಾರ ಕಪಿಲ್ ಶರ್ಮ, ನಟಿಯರಾದ ಹುಮಾ ಖುರೇಷಿ ಮತ್ತು ಹೀನಾ ಖಾನ್ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) ಸಮನ್ಸ್ ನೀಡಿದೆ.

ಬಾಲಿವುಡ್ ನಟ ರಣಬೀರ್ ಕಪೂರ್ ಅವರಿಗೆ ಇ.ಡಿ. ಅಧಿಕಾರಿಗಳು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಬರುವಂತೆ ಈಗಾಗಲೇ ಸೂಚಿಸಿದ್ದಾರೆ. ಕಪೂರ್ ಅವರು ಎರಡು ವಾರಗಳ ಸಮಯ ಕೋರಿದ್ದಾರೆ ಎಂದು ಗೊತ್ತಾಗಿದೆ.

ಆ್ಯಪ್‌ನ ಪ್ರವರ್ತಕರು ಈ ಮೂವರು ಕಲಾವಿದರಿಗೆ ಹಣ ನೀಡಿದ್ದು ಹೇಗೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಇ.ಡಿ. ಅಧಿಕಾರಿಗಳು ಯತ್ನಿಸಲಿದ್ದಾರೆ.

ಶುಕ್ರವಾರ, ಅಕ್ಟೋಬರ್ 6, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 277 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಪರಿಪೂರ್ಣ ನಟನಾಗುವ ತುಡಿತ' -ನಟ ವಿನೋದ್ ಪ್ರಭಾಕರ್ ಸಂದರ್ಶನ

ಆಳ-ಅಗಲ ಜನಗಣತಿಗೆ ಮೀನ ಮೇಷ
ಹೊಸ ರಸ್ತೆ ಅಗೆದ ಬಿಜೆಪಿ ಶಾಸಕರ ಬೆಂಬಲಿಗ 8
ನಾರ್ವೆ ಲೇಖಕ ಫಾಸಿಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,631 ▲	19,545 ▲	₹58,250 (ಬೆಂಗಳೂರು) ▼	₹69,300 (ಬೆಂಗಳೂರು) ▲	83.25 ▼

ಪರಿಶ್ರಮ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್
ಪರಿಶ್ರಮ ಪಿಯು ಕಾಲೇಜು
ಇಂಟಿಗ್ರೇಟೆಡ್ NEET, JEE MAINS & KCET ತರಬೇತಿ

ನಿಮ್ಮ ಪಯಣ ಇಲ್ಲಿ ಪ್ರಾರಂಭ
PCMB & PCMC
Residential & Day Scholars
UNDER THE GUIDANCE OF PRADEEP ESHWAR
2024-25ನೇ ಸಾಲಿನ ಪ್ರವೇಶಾತಿಗಳಿಗಾಗಿ ಸಂಪರ್ಕಿಸಿ
080 24413444, 82963 19392
SCAN TO REGISTER

ನ್ಯಾ. ಭಕ್ತವತ್ಸಲ ವರದಿಗೆ ಭಾಗಶಃ ಒಪ್ಪಿಗೆ • ಸ್ಥಳೀಯ ಸಂಸ್ಥೆಗಳ ಚುನಾವಣೆಗಿದ್ದ ಅಡ್ಡಿ ತೆರವು

ಒಬಿಸಿ ಮೀಸಲಾತಿಗೆ ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿನ ಶೇ 33ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡುವ ಬಗ್ಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಆಯೋಗ ನೀಡಿದ ವರದಿಯನ್ನು ಸರ್ಕಾರವು ಭಾಗಶಃ ಒಪ್ಪಿಕೊಂಡಿದೆ. ಇದರಿಂದಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಇದ್ದ ತೊಡಕು ತೆರವಾಗುವ ದಾರಿ ತೆರೆದುಕೊಂಡಂತಾಗಿದೆ.

ಹಿಂದುಳಿದಿರುವಿಕೆ ಆಧಾರದ ಮೇಲೆ ರಾಜಕೀಯ ಮೀಸಲಾತಿ ಕಲ್ಪಿಸುವುದನ್ನು ಪ್ರಶ್ನಿಸಿದ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಅಡ್ಡಿಯಾಗಿತ್ತು. ಹಿಂದುಳಿದ ಜಾತಿಗಳ ಜನ, ಜನಸಂಖ್ಯೆಗೆ ಅನುಗುಣವಾಗಿ ಪಡೆದಿರುವ ರಾಜಕೀಯ ಪ್ರಾತಿನಿಧ್ಯವನ್ನು ನಿಖರವಾಗಿ ಗುರುತಿಸಿ, ಹಿಂದುಳಿದಿರುವಿಕೆಯನ್ನು ಖಚಿತಪಡಿಸಿಕೊಂಡ ಬಳಿಕವಷ್ಟೇ ರಾಜಕೀಯ ಮೀಸಲಾತಿ ನಿಗದಿಪಡಿಸಬೇಕು ಎಂದು ಕೋರ್ಟ್ ಪ್ರತಿಪಾದಿಸಿತ್ತು. ಹೀಗಾಗಿ, ಹಿಂದುಳಿದ ವರ್ಗಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಗುರುತಿಸಲು ಮತ್ತು ಸೂಕ್ತ ರಾಜಕೀಯ ಪ್ರಾತಿನಿಧ್ಯ ನೀಡುವ ಬಗ್ಗೆ ಅಧ್ಯಯನ ನಡೆಸಿ ಶಿಫಾರಸು ಮಾಡಲು 2022ರ ಮೇ 16ರಂದು ನ್ಯಾ. ಭಕ್ತವತ್ಸಲ ನೇತೃತ್ವದ ಆಯೋಗವನ್ನು ಸರ್ಕಾರ ರಚಿಸಿತ್ತು.

ಆಯೋಗ ಸಲ್ಲಿಸಿದ ವರದಿಯನ್ನು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ, ಆಯೋಗ ಸಲ್ಲಿಸಿರುವ ವರದಿಯ ಐದು ಶಿಫಾರಸುಗಳ ಪೈಕಿ ಒಟ್ಟು ಮೂರು ಶಿಫಾರಸುಗಳಿಗೆ ಸಂಪುಟ ಒಪ್ಪಿಗೆ ನೀಡಿದೆ. ಉಳಿದ ಎರಡನ್ನು ತಿರಸ್ಕರಿಸಲಾಗಿದೆ ಎಂದರು.

ಎಲ್ಲಾ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ಶಾಖೆಗಳನ್ನು ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ (ಡಿಪಿಎಆರ್) ಅಧೀನಕ್ಕೆ ಒಳಪಡಿಸಬೇಕು ಎಂಬ ಶಿಫಾರಸನ್ನು ಒಪ್ಪಿದ್ದರಿಂದ ಡಿಪಿಎಆರ್, ಚುನಾವಣೆಗೆ ಸಂಬಂಧಿಸಿದ ಕಾರ್ಯಕ್ಕೆ ಸಂಬಂಧಿಸಿದಂತೆ ನೋಡಲ್ ಏಜೆನ್ಸಿಯಂತೆ ಕಾರ್ಯ ನಿರ್ವಹಿಸಲಿದೆ. ಹಿಂದೆ ಚುನಾವಣೆ ಶಾಖೆಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಅಧೀನದಲ್ಲಿದ್ದವು ಎಂದು ಪಾಟೀಲ ವಿವರಿಸಿದರು.

ಸ್ವೀಕೃತ ಶಿಫಾರಸುಗಳು

- ಹಿಂದುಳಿದ ವರ್ಗಗಳಿಗೆ ಶೇ 33ರಷ್ಟು ಮೀಸಲಾತಿ ನೀಡಿದರೂ ಒಟ್ಟಾರೆ ಮೀಸಲಾತಿಯು ಶೇ 50 ಮೀರದಿರುವಂತೆ ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿ ಮುಂದುವರಿಸಿಕೊಂಡು ಹೋಗಬೇಕು
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮೇಯರ್ ಮತ್ತು ಉಪ ಮೇಯರ್ ಸ್ಥಾನಗಳನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು
- ಎಲ್ಲಾ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ಶಾಖೆಗಳನ್ನು ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ (ಡಿಪಿಎಆರ್) ಅಧೀನಕ್ಕೆ ಒಳಪಡಿಸಬೇಕು

ತಿರಸ್ಕೃತ ಶಿಫಾರಸುಗಳು

- ಹಿಂದುಳಿದ ವರ್ಗಗಳ ಪ್ರವರ್ಗ ಎ ಮತ್ತು 2ಬಿಯನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿ, ರಾಜಕೀಯ ಮೀಸಲಾತಿಯನ್ನು ಪರಿಣಾಮಕಾರಿಯಾಗಿ ನೀಡಲು ಕ್ರಮ ಕೈಗೊಳ್ಳಬೇಕು
- ಬಿಬಿಎಂಪಿಯಲ್ಲಿ ಮೇಯರ್ ಮತ್ತು ಉಪಮೇಯರ್ ಸ್ಥಾನಗಳಿಗೆ 30 ತಿಂಗಳು ಅಧಿಕಾರ ಅವಧಿ ನಿಗದಿಪಡಿಸಿರುವ ವ್ಯವಸ್ಥೆಯನ್ನು ರಾಜ್ಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೂ ವಿಸ್ತರಿಸಲು ಕರ್ನಾಟಕ ಮುನ್ಸಿಪಲ್ ಕಾಯ್ದೆಯ ಕಲಂ 10ಕ್ಕೆ ತಿದ್ದುಪಡಿ ತರಬೇಕು

ಒಳಮೀಸಲಾತಿಗೆ ಸಂಪುಟ ಅಸಮ್ಮತಿ

ಇಲ್ಲಿಯವರೆಗೆ ರಾಜಕೀಯ ಮೀಸಲಾತಿ ನೀಡಿದ್ದರೂ, ಅದು ಸಿಗದೇ ಇರುವ ಸಮುದಾಯಗಳಿಗೆ ಒಳಮೀಸಲಾತಿ ಕಲ್ಪಿಸಬೇಕು ಎಂಬ ಆಯೋಗದ ಶಿಫಾರಸನ್ನು ಸರ್ಕಾರ ಒಪ್ಪಿಕೊಂಡಿಲ್ಲ.

ಹಿಂದುಳಿದ ಜಾತಿ ಮತ್ತು ಉಪಜಾತಿ ಸೇರಿ 802 ಜಾತಿಗಳಿದ್ದು, ಅವುಗಳಲ್ಲಿ 156 ಜಾತಿಗಳು ಮಾತ್ರ ರಾಜಕೀಯ ಪ್ರಾತಿನಿಧ್ಯ ಪಡೆದಿವೆ. ಹೀಗಾಗಿ, ಈಗಿರುವ 'ಪ್ರವರ್ಗ-1' ಹಾಗೂ 'ಪ್ರವರ್ಗ-2 ಎ'ಯನ್ನು 1, 2, 3, 4 ಎಂದು ಮರುವರ್ಗೀಕರಿಸಬೇಕು. ಶೇ 33ರಷ್ಟು ಮೀಸಲಾತಿ ಪೈಕಿ ಮೊದಲ ಎರಡು ಪ್ರವರ್ಗಗಳಿಗೆ ತಲಾ ಶೇ 9.9ರಂತೆ ಮತ್ತು ಪ್ರವರ್ಗ 3 ಮತ್ತು 4ಕ್ಕೆ ತಲಾ ಶೇ 6.6ರಂತೆ ಹಂಚಿಕೆ ಮಾಡಬಹುದು. 2027-28ರ ಬಳಿಕ ಚುನಾವಣೆಗಳಲ್ಲಿ ನಾಲ್ಕು ಪ್ರವರ್ಗಗಳನ್ನು ಸೃಷ್ಟಿಸಬೇಕು ಎಂದು ಆಯೋಗವು ಶಿಫಾರಸು ಮಾಡಿತ್ತು.

ಭಾರತದ ಮುಕುಟಕ್ಕೆ ಮತ್ತೆ ಮೂರು ಚಿನ್ನ

19th Asian Games Hangzhou 2022

ಹಾಂಗ್‌ಝೌ (ಪಿಟಿಐ): ಭಾರತದ ಪದಕಗಳ ಖಾತೆಗೆ ಗುರುವಾರ ಮತ್ತೆ ಐದು ಪದಕಗಳು ಸೇರ್ಪಡೆಯಾದವು. ಅದರಲ್ಲಿ ಮೂರು ಚಿನ್ನ, ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನು ಭಾರತದ ಕ್ರೀಡಾಪಟುಗಳು ಜಯಿಸಿದರು. ಇದರೊಂದಿಗೆ ದೇಶದ ಪದಕಗಳ ಸಂಖ್ಯೆಯು 86ಕ್ಕೇರಿತು.

ಆರ್ಚರಿ — ಚಿನ್ನ
ಮಹಿಳೆಯರ ಕಾಂಪೌಂಡ್ ಟೀಮ್
ವಿ.ಜೆ. ಸುರೇಖಾ, ಪ್ರಣೀತ್, ಅದಿತಿ ಗೋಪಿಚಂದ್
ಪುರುಷರ ಕಾಂಪೌಂಡ್ ಟೀಮ್
ಓಜಸ್ ದೇವತಾಳೆ, ಅಭಿಷೇಕ್ ವರ್ಮಾ, ಪ್ರಥಮೇಶ್

ಸ್ಕ್ವಾಷ್ ಮಿಶ್ರ ಡಬಲ್ಸ್ — ಚಿನ್ನ
ದೀಪಿಕಾ ಪಳ್ಳಿಕಲ್–ಹರಿಂದರ್ ಪಾಲ್‌ಸಿಂಗ್

ಸ್ಕ್ವಾಷ್ — ಬೆಳ್ಳಿ
ಪುರುಷರ ಸಿಂಗಲ್ಸ್
ಸೌರವ್ ಘೋಷಾಲ್

ಕುಸ್ತಿ — ಕಂಚು
ಮಹಿಳೆಯರ ಫ್ರೀಸ್ಟೈಲ್ 53 ಕೆ.ಜಿ
ಅಂತಿಮ ಪಂಘಾಲ್

ಪುಟ 11

ತೀಸ್ತಾ ನದಿ ಪ್ರವಾಹ: ಮೃತರ ಸಂಖ್ಯೆ 18ಕ್ಕೆ

ಗ್ಯಾಂಗ್ಟಕ್ (ಪಿಟಿಐ): ಉತ್ತರ ಸಿಕ್ಕಿಂನ ತೀಸ್ತಾ ನದಿ ಜಲಾನಯನ ಪ್ರದೇಶದಲ್ಲಿ ಹಠಾತ್ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 18ಕ್ಕೆ ಏರಿದೆ. ಕಾಣೆಯಾಗಿರುವ 22 ಸೇನಾ ಸಿಬ್ಬಂದಿ ಸೇರಿದಂತೆ 98 ಮಂದಿ ಇನ್ನೂ ಪತ್ತೆಯಾಗಿಲ್ಲ. 8

ಒಳ ಪುಟ
ಸಂಸದರು ಕಾನೂನಿಗೆ ಅತೀತರಲ್ಲ: ಕೇಂದ್ರ 8

ಟ್ರೋಫಿ ಹಿಡಿದ ದಿಗ್ಗಜ

ಐಸಿಸಿ ಏಕದಿನ ವಿಶ್ವಕಪ್‌ನ ಜಾಗತಿಕ ರಾಯಭಾರಿ ಸಚಿನ್ ತೆಂಡೂಲ್ಕರ್ ಅವರು ಗುರುವಾರ ಇಂಗ್ಲೆಂಡ್– ನ್ಯೂಜಿಲೆಂಡ್ ನಡುವಣ ಉದ್ಘಾಟನಾ ಪಂದ್ಯಕ್ಕೆ ಮೊದಲು ವಿಶ್ವಕಪ್ ಟ್ರೋಫಿ ಹಿಡಿದುಕೊಂಡು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಬಂದ ಕ್ಷಣ.... –ಪಿಟಿಐ ಚಿತ್ರ

ಚಿನಕುರಳಿ
ಪ್ರಕಾಶ್ ಶೆಟ್ಟಿ

'ಸುರಂಗ ರಸ್ತೆ: ಶೀಘ್ರ ಟೆಂಡರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಸಂಚಾರ ದಟ್ಟಣೆ ನಿವಾರಿಸಲು 190 ಕಿ.ಮೀ ಉದ್ದದ ಸುರಂಗ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದ್ದು, 45 ದಿನಗಳ ಒಳಗೆ ಟೆಂಡರ್ ಕರೆಯಲಾಗುವುದು' ಎಂದು ಬೆಂಗಳೂರು ಉಸ್ತುವಾರಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಸುರಂಗ ರಸ್ತೆ ನಿರ್ಮಿಸುವ ಕುರಿತಂತೆ ಅಧ್ಯಯನ ನಡೆಸಿ ಕಾರ್ಯಸಾಧ್ಯತಾ ವರದಿ ಸಲ್ಲಿಸಲು ಎಂಟು ಕಂಪನಿಗಳು ಅರ್ಹತೆ ಪಡೆದುಕೊಂಡಿವೆ' ಎಂದರು.

'ರಸ್ತೆ ಮೂಲಸೌಕರ್ಯ, ಸಂಚಾರ ದಟ್ಟಣೆ ನಿವಾರಣೆ, ಸುರಂಗ ರಸ್ತೆ, ರಸ್ತೆ ವಿಸ್ತರಣೆ ವಿಚಾರವಾಗಿ ಸಲಹೆ ಪಡೆದಿದ್ದೆವು. ಅನೇಕರು ತಮ್ಮ ಪ್ರಸ್ತಾವ ಸಲ್ಲಿಸಿದ್ದರು. ಜಾಗತಿಕ ಬಿಡ್ಡಿಂಗ್ ಮಾಡಿದ ಪರಿಣಾಮ ಒಂಬತ್ತು ಕಂಪನಿಗಳು ಭಾಗವಹಿಸಿವೆ. ಕೊನೆ ದಿನಾಂಕ ಮುಕ್ತಾಯವಾಗಿದೆ' ಎಂದರು.

'ಸುರಂಗ ರಸ್ತೆ ನಾಲ್ಕು ಪಥದಲ್ಲಿ ಮಾಡಬೇಕೇ, ಆರು ಪಥದಲ್ಲಿ ಮಾಡಬೇಕೇ? ಎಲ್ಲಿ ಆರಂಭವಾಗಿ ಎಲ್ಲಿ ಅಂತ್ಯವಾಗಬೇಕು, ಎಲ್ಲೆಲ್ಲಿ ತೆರೆದುಕೊಳ್ಳಬೇಕು? ಬೆಂಗಳೂರಿನಾದ್ಯಂತ ವಿಸ್ತರಣೆ ಮಾಡಬೇಕೇ ಎಂಬ ಬಗ್ಗೆ ಇನ್ನಷ್ಟೆ ತೀರ್ಮಾನಿಸಬೇಕಿದೆ. ಎಲ್ಲಿ ಯಾವ ರೀತಿ ಸುರಂಗ ರಸ್ತೆ ಮಾಡಬಹುದೆಂದು ಕಂಪನಿಗಳು ವರದಿ ನೀಡಲಿವೆ' ಎಂದರು.

3B ಪುಟ ನೋಡಿ

ಗೃಹ ಆರೋಗ್ಯ ಜಾರಿ: ಮಧುಮೇಹ, ಅಧಿಕ ರಕ್ತದೊತ್ತಡಕ್ಕೆ 3 ತಿಂಗಳಿಗೆ ಮಾತ್ರೆ

ಮನೆಮನೆಗೆ ಔಷಧ ಪೆಟ್ಟಿಗೆ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಿಗೆ 'ಗೃಹ ಆರೋಗ್ಯ' ಯೋಜನೆಯಡಿ ಮೂರು ತಿಂಗಳಿಗೆ ಆಗುವಷ್ಟು ಮಾತ್ರೆಗಳನ್ನು ಒಳಗೊಂಡ ಔಷಧ ಪೆಟ್ಟಿಗೆ ವಿತರಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಸಾಂಕ್ರಾಮಿಕವಲ್ಲದ ರೋಗಗಳ ತಡೆ ಮತ್ತು ನಿಯಂತ್ರಣ ಕಾರ್ಯಕ್ರಮದಡಿ ಈ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ. ಮೊದಲ ಹಂತದಲ್ಲಿ ರಾಜ್ಯದ ನಾಲ್ಕು ವಿಭಾಗಗಳಿಂದ 8 ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಈಗಾಗಲೇ ತಲಾ 90 ಮಾತ್ರೆಗಳನ್ನು ಒಳಗೊಂಡ ಮಾದರಿ ಔಷಧ ಪೆಟ್ಟಿಗೆಗಳನ್ನು ಸಿದ್ಧಪಡಿಸಲಾಗಿದೆ. ಮನೆ ಮನೆ ಆರೋಗ್ಯ ತಪಾಸಣೆ ವೇಳೆ ಸಮಸ್ಯೆ ದೃಢಪಟ್ಟಲ್ಲಿ ಹಾಗೂ ಈಗಾಗಲೇ ಸಮಸ್ಯೆ ಎದುರಿಸುತ್ತಿರುವವರಿಗೆ ಈ ಪೆಟ್ಟಿಗೆಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ.

5ನೇ ಪುಟ ನೋಡಿ

ಯಾವೆಲ್ಲ ಜಿಲ್ಲೆಗಳಲ್ಲಿ ಜಾರಿ?

ರಾಮನಗರ, ತುಮಕೂರು, ಬೆಳಗಾವಿ, ಗದಗ, ಬಳ್ಳಾರಿ, ಯಾದಗಿರಿ, ದಕ್ಷಿಣ ಕನ್ನಡ, ಮೈಸೂರು

ಸರ್ಕಾರ ನಿಗದಿಪಡಿಸಿದ ಮಾತ್ರೆ

ಅಧಿಕ ರಕ್ತದೊತ್ತಡಕ್ಕೆ: ಎಮ್ಲೋಡಿಪೈನ್ 5 ಎಂಜಿ, ಟೆಲ್ಮಿಸಾರ್ಟನ್ 40 ಎಂಜಿ, ಕ್ಲೋರ್ತಲಿಡೋನ್ 12.5 ಎಂಜಿ

ಮಧುಮೇಹಕ್ಕೆ: ಮೆಟ್‌ಫಾರ್ಮಿನ್ ಎಸ್‌ಆರ್ 500 ಎಂಜಿ, ಮೆಟ್‌ಫಾರ್ಮಿನ್ ಎಸ್‌ಆರ್ 100 ಎಂಜಿ, ಗ್ಲಿಮಿಪ್ರೈಡ್ 1 ಎಂಜಿ

ಮನೆಗಳಿಗೆ ಸ್ಟಿಕ್ಕರ್

ಯೋಜನೆಯಡಿ ಮನೆಗಳಿಗೆ ಭೇಟಿ ನೀಡುವ ತಪಾಸಣಾ ತಂಡಗಳು ಭೇಟಿ ದೃಢಪಡಿಸಲು ಮನೆಗಳಿಗೆ ಸ್ಟಿಕ್ಕರ್ ಗಳನ್ನು ಅಂಟಿಸಲಿವೆ. ಈಗಾಗಲೇ ಮಾದರಿ ಸ್ಟಿಕ್ಕರ್‌ಗಳನ್ನು ಸಿದ್ಧಪಡಿಸಲಾಗಿದೆ. ಈ ಸ್ಟಿಕ್ಕರ್‌ನಲ್ಲಿ ಜಾಗೃತಿ ಸಂದೇಶ, ಯೋಜನೆಯ ಬಗ್ಗೆ ವಿವರ, ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರ ಭಾವಚಿತ್ರ ಇರಲಿವೆ.

ನಿಮ್ಮ ಪ್ರತಿ ನೋಟಕ್ಕೂ ಒಂದು ದಿಗ್ಭ್ರಮೆಗೊಳಿಸುವ ಬಳೆಗಳಿವೆ.
GRT JEWELLERS Since 1964
ಅತ್ಯಂತ ಅಮೂಲ್ಯವಾದ ಬಳೆಗಳನ್ನು ನಿಮ್ಮ ಕೈಗಳಿಗೆ ಅಲಂಕರಿಸಿಕೊಳ್ಳಿ. ಸಾಂಪ್ರದಾಯಿಕ ಡಿಜೈನ್‌ಗಳಿಂದ ಸಮಕಾಲೀನ ಕಲೆಕ್ಷನ್‌ಗಳವರೆಗೆ ನಮ್ಮ ಬಳೆಗಳ ಮೇಳದಲ್ಲಿ ಎಲ್ಲವೂ ಇವೆ. ಮುನ್ನಡೆದು ಮಿಂಚಿರಿ!

20% ರಿಯಾಯಿತಿ* ಚಿನ್ನದ ಆಭರಣಗಳ ವೇಸ್ಟೇಜ್ (VA) ಮೇಲೆ
10% ರಿಯಾಯಿತಿ* ವಜ್ರ ಮತ್ತು ಅನ್‌ಕಟ್ ವಜ್ರದ ಮೌಲ್ಯದ ಮೇಲೆ
(ಸಾಲಿಟೇರ್‌ಗಳನ್ನು ಹೊರತುಪಡಿಸಿ)

ಬಳೆಗಳ ಮೇಳ
ಬಳೆಗಳ ಭರ್ಜರಿ ಕಲೆಕ್ಷನ್
*ಈ ಆಫರ್ ಚಿನ್ನದ ನಾಣ್ಯಗಳು ಹಾಗೂ ಬಾರ್‌ಗಳಿಗೆ ಅನ್ವಯಿಸುವುದಿಲ್ಲ. ಇದನ್ನು ಬೇರೆ ಯಾವುದೇ ಆಫರ್‌ಗಳ ಜೊತೆ ಸೇರಿಸಲಾಗುವುದಿಲ್ಲ. ನಿಯಮ ನಿಬಂಧನೆಗಳು ಅನ್ವಯಿಸುತ್ತವೆ.
HUID ALL OUR JEWELLERY CARRY HUID MARK
AVAIL ATTRACTIVE GIFTS ON UPI PAYMENTS.
Karnataka | Andhra Pradesh | Telangana | Tamil Nadu | Puducherry || Singapore
Shop online at: www.grtjewels.com | GRT LIVE VIDEO SHOPPING Shop from the comfort of your home
STORE LOCATOR

ಮೂರು 'ಎನ್‌ಜಿಒ'ಗಳಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿಯು ನಗರದಲ್ಲಿ ಬುಧವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ದಕ್ಷಿಣ ಭಾರತದಲ್ಲಿ ಅಂಗವಿಕಲರ ಕಲ್ಯಾಣಕ್ಕೆ ಶ್ರಮಿಸುತ್ತಿರುವ ಆಯ್ದ ಮೂರು ಸರ್ಕಾರೇತರ ಸಂಸ್ಥೆಗಳಿಗೆ (ಎನ್‌ಜಿಒ) 'ಎನ್.ಎಸ್. ಹೇಮಾ. ಸ್ಮಾರಕ' ಬಹುಮಾನ ವಿತರಿಸಿ, ಗೌರವಿಸಲಾಯಿತು.

ಸಾದಿಯಾ ಟ್ರಸ್ಟ್‌ಗೆ ಪ್ರಥಮ ಬಹುಮಾನ, ಜಯಂ ಟ್ರಸ್ಟ್‌ಗೆ ದ್ವಿತೀಯ ಹಾಗೂ ಮೈಂಡ್ ಸಂಸ್ಥೆ ತೃತೀಯ ಬಹುಮಾನ ಪಡೆದುಕೊಂಡಿತು. ಕ್ರಮವಾಗಿ ₹ 1 ಲಕ್ಷ, ₹ 50 ಸಾವಿರ ಹಾಗೂ ₹ 25 ಸಾವಿರ ನಗದನ್ನು ಬಹುಮಾನ ಒಳಗೊಂಡಿದೆ. ದಕ್ಷಿಣ ಭಾರತದ ಐದು ರಾಜ್ಯಗಳಿಂದ ವಿವಿಧ ಸರ್ಕಾರೇತರ ಸಂಸ್ಥೆಗಳು ಈ ಬಹುಮಾನಕ್ಕೆ ಅರ್ಜಿ ಸಲ್ಲಿಸಿದ್ದವು. ತಂತ್ರಜ್ಞರು, ಅಂಗವಿಕಲರು ಹಾಗೂ ಕ್ಷೇತ್ರ ತಜ್ಞರನ್ನು ಒಳಗೊಂಡ ಆಯ್ಕೆ ಸಮಿತಿಯು 19 ಸ್ವಯಂ ಸೇವಾ ಸಂಸ್ಥೆಗಳ ಕಿರು ಪಟ್ಟಿಯನ್ನು ಸಿದ್ಧಪಡಿಸಿತ್ತು. ಅವುಗಳಲ್ಲಿ ಮೂರನ್ನು ಕಾರ್ಯಕ್ರಮದಲ್ಲಿ ಘೋಷಿಸಲಾಯಿತು.

ಬಹುಮಾನ ವಿತರಿಸಿದ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, 'ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಮಾನಸಿಕ ಸಮಸ್ಯೆ ಕಾಡುತ್ತಿದೆ. ಆಪ್ತ ಸಮಾಲೋಚನೆ ಸರಿಯಾದ ರೀತಿಯಲ್ಲಿ ನಡೆದರೆ ಸಮಾಜ ಬದಲಾಯಿಸಲು ಸಾಧ್ಯ. ಅಂಗವಿಕಲರ ಬಗ್ಗೆ ಅನುಕಂಪ, ಸಹಾನುಭೂತಿ ತೋರುವ ಬದಲು ಸಹಾಯಹಸ್ತ ನೀಡಬೇಕು' ಎಂದರು.

ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್.ಎಸ್. ಸೆಂಥಿಲ್, 'ಅಂಗವಿಕಲರ ಜೀವನವನ್ನು ಪರಿವರ್ತಿಸಲು ನಾವು ಶ್ರಮಿಸುತ್ತಿದ್ದೇವೆ. ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳನ್ನು ಗುರುತಿಸಿ, ಗೌರವಿಸುವ ಕೆಲಸವನ್ನು 2017ರಿಂದ ಮಾಡಲಾಗುತ್ತಿದೆ' ಎಂದು ತಿಳಿಸಿದರು.

ಸಮರ್ಥನಂ ಇಂಟರ್‌ನ್ಯಾಷನಲ್ ಸಂಸ್ಥೆಯ ಸಂಸ್ಥಾಪನಾಧ್ಯಕ್ಷ ಮಹಾಂತೇಶ್ ಜಿ. ಕಿವಡಸಣ್ಣವರ್ ಹಾಗೂ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷೆ ಜಯಂತಿ ಯಶವಂತ್ ಇದ್ದರು.

'ಯೆಹೋವನ ಸಾಕ್ಷಿಗಳ ಅಧಿವೇಶನ' ಇಂದಿನಿಂದ

ಬೆಂಗಳೂರು: ಜೆಹೋಸ್ ವಿಟ್‌ನೆಸ್ ನಿಂದ ಇದೇ 6ರಿಂದ 8ರವರೆಗೆ ಮತ್ತು 27 ರಿಂದ 29ರವರೆಗೆ 'ಯೆಹೋವನ ಸಾಕ್ಷಿಗಳ ಅಧಿವೇಶನ'ವು ವಸಂತ ನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ.

ಈ ಬಾರಿಯ ಅಧಿವೇಶನವು 'ಯಾವಾಗಲು ತಾಳ್ಮೆಯಿಂದಿರಿ' ಎಂಬ ಘೋಷವಾಕ್ಯದಡಿಯಲ್ಲಿ ಆಯೋಜಿಸಲಾಗಿದೆ. ವಿಶ್ವದಾದ್ಯಂತ 6 ಸಾವಿರ ಅಧಿವೇಶಗಳು ನಡೆಯಲಿದ್ದು, ಭಾರತದಲ್ಲಿ 40 ನಗರಗಳಲ್ಲಿ 17 ಭಾಷೆಗಳಲ್ಲಿ 74 ಅಧಿವೇಶನಗಳು ನಡೆಯಲಿವೆ. ಈ ಅಧಿವೇಶನವು ಎಲ್ಲರಿಗೂ ಉಚಿತವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 91106 53673.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ, ನಿರ್ಮಾಣ ಮತ್ತು ನಿರ್ವಹಣೆ ವಿಭಾಗ

ಇಸ್ರೊ ISRO

ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560008. ದೂ: 080–25037 131/174/214

ದಿನಾಂಕ: 05.10.2023

ಇ–ಟೆಂಡರ್ ಪ್ರಕಟಣೆ – ತಿದ್ದುಪಡಿ–1

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ (ಬಿ) ಕ್ಯಾಂಪಸ್‌ನಲ್ಲಿ ವಿದ್ಯುತ್ ಮತ್ತು ಎಸಿ ಅನುಸ್ಥಾಪನಾ ಕಾರ್ಯ ಮತ್ತು ನಿರ್ವಹಣೆಗೆ ವಾರ್ಷಿಕ ನಿರ್ವಹಣಾ ವೆಚ್ಚ.
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ ಎಲ್‌ಪಿಎಸ್‌ಸಿ(ಬಿ)/ ಇ/ ಎಂಟಿ/ 26/ 2023–24 ದಿನಾಂಕ: 03.10.2023
ಅಂದಾಜು ಮೊತ್ತ	₹ 40.10 ಲಕ್ಷಗಳು (ಪರಿಷ್ಕೃತ ಮೊತ್ತ)
ಪೂರ್ಣಗೊಳಿಸುವ ಅವಧಿ	12 ತಿಂಗಳು
ಮಾರಾಟದ ಅವಧಿ	04.10.2023 ರಿಂದ 15.10.2023 ರ ವರೆಗೆ
ಇಎಂಡಿ	₹ 80,200/- (ಪರಿಷ್ಕೃತ ಮೊತ್ತ)

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು **www.tenderwizard.com/ISRO** ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ **www.isro.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಿ .

ಸಹಿ/- ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

3M ಇಂಡಿಯಾ ಲಿಮಿಟೆಡ್

CIN: L31300KA1987PLC013543

ನೋಂದಾಯಿತ ಕಚೇರಿ: ಪ್ಲಾಟ್ ನಂ. 48–51, ಇಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560100 **ದೂರವಾಣಿ:** 080–22231414,

ಇ–ಮೇಲ್: investorhelpdesk.in@mmm.com, **ವೆಬ್‌ಸೈಟ್:** www.3m.com/in

ಅಂಚೆ ಮತದಾನದ ಸೂಚನೆ ಮತ್ತು ಇ–ವೋಟಿಂಗ್ ಬಗ್ಗೆ ಮಾಹಿತಿ

ಕಂಪನಿಗಳ ಕಾಯಿದೆ, 2013ರ ("ಕಾಯಿದೆ") ಕಲಮು 110, ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ('ನಿಯಮಾವಳಿ') ನಿಯಮಗಳು 20 ಮತ್ತು 22, ಮತ್ತು ಸದರಿ ಕಾಯಿದೆ ಮತ್ತು ನಿಯಮಾವಳಿಯಲ್ಲಿರುವ ಅನ್ವಯವಾಗುವ ಇತರ ಯಾವುದೇ ನಿಬಂಧನೆಗಳು, ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಸಂ. 14/2020 ದಿನಾಂಕ ಏಪ್ರಿಲ್ 08, 2020, ಸಂ. 17/2020 ದಿನಾಂಕ ಏಪ್ರಿಲ್ 13, 2020, ಸಂ. 20/2020 ದಿನಾಂಕ ಮೇ 05, 2020, ಸಂ. 22/2020 ದಿನಾಂಕ ಜೂನ್ 15, 2020, ಸಂ. 33/2020 ದಿನಾಂಕ ಸೆಪ್ಟೆಂಬರ್ 28, 2020, ಸಂ. 39/2020 ದಿನಾಂಕ ಡಿಸೆಂಬರ್ 31, 2020, ಸಂ. 10/2021 ದಿನಾಂಕ ಜೂನ್ 23, 2021, ಸಂ. 20/2021 ದಿನಾಂಕ ಡಿಸೆಂಬರ್ 08, 2021 ಮತ್ತು ಸಂ. 3/2022 ದಿನಾಂಕ ಮೇ 5, 2022 ಈ ಸಾಮಾನ್ಯ ಸುತ್ತೋಲೆಗಳನ್ನು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಇತರ ಸಂಬಂಧಿತ ಸುತ್ತೋಲೆಗಳ ದಿನಾಂಕ 25, ಸೆಪ್ಟೆಂಬರ್, 2023 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023 ಒಳಗೊಂಡಂತೆ ("ಎಮ್‌ಸಿಎ ಸುತ್ತೋಲೆಗಳು") ಜೊತೆ ಓದಿಕೊಂಡಂತೆ, ಭಾರತೀಯ ಸೆಕ್ಯುರಿಟಿಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸಬೇಕಾದ ಅಗತ್ಯತೆಗಳು) ನಿಬಂಧನೆಗಳು, 2015 ('ಲಿಸ್ಟಿಂಗ್ ನಿಬಂಧನೆಗಳು') ನಿಬಂಧನೆ 44, ಭಾರತೀಯ ಕಂಪನಿ ಸೆಕ್ರೆಟರಿಗಳ ಸಂಸ್ಥೆಯು ಸಾಮಾನ್ಯ ಸಭೆಗಳ ಕುರಿತಂತೆ ಹೊರಡಿಸಿರುವ ಸೆಕ್ರೆಟೇರಿಯಲ್ ಸ್ಟಾಂಡರ್ಡ್ (ಎಸ್‌ಎಸ್–2) ಮತ್ತು ಅನ್ವಯವಾಗುವಂತಹ ಇತರೆ ಕಾನೂನುಗಳು, ನಿಯಮಾವಳಿ ಮತ್ತು ನಿಬಂಧನೆಗಳು (ಸದ್ಯದಲ್ಲಿ ಚಾಲ್ತಿಯಲ್ಲಿರುವ ಮತ್ತು ಕಾಲ–ಕಾಲಕ್ಕೆ ಮಾರ್ಪಾಡಾಗಿರುವಂತಹ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಇತರ ಮರು–ಅಧಿನಿಯಮನಗಳೂ ಸೇರುತ್ತವೆ) ಜೊತೆಗೆ ಓದಿಕೊಂಡ ಪ್ರಕಾರ, 3ಎಮ್ ಇಂಡಿಯಾ ಲಿಮಿಟೆಡ್ (ಕಂಪನಿ) ಸೆಪ್ಟೆಂಬರ್ 29, 2023 ದಿನಾಂಕದ ಅಂಚೆ ಮತದಾನ ಸೂಚನೆಯಲ್ಲಿ ಹೇಳಿರುವಂತಹ ನಿರ್ಣಯಗಳ, ಜೊತೆಗೆ ಇಲ್ಲಿ ಕೆಳಗೆ ಹೇಳಿರುವಂತಹ ವಿಷಯಗಳಿಗೆ ಸಂಬಂಧಿಸಿದಂತಹ ವಿವರಣಾತ್ಮಕ ಹೇಳಿಕೆಯ ಮೇಲೆ, ಅಂಚೆ ಮತದಾನದ (ಇ–ವೋಟಿಂಗ್) ಮೂಲಕ, ತನ್ನ ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂಬುದಾಗಿ ಈ ಮೂಲಕ ಸೂಚನೆಯನ್ನು ಕೊಡಲಾಗುತ್ತಿದೆ:

1. 3ಎಮ್ ಕಂಪನಿ, ಯುಎಸ್‌ಎ ಜೊತೆ ಮಟೀರಿಯಲ್ ರಿಲೇಟೆಡ್ ಪಾರ್ಟಿ ಟ್ರಾನ್ಸ್ಯಾಕ್ಷನ್ಸ್ ಬಗ್ಗೆ ಅನುಮೋದನೆ.
2. 3ಎಮ್ ಕಂಪನಿ, ಯುಎಸ್‌ಎ ರಾಯಲ್ಟಿಗಳ ಪಾವತಿಗೆ ಅನುಮೋದನೆ.

ಎಲ್ಲ ಸದಸ್ಯರಿಗೂ ಈ ಮೂಲಕ ತಿಳಿಸುವುದೇನೆಂದರೆ:

1. ಯಾವೆಲ್ಲ ಸದಸ್ಯರು ತಮ್ಮ ಇಮೇಲ್ ವಿಳಾಸಗಳನ್ನು ಕಂಪನಿ ಅಥವಾ ಡಿಪಾಸಿಟರಿ ಪಾರ್ಟಿಸಿಪೆಂಟರು ಅಥವಾ ಕಂಪನಿಯ ರಿಜಿಸ್ಟ್ರಾರ್ ಹಾಗೂ ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ (ಕೆಫಿನ್) ಜೊತೆ ನೋಂದಾಯಿಸಿಕೊಂಡಿರುವರೋ ಮತ್ತು ಷೇರುಗಳ ಪಾವತಿಸಿದ ಮೌಲ್ಯವನ್ನು ಮತ್ತು ಸದಸ್ಯರ ಮತದಾನದ ಹಕ್ಕುಗಳನ್ನು ನಿರ್ಧರಿಸಲು ಅಂತಿಮ ದಿನವೂ ಆದ **ಶುಕ್ರವಾರ, ನವೆಂಬರ್ 22, 2023** ರಂದು ಯಾವ ಸದಸ್ಯರ ಹೆಸರುಗಳು ಸದಸ್ಯರ/ಫಲಾನುಭವಿ ಯಜಮಾನರ ರಿಜಿಸ್ಟರಿನಲ್ಲಿ ಅಥವಾ ನ್ಯಾಷನಲ್ ಸೆಕ್ಯುರಿಟಿಸ್ ಡಿಪಾಸಿಟರಿ ಲಿಮಿಟೆಡ್ (NSDL) ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ (CDSL) ದಾಖಲೆಗಳಲ್ಲಿ ಇರುವುದೋ ಅಂತಹವರಿಗೆ ಕಂಪನಿಯು ಅಂಚೆ ಮತದಾನ ಸೂಚನೆಯನ್ನು ಜೊತೆಗೆ ಇ–ವೋಟಿಂಗ್ ಕುರಿತಂತೆ ಸೂಚನೆಗಳನ್ನು ಅಕ್ಟೋಬರ್ 5, 2023 ರಂದು ಇ–ಮೇಲ್ ಮೂಲಕ ಮಾತ್ರವೇ ಕಳುಹಿಸಿದೆ. ಮೇಲೆ ಉಲ್ಲೇಖಿಸಿರುವ ಎಮ್.ಸಿ.ಎ. ಸುತ್ತೋಲೆಗಳ ಪ್ರಕಾರ ಅಂಚೆ ಮತದಾನದ ಸೂಚನೆಯ ಭೌತಿಕ ಪ್ರತಿಗಳನ್ನು ಕಳುಹಿಸುವ ಅಗತ್ಯತೆ ಇರುವುದಿಲ್ಲ.
2. ಮೇಲೆ ಹೇಳಿರುವಂತಹ ದಾಖಲೆಗಳು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/, ಕೆಫಿನ್ ವೆಬ್‌ಸೈಟ್ https://evoting.kfintech.com/ ಮತ್ತು ಬಿಎಸ್‌ಇ ಲಿಮಿಟೆಡ್‌ನ ವೆಬ್‌ಸೈಟ್ www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ www.nseindia.com ಗಳಲ್ಲಿಯೂ ಲಭ್ಯವಿವೆ. ಯಾರು ಅಂತಿಮ ದಿನಾಂಕದಂದು ಸದಸ್ಯರಾಗಿಲ್ಲವೋ ಅಂತಹವರು ಈ ಸೂಚನೆಯನ್ನು ಮಾಹಿತಿಗಾಗಿ ಮಾತ್ರವೇ ಎಂದು ತಿಳಿಯಬೇಕು. ಮತ್ತೂ, ಎಮ್‌ಸಿಎ ಸುತ್ತೋಲೆಗಳ ಪ್ರಕಾರ ಈ ಅಂಚೆ ಮತದಾನಕ್ಕೆ, ಸದಸ್ಯರಿಗೆ ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ನಮೂನೆಗಳ ಭೌತಿಕ ಪ್ರತಿ ಮತ್ತು ಪ್ರೀ–ಪೇಯ್ಡ್ ಬಿಸಿನೆಸ್ ರಿಪ್ಲೈ ಲಕೋಟೆ ಗಳನ್ನು ಕಳುಹಿಸಿಲ್ಲ.
3. ಯಾವ ಸದಸ್ಯರು ತಮ್ಮ ಇ–ಮೇಲ್ ವಿಳಾಸಗಳನ್ನು ನೋಂದಾಯಿಸಿಕೊಂಡಿಲ್ಲವೋ ಮತ್ತು ಆ ಕಾರಣವಾಗಿ ಅಂಚೆ ಮತದಾನದ ಸೂಚನೆ ಮತ್ತು ಇ–ಮತದಾನದ ಸೂಚನೆಗಳನ್ನು ಅವರಿಗೆ ಕಳುಹಿಸಲಾಗಿಲ್ಲವೋ ಅಂತಹವರು ಅದಕ್ಕಾಗಿ ತಮ್ಮ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರಾದ ಕೆಫಿನ್ ನೊಂದಿಗೆ ತಾತ್ಕಾಲಿಕವಾಗಿ ನೋಂದಾಯಿಸಿಕೊಳ್ಳಬಹುದು. ಇದಕ್ಕಾಗಿ ಅವರು https://ris.kfintech.com/clientservices/postalballot/ ಮೇಲೆ ಕ್ಲಿಕ್ಕಿಸಿದರೆ ಸಾಕು. ಸದಸ್ಯರು ದಯವಿಟ್ಟು ಅದರಲ್ಲಿರುವ ಮಾರ್ಗದರ್ಶನಗಳನ್ನು ಅನುಸರಿಸುತ್ತ ಇ–ಮೇಲ್ ವಿಳಾಸ ಮತ್ತು ಮೊಬೈಲ್ ನಂಬರುಗಳನ್ನು ದಾಖಲಿಸಿ ಸೂಚನೆಯ ಸಾಫ್ಟ್ ಪ್ರತಿ ಮತ್ತು ಇ–ಮತದಾನದ ಬಗೆಗಿನ ಸೂಚನೆಗಳು ಜೊತೆಗೆ ಯೂಸರ್ ಐಡಿ ಹಾಗೂ ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಏನಾದರೂ ಪ್ರಶ್ನೆಗಳಿದ್ದರೆ ಈ ವಿಳಾಸಕ್ಕೆ ಬರೆಯಬಹುದು: einward.ris@kfintach.com.
4. ಕಂಪನಿಗಳ ಅಧಿನಿಯಮ, 2013ರ ಕಲಮು 108 ಮತ್ತು ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಾವಳಿ, 2014 ನಿಯಮ 20 ಮತ್ತು ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅಗತ್ಯತೆಗಳು) ನಿಬಂಧನೆಗಳು, 2015 ನಿಬಂಧನೆ 44 ಅನ್ವಯ ತನ್ನ ಸದಸ್ಯರಿಗೆ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಲು ಕಂಪನಿಯು ಹರ್ಷಿಸುತ್ತಿದೆ. ಇ–ಮತದಾನ ಸೌಲಭ್ಯವನ್ನು ಒದಗಿಸಲು ಕಂಪನಿಯು ಕೆಫಿನ್ ಕಂಪನಿಯನ್ನು ನೇಮಕಮಾಡಿಕೊಂಡಿದೆ ಮತ್ತು ಅಂಚೆ ಮತದಾನ ಪ್ರಕ್ರಿಯೆಯನ್ನು ನ್ಯಾಯಯುತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಸಲುವಾಗಿ ಶ್ರೀ ವಿಜಯಕೃಷ್ಣ ಕೆ.ಟಿ., ವೃತ್ತಿಪರ ಕಂಪನಿ ಸೆಕ್ರೆಟರಿ, ಇವರನ್ನು ಸೂಕ್ಷ್ಮ ಪರಿಶೀಲಕರನ್ನಾಗಿ ನೇಮಿಸಿಕೊಂಡಿದೆ.
5. ಸದಸ್ಯರು ಇ–ವೋಟಿಂಗ್ ಸೌಲಭ್ಯದ ಮೂಲಕ ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸುವ ಆಯ್ಕೆಯನ್ನು ಮಾಡಿಕೊಳ್ಳಬಹುದು. ಇ–ವೋಟಿಂಗ್ ಪ್ರಕ್ರಿಯೆಯ ವಿವರಗಳನ್ನು ಅಂಚೆ ಮತದಾನದ ಸೂಚನೆಯಲ್ಲಿ ನೀಡಲಾಗಿದೆ. ಮತದಾನವು ಇ–ಮತದಾನದ ಮೂಲಕ **ಶುಕ್ರವಾರ, ಅಕ್ಟೋಬರ್ 6, 2023 ರಂದು ಬೆಳಗ್ಗೆ 09.00ಕ್ಕೆ (ಭಾ.ಕಾ.) ಪ್ರಾರಂಭವಾಗಿ ಶನಿವಾರ, ನವೆಂಬರ್ 4, 2023ರಂದು ಸಂಜೆ 05.00ಕ್ಕೆ (ಭಾ.ಕಾ.)** ಮುಕ್ತಾಯಗೊಳ್ಳುತ್ತದೆ. ಸದಸ್ಯರು ಈ ಅವಧಿಯಲ್ಲೇ ತಮ್ಮ ಮತಗಳನ್ನು ಚಲಾಯಿಸಬೇಕೆಂದು ಕೋರುತ್ತೇವೆ. ಮೇಲೆ ಹೇಳಿದ ದಿನಾಂಕ ಮತ್ತು ಸಮಯದ ನಂತರ ಕೆಫಿನ್, ಇ–ಮತದಾನ ಸೌಲಭ್ಯವನ್ನು ಸ್ಥಗಿತಗೊಳಿಸುತ್ತದೆ. ಬಳಿಕ ಸದಸ್ಯರು ಮತ ಚಲಾಯಿಸಲು ಸಾಧ್ಯವಿಲ್ಲ. ಸದಸ್ಯರು ಒಮ್ಮೆ ಮತವನ್ನು ದೃಢಪಡಿಸಿದ ನಂತರ ಮತ್ತೆ ಅದನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
6. ಅಂಚೆ ಮತದಾನದ ಫಲಿತಾಂಶಗಳನ್ನು ಮಂಗಳವಾರ, ನವೆಂಬರ್ 7, 2023 ರಂದು ಅಥವಾ ಅದಕ್ಕೆ ಮೊದಲೇ ಪ್ರಕಟಿಸಲಾಗುವುದು. ಅಗತ್ಯವಿರುವ ಬಹುಮತದೊಂದಿಗೆ ನಿರ್ಣಯವು ಅಂಗೀಕಾರವಾದರೆ ಅದು, ಕಂಪನಿಯು ಇ–ವೋಟಿಂಗ್‌ಗಾಗಿ ನಿಗದಿಪಡಿಸಿರುವ ಕೊನೆಯ ದಿನಾಂಕ ಎಂದರೆ ಶನಿವಾರ, ನವೆಂಬರ್ 4, 2023 ರಂದು ಅಂಗೀಕಾರವಾಗಿದೆ ಎಂದು ಪರಿಗಣಿಸಲಾಗುವುದು. ಅಂಚೆ ಮತದಾನದ ಫಲಿತಾಂಶಗಳು ಮತ್ತು ಸೂಕ್ಷ್ಮ ಪರಿಶೀಲಕರ ವರದಿಗಳನ್ನು ಕಂಪನಿಯ ವೆಬ್‌ಸೈಟ್ https://www.3mindia.in/3M/en_IN/company-in/about-3m/financial-facts-local/ ಮತ್ತು ಕೆಫಿನ್ ವೆಬ್‌ಸೈಟ್ https://evoting.kfintech.com/ ಗಳಲ್ಲಿ ಹಾಕಲಾಗುವುದು. ಫಲಿತಾಂಶಗಳನ್ನು ಕಂಪನಿಯ ಇಕ್ವಿಟಿ ಷೇರುಗಳು ಲಿಸ್ಟ್ ಆಗಿರುವ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ಗಳಿಗೂ ತಿಳಿಸಲಾಗುವುದು.
7. ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿದ್ದು ತಮ್ಮ ಇಮೇಲ್ ವಿಳಾಸಗಳನ್ನು ಮತ್ತು ಸಂಪರ್ಕ ವಿವರಗಳನ್ನು ದಾಖಲಿಸಿರದ/ನವೀಕರಿಸಿರದಂತಹ ಷೇರುದಾರರು https://ris.kfintech.com/clientservices/mobilereg/mobileemailreg.aspx ಲಿಂಕ್ ಮೇಲೆ ಕ್ಲಿಕ್ಕಿಸಿ ಅಥವಾ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರಿಗೆ ಮನವಿಯನ್ನು ಸಲ್ಲಿಸುವ ಮೂಲಕ ಅವುಗಳನ್ನು ದಾಖಲಿಸಬಹುದು/ನವೀಕರಿಸಬಹುದು. ಏನಾದರೂ ಸಂದೇಹಗಳಿದ್ದರೆ https://evoting.karvy.com ನ ಡೌನ್‌ಲೋಡ್ ವಿಭಾಗದಲ್ಲಿರುವ 'ಷೇರುದಾರರ ಸಾಮಾನ್ಯ ಪ್ರಶ್ನೆಗಳು' (FAQs) ಮತ್ತು 'ಷೇರುದಾರರಿಗಾಗಿ ಇ–ವೋಟಿಂಗ್ ಬಳಕೆದಾರರ ಕೈಪಿಡಿ' ಗಳನ್ನು ನೋಡಬಹುದು ಅಥವಾ ಕೆಳಗೆ ಹೆಸರಿಸಿರುವ ಕಂಪನಿಯ ಅಧಿಕಾರಿಯನ್ನು /ಅದರ ರಿಜಿಸ್ಟ್ರಾರ್ ಮತ್ತು ವರ್ಗಾವಣೆ ಏಜೆಂಟರನ್ನು ಸಂಪರ್ಕಿಸಬಹುದು:

ವಿವರಗಳು	ಕೇಫಿನ್ ಟೆಕ್ನಾಲಾಜೀಸ್ ಲಿಮಿಟೆಡ್	3M ಇಂಡಿಯಾ ಲಿಮಿಟೆಡ್
ವಿಳಾಸ	ಸೆಲೆನಿಯಮ್ ಟವರ್, ಬಿ, ಪ್ಲಾಟ್ 31–32, ಗಾಚಿಬೌಲಿ, ಫೈನಾನ್ಸಿಯಲ್ ಡಿಸ್ಟ್ರಿಕ್ಟ್, ನಾನಕ್ರಮಗುಡ, ಹೈದರಬಾದ್ - 500 032	ವೀವರ್ಕ್ ಪ್ರೆಸ್ಟೀಜ್ ಸೆಂಟ್ರಲ್, 3ನೇ ಮಹಡಿ, 36 ಇನ್ಫೆಂಟ್ರಿ ರಸ್ತೆ, ಟಸ್ಕರ್ ಟೌನ್, ಬೆಂಗಳೂರು–560001, ಭಾರತ.
ಹೆಸರು ಮತ್ತು ಹುದ್ದೆ	ಶ್ರೀ ರಾಜೀವ್ ಕುಮಾರ್ ಡೆಪ್ಯೂಟಿ ಮ್ಯಾನೇಜರ್–ಕಾರ್ಪೊರೇಟ್ ರಿಜಿಸ್ಟ್ರಿ	ಪ್ರತಾಪ್ ರುದ್ರ ಭುವನಗಿರಿ ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್
ದೂರವಾಣಿ	040-6716 1524	080-22231414
ಇ–ಮೇಲ್	rajeev.kr@kfintech.com	investorhelpdesk.in@mmm.com

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
3M ಇಂಡಿಯಾ ಲಿಮಿಟೆಡ್‌ನ ಪರವಾಗಿ
ಪ್ರತಾಪ್ ರುದ್ರ ಭುವನಗಿರಿ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲಯನ್ಸ್ ಆಫೀಸರ್

ಸ್ಥಳ: ಬೆಂಗಳೂರು
ದಿನಾಂಕ: ಅಕ್ಟೋಬರ್ 05, 2023

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ

ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ

website: www.hebbagodicity.mrc.gov.in E-Mail: itstaff_ulb_hebbagodi@yahoo.com

ಸಂಖ್ಯೆ:ಹೆ.ನ.ಸ/ತಾ.ಶಾ/ಟೆ.ನೋ/ಸಿ.ಆರ್/02/2023–24 ದಿನಾಂಕ: 04.10.2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 2023–24 ನೇ ಸಾಲಿನ 15ನೇ ಹಣಕಾಸು ಅನುದಾನ 2023–24ನೇ ಸಾಲಿನ ನಗರಸಭೆ ಅನುದಾನ, ಎಸ್.ಎಫ್.ಸಿ ಮುಕ್ತನಿಧಿ, ಎಸ್.ಎಫ್.ಸಿ.24.1%, 7.25%, 5% ಹಾಗೂ ನಗರಸಭಾ ನಿಧಿಯ 24.1%, 7.25% ಮತ್ತು 5% ಅನುದಾನದಡಿಯಲ್ಲಿ 32 ಕಾಮಗಾರಿ ಒಟ್ಟು ಮೊತ್ತ.523.43/–ಲಕ್ಷ (ಕನಿಷ್ಠ ಮೊತ್ತ ರೂ.2.50 ಗರಿಷ್ಠ ಮೊತ್ತ ರೂ.48.16 ಲಕ್ಷ)ಗಳನ್ನು ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ.ಡಬ್ಲ್ಯೂ–1, ಕೆ.ಡಬ್ಲ್ಯೂ–2 ಮತ್ತು ಕೆ ಸಿ–8ರ ನಿಯಮಾವಳಿಗಳಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ/ ಸರಬರಾಜುದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣಾವಧಿ ಟೆಂಡರ್‌ನ್ನು **ದಿನಾಂಕ: 06.10.2023 ರಿಂದ ದಿನಾಂಕ:21.10.2023 ಸಂಜೆ 5.30 ಗಂಟೆಯವರೆಗೆ** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಸದರಿ ಟೆಂಡರ್ **ದಿನಾಂಕ: 25.10.2023 ರಂದು ಬೆಳಗ್ಗೆ 11.00ಕ್ಕೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **www.hebbagodicity.mrc.gov.in or https://kppp.karnataka.gov.in** ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಆಡಳಿತಾಧಿಕಾರಿ, ನಗರಸಭೆ, ಹೆಬ್ಬಗೋಡಿ
ಸಹಿ/– ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ

ವಾಸಸಂಇ/ವಾ.ಪ್ರ./ಶಿರಡಿ ಸಾಯಿ/1573/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಮಹಾಲಕ್ಷ್ಮೀಪುರಂ ವಿಭಾಗ, 12ನೇ ಮುಖ್ಯರಸ್ತೆ, 11ನೇ ಅಡ್ಡರಸ್ತೆ, ವೆಸ್ಟ್ ಆಫ್ ಕಾರ್ಡ್ ರೋಡ್, ಮಹಾಲಕ್ಷ್ಮೀಪುರಂ ಬೆಂಗಳೂರು–560 009.

ಸಂಖ್ಯೆ:ಕಾಪಾಅ/ಮಲಪು/ಟೆಂಡರ್/ಇ–ಪ್ರೊ/03/2023–24 ದಿನಾಂಕ: 05–10–2023

ಆಸಕ್ತಿಯ ಅಭಿವ್ಯಕ್ತಿ (EOI) ಅಧಿಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ ಲಕೋಟೆ ಪದ್ಧತಿ) (ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಸಾರ್ವಜನಿಕ ಸಂಗ್ರಹಣೆಯಲ್ಲಿ ಕರ್ನಾಟಕ ಪಾರದರ್ಶಕತೆ ಕಾಯಿದೆ 2000ರ ಅಡಿಯಲ್ಲಿ ಕೆಳಗೆ ನಮೂದಿಸಲಾದ ಸೇವೆಗಳಿಗಾಗಿ ಕಾರ್ಯಪಾಲಕ ಇಂಜಿನಿಯರ್, (ಮಹಾಲಕ್ಷ್ಮೀಪುರಂ) ವಿಭಾಗದಿಂದ, ಐಟಿ, ಇ.ಎಸ್.ಐ., ಪಿ.ಎಫ್., ಕಾರ್ಮಿಕ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಇತರ ಶಾಸನಬದ್ಧ ಪ್ರಾಧಿಕಾರ ಸಂಸ್ಥೆಗಳಲ್ಲಿ ನೋಂದಾಯಿತ ಏಜೆನ್ಸಿಯಿಂದ ನಿಗದಿತ ನಮೂನೆಯಲ್ಲಿ ಎಲೆಕ್ಟ್ರಾನಿಕ್ ಎರಡು ಕವರ್ ಟೆಂಡರಿಂಗ್ ಸಿಸ್ಟಮ್ (ಕೆ-ಪ್ರೊಕ್ಯೂರ್‌ಮೆಂಟ್) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು	ಇಎಂಡಿ ಮೊತ್ತ (ರೂ.ಗಳಲ್ಲಿ)
1.	ವಾರ್ಡ್ ನಂ.68ರ ಮಹಾಲಕ್ಷ್ಮೀಪುರಂನಲ್ಲಿರುವ ಬಿಬಿಎಂಪಿ ಈಜುಕೊಳದ ಕಾರ್ಯಾಚರಣೆ, ನಿರ್ವಹಣೆ ಮತ್ತು ಪ್ರವೇಶ ಶುಲ್ಕದ ಸಂಗ್ರಹಣೆಯ ಹಕ್ಕನ್ನು ಐದು ವರ್ಷಗಳ ಅವಧಿಗೆ (60 ತಿಂಗಳಿಗೆ ಕಂದಾಯ ಒಪ್ಪಂದ) ಗುತ್ತಿಗೆ ಆಧಾರದ ಮೇಲೆ ಒದಗಿಸುವುದು.	1,00,000/-

ಟೆಂಡರ್ ಕಾರ್ಯಸೂಚಿ: ಟೆಂಡರ್‌ನ ಕಾರ್ಯಸೂಚಿ: 1) ವಿಚಾರಣೆಗಳನ್ನು ಆನ್‌ಲೈನ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ: 11–10–2023 ರಂದು ಸಂಜೆ 3:00 ಗಂಟೆಗೆ. 2) ಪೂರ್ವ-ಬಿಡ್ ಸಭೆಯ ದಿನಾಂಕ: 11–10–2023 ರಂದು ಸಂಜೆ 3:30 ಗಂಟೆಗೆ. 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 21–10–2023 ರಂದು ಸಂಜೆ 4:00 ಗಂಟೆಯವರೆಗೆ. 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 25–10–2023ರ ಸಂಜೆ 4:30 ಗಂಟೆಗೆ. 5) ತಾಂತ್ರಿಕ ಬಿಡ್‌ಗಳ ಅನುಮೋದನೆಯ ನಂತರ ಆರ್ಥಿಕ ಬಿಡ್‌ಗಳನ್ನು ತೆರೆಯುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://ppp.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾಲಕ್ಷ್ಮೀಪುರಂ ವಿಭಾಗ, ಬಿ.ಬಿ.ಎಂ.ಪಿ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ. ದೂರವಾಣಿ ಸಂಖ್ಯೆ:08156–270058

EMail ID: eerdwsd.ckb2@gmail.com

ಸಂಖ್ಯೆ:/ಕಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಟೆಂಡರ್/ಸ.ಇಂ–1/2023–24

ದಿನಾಂಕ: 29.09.2023

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)
ಟೆಂಡರ್ ಪ್ರಕಟಣೆ ಸಂಖ್ಯೆ: 18/2023–24 ದಿನಾಂಕ: 29.09.2023

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ ರವರು **2022–23ನೇ** ಸಾಲಿನ JJM ಯೋಜನೆಯಡಿ **ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ 25 ಗ್ರಾಮಗಳಲ್ಲಿ** ಕುಡಿಯುವ ನೀರು ಸರಬರಾಜು ಯೋಜನೆಗೆ ಸಂಬಂದಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಸ್ಟ್ಯಾಂಡರ್ ಟೆಂಡರ್ ಡಾಕ್ಯೂಮೆಂಟ್ **KW-II-KW-III** ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಈ ಪೇಮೆಂಟ್‌ನಲ್ಲಿ **(Credit Card/Direct Debit/ NEFT & OTC** ಮುಖೇನ) ಅಥವ ಚಲನ್ ಮೂಲಕ ಭರ್ತಿಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ 2 ದಿನ ಮುಂಚಿತವಾಗಿ ಸಲ್ಲಿಸುವುದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ **https://kppp.karnataka.gov.in/** ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ. (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ **ಕೊನೆಯ ದಿನಾಂಕ ಮತ್ತು ಸಮಯ ದಿನಾಂಕ:12.10.2023 ರಂದು ಸಂಜೆ 5.30 ಗಂಟೆವರೆಗೆ.** (2) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ **ಕೊನೆಯ ದಿನಾಂಕ: 14.10.2023 ರಂದು ಸಂಜೆ 5.30 ಗಂಟೆವರೆಗೆ.** (3) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 16.10.2023 ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ: 18.10.2023 ಬೆಳಗ್ಗೆ 11.00 ಗಂಟೆಗೆ.** ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:105/ಕೆಎಸ್‌ಎಂಸಿಎ/2023–24

ಪದ್ಮನಾಭನಗರ ವಿಧಾನಸಭೆ ಕ್ಷೇತ್ರ: ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅತೃಪ್ತಿ

ಮೂಲ– ವಲಸಿಗರ ಪೈಪೋಟಿ

• ಆರ್. ಮಂಜುನಾಥ್

ಬೆಂಗಳೂರು: ಪದ್ಮನಾಭನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ವಲಸೆ ಹೋಗಿರುವ ಮುಖಂಡರು ಹಾಗೂ ಕಾಂಗ್ರೆಸ್‌ನ ಸ್ಥಳೀಯ ಕಾರ್ಯಕರ್ತರ ನಡುವೆ ಬಿಬಿಎಂಪಿ ಚುನಾವಣೆ ಟಿಕೆಟ್‌ಗಾಗಿ ಪೈಪೋಟಿ ಪ್ರಾರಂಭವಾಗಿದೆ.

ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ಜೆಡಿಎಸ್ ಮುಖಂಡರು ಸೇರಿದಂತೆ 35ಕ್ಕೂ ಹೆಚ್ಚು ಮುಖಂಡರು ಸೆ.15ರಂದು ಕಾಂಗ್ರೆಸ್‌ ಸೇರ್ಪಡೆಯಾಗಿದ್ದಾರೆ. 'ಇವರೆಲ್ಲ ಟಿಕೆಟ್‌ಗಾಗಿಯೇ ವಲಸೆ ಬಂದಿದ್ದಾರೆ' ಎಂದು ಐದಾರು ವರ್ಷಗಳಿಂದ ದುಡಿಯುತ್ತಿರುವ ಪಕ್ಷದ ಕಾರ್ಯಕರ್ತರಲ್ಲಿ ಅಸಮಾಧಾನ ತಂದಿದೆ.

ಈ ಮಧ್ಯೆ ಹದಿನೈದು ದಿನಗಳ ಹಿಂದೆ ಬಿಜೆಪಿ ತೊರೆದು, ಕಾಂಗ್ರೆಸ್ ಸೇರಿದ್ದ ಮಾಜಿ ಕಾರ್ಪೊರೇಟರ್ ಗಣಾದ ವೆಂಕಟಸ್ವಾಮಿ ನಾಯ್ಡು ಹಾಗೂ ಸುಪ್ರಿಯಾ ಶೇಖರ್ ಅವರು ಶಾಸಕ ಆರ್. ಅಶೋಕ, ಬಿಜೆಪಿ ಮುಖಂಡ ದೊರೆಸ್ವಾಮಿ ನಾಯ್ಡು, ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಎಚ್.ಬಿ.ವರದರಾಜ, ಕಮ್ಮವಾರಿ ಸಂಘದ ಅಧ್ಯಕ್ಷ ಕೃಷ್ಣಪ್ಪ ಅವರ ಸಮ್ಮುಖದಲ್ಲಿ ಸೆ.28ರಂದು ಪಕ್ಷಕ್ಕೆ ಮರಳಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ನಾಲ್ವರು ಬಿಜೆಪಿಗೆ ಮರಳುವ ಸಾಧ್ಯತೆ ಇದೆ.

ಬಿಜೆಪಿಯಿಂದ ವಲಸೆ ಬಂದವರಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ ಬಿಬಿಎಂಪಿ ವಾರ್ಡ್ ವಿಂಗಡಣೆಯಲ್ಲಿ ಕರಡು ಪಟ್ಟಿಯಲ್ಲಿದ್ದ ಪ್ರದೇಶಗಳನ್ನು ಬದಲಾಯಿಸಲಾಗಿದ್ದು, ದೇವಗಿರಿ ದೇವಸ್ಥಾನ ವಾರ್ಡ್, ಬನಶಂಕರಿ ದೇವಸ್ಥಾನ ವಾರ್ಡ್, ಕುಮಾರಸ್ವಾಮಿ ಲೇಔಟ್, ಚಿಕ್ಕಲಸಂದ್ರ ವಾರ್ಡ್‌ಗಳಲ್ಲಿ ಸಾಕಷ್ಟು ಬದಲಾವಣೆ ಮಾಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಇದು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಾಕಷ್ಟು ಅಸಮಾಧಾನ ಮೂಡಿಸಿದೆ.

'ಬಿಬಿಎಂಪಿ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳಾಗಿರುವ ಕಾಂಗ್ರೆಸ್ ಕಾರ್ಯಕರ್ತರು ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಪಕ್ಷದ ಕಾರ್ಯಕರ್ತರನ್ನು ಬಿಟ್ಟು ವಲಸೆ ಬಂದವರಿಗೆ ಆದ್ಯತೆ ನೀಡುವುದು ಸರಿಯಲ್ಲ' ಎಂದು ಮೂಲ ಕಾಂಗ್ರೆಸಿಗರು ತಮ್ಮ ಪಕ್ಷದ ಮುಖಂಡರ ಮುಂದೆ ಆಕ್ಷೇಪ ತೆಗೆದಿದ್ದಾರೆ. 'ನಮ್ಮ ಸರ್ಕಾರ ಇರುವಾಗ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನೇ ಬೆಳೆಸಬೇಕು. ಪಕ್ಷಕ್ಕೆ ಬರುವವರನ್ನು ಸ್ವಾಗತಿಸುತ್ತೇವೆ. ಆದರೆ ಅಧಿಕಾರಕ್ಕಾಗಿಯೇ ಬರುವವರಿಗೆ ಮಣೆ ಹಾಕಬಾರದು ಎಂಬುದು ಕಾರ್ಯಕರ್ತರ ಆಗ್ರಹ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದರು.

ಕಾಂಗ್ರೆಸ್ ಅಭ್ಯರ್ಥಿಗಳಿಗೆ ಅನುವಾಗುವಂತೆ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಎಂಟು ವಾರ್ಡ್‌ಗಳನ್ನು ವಿಂಗಡಿಸಲಾಗಿತ್ತು. ಇದಕ್ಕಾಗಿ ಕಾಂಗ್ರೆಸ್ ಮುಖಂಡರು ಸಾಕಷ್ಟು ಪ್ರಯಾಸಪಟ್ಟಿದ್ದರು. ಆದರೆ, ಬಿಜೆಪಿಯಿಂದ ಬಂದವರಿಗೆ ಟಿಕೆಟ್ ನೀಡಲು ಪ್ರದೇಶಗಳನ್ನು ಬದಲಿಸಿ ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಸಮಾಧಾನ ಹೆಚ್ಚಾಗಿದೆ.

ಕಾಂಗ್ರೆಸ್ ಸರ್ಕಾರವಿರುವ ದರ್ಪದಿಂದ ಅಧಿಕಾರಕ್ಕೇರಬಹುದು ಎಂಬ ಆಶಯದಿಂದ ಕಾಂಗ್ರೆಸ್ ಸೇರಿದ್ದ ಬಿಜೆಪಿಯ ಕೆಲವು ಮುಖಂಡರಿಗೆ ಕಾಂಗ್ರೆಸ್ ಕಾರ್ಯಕರ್ತರ ಅಸಮಾಧಾನ ಕಸಿವಿಸಿಯನ್ನು ಉಂಟುಮಾಡಿದೆ. ಕಾಂಗ್ರೆಸ್ ಕಾರ್ಯಕರ್ತರು/ಮುಖಂಡರೂ ಅವರಿಗೆ ಆದ್ಯತೆ ದೊರೆಯುತ್ತಿಲ್ಲ. ಹೀಗಾಗಿ, ಬಿಜೆಪಿಯತ್ತ ತಿರುಗಿ ನೋಡುತ್ತಿದ್ದಾರೆ ಎನ್ನಲಾಗಿದೆ.

'ಇನ್ನೂ ಐದಾರು ಮಂದಿ ವಾಪಸ್'

'ಬಿಜೆಪಿಯಲ್ಲಿ ಕೆಲಸ ಮಾಡಿಕೊಂಡು, ರಾಜಕೀಯವಾಗಿ ಬೆಳೆದು ಇಲ್ಲಿನ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡವರಿಗೆ ಬೇರೆ ಯಾವ ಪಕ್ಷದಲ್ಲಿರಲು ಸಾಧ್ಯವಿಲ್ಲ. ಅಲ್ಲಿನ ವಾತಾವರಣ ಅವರಿಗೆ ಒಗ್ಗುವುದಿಲ್ಲ. ಹೀಗಾಗಿ, ಕಾಂಗ್ರೆಸ್ ಸೇರಿರುವ ಪದ್ಮನಾಭನಗರ ವಿಧಾನಸಭೆ ಕ್ಷೇತ್ರದ ಬಿಜೆಪಿ ಮುಖಂಡರಲ್ಲಿ ಈಗ ಇಬ್ಬರು ವಾಪಸ್ ಬಂದಿದ್ದಾರೆ. ಇನ್ನೂ ಐದಾರು ಮಂದಿ ವಾಪಸ್ ಆಗಲಿದ್ದಾರೆ. ಅವರೆಲ್ಲ ನಮ್ಮೊಂದಿಗೆ ನಿರಂತರ ಸಂಪರ್ಕದಲ್ಲಿದ್ದಾರೆ' ಎಂದು ಬೆಂಗಳೂರು ದಕ್ಷಿಣ ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ತಿಳಿಸಿದರು.

'ರಕ್ತದಾನ ಕರ್ತವ್ಯವಾಗಬೇಕು'

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ದಿನೇಶ್ ಗುಂಡೂರಾವ್ ಅವರನ್ನು ವಿಜಯಕುಮಾರ್ ಪಾಟೀಲ ಶಾವಂತಗೇರಾ ಗೌರವಿಸಿದರು. ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಬಾಲಸುಬ್ರಮಣ್ಯ ಹಾಗೂ ಉಪಸಭಾಪತಿ ಆನಂದ ಎಸ್ ಜೆಗಿನ್ನಿ ಇದ್ದಾರೆ

ಬೆಂಗಳೂರು: 'ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭಗಳಲ್ಲಿ ಜೀವ ಉಳಿಸಲು ರಕ್ತ ಅಗತ್ಯ. ರಕ್ತದಾನ ಮಾಡುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕರ ಕರ್ತವ್ಯವಾಗಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆ ನಗರದಲ್ಲಿ ಗುರುವಾರ ಹಮ್ಮಿಕೊಂಡ 'ರಾಷ್ಟ್ರೀಯ ಸ್ವಯಂಪ್ರೇರಿತ ರಕ್ತದಾನ ದಿನಾಚರಣೆ' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ರಕ್ತದಾನ ಇತರರಿಗೆ ಮರುಜನ್ಮ ನೀಡುವ ಶ್ರೇಷ್ಠ ಮತ್ತು ಸಾರ್ಥಕ ಸೇವೆ. ಯುವಜನರು ರಕ್ತದಾನದಂತಹ ಸಮಾಜಸೇವೆಗೆ ಹೆಚ್ಚಿನ ಒಲವು ತೋರಬೇಕು. ತಾವು ರಕ್ತದಾನ ಮಾಡುವುದರೊಂದಿಗೆ ಇತರರನ್ನೂ ರಕ್ತದಾನ ಮಾಡುವಂತೆ ಪ್ರೇರೇಪಿಸಬೇಕು. ರಕ್ತದ ಕೊರತೆ ನೀಗಿಸಲು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಮಾಡುತ್ತಿರುವ ಕಾರ್ಯಗಳು ಶ್ಲಾಘನೀಯ' ಎಂದು ಹೇಳಿದರು.

ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯ ಡಿಜಿಪಿ ಕಮಲ್ ಪಂತ್, 'ರಕ್ತದಾನವು ಎಷ್ಟೋ ಜನರಿಗೆ ಜೀವ ನೀಡಿದ ಮಹತ್ಕಾರ್ಯವಾಗಿದೆ. ರಕ್ತದಾನದಿಂದ ಮತ್ತೊಬ್ಬರ ರಕ್ತದ ಕೊರತೆ ನೀಗಲು ಸಾಧ್ಯ' ಎಂದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯ ಸಭಾಪತಿ ವಿಜಯಕುಮಾರ್ ಪಾಟೀಲ ಶಾವಂತಗೇರಾ, 'ನಾವು ಪ್ರತಿ ವರ್ಷ 27 ಸಾವಿರ ಯೂನಿಟ್ ರಕ್ತವನ್ನು ವಿವಿಧ ರಕ್ತನಿಧಿ ಕೇಂದ್ರಗಳಿಗೆ ಒದಗಿಸುತ್ತಿದ್ದೇವೆ. 5 ಸಾವಿರ ಯೂನಿಟ್ ರಕ್ತವನ್ನು ಉಚಿತವಾಗಿ ನೀಡುತ್ತಿದ್ದೇವೆ' ಎಂದು ತಿಳಿಸಿದರು.

2022–23ನೇ ಸಾಲಿನಲ್ಲಿ ಹೆಚ್ಚು ಯೂನಿಟ್ ರಕ್ತ ದಾನ ಮಾಡಿದ 10 ಮಂದಿ ಹಾಗೂ ರಕ್ತದಾನ ಶಿಬಿರದ ಆಯೋಜಕರನ್ನು ಗೌರವಿಸಲಾಯಿತು. ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯು ರಾಜ್ಯದ ಆಸ್ಪತ್ರೆಗಳಿಗೆ ಒದಗಿಸಲು 10 ಸಾವಿರ ಪಲ್ಸ್ ಆಕ್ಸಿಮೀಟರ್ ಹಾಗೂ 100 ಆಮ್ಲಜನಕ ಸಾಂದ್ರೀಕರಣ ಸಾಧನಗಳನ್ನು (ಆಕ್ಸಿಜನ್ ಕಾನ್ಸಂಟ್ರೇಟರ್) ಇಲಾಖೆಗೆ ಉಚಿತವಾಗಿ ನೀಡಿತು.

ರಾಷ್ಟ್ರೀಯ ಆರೋಗ್ಯ ಸಮಾವೇಶ ಇಂದಿನಿಂದ

ಬೆಂಗಳೂರು: ರಾಮಯ್ಯ ಮೆಡಿಕಲ್ ಕಾಲೇಜು ಹಾಗೂ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಅಕಾಡೆಮಿ (ಎನ್‌ಎಎಂಎಸ್‌ಸಿಒಎನ್) ಸಹಯೋಗದಲ್ಲಿ ಇದೇ 6ರಿಂದ 8ರವರೆಗೆ 63ನೇ ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಆರೋಗ್ಯ ಸಮಾವೇಶ ಆಯೋಜಿಸಲಾಗಿದೆ.

ಮೂರು ದಿನಗಳ ಸಮಾವೇಶ ನಗರದ ಮತ್ತಿಕೆರೆಯ ಎಂ.ಎಸ್. ರಾಮಯ್ಯ ನಗರದಲ್ಲಿರುವ ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ನಡೆಯಲಿದೆ.

'ಸಮಾವೇಶದಲ್ಲಿ ಶ್ರೀಣಾ ಔಷಧಿ, ಉನ್ನತ ಸಂಶೋಧನೆ, ಗಂಭೀರ ಘಟನೆ ನಿರ್ವಹಣೆ, ಉದ್ಯಮಶೀಲತೆ ಮತ್ತು ಆವಿಷ್ಕಾರ, ಹೆಲ್ತ್‌ಕೇರ್‌ನಲ್ಲಿ ಮಾನವೀಯ ವೈದ್ಯಕೀಯ ಶಿಕ್ಷಣ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಕಾರ್ಯಾಗಾರಗಳು ನಡೆಯಲಿವೆ' ಎಂದು ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ ಸಮಕುಲಾಧಿಪತಿ ಎಂ.ಆರ್. ಜಯರಾಂ, ರಾಮಯ್ಯ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಶಾಲಿನಿ ಸಿ ನೂಯಿ ತಿಳಿಸಿದ್ದಾರೆ.

ಸಮಾವೇಶದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೇಂದ್ರ ಸಚಿವರಾದ ಜಿತೇಂದ್ರ ಶರ್ಮಾ, ಎಸ್.ಪಿ. ಸಿಂಗ್ ಬಗೇಲ್ ಭಾಗವಹಿಸಲಿದ್ದಾರೆ.

OFFICE OF THE CHIEF ENGINEER PWD REWA ZONE REWA (M.P.)

websitei: www.mppwd.gov.in Email:- cepwdrewa@mp.nic.in, phone no. 07662-255200, Fax: 255380

Tender Notice

Nit no. 15/GEN./2023-24 Date 04.10.2023

Online tender for mentioned below are being invited, the Tender have been uploaded on the E-Tender system of public work department on the portal **www.mptenders.gov.in** Tender details are as below:-

S. no.	Tender ID No.	Division	Name of work	Call no.	Completion period	Cost of project (PAC) (Rs. in lac.)	EMD In Rs.	Tender Form In RS
1	2		3	4	5	6	7	8
1	2023_PWD RB_314723_1	Rewa	Widening of two-lane to four-lane main road in Hanumana city Length 5.40 Km. including electrical work.	First	18 Month i/c Rainy season	1335.76	1000000/-	30000/-
2	2023_PWD RB_314728_1	Rewa	Construction of Rewa-Semaria Road (SH 09) Basaman Mama to Jadua via Kakredi Mninha Jarmora Kumhra Bara Bhamra Road Length 45.70 km including electrical work	First	36 Month i/c Rainy season	7508.70	3754350/-	50000/-
3	2023_PWD RB_314731_1	Rewa	Construction of Rewa-Semaria Marg (SH 09) Beeda Shahpur to Baro Delhi Baikunthpur Shahpur Kyoti Rajgarh upto Sirmaur Marg Length 45.12 Km. including electrical work	First	36 Month i/c Rainy season	6247.81	3123907/-	50000/-
4	2023_PWD RB_314733_1	Rewa	Construction of Govindgarh Bypass Road (S.H. Govindgarh Churhat and Govindgarh Bela Link Road) Length 4.04 KM.	First	18 Month i/c Rainy season	1300.96	1000000/-	30000/-
					Total :-	16393.23		

The document can only be purchased online from the above website after making online payment. The starting date for purchase of tender forms and online bid submission is from **11.10.2023 to** the last date **31.10.2023** till **17.30 PM.** Detailed Nit and other details can be viewed on the above mentioned portal. Amendments to NIT, if any, would be published on website only, and not in newspaper.

G-20831/23

CHIEF ENGINEER
PWD, REWA ZONE REWA

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/38/2023–24/1429 ದಿನಾಂಕ: 05.10.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಭೂವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ|| ಸಿರಿಮಲ್ಲೆ ಇನ್ಫ್ರಾ ಡೆವಲಪರ್ಸ್ ರ ಪರವಾಗಿ ಆಥರೈಸ್ಡ್ ಸಿಗ್ನೆಟರಿ/ಮ್ಯಾನೇಜಿಂಗ್ ಪಾರ್ಟ್‌ನರ್‌ಗಳಾದ ಶ್ರೀ ಮುರ್ರಂರೆಡ್ಡಿ ದಯಾಕರ್‌ರೆಡ್ಡಿ ಬಿನ್‌ಸುಬ್ಬಾರೆಡ್ಡಿ ಹಾಗೂ ಶ್ರೀ ಬಿ.ಎಸ್ ಚೌಡರೆಡ್ಡ ಬಿನ್ ಬಿ.ಸಿದ್ದಾರೆಡ್ಡಿ	ದೇವನಹಳ್ಳಿ	ಕಸಬಾ	ದೊಡ್ಡಪ್ಪನಹಳ್ಳಿ	66/2	0–16	ವ್ಯವಸಾಯ	ವಸತಿ
2		ದೇವನಹಳ್ಳಿ	ಕಸಬಾ	ಕೆಂಪಲಿಂಗನಪುರ	5/2	0–18	ವ್ಯವಸಾಯ	ವಸತಿ
3		ದೇವನಹಳ್ಳಿ	ಕಸಬಾ	ಕೆಂಪಲಿಂಗನಪುರ	5/4	1–00	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದು ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರಾ/ಸ್ಪ್ಯಾನ್/1594/2023–24

ವ್ಯಾಪಾರ ಸ್ಥಳಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿಕ್ಕಪೇಟೆ ಹಾಗೂ ಸುತ್ತ ಮುತ್ತಲಿನ 100ಕ್ಕೂ ಅಧಿಕ ವ್ಯಾಪಾರ ಸ್ಥಳಗಳ ಮೇಲೆ ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ.

ಸರಕುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಅನಧಿಕೃತ ಗೋದಾಮುಗಳಲ್ಲಿ ಶೇಖರಿಸಿಟ್ಟು, ಜಿಎಸ್‌ಟಿ ನೀಡದೇ ವ್ಯಾಪಾರ ನಡೆಸುತ್ತಿರುವ ಮಾಹಿತಿ ಮೇರೆಗೆ ಅಧಿಕಾರಿಗಳು ಈ ಕಾರ್ಯಾಚರಣೆ ನಡೆಸಿದ್ದಾರೆ. ತೆರಿಗೆ ವಂಚನೆಯ ಪ್ರಮಾಣವನ್ನು ಪತ್ತೆ ಹಚ್ಚಲು ಹಣಕಾಸಿನ ದಾಖಲೆಗಳು ಮತ್ತು ಇತರ ಮಾಹಿತಿಗಳನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ವ್ಯಾಪಾರಿಗಳು ತಮ್ಮ ನೋಂದಾಯಿತ ವ್ಯಾಪಾರ ಸ್ಥಳಗಳನ್ನು ಮತ್ತು ಹೆಚ್ಚುವರಿ ವ್ಯಾಪಾರ ಸ್ಥಳಗಳನ್ನು ಘೋಷಿಸಿಲ್ಲ. ಜಿಎಸ್‌ಟಿ ನೋಂದಣಿ ಪ್ರಮಾಣ ಪತ್ರ ಮತ್ತು ಸಂಖ್ಯೆಯನ್ನು ಪ್ರದರ್ಶಿಸಿಲ್ಲ. ಅಂಥವರಿಗೆ ವಾಣಿಜ್ಯ ತೆರಿಗೆ ಇಲಾಖೆ ದಂಡ ವಿಧಿಸಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

ಚಾಕುವಿನಿಂದ ಇರಿದು ಕೊಲೆ: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಖಾದೀರ್ ಅಹಮ್ಮದ್ (29) ಅವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ರಾಜೇಂದ್ರ ಪ್ರಸಾದ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಬಾಪೂಜಿ ಬಡಾವಣೆ ನಿವಾಸಿ ಖಾದೀರ್ ಹಾಗೂ ಸ್ನೇಹಿತರು, ಆರೋಪಿ ರಾಜೇಂದ್ರ ಪ್ರಸಾದ್ ಮಾಲೀಕತ್ವದ ನಿರ್ಮಾಣ ಹಂತದ ಕಟ್ಟಡದಲ್ಲಿ ಸಾಮಗ್ರಿಗಳನ್ನು ಕದಿಯಲು ಹೋಗಿದ್ದರೆಂಬ ಆರೋಪವಿದೆ. ಇದೇ ಸಂದರ್ಭದಲ್ಲಿ ಗಲಾಟೆ ಆಗಿ ಖಾದೀರ್ ಕೊಲೆ ನಡೆದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಆರೋಪಿ ರಾಜೇಂದ್ರ, ಬಾಪೂಜಿ ಲೇಔಟ್‌ನ 9ನೇ ಅಡ್ಡರಸ್ತೆ ಮನೆ ನಿರ್ಮಾಣ ಮಾಡುತ್ತಿದ್ದಾರೆ. ಅಪರಾಧ ಹಿನ್ನೆಲೆಯುಳ್ಳ ಖಾದೀರ್ ಹಾಗೂ ಇತರರು, ಕಳ್ಳತನ ಮಾಡಲೆಂದು ಸೆ.30ರಂದು ಸ್ಥಳಕ್ಕೆ ಹೋಗಿದ್ದರು. ಅವರನ್ನು ನೋಡಿದ್ದ ಕಾರ್ಮಿಕರೊಬ್ಬರು ರಾಜೇಂದ್ರಗೆ ಮಾಹಿತಿ ನೀಡಿದ್ದರು.’

‘ಸ್ಥಳಕ್ಕೆ ಬಂದಿದ್ದ ರಾಜೇಂದ್ರ, ಖಾದೀರ್ ಹಾಗೂ ಇತರರನ್ನು ಹಿಡಿದಿದ್ದರು. ತಪ್ಪಿಸಿಕೊಳ್ಳಲು ಯತ್ನಿಸಿದ್ದ ಖಾದೀರ್, ಚಾಕು ತೋರಿಸಿ ಬೆದರಿಸಿ ರಾಜೇಂದ್ರ ಮೇಲೆ ಹಲ್ಲೆ ಮಾಡಿದ್ದರು. ಇದೇ ಸಂದರ್ಭದಲ್ಲಿ ಕಾರ್ಮಿಕ, ಖಾದೀರ್ ಅವರನ್ನು ಹಿಡಿದುಕೊಂಡಿದ್ದರು. ಅವರ ಕೈಯಲ್ಲಿದ್ದ ಚಾಕು ಕಸಿದುಕೊಂಡಿದ್ದ ರಾಜೇಂದ್ರ, ಎದೆಗೆ ಚುಚ್ಚಿದ್ದರು. ಸ್ನೇಹಿತರು ಸ್ಥಳದಿಂದ ಓಡಿ ಹೋಗಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ತೀವ್ರ ರಕ್ತಸ್ರಾವದಿಂದ ಕುಸಿದು ಬಿದ್ದಿದ್ದ ಖಾದೀರ್ ಅವರನ್ನು ಆರೋಪಿಯೇ ಆಸ್ಪತ್ರೆಗೆ ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಖಾದೀರ್ ಮೃತಪಟ್ಟಿದ್ದಾರೆ. ಈ ಕುರಿತು ಕೊಲೆ ಪ್ರಕರಣ ದಾಖಲಿಸಿಕೊಂಡು, ರಾಜೇಂದ್ರನನ್ನು ಬಂಧಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಬಿಎಂಟಿಸಿ ಹರಿದು ಗುತ್ತಿಗೆದಾರ ಸಾವು

ಬೆಂಗಳೂರು: ಯಲಹಂಕ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬಿಎಂಟಿಸಿ ಬಸ್ ಹಾಗೂ ಬೈಕ್ ನಡುವೆ ಬುಧವಾರ (ಅ. 4) ಸಂಜೆ ಅಪಘಾತ ಸಂಭವಿಸಿದ್ದು, ಸವಾರ ಭರತ್ ರೆಡ್ಡಿ (24) ಅವರು ಮೃತಪಟ್ಟಿದ್ದಾರೆ.

‘ಮತ್ತಿಕೆರೆ ನಿವಾಸಿ ಭರತ್ ರೆಡ್ಡಿ, ಸಿವಿಲ್ ಗುತ್ತಿಗೆದಾರ. ಕೆಲಸ ನಿಮಿತ್ತ ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೊಲೀಸರು ತಿಳಿಸಿದರು.

‘ಭರತ್ ಅವರು ಅಟ್ಟೂರಿನಲ್ಲಿ ಕಟ್ಟಡ ನಿರ್ಮಾಣ ಮಾಡಿಸುತ್ತಿದ್ದಾರೆ. ಅದರ ಪರಿಶೀಲನೆಗೆಂದು ಬೈಕ್‌ನಲ್ಲಿ ತೆರಳುತ್ತಿದ್ದರು. ಅಟ್ಟೂರು ಮದರ್ ಡೇರಿ ಬಳಿ ಬಿಎಂಟಿಸಿ ಬಸ್ ಹೊರಟಿತ್ತು. ಚಾಲಕ, ಅತೀ ವೇಗದಲ್ಲಿ ನಿರ್ಲಕ್ಷ್ಯದಿಂದ ಚಾಲನೆ ಮಾಡಿದ್ದ. ಇದರಿಂದಾಗಿ, ಬೈಕ್‌ಗೆ ಬಸ್ ಡಿಕ್ಕಿ ಹೊಡೆದಿತ್ತು’ ಎಂದು ಹೇಳಿದರು. ‘ಅಪಘಾತದಿಂದಾಗಿ ಬೈಕ್ ಉರುಳಿಬಿದ್ದಿತ್ತು. ರಸ್ತೆಗೆ ಬಿದ್ದಿದ್ದ ಭರತ್ ಅವರ ಮೈ ಮೇಲೆಯೇ ಬಸ್ಸಿನ ಚಕ್ರಗಳು ಹರಿದಿದ್ದವು. ತೀವ್ರ ಗಾಯಗೊಂಡಿದ್ದರಿಂದ ಅವರು ಮೃತಪಟ್ಟರು. ಬಿಎಂಟಿಸಿ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಮಹಿಳೆ ಮೃತದೇಹ ಪತ್ತೆ: ಪತಿ ವಶಕ್ಕೆ

ಬೆಂಗಳೂರು: ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ರೇಖಾ (24) ಮೃತದೇಹ ಪತ್ತೆಯಾಗಿದ್ದು, ಅನುಮಾನಾಸ್ಪದ ಸಾವು ಆರೋಪದಡಿ ಪ್ರಕರಣ ದಾಖಲಾಗಿದೆ.

‘ಸ್ಥಳೀಯ ನಿವಾಸಿ ರೇಖಾ ಅವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾರೆ. ಪತಿ ಸಂತೋಷ್ ಮೇಲೆ ಅನುಮಾನವಿರುವುದಾಗಿ ಪೋಷಕರು ದೂರು ನೀಡಿದ್ದಾರೆ. ಸಂತೋಷ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ತಮಿಳುನಾಡಿನ ಸಂತೋಷ್ ಹಾಗೂ ರೇಖಾ ಎರಡು ವರ್ಷಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ದಂಪತಿಗೆ ಮಗು ಇದೆ. ದಂಪತಿ ನಡುವೆ ಕೆಲದಿನಗಳಿಂದ ಜಗಳವಾಗುತ್ತಿತ್ತು. ವರದಕ್ಷಿಣೆ ತರುವಂತೆ ಪತಿ ಪೀಡಿಸುತ್ತಿದ್ದರೆಂಬ ಆರೋಪವಿದೆ. ಇದರಿಂದ ಬೇಸತ್ತ ರೇಖಾ, ಬುಧವಾರ ಮನೆಯಲ್ಲಿ ನೇಣು ಹಾಕಿಕೊಂಡಿದ್ದಾರೆ. ಪತಿ ಸಂಜೆ ಮನೆಗೆ ಬಂದಾಗ ವಿಷಯ ಗೊತ್ತಾಗಿದೆ’ ಎಂದು ತಿಳಿಸಿವೆ.

ಅಪರಾಧ ಸುದ್ದಿ

ಶಿಕ್ಷಕಿ ಜೊತೆ ಸಲುಗೆ: ಬಾಲಕನ ಮೇಲೆ ಹಲ್ಲೆ

ಬೆಂಗಳೂರು: ‘21 ವರ್ಷ ವಯಸ್ಸಿನ ಶಿಕ್ಷಕಿಯೊಬ್ಬರ ಜೊತೆ ಸಲುಗೆ ಹೊಂದಿದ್ದಾನೆ’ ಎಂದು ಆರೋಪಿಸಿ 17 ವರ್ಷದ ಬಾಲಕನ ಮೇಲೆ ಹಲ್ಲೆ ಮಾಡಲಾಗಿದ್ದು, ಈ ಸಂಬಂಧ ನಗರದ ಠಾಣೆಯೊಂದರಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸ್ಥಳೀಯ ನಿವಾಸಿಯಾಗಿರುವ ಬಾಲಕನ ತಂದೆ ದೂರು ನೀಡಿದ್ದಾರೆ. ಶಿಕ್ಷಕಿಯ ಭಾವಿ ಪತಿ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾಲಕ, ಪಿಯುಸಿ ಪ್ರಥಮ ವರ್ಷದಲ್ಲಿ ಓದುತ್ತಿದ್ದಾನೆ. ತನ್ನ ಮನೆ ಬಳಿಯ ಶಾಲೆಯೊಂದರ ಶಿಕ್ಷಕಿಯನ್ನು ಪರಿಚಯ ಮಾಡಿಕೊಂಡಿದ್ದ ಈತ, ಮೊಬೈಲ್ ನಂಬರ್ ಪಡೆದುಕೊಂಡಿದ್ದ. ನಂತರ, ಇಬ್ಬರು ಮಾತನಾಡಲಾರಂಭಿಸಿದ್ದರು. ಹಲವೆಡೆ ಸುತ್ತಾಡಿದ್ದರೆಂಬ ಮಾಹಿತಿ ಇದೆ. ಇದರ ನಡುವೆಯೇ ಶಿಕ್ಷಕಿಗೆ ಮದುವೆ ನಿಶ್ಚಯವಾಗಿತ್ತು.’

‘ಅ. 1ರಂದು ಬಾಲಕನ ಜನ್ಮದಿನವಿತ್ತು. ಬೇಕರಿಯೊಂದರಲ್ಲಿ ಸೇರಿದ್ದ ಬಾಲಕ ಹಾಗೂ ಶಿಕ್ಷಕಿ, ಕೇಕ್ ಕತ್ತರಿಸಿ ಸಂಭ್ರಮಿಸಿದ್ದರು. ನಂತರ, ಇಬ್ಬರೂ ಉದ್ಯಾನವೊಂದಕ್ಕೆ ಹೋಗಿ ಕುಳಿತಿದ್ದರು. ಅದನ್ನು ನೋಡಿದ್ದ ವ್ಯಕ್ತಿಯೊಬ್ಬರು, ಶಿಕ್ಷಕಿಯ ಬಾವಿ ಪತಿಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಶಿಕ್ಷಕಿ ಜೊತೆ ಸಲುಗೆ ಇಟ್ಟುಕೊಂಡಿದ್ದೀಯ’ ಎಂದು ಆರೋಪಿಸಿದ್ದ ಭಾವಿ ಪತಿ ಹಾಗೂ ಇತರರು, ಬಾಲಕನ ಮೇಲೆ ಹಲ್ಲೆ ಮಾಡಿದ್ದಾರೆ. ಇದು ಗೊತ್ತಾಗುತ್ತಿದ್ದಂತೆ ಬಾಲಕನ ತಂದೆ ದೂರು ನೀಡಿದ್ದಾರೆ’ ಎಂದು ಹೇಳಿವೆ.

₹ 10 ಲಕ್ಷ ಮೌಲ್ಯದ ಬಸ್ ಶೆಲ್ಟರ್ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿ ಹೊಸದಾಗಿ ನಿರ್ಮಿಸಲಾಗಿದ್ದ ಬಸ್ ಶೆಲ್ಟರ್(ತಂಗುದಾಣ) ಕಳ್ಳತನವಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸೈನ್‌ಪೋಸ್ ಇಂಡಿಯಾ ಕಂಪನಿಯ ಉಪಾಧ್ಯಕ್ಷರಾದ ಎನ್. ರವಿ ರೆಡ್ಡಿ ಅವರು ಶೆಲ್ಟರ್ ಕಳ್ಳತನ ಸಂಬಂಧ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ನಗರದಲ್ಲಿರುವ ಬಸ್ ತಂಗುದಾಣಗಳಿಗೆ ಶೆಲ್ಟರ್ ಅಳವಡಿಸುವ ಗುತ್ತಿಗೆಯನ್ನು ಬಿಬಿಎಂಪಿ ವತಿಯಿಂದ ಸೈನ್ ಪೋಸ್ ಇಂಡಿಯಾ ಕಂಪನಿಗೆ ವಹಿಸಲಾಗಿದೆ. ಅದರಂತೆ ನಗರದ ಹಲವು ತಂಗುದಾಣಗಳಲ್ಲಿ ಶೆಲ್ಟರ್ ನಿರ್ಮಿಸಲಾಗಿದ್ದು, ಮತ್ತಷ್ಟು ಕಡೆ ನಿರ್ಮಾಣ ಕೆಲಸ ನಡೆಯುತ್ತಿದೆ’ ಎಂದು ಹೇಳಿದರು.

‘ಕನ್ನಿಂಗ್‌ಹ್ಯಾಮ್ ರಸ್ತೆಯ ಕಾಫಿ ಡೇ ಎದುರು ಬಸ್ ತಂಗುದಾಣ ಗುರುತಿಸಲಾಗಿತ್ತು. ಅದೇ ಸ್ಥಳದಲ್ಲಿ ಆಗಸ್ಟ್ 21ರಂದು ₹ 10 ಲಕ್ಷ ಮೌಲ್ಯದ ಶೆಲ್ಟರ್ ನಿರ್ಮಿಸಲಾಗಿತ್ತು. ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಸೈನ್‌ಪೋಸ್ ಇಂಡಿಯಾ ಕಂಪನಿ ಪ್ರತಿನಿಧಿಗಳು, ಅಗಸ್ಟ್ 28ರಂದು ಸ್ಥಳ ಪರಿಶೀಲನೆ ನಡೆಸಿದ್ದರು. ಆದರೆ, ಹೊಸದಾಗಿ ಹಾಕಲಾಗಿದ್ದ ಶೆಲ್ಟರ್ ಸ್ಥಳದಲ್ಲಿ ಇರಲಿಲ್ಲ. ಬಳಿಕ, ಬಿಬಿಎಂಪಿ ಅಧಿಕಾರಿಗಳನ್ನು ವಿಚಾರಿಸಿದ್ದರು. ಶೆಲ್ಟರ್ ಬಗ್ಗೆ ತಮಗೆ ಗೊತ್ತಿಲ್ಲವೆಂದು ಅಧಿಕಾರಿಗಳು ಹೇಳಿದ್ದರು. ಬಳಿಕ ರವಿ ರೆಡ್ಡಿ, ಠಾಣೆಗೆ ದೂರು ನೀಡಿದ್ದಾರೆ’ ಎಂದರು.

ತಿಂಗಳ ನಂತರ ದೂರು: ‘ಶೆಲ್ಟರ್ ಕಳ್ಳತನ ಬಗ್ಗೆ ತಿಂಗಳ ನಂತರ ದೂರು ನೀಡಿದ್ದಾರೆ. ಸುತ್ತಮುತ್ತ ಇರುವ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಸಾಮಾಜಿಕ ನ್ಯಾಯ ಚಿತ್ರೋತ್ಸವ

ಬೆಂಗಳೂರು: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಇದೇ ಶುಕ್ರವಾರ ಹಾಗೂ ಶನಿವಾರ 3ನೇ ಸಾಮಾಜಿಕ ನ್ಯಾಯ ಚಲನಚಿತ್ರೋತ್ಸವ ಹಮ್ಮಿಕೊಳ್ಳಲಾಗಿದೆ.

ವಿಶ್ವವಿದ್ಯಾಲಯದ ಇಂಗ್ಲಿಷ್ ವಿಭಾಗದ ಬರಹ ಮತ್ತು ಮಾಧ್ಯಮ ಕಲೆಗಳ ಸಂಘವು ಈ ಚಲನಚಿತ್ರೋತ್ಸವವನ್ನು ಆಯೋಜಿಸಿದೆ. 14 ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ. ಇದರ ಮೇಲ್ವಿಚಾರಕರಾದ ಚಲನಚಿತ್ರ ನಿರ್ಮಾಪಕ ಆರ್.ಪಿ. ಅಮುಧನ್ ಅವರು ಸಂವಾದಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಮಿಶೆಲ್ ಬೌರ್ ಕಾರ್ಪೆಂಟರ್ ನಿರ್ಮಿಸಿದ ‘ಲೋ ಕ್ಯು ಕ್ವೆದಾ ಎನ್ ಎಲ್ ಕಾಮಿನೋ’, ಪ್ರಯಂತಿ ಮತ್ತು ಶೋಭಿತ್ ಜೈನ್ ನಿರ್ಮಿಸಿದ ‘ಟ್ಯಾಂ ಬ್ರಾಂ ಕುಕಿಂಗ್’ ಮುಂತಾದ ಸಾಕ್ಷ್ಯಚಿತ್ರಗಳನ್ನು ಪ್ರದರ್ಶಿಸಲಾಗುತ್ತದೆ ಎಂದು ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಅರುಲ್ ಮಣಿ ತಿಳಿಸಿದ್ದಾರೆ.

‘ಬೀದಿ ನಾಯಿ ಪ್ರೇಮ ಅಪಾಯಕ್ಕೆ ಆಸ್ಪದವಾಗದಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೀದಿ ನಾಯಿಗಳಿಗೆ ಆಹಾರ ನೀಡುವ ಸಹಾನುಭೂತಿಯು ಸಾರ್ವಜನಿಕರಿಗೆ ಅವ್ಯವಸ್ಥೆ ಮತ್ತು ಅಪಾಯಕ್ಕೆ ಆಸ್ಪದ ಒದಗಿಸುವಂತೆ ಇರಬಾರದು‘ ಎಂದು ಹೈಕೋರ್ಟ್ ಕಾಳಜಿ ವ್ಯಕ್ತಪಡಿಸಿದೆ.

‘ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಮಾರ್ಗದರ್ಶಿ ಸೂತ್ರಗಳನ್ನು ಅನುಷ್ಠಾನಗೊಳಿಸುವಂತೆ ನಗರಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಿರ್ದೇಶಿಸಬೇಕು‘ ಎಂದು ಕೋರಿ ಎಲ್.ರಮೇಶ್ ನಾಯಕ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಬೀದಿ ನಾಯಿಗಳಿಗೆ ಆಹಾರ ಪೂರೈಸುವುದು ಒಳ್ಳೆಯ ಕಾರ್ಯವೇನೊ ಸರಿ. ಆದರೆ, ಅದರ ಕ್ರಮವೂ ಸರಿ ಇರಬೇಕು. ನಿಗದಿತ ಸ್ಥಳದಲ್ಲಿ ಆಹಾರ ನೀಡಿದರೆ ಉತ್ತಮ. ಇಲ್ಲವಾದರೆ ದಾರಿಹೋಕರು ಮತ್ತು ಸ್ಥಳೀಯರಿಗೆ ತೊಂದರೆ ಉಂಟಾಗುತ್ತದೆ. ಕೆಲವರು ಬೆಳಗಿನ ಜಾವ ವಿಧಾನಸೌಧದ ಗೇಟಿನ ಮುಂಭಾಗವೇ ಪ್ರಾಣಿಗಳಿಗೆ ಆಹಾರ ತಂದು ಹಾಕುತ್ತಾರೆ. ಪ್ರಾಣಿಗಳ ಬಗ್ಗೆ ಅನುಕಂಪ ತೋರುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಅದರಿಂದ ಅವ್ಯವಸ್ಥೆ ಸೃಷ್ಟಿಯಾಗಬಾರದು ಎಂಬುದಷ್ಟೇ ನಮ್ಮ ಕಳಕಳಿ‘ ಎಂದು ಹೇಳಿತು.

‘ಪ್ರಾಣಿಪ್ರಿಯರು ಭಾರತೀಯ ಪ್ರಾಣಿ ಕಲ್ಯಾಣ ಮಂಡಳಿಯ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಹಕ್ಕುಗಳನ್ನು ಪ್ರತಿಪಾದಿಸುವವರು ತಮ್ಮ ಕರ್ತವ್ಯಗಳನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಹಕ್ಕು, ಕರ್ತವ್ಯಗಳು ಅಂತರ್‌ಸಂಬಂಧ ಹೊಂದಿವೆ’ ಎಂದು ಪೀಠ ಅಭಿಪ್ರಾಯಪಟ್ಟಿತು.

ಸರ್ಕಾರಕ್ಕೆ ತರಾಟೆ: ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಅರ್ಜಿಗೆ ಉತ್ತರಿಸಲು ಕಾಲಾವಕಾಶ ನೀಡಬೇಕು ಎಂದು ಕೋರಿದರು. ಆದರೆ, ಈ ಮನವಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, ‘ಈ ವರ್ಷದ ಜನವರಿಯಲ್ಲೇ ಉತ್ತರಿಸುವುದಾಗಿ ಹೆಚ್ಚುವರಿ ಅಡ್ವೊಕೇಟ್ ಜನರಲ್ ಅಂತಿಮಗಡುವು ಪಡೆದಿದ್ದರು. ಆದರೆ, ಈತನಕ ಉತ್ತರಿಸಿಲ್ಲ. ಇಂತಹ ನಡೆಯನ್ನು ಒಪ್ಪಲು ಸಾಧ್ಯವಿಲ್ಲ. ಮೂರು ವಾರಗಳಲ್ಲಿ ಉತ್ತರಿಸಬೇಕು. ಮತ್ತಷ್ಟು ವಿಳಂಬ ಮಾಡಿದರೆ ಸೂಕ್ತ ಆದೇಶ ಹೊರಡಿಸಬೇಕಾಗುತ್ತದೆ‘ ಎಂದು ಎಚ್ಚರಿಸಿ ವಿಚಾರಣೆಯನ್ನು ನವೆಂಬರ್ 15ಕ್ಕೆ ಮುಂದೂಡಿತು.

ಲೈಂಗಿಕ ಕಾರ್ಯಕರ್ತೆ ಹತ್ಯೆ: ಜೀವಾವಧಿ ಶಿಕ್ಷೆ

ಬೆಂಗಳೂರು: ಹತ್ತು ವರ್ಷಗಳ ಹಿಂದೆ ಮೈಸೂರಿನಲ್ಲಿ ಲೈಂಗಿಕ ಕಾರ್ಯಕರ್ತೆ ಹತ್ಯೆ ಮಾಡಿದ್ದ ಪ್ರಕರಣದ ಅಪರಾಧಿಗೆ ಹೈಕೋರ್ಟ್ ಜೀವಾವಧಿ ಶಿಕ್ಷೆ ವಿಧಿಸಿದೆ.

ಅಪರಾಧಿಯನ್ನು ಖುಲಾಸೆಗೊಳಿಸಿದ್ದ ಮೈಸೂರಿನ ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಚ್.ಬಿ.ಪ್ರಭಾಕರ ಶಾಸ್ತ್ರಿ ಮತ್ತು ನ್ಯಾಯಮೂರ್ತಿ ಅನಿಲ್ ಬಿ. ಕಟ್ಟಿ ಅವರಿದ್ದ ವಿಭಾಗೀಯ ನ್ಯಾಯಪೀಠ ಭಾಗಶಃ ಪುರಸ್ಕರಿಸಿದೆ. ಆರೋಪಿಯನ್ನು ಅತ್ಯಾಚಾರದ ಆಪಾದನೆಯಿಂದ ಮುಕ್ತಗೊಳಿಸಿದ್ದ ಆದೇಶವನ್ನು ದೃಢಪಡಿಸಿದ್ದು ಕೊಲೆ ಮತ್ತು ದರೋಡೆಗೆ ಶಿಕ್ಷೆ ವಿಧಿಸಿದೆ. ಪ್ರಾಸಿಕ್ಯೂಷನ್ ಪರ ಪಿ.ತೇಜಸ್ ವಾದ ಮಂಡಿಸಿದ್ದರು.

ಪ್ರಕರಣವೇನು?: ‘ಸಂತ್ರಸ್ತೆಯು 2010ರ ಸೆಪ್ಟೆಂಬರ್ 18ರಂದು ಮೈಸೂರಿನ ಎಸ್.ಆರ್ ರಸ್ತೆಯಲ್ಲಿ ಗ್ರಾಹಕರೊಂದಿಗೆ ವ್ಯವಹರಿಸುತ್ತಿದ್ದ ಸಮಯದಲ್ಲಿ ಅಪರಾಧಿ ಗಿರೀಶ ಆಕೆಯನ್ನು ಆಟೊ ರಿಕ್ಷಾದಲ್ಲಿ ಸಬ್ ಅರ್ಬನ್ ಬಸ್ ನಿಲ್ದಾಣದ ಪಕ್ಕದಲ್ಲಿನ ಲಾಡ್ಜ್‌ಗೆ ಕರೆದೊಯ್ದಿದ್ದ. ಲಾಡ್ಜ್‌ನಲ್ಲಿ ಕೊಠಡಿ ಪಡೆದುಕೊಂಡು ಅಂದು ರಾತ್ರಿ ಅಪರಾಧಿ ಗಿರೀಶ್ ಆಕೆಯೊಂದಿಗೆ ದೈಹಿಕ ಸಂಭೋಗ ನಡೆಸಿದ್ದ. ಬಳಿಕ ಕತ್ತು ಹಿಸುಕಿ ಆಕೆಯ ಬಳಿಯಿದ್ದ ಚಿನ್ನಾಭರಣ, ಮೊಬೈಲ್ ಫೋನ್, ಹಣ ಕದ್ದು ಪರಾರಿಯಾಗಿದ್ದ‘ ಎಂದು ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಹೈಕೋರ್ಟ್ ಸುದ್ದಿ

ರಾಮಕೃಷ್ಣ ಕೊಲೆ ಪ್ರಕರಣ: ಆರು ಆರೋಪಿಗಳಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಕೆವಿಜಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾಗಿದ್ದ ಎ.ಎಸ್.ರಾಮಕೃಷ್ಣ ಕೊಲೆ ಪ್ರಕರಣದಲ್ಲಿ ಅವರ ತಮ್ಮ ಡಾ.ರೇಣುಕಾ ಪ್ರಸಾದ್ ಸೇರಿದಂತೆ 6 ಜನ ಆರೋಪಿಗಳಿಗೆ ಹೈಕೋರ್ಟ್, ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.

‘ರೇಣುಕಾ ಪ್ರಸಾದ್ ಸೇರಿದಂತೆ ಒಟ್ಟು ಏಳು ಜನ ಆರೋಪಿಗಳನ್ನು ಖುಲಾಸೆಗೊಳಿಸಿ ಪುತ್ತೂರಿನ 5ನೇ ಹೆಚ್ಚುವರಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಬೇಕು’ ಎಂದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿದ್ದ ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಿತು.

ಕೊಲೆ ಮತ್ತು ಒಳಸಂಚು ಅಪರಾಧಕ್ಕೆ ಆರು ಜನ ದೋಷಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ತಲಾ ₹20 ಸಾವಿರ ದಂಡ ವಿಧಿಸಲಾಗಿದೆ. ‘ಕೊಲೆ ಮತ್ತು ಒಳಸಂಚಿಗೆ ರೇಣುಕಾ ಪ್ರಸಾದ್ ಅವರೇ ಮುಖ್ಯ ಕಾರಣ. ಹೀಗಾಗಿ, ಅವರು ಮೃತ ರಾಮಕೃಷ್ಣ ಅವರ ಪತ್ನಿಗೆ ₹10 ಲಕ್ಷ ಪರಿಹಾರ ಪಾವತಿಸಬೇಕು‘ ಎಂದು ನ್ಯಾಯಪೀಠ ನಿರ್ದೇಶಿಸಿದ್ದು, ತಲೆ ಮರೆಸಿಕೊಂಡಿರುವ ಐದನೇ ಆರೋಪಿ ಶರಣ್ ಪೂಜಾರಿ ಬಂಧನಕ್ಕೆ ವಾರಂಟ್ ಹೊರಡಿಸುವಂತೆ ಪುತ್ತೂರು ಸೆಷನ್ಸ್ ಕೋರ್ಟ್‌ಗೆ ಸೂಚಿಸಿದೆ.

ಚಿಕಿತ್ಸೆ: ಇದೇ ವೇಳೆ ರೇಣುಕಾ ಪ್ರಸಾದ್ ಪರ ವಕೀಲರು, ‘ನನ್ನ ಕಕ್ಷಿದಾರರಿಗೆ ಈಗ 63 ವರ್ಷ. ಅವರನ್ನು ದೋಷಿ ಎಂದು ತೀರ್ಮಾನಿಸಿದ ನಂತರ ಮಾನಸಿಕ ಅಸ್ವಸ್ಥತೆಗೆ ಒಳಗಾಗಿದ್ದಾರೆ. ಅಧಿಕ ರಕ್ತದೊತ್ತಡ, ನಿದ್ರಾಹೀನತೆ ಸೇರಿದಂತೆ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಹಾಗಾಗಿ, ಅವರಿಗೆ ಜೈಲಿನಲ್ಲಿ ಸೂಕ್ತ ಚಿಕಿತ್ಸೆ ಕಲ್ಪಿಸಲು ಆದೇಶಿಸಬೇಕು’ ಎಂದು ಕೋರಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ರೇಣುಕಾ ಪ್ರಸಾದ್‌ಗೆ ಸೂಕ್ತ ಚಿಕಿತ್ಸೆ ಕಲ್ಪಿಸುವಂತೆ ಮಂಗಳೂರು ಜೈಲು ಅಧೀಕ್ಷಕರಿಗೆ ನಿರ್ದೇಶಿಸಿತು.

ಡಾ.ರೇಣುಕಾ ಪ್ರಸಾದ್ ಅಲ್ಲದೆ, ಮನೋಜ್ ರೈ, ಎಚ್.ಆರ್, ನಾಗೇಶ್, ವಾಮನ ಪೂಜಾರಿ, ಶರಣ್ ಪೂಜಾರಿ ಮತ್ತು ಶಂಕರ ಶಿಕ್ಷೆಗೊಳಗಾಗಿರುವ ಆರೋಪಿಗಳು. ಏಳನೇ ಆರೋಪಿಯಾಗಿದ್ದ ಎಚ್.ಯು ನಾಗೇಶ್ ಕುಮಾರ್ ಅವರನ್ನು ಖುಲಾಸೆಗೊಳಿಸಲಾಗಿದೆ. ಪ್ರಾಸಿಕ್ಯೂಷನ್ ಪರವಾಗಿ ಈ ಹಿಂದಿನ ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್ (ಎಸ್‌ಪಿಪಿ–1) ಕಿರಣ್ ಜವಳಿ ಹಾಗೂ ಹಾಲಿ ಎಸ್‌ಪಿಪಿ–2 ಬ್ಯಾತ ಎನ್. ಜಗದೀಶ್ ವಾದ ಮಂಡಿಸಿದ್ದರು.

ಅಂಗಾಂಗ ದಾನ: ಕ್ಯೂಆರ್ ಕೋಡ್ ಬಿಡುಗಡೆ

SCAN ME FOR QUICK PLEDGE

ಬೆಂಗಳೂರು: ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ದಾನಿಗಳ ಸಂಖ್ಯೆ ಹೆಚ್ಚಿಸಲು ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ(ನೊಟ್ಟೊ) ಅಭಿವೃದ್ಧಿಪಡಿಸಿರುವ ಕ್ಯೂಆರ್ ಕೋಡ್‌ಗೆ ಗುರುವಾರ ಚಾಲನೆ ದೊರೆತಿದೆ.

ಆರೋಗ್ಯ ಇಲಾಖೆ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ ಅವರು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಂಗಾಂಗ ದಾನ ಪ್ರತಿಜ್ಞೆ ಕೈಗೊಂಡರು. ಈ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುತ್ತಿದ್ದಂತೆ ಪ್ರತಿಜ್ಞೆ ಕೈಗೊಳ್ಳುವ ಪುಟ ತೆರೆದುಕೊಳ್ಳಲಿದೆ. ಅಲ್ಲಿ ಆಧಾರ್ ಸಂಖ್ಯೆ ಸಹಿತ ಅಗತ್ಯ ಮಾಹಿತಿ ನಮೂದಿಸಬೇಕು.

‘ಆಯುಷ್ಮಾನ್ ಭವ ಡಿಜಿಟಲ್ ಮಿಷನ್ ಅಡಿ ಈ ಕ್ಯೂಆರ್ ಕೋಡ್ ಅಭಿವೃದ್ಧಿಪಡಿಸಲಾಗಿದೆ. ಆಯುಷ್ಮಾನ್ ಭವ ಆರೋಗ್ಯ ಮೇಳದಲ್ಲಿ ಅಂಗಾಂಗ ದಾನದ ಮಹತ್ವವನ್ನು ಸಾರಲಾಗುತ್ತದೆ. ರಾಜ್ಯದ ಜೀವಸಾರ್ಥಕತೆ ಯೋಜನೆಯಡಿ ಒಟ್ಟು 35 ಸಾವಿರಕ್ಕೂ ಹೆಚ್ಚು ಜನರು ಅಂಗಾಂಗ ದಾನಕ್ಕೆ ಪ್ರತಿಜ್ಞೆ ಮಾಡಿದ್ದಾರೆ. ಅಂಗಾಂಗ ದಾನಕ್ಕೆ ಪ್ರತಿಜ್ಞೆ ಕೈಗೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ’ ಎಂದು ದಿನೇಶ್ ಗುಂಡೂರಾವ್ ಹೇಳಿದರು.

ನಿಧನ ವಾರ್ತೆ

ಪಾರ್ಶ್ವನಾಥಯ್ಯ

ಬೆಂಗಳೂರು: ಪಶುಸಂಗೋಪನೆ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಡಾ.ಎಸ್.ಪಿ.ಪಾರ್ಶ್ವನಾಥ - ಪಾರ್ಶ್ವನಾಥಯ್ಯ (85) ಗುರುವಾರ ನಿಧನರಾದರು.

ಅವರಿಗೆ ಪತ್ನಿ ಪದ್ಮಾ, ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಪದ್ಮಿನಿ ನಾಗರಾಜು ಸೇರಿದಂತೆ ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಮೃತರ ಅಂತ್ಯ ಸಂಸ್ಕಾರ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಮಾಯಸಂದ್ರದಲ್ಲಿ ಶುಕ್ರವಾರ ಬೆಳಿಗ್ಗೆ 10ಕ್ಕೆ ನೆರವೇರಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪತ್ರಕರ್ತರ ಬಂಧನ ವಿರೋಧಿಸಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ

ಮಾಧ್ಯಮಗಳ ಮೇಲಿನ ದಾಳಿಗೆ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವಿರೋಧಿ ನೀತಿಗಳು, ಆಡಳಿತ ವೈಫಲ್ಯಗಳು ಸಾರ್ವಜನಿಕರಿಗೆ ತಿಳಿಯಬಾರದು ಎಂದೇ ಕೇಂದ್ರ ಸರ್ಕಾರ ಮಾಧ್ಯಮಗಳ ಮೇಲೆ ದಾಳಿ ಮಾಡುತ್ತಿದೆ ಎಂದು ವಿವಿಧ ಸಂಘಟನೆಗಳ ಮುಖಂಡರು ಆರೋಪಿಸಿದರು.

ಆನ್‌ಲೈನ್ ಸುದ್ದಿತಾಣ ನ್ಯೂಸ್‌ಕ್ಲಿಕ್ ಸಂಸ್ಥೆ ಮೇಲಿನ ದಾಳಿ, ಪತ್ರಕರ್ತರ ಬಂಧನ ಖಂಡಿಸಿ ಬಹುತ್ವ ಕರ್ನಾಟಕ, ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್), ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಷನ್ (ಎಐಎಸ್‌ಎ), ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫೋರಂ ಜಸ್ಟೀಸ್ (ಎಐಎಲ್‌ಎಜೆ), ಡಿಜಿಪಬ್ ಸಂಸ್ಥೆಗಳ ಸಹಯೋಗದಲ್ಲಿ ಗುರುವಾರ ಆಯೋಜಿಸಿದ್ದ ಪ್ರತಿಭಟನಾ ಸಭೆಯಲ್ಲಿ ಸರ್ಕಾರದ ಧೋರಣೆಯನ್ನು ಖಂಡಿಸಿದರು.

ಪ್ರಬೀರ್ ಪುರಕಾಯಸ್ಥ ಅವರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ. ಪ್ರಬೀರ್ ಅವರನ್ನು 1975ರ ತುರ್ತು ಪರಿಸ್ಥಿತಿ ಸಮಯದಲ್ಲೂ ಸರ್ಕಾರ ಬಂಧಿಸಿತ್ತು. ಇಂದು ದೇಶದಲ್ಲಿರುವ ಅಘೋಷಿತ ತುರ್ತು ಪರಿಸ್ಥಿತಿ ಸನ್ನಿವೇಶದಲ್ಲೂ ಬಂಧಿಸಲಾಗಿದೆ. ಇದು ಪತ್ರಿಕಾ ಸ್ವಾತಂತ್ರ್ಯದ ಮೇಲಿನ ದಾಳಿ ಎಂದು ದೂರಿದರು.

ಬೆಂಗಳೂರಿನಲ್ಲಿ ಗುರುವಾರ ವಿವಿಧ ಸಂಘಟನೆಗಳ ಕಾರ್ಯಕರ್ತರು ಆನ್‌ಲೈನ್ ಸುದ್ದಿತಾಣ ನ್ಯೂಸ್‌ಕ್ಲಿಕ್ ಸಂಸ್ಥೆ ಮೇಲಿನ ದಾಳಿ, ಪತ್ರಕರ್ತರ ಬಂಧನ ಖಂಡಿಸಿ ಪ್ರತಿಭಟನೆ ನಡೆಸಿದರು.

ಬಂಧನಕ್ಕೆ ಒಳಗಾದವರಿಗೆ ಎಫ್‌ಐಆರ್ ಪ್ರತಿಯನ್ನೂ ನೀಡಿಲ್ಲ. ಎಫ್‌ಐಆರ್ ಮಾಹಿತಿ ನೀಡುವಂತೆ ಕೋರಿ ನ್ಯಾಯಾಲಯದ ಮೊರೆ ಹೋದರೂ, ದೆಹಲಿ ಪೊಲೀಸರು ವಿರೋಧಿಸಿದ್ದಾರೆ. ಆಂಧ್ರಪ್ರದೇಶದಲ್ಲೂ ಇಂತಹ ದಾಳಿಗಳು ನಡೆದಿವೆ. ವರದಿಗಾರರ ಬಳಿಯ ಮೂಲಗಳ ಮಾಹಿತಿ ಪಡೆಯುವುದು ಕಾನೂನು ಬಾಹಿರ. ಖಾಸಗಿತನದ ಹಕ್ಕಿನ ಉಲ್ಲಂಘನೆ ಎಂದು ದೂರಿದರು.

ಪಿಯುಸಿಎಲ್ ಅಧ್ಯಕ್ಷ ಅರವಿಂದ್ ನಾರಾಯಣ್, ವೆಲ್‌ಫೇರ್ ಪಾರ್ಟಿ ಆಫ್ ಇಂಡಿಯಾ ಅಧ್ಯಕ್ಷ ತಾಹಿರ್ ಹುಸೇನ್, ವಕೀಲರಾದ ಬಿ.ಟಿ. ವೆಂಕಟೇಶ್, ಅವನಿ ಚೋಕ್ಸಿ, ಪತ್ರಕರ್ತೆ ಸಿ.ಜಿ. ಮಂಜುಳಾ, ಪ್ರೆಸ್‌ಕ್ಲಬ್ ಆಫ್ ಇಂಡಿಯಾ ಮಾಜಿ ಅಧ್ಯಕ್ಷ ಆನಂದ್ ಸಹಾಯ್, ಬಹುತ್ವ ಕರ್ನಾಟಕದ ವಿನಯ್ ಶ್ರೀನಿವಾಸ, ಚಿಂತಕ ಜಿ.ರಾಮಕೃಷ್ಣ, ನಗರಗೆರೆ ರಮೇಶ್ ಇದ್ದರು.

ಕೇರಂ ಸ್ಪರ್ಧೆಯಲ್ಲಿ ಉತ್ತರ ಪ್ರದೇಶ ಚಾಂಪಿಯನ್

ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಮುಕ್ತಾಯ

ಪ್ರಜಾವಾಣಿ ವಾರ್ತೆ

ಯಲಹಂಕ: ಹೊನ್ನೇನಹಳ್ಳಿ ಸಮೀಪದ ವಿಶ್ವ ವಿದ್ಯಾಪೀಠ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕೇರಂ ಹಾಗೂ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್ ಸ್ಪರ್ಧೆ ಮುಕ್ತಾಯಗೊಂಡಿದೆ.

14ರ ವಯೋಮಿತಿಯ ಬಾಲಕರ ಬ್ಯಾಡ್ಮಿಂಟನ್ ವಿಭಾಗದಲ್ಲಿ ಮಹಾರಾಷ್ಟ್ರ ಮತ್ತು ಗೋವಾ ಹಾಗೂ ಬಾಲಕಿಯರ ವಿಭಾಗದಲ್ಲಿ ತಮಿಳುನಾಡು ತಂಡಗಳು ಚಾಂಪಿಯನ್ ಆದವು. 17ರ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ ಮಹಾರಾಷ್ಟ್ರ ಹಾಗೂ ಬಾಲಕರ ವಿಭಾಗದಲ್ಲಿ ನಾರ್ಥ್ ಈಸ್ಟ್ ತಂಡಗಳು ಪ್ರಶಸ್ತಿ ಗಳಿಸಿದವು.

19ರ ವಯೋಮಿತಿಯ ಬಾಲಕಿಯರ ವಿಭಾಗದಲ್ಲಿ ವೆಸ್ಟ್ ಬೆಂಗಾಲ್ ಮತ್ತು ಬಾಲಕರ ವಿಭಾಗದಲ್ಲಿ ಉತ್ತರಭಾರತ ತಂಡ ಚಾಂಪಿಯನ್ ಗಳಾದವು. ವೈಯಕ್ತಿಕ ವಿಭಾಗದಲ್ಲಿ ಆಂಧ್ರ, ಮಹಾರಾಷ್ಟ್ರ ಮತ್ತು ಉತ್ತರಭಾರತ ತಂಡಗಳು ಪ್ರಾಬಲ್ಯ ಮೆರೆದವು. ಕರ್ನಾಟಕ ಬ್ಯಾಡ್ಮಿಂಟನ್ ತಂಡ ದ್ವಿತೀಯ ಸ್ಥಾನ ಪಡೆಯಿತು.

ಯಲಹಂಕದ ಹೊನ್ನೇನಹಳ್ಳಿ ಸಮೀಪದ ವಿಶ್ವ ವಿದ್ಯಾಪೀಠ ಶಾಲೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕೇರಂ ಹಾಗೂ ಬ್ಯಾಡ್ಮಿಂಟನ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಶಾಲೆಯ ನಿರ್ದೇಶಕಿ ಸುಶೀಲಾ ಸಂತೋಷ್ ಇದ್ದರು.

ಕೇರಂ ಸ್ಪರ್ಧೆಯಲ್ಲಿ ಉತ್ತರ ಪ್ರದೇಶ, ತಮಿಳುನಾಡು ಹಾಗೂ ಆಂಧ್ರಪ್ರದೇಶ ತಂಡಗಳು ಚಾಂಪಿಯನ್ ಆಗಿ ಹೊರಹೊಮ್ಮಿದವು.

ಮೂರು ದಿನಗಳಕಾಲ ನಡೆದ ಸಿಐಎಸ್‌ಸಿಇ ರಾಷ್ಟ್ರಮಟ್ಟದ ಬ್ಯಾಡ್ಮಿಂಟನ್ ಹಾಗೂ ಕೇರಂ ಸ್ಪರ್ಧೆಯಲ್ಲಿ ದೇಶದ 14 ವಲಯಗಳ 1000ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು.

CONNECT ಕ್ಲಾಸಿಫೈಡ್ಸ್

ATTENTION TRADERS!!!
BECOME A MEMBER INDIA'S FIRST PREMIER
TRADING FLOOR
TRADE LIKE A PROFESSIONAL
DEDICATED TRADING DESK & FLOOR | TOOLS & RESOURCES | 24 HOURS OPEN | TRAINING & EDUCATION | HIGH SPEED INTERNET | EVENTS & SEMINARS | INTERNATIONAL PROP FIRM PROGRAMS | COMMUNITY MEMBERSHIP | RISK MANAGEMENT & ANALYSIS TEAM
LIMITED MEMBERSHIPS AFFORDABLE PLANS JOIN US TODAY
proptradingfloor
#01-107, WEWORK, L BLOCK, EMBASSY TECH VILLAGE, OUTER RING ROAD, BELLANDUR, BANGALORE
+91-6364938335
+91-6364938336
OPENING THIS NOV 1ST, 2023
www.proptradingfloor.com

ಇಂದಿನಿಂದ ಅಮೋಘ ಪ್ರಾರಂಭ
ಅಂತರಾಷ್ಟ್ರೀಯ ಗೃಹಬಳಕೆ ವಸ್ತುಗಳ ಪ್ರದರ್ಶನ
ಗೃಹಶೋಭೆ
GRUHA SHOBHE
LIVING STYLE EXHIBITION
ಮುಖ್ಯ ಅತಿಥಿಗಳು ಉದ್ಘಾಟನೆ : ಸಂಜೆ 6.00 ಘಂಟೆಗೆ
Timings 11 Am to 9 Pm
ಶ್ರೀ ಎಸ್ ಮುನಿರಾಜು
ಶಾಸಕರು ದಾಸರಹಳ್ಳಿ ವಿಧಾನಸಭಾಕ್ಷೇತ್ರ, ಬೆಂಗಳೂರು
10 Days
ಅಕ್ಟೋಬರ್ 6 ರಿಂದ 15 ರವರೆಗೆ
ಬಿ.ಬಿ.ಎಂ.ಪಿ ಗ್ರೌಂಡ್, ಎಂ.ಇ.ಐ ಲೇಔಟ್, ಬಾಗಲಗುಂಟೆ, ಬೆಂಗಳೂರು
ENTRY Rs. 20/- Children Below 5 Years Free Entry PARKING FREE

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

INVEST IN successfully running business. Get reasonable returns on a regular basis with monthly Pdc: 7204070893

RENT: OFFICE Space 3000Sqft 1st Floor 12000Sqft 2nd Floor 18000Sqft Ground First Second & Third Floor Suitable-IT/ITES/Pharma/ Industries with Lift/Parking/ Power,Power-Backup on Kanakapura Road Near Sarakki, J.P.NAGAR Metro Station Call-9901453477

KORAMANGALA RENTAL Vacant Site 80' Road 8,500 sft. and 40'x60' 1st Sector HSR Layout, both Rent only. David- 9845855663

JOB OPPORTUNITIES

Multiple Vacancy

STAR INFRATECH
A Leading Construction company in Karnataka looking for talent acquisition for the following positions
- P M – BE (Civil)- Above 15 Years' Experience(Canal)
- D P M – BE (Civil)- Above 10 Years' Exp (Canal & Buildings)
- Quantity Surveyor- BE (Civil) – Above 5 Years' Exp(Canal, Layout & Buildings)
- Quality Control- BE (Civil) – Above 5 Years' Exp & Buildings
- Sr.Engineers- BE (Civil) – Above 5 Years' Exp
- Sr.Executive (Accounts)- Above 10 Years' Exp
- Admin Executives- Above 10 Years' Exp
- Data Entry Operator- Above 5 Years Exp
- Banking Coordinator- Exp In Credit & Bank Guarantee, Min 3 Years Exp. (MBA Finance Or M.Com)
- Accounts & Engineers Fresher's can also apply.
- Purchase Officer. Above 5 years' Exp

Experience in handling major projects highly preferable. Location all over Karnataka.
Address:- #177,6th Main, KEB Layout, Sanjay nagar, Bangalore-560094. Ph:+91 80 2341 2304/05
Email Id:hr.starinfratech09@gmail.com

General

WANTED
OPERATION MANAGER
(Defense personal can also apply)
Who can get results of Targeted Productivity with Quality, Maintenance, Implementation of SOP, Safety Procedure, Data Management, Overhead & Cost control, Monitoring & handling of personal, conflict management, house keeping, General Admin for Non Ferrous Foundry / CNC Machine Shop/ SSI Unit at Veerasandra Indu. Area, Hosur Road, Bangalore.
E-mail: hr.numax@gmail.com
Mo.: 9341018766

RENT-PLUG & Play-30/50/80 Seater-IT/ITES/Office Space with Lift/Parking/ Power,Power-Backup on Kanakapura Road Near Sarakki, J.P.NAGAR Metro Station Call-9901453477

Part-Time Jobs

TOP MNC Company Licensed By Central Govt. Retired/ VRS Persons 2nd Career Opportunity Age above 45 Years 35K to 40K: 7019215243/ 9886641282

SHOWROOM/OFFICE SPACE 1500Sqft-1st Floor, 2450Sqft-2nd Floor JAYANAGAR 4th Block WideRoad with Lift Power,Power-Backup Suitable Banks/Jewellery/ Retail Call-9901453477

RENTAL PROPERTIES

Accommodation Available

Commercial

4FLOOR COMMERCIAL Building For Rent Next to By-Pass on Hyd Main Rd Contact-9986670488/whats app

REAL ESTATE SELLING

House

Mahalakshmi Layout

HOUSE FOR sale 30X40 North Facing 4th floors fully furnished at Mahalakshmi layout Contact: 9845339637/ 9448511064 Broker excuse

Industrial & Factory

Outskirts

FOR SALE at KUNIGAL 1/2 Acre (2024 sqmt) Industrial Unit clear title two sides road touch Tax/approval complete No Liabilities call Sunil 9869007546

Residential/ Commercial

Koramangala

2400 SQUARE ft plot for sale Koramangala 4th Block 8th Main. Contact 9663766492 (strictly no brokers)

Sites

Nagarabhavi

SITE FOR SALE NAGARABHAVI D Group Layout, BDA Khatha 30x50 West Facing. Near BDA Complex. 8105688602.

REAL ESTATE BUYING

Commerical

Yelahanka

'PLOT MEASURING 3000 sq.ft plus suitable for commercial purposes at 1st and 2nd Stage Extension, HIG, Yelahanka, Bengaluru, preferably west facing required for immediate settlement. Interested sellers may contact: 7338428055 / 9845355551'

General

General

WE DO RESIDENTIAL, Commercial, IndustrialConversions, Change of land use,Revenue and KIADB Department work, MG Road,Bangalore. vernadevelopers.com 9353128035/ 9916310226

Industrial & Factory

Multiple Locations

WANTED RUNNING INDUSTRY, Sick Industry, Industrial land in Bangalore. Looking 4000 to 20000sft Property Jayanagar, Basavangudi, JP Nagar and CBD surrounding areas. Verna Developers, Bangalore. 9353128035/ 9916310226

BUILDERS ESSENTIAL

Water Proofing

WE FIX LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Call:9448572697

PERSONAL

Change of Name

I, SHANTHA LAKSHMINARAYAN R/o 680/1, 6th Cross, 4th Main, Hanumanthanagar, Bengaluru-19 have changed my name as SHANTHA DODDAPURA NARAYANASHETTY Vide affidavit dated 27/09/2023 before Notary P. Vijayakumar, Bangalore

CHANGE OF NAME
I, K M MAHALAKSHMI, R/at # 1581, 1st Floor, 1st Cross, 3rd Main, Chandra Layout, Bengaluru-560040, have changed my name to MALA K M vide affidavit dated 05-10-2023, before Notary S. Jayanna, Bengaluru. Henceforth I shall be called MALA K M only.

I, SUNDARARAMAN RAJARATHINAM S/o SUNDARARAMAN Aged 65 Years R/at Flat #A-101, Tower A, RNS Shanthi Nivas, Tumkur Road, Yeshwanthpur, Bangalore-560022. have changed my name to SUNDARARAMAN RAJARATHNAM vide affidavit dated 04.10.2023 before notary V Anjanappa, Bangalore.

CHANGE OF NAME
I, A.V. KRISHNAMOHAN S/o A.V.S. Moorthy R/a #147, 50 Feet Road, 1st Block, 3rd Phase, 3rd Stage, BSK, Bangalore-560085 have Changed my Name to A. KRISHNAMOHAN vide affidavit dated 5.10.2023 Sworn before Notary Mohammed Hussain. K. Bangalore.

I, SHANTHA RAJARATHINAM W/o SUNDARARAMAN RAJARATHNAM Aged 61 Years R/at Flat #A-101, Tower A, RNS Shanthi Nivas, Tumkur Road, Yeshwanthpur, Bangalore-560022. have changed my name to SHANTHA RAJARATHNAM vide affidavit dated 04.10.2023 before notary V Anjanappa, Bangalore.

ಹೆಸರು ಬದಲಾವಣೆ
ಮನ್ ತಮಂಗ್ @ ಮನ್ ಬಹಾದೂರ್ ಲಾಮಾ ಬಿನ್ ಚೆಂಗಬಾ ಲಾಮಾ ಎಂಬ ನಾನು, ನಂ. 37, ವೈಟ್‌ಫೀಲ್ಡ್ ರೋಡ್, ದೊಡ್ಡನೆಕ್ಕುಂದಿ ಕೈಗಾರಿಕಾ ಪ್ರದೇಶ, ಬೆಂಗಳೂರು ಉತ್ತರ, ಮಹದೇವಪುರ, ಬೆಂಗಳೂರು ವಿಳಾಸದಲ್ಲಿನ ವಾಸಿಯಾಗಿದ್ದು, ಇದೀಗ ನನ್ನ ಹೆಸರನ್ನು ಮನ್ ಬಹಾದೂರ್ ಲಾಮಾ ಎಂದು ಬದಲಾಯಿಸಿಕೊಂಡಿರುತ್ತೇನೆ ಮತ್ತು ಬೆಂಗಳೂರಿನ ನೋಟರಿಗಳಾದ ಸಿ.ವಿ.ಈರಪ್ಪ ರವರ ಎದುರು 13/10/2023 ರಂದು ಪ್ರಮಾಣೀಕರಿಸಿದ್ದೇನೆ. ಇನ್ನುಮುಂದೆ ನನ್ನ ಹೆಸರನ್ನು ಮನ್ ಬಹಾದೂರ್ ಲಾಮಾ ಎಂಬುದಾಗಿ ಮಾತ್ರ ಬಳಸುತ್ತೇನೆ.

I, SIDDARTH RAJARATHINAM SUNDER RAM S/o SUNDARARAMAN RAJARATHNAM Aged 32 Years R/at Flat #A-101, Tower A, RNS Shanthi Nivas, Tumkur Road, Yeshwanthpur, Bangalore-560022. have changed my name to SIDDARTH RAJARATHNAM SUNDER RAM vide affidavit dated 04.10.2023 before notary V Anjanappa, Bangalore.

Lost

NOTICE IS hereby given that share certificates No.305 for 25 shares having distinctive nos. 159526-159550 of J.L.Morison India Ltd., having its registered office at Tumkur Road, Bangalore in the name of BAYAVANDA BOPAIAH THIMMAIAH has been lost. I have applied to the Company for issuing duplicate share certificates in lieu of the above. Any person having valid objection to this is requested to lodge their objection(s) thereto with the Company or with C.B. Management Services P.Ltd., P22 Bondel Road, Kolkata- 70019 in writing within 15 days from the date of this publication. B.B.Thimmaiah 1st Block, Rajajinagar, Bangalore-560010.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH DECCAN HERALD Classifieds More value, more impact ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ASTRO YATRA

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

ಸ್ಥಿರಾಸ್ತಿ: ಪರಿಷ್ಕೃತ ಮಾರ್ಗಸೂಚಿ ದರದಂತೆ ಹೊರವಲಯ ಆಸ್ತಿ

ಸದಾಶಿವನಗರಕ್ಕೆ 'ಅಧಿಕ ಮೌಲ್ಯ', ಜಯನಗರಕ್ಕೆ 'ವಾಣಿಜ್ಯ ಪ್ರದೇಶದ' ಗರಿ

• ಆರ್. ಮಂಜುನಾಥ್

ಬೆಂಗಳೂರು: ಸದಾಶಿವನಗರ ಪ್ರತಿಷ್ಠಿತ ವಸತಿ ಬಡಾವಣೆಯ ಖ್ಯಾತಿಯೊಂದಿಗೆ ನಗರದ ಅತಿ ಹೆಚ್ಚಿನ 'ಮೌಲ್ಯ'ದ ಪ್ರದೇಶವಾಗಿದೆ. ಎಂ.ಜಿ. ರಸ್ತೆ, ಕನ್ನಿಂಗ್‌ಹ್ಯಾಂ ರಸ್ತೆಗಳನ್ನು ಮೀರಿಸಿರುವ ಜಯನಗರ ಅತಿಬೆಲೆಬಾಳುವ 'ವಾಣಿಜ್ಯ ಪ್ರದೇಶ'ದ ಸ್ಥಾನ ಅಲಂಕರಿಸಿದೆ.

ಅ.3ರಿಂದ ಜಾರಿಗೊಂಡಿರುವ ಸ್ವತ್ತುಗಳ ಪರಿಷ್ಕೃತ ಮಾರ್ಗಸೂಚಿ ದರದಂತೆ ಸದಾಶಿವನಗರದಲ್ಲಿ ವಸತಿ ಪ್ರದೇಶದ ಮೌಲ್ಯ ಅತ್ಯಧಿಕವಾಗಿದೆ.

ಸದಾಶಿವನಗರದ ಸ್ಯಾಂಕಿ ರಸ್ತೆಯ ಸ್ವತ್ತುಗಳ ದರ ಪ್ರತಿ ಚದರ ಮೀಟರ್‌ಗೆ ₹3.02 ಲಕ್ಷವಾಗಿದೆ. ಅಚ್ಚಯ್ಯ ಶೆಟ್ಟಿ ಬಡಾವಣೆಯಲ್ಲಿ ಪ್ರತಿ ಚದರ ಮೀಟರ್‌ಗೆ ₹2.96 ಲಕ್ಷವಾಗಿದ್ದು, ಈ ಪ್ರದೇಶದ ಪ್ಯಾಲೇಸ್ ಲೋವರ್ ಆರ್ಚರ್ಡ್ಸ್‌ನಲ್ಲಿ ಪ್ರತಿ ಚ.ಮೀಗೆ ₹1.43 ಲಕ್ಷ ದರ ನಿಗದಿಯಾಗಿದೆ. ಜಯನಗರ 4ನೇ ಬ್ಲಾಕ್‌ನ 11ನೇ ಮುಖ್ಯರಸ್ತೆಯಲ್ಲಿರುವ ಸ್ವತ್ತುಗಳಿಗೆ ಪ್ರತಿ ಚ.ಮೀಗೆ ₹2.76 ಲಕ್ಷ ನಿಗದಿಯಾಗಿದ್ದು, ಈ ಭಾಗದಲ್ಲಿ ಇದು ಅಧಿಕವಾಗಿದೆ.

ಜಯನಗರದ ಕಾಸ್ಮೊಪಾಲಿಟನ್ ಕ್ಲಬ್ ವೃತ್ತದಿಂದ 11ನೇ ಮುಖ್ಯರಸ್ತೆಯವರೆಗಿನ ವಾಣಿಜ್ಯ ನಿವೇಶನಗಳ ಮಾರ್ಗಸೂಚಿ ದರ ಪ್ರತಿ ಚ.ಮೀಗೆ ₹5.36 ಲಕ್ಷವಾಗಿದ್ದು, ಇದು ನಗರ ಜಿಲ್ಲೆಯಲ್ಲೇ ಅತಿಹೆಚ್ಚಾಗಿದೆ. ಜಯನಗರದ 27ನೇ ಅಡ್ಡರಸ್ತೆ ಹಾಗೂ 30ನೇ ಅಡ್ಡರಸ್ತೆಯಲ್ಲಿ ₹5.03 ಲಕ್ಷವಾಗಿದೆ. 9, 10, ನೇ ಮುಖ್ಯರಸ್ತೆ, 33, 36, 46ನೇ ಅಡ್ಡರಸ್ತೆ, 100 ಅಡಿ ರಸ್ತೆ, ಸೌತ್ ಎಂಡ್ ಸೇರಿದಂತೆ ಈ ಸುತ್ತಮುತ್ತಲಿನ ವಾಣಿಜ್ಯ ನಿವೇಶನಗಳ ದರ ₹4.65 ಲಕ್ಷದಿಂದ ₹3.65 ಲಕ್ಷದವರೆಗೆ ಇದೆ.

ನಗರದ ಪ್ರತಿಷ್ಠಿತ ವಾಣಿಜ್ಯ ಕೇಂದ್ರಗಳಾದ ಕನ್ನಿಂಗ್ ಹ್ಯಾಂ ರಸ್ತೆಯ ವಾಣಿಜ್ಯ ನಿವೇಶನಗಳಿಗೆ ಪ್ರತಿ ಚ.ಮೀಗೆ ₹3.62 ಲಕ್ಷ ನಿಗದಿಯಾಗಿದ್ದು, ಕಸ್ತೂರಬಾ ರಸ್ತೆಯಿಂದ ಟ್ರಿನಿಟಿ ವೃತ್ತದವರೆಗಿನ ಎಂ.ಜಿ. ರಸ್ತೆಯ ವಾಣಿಜ್ಯ ನಿವೇಶನಗಳಿಗೆ ₹3.15 ಲಕ್ಷವಾಗಿದೆ. ಈ ಎರಡೂ ಪ್ರದೇಶಗಳ ಮೌಲ್ಯವನ್ನು ಮೀರಿರುವ ಜಯನಗರ ಅತಿ ಹೆಚ್ಚಿನ ಮೌಲ್ಯದ 'ವಾಣಿಜ್ಯ ಪ್ರದೇಶ'ವಾಗಿದೆ.

ಮಹದೇವಪುರ, ಕೆ.ಆರ್. ಪುರ, ವರ್ತೂರು ಪ್ರದೇಶಗಳಲ್ಲಿ ವಸತಿ ಹಾಗೂ ವಾಣಿಜ್ಯ ಪ್ರದೇಶಗಳ ಮಾರ್ಗಸೂಚಿ ದರದಲ್ಲಿ ಸಾಕಷ್ಟು ಹೆಚ್ಚಳವಾಗಿದ್ದು, ಮೌಲ್ಯವೂ ವೃದ್ಧಿಯಾಗಿದೆ. ಇದರ ಜೊತೆಗೆ ಕೃಷಿ ಭೂಮಿಗಳಿಗೆ ಎಕರೆಗೆ ಕೋಟ್ಯಂತರ ರೂಪಾಯಿಗಳ ಮಾರ್ಗಸೂಚಿ ದರವೇ ನಿಗದಿಯಾಗಿದೆ. ಮಹದೇವಪುರದ ದೊಡ್ಡನೆಕ್ಕುಂದಿ ವರ್ತುಲ ರಸ್ತೆಗೆ ಹೊಂದಿಕೊಂಡಂತಿರುವ ಕೃಷಿ ಭೂಮಿಗೆ ಎಕರೆಗೆ ₹13 ಕೋಟಿ ನಿಗದಿಪಡಿಸಲಾಗಿದೆ.

ಅಪಾರ್ಟ್‌ಮೆಂಟ್ ಹಾಗೂ ವಿಲ್ಲಾಗಳಿಗೆ ಪ್ರತ್ಯೇಕ ವರ್ಗದಲ್ಲಿ ಮಾರ್ಗಸೂಚಿ ದರ ನಿಗದಿ ಮಾಡಲಾಗಿದೆ. ಗಾಂಧಿನಗರದಲ್ಲಿ ಚದರ ಮೀಟರ್‌ಗೆ ₹2.86 ಲಕ್ಷ, ಸದಾಶಿವನಗರದಲ್ಲಿ ₹2.06 ಲಕ್ಷ, ಜಯನಗರದಲ್ಲಿ ₹1.33 ಲಕ್ಷವಾಗಿದೆ. ಹೆಸರಘಟ್ಟ ಹಾಗೂ ವರ್ತೂರು ಪ್ರದೇಶದಲ್ಲಿ ವಿಲ್ಲಾಗಳ ವರ್ಗ ವಿಶೇಷವಾಗಿದ್ದು, ಪ್ರತಿ ಚ.ಮೀಗೆ ₹1 ಲಕ್ಷ ಮೀರಿದೆ.

ಶೇ 15ರಿಂದ 30ರಷ್ಟು ಹೆಚ್ಚಳ: ಐದು ವರ್ಷಗಳ ನಂತರ ಸರ್ಕಾರ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಪರಿಷ್ಕರಿಸಿದ್ದು, ಶೇ 15ರಿಂದ 30ರಷ್ಟು ಹೆಚ್ಚಳವಾಗಿದೆ. ವಸತಿ ನಿವೇಶನಗಳ ಮಾರ್ಗಸೂಚಿ ದರದಲ್ಲಿ ಶೇ 5ರಿಂದ 20ರಷ್ಟು, ಅಪಾರ್ಟ್‌ಮೆಂಟ್ ದರ ಶೇ 10ರಿಂದ 15, ವಿಲ್ಲಾಗಳ ದರ ಶೇ 10ರಿಂದ 20 ಹಾಗೂ ಕೃಷಿ ಭೂಮಿಯ ದರ ಶೇ 30ರಷ್ಟು ಹೆಚ್ಚಾಗಿದೆ ಎಂದು ರಿಯಲ್ ಎಸ್ಟೇಟ್ ತಜ್ಞರು ಹೇಳುತ್ತಾರೆ.

ವಸತಿ ಪ್ರದೇಶಗಳ ಮೌಲ್ಯ ಎಲ್ಲೆಲ್ಲಿ ಎಷ್ಟು ಅಧಿಕ?
(ಪ್ರತಿ ಚದರ ಮೀಟರ್‌ಗೆ) (₹ ಗಳಲ್ಲಿ)

ಸದಾಶಿವನಗರದ ಸ್ಯಾಂಕಿ ರಸ್ತೆ	3.02 ಲಕ್ಷ
ಒಟಿಸಿ ರಸ್ತೆ ಅವಿನ್ಯೂ– ನಗರ್ತರಪೇಟೆ ರಸ್ತೆ	2.84 ಲಕ್ಷ
ಜಯನಗರ 4ನೇ ಬ್ಲಾಕ್‌ನ 11ನೇ ಮುಖ್ಯರಸ್ತೆ	2.76 ಲಕ್ಷ
ಮಲ್ಲೇಶ್ವರ ಮಾರ್ಗೋಸಾ ರಸ್ತೆ, 15ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ ಜಂಕ್ಷನ್	2 ಲಕ್ಷ
ಹೊಸೂರು ರಸ್ತೆ	1.98 ಲಕ್ಷ
ಬನ್ನೇರುಘಟ್ಟ ಮುಖ್ಯರಸ್ತೆ	1.91 ಲಕ್ಷ
ರಾಜಾಜಿನಗರ ಡಾ. ರಾಜ್‌ಕುಮಾರ್ ರಸ್ತೆ	1.81 ಲಕ್ಷ
ಎಚ್‌ಎಸ್‌ಆರ್ ಲೇಔಟ್ ಬಿಡಿಎ ಕಾಂಪ್ಲೆಕ್ಸ್ ರಸ್ತೆ	1.75 ಲಕ್ಷ
ರಾಜಾಜಿನಗರ ಬಾಷ್ಯಂ ವೃತ್ತ	1.75 ಲಕ್ಷ
ಬಸವನಗುಡಿ ಕನಕಪುರ ರಸ್ತೆ	1.66 ಲಕ್ಷ
ಆರ್‌ಪಿಸಿ ಲೇಔಟ್ 1ನೇ ಮುಖ್ಯರಸ್ತೆ	1.6 ಲಕ್ಷ
ಜೆ.ಪಿ. ನಗರ 15ನೇ ಅಡ್ಡರಸ್ತೆ	1.44 ಲಕ್ಷ
ಆರ್.ಆರ್. ನಗರ ಜಯಣ್ಣ ವೃತ್ತ	1.2 ಲಕ್ಷ
ನಾಗರಬಾವಿ ಹೊರ ವರ್ತುಲ ರಸ್ತೆ	90 ಸಾವಿರ

ಕೃಷಿ ಭೂಮಿ ಪ್ರತಿ ಎಕರೆಗೆ ಎಷ್ಟು ಮಾರ್ಗಸೂಚಿ ದರ? (₹ ಗಳಲ್ಲಿ)

ದೊಡ್ಡನೆಕ್ಕುಂದಿ ವರ್ತುಲ ರಸ್ತೆ ಸುತ್ತಮುತ್ತ	13 ಕೋಟಿ
ಮಹದೇವಪುರ ಹೊರವರ್ತುಲ ರಸ್ತೆ	12 ಕೋಟಿ
ಬೆನ್ನಿಗಾನಹಳ್ಳಿ ರಾಷ್ಟ್ರೀಯ ಹೆದ್ದಾರಿ ಸುತ್ತಮುತ್ತ	11.80 ಲಕ್ಷ
ಐಟಿಪಿಸಿಎಲ್	11 ಕೋಟಿ
ಕುಂದಲಹಳ್ಳಿ ಜಂಕ್ಷನ್‌ನಿಂದ ಐಟಿಪಿಎಲ್	10.21 ಕೋಟಿ
ಕನಕಪುರ ರಸ್ತೆ– ಸಾರಕ್ಕಿಯಿಂದ ಕೋಣನಕುಂಟೆ	9.99 ಕೋಟಿ
ಸರ್ಜಾಪುರ ರಸ್ತೆ	9.88 ಕೋಟಿ
ಬಿ. ನಾರಾಯಣಪುರ ಮುಖ್ಯರಸ್ತೆ	9.51 ಕೋಟಿ
ಕೃಷ್ಣರಾಜಪುರ ರಾಷ್ಟ್ರೀಯ ಹೆದ್ದಾರಿ	9.4 ಕೋಟಿ
ಹಗದೂರು/ ಹೂಡಿ	9 ಕೋಟಿ

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಟುಂಬ ಪಿಂಚಣಿ ಯೋಜನೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರಸಾರ ಭಾರತಿ ನೌಕರರು ದೂರದರ್ಶನ ಕೇಂದ್ರದ ಮುಂಭಾಗದಲ್ಲಿ ಶಾಂತಿಯುತ ಪ್ರತಿಭಟನೆ ನಡೆಸಿದರು.

'2007ರ ಅಕ್ಟೋಬರ್ 5ರ ನಂತರ ದೂರದರ್ಶನ ಮತ್ತು ಆಕಾಶವಾಣಿ ನೌಕರರನ್ನು ಪ್ರಸಾರ ಭಾರತಿ ಮಂಡಳಿಗೆ ಸೇರಿಸಲಾಗಿದೆ. ಆದರೆ, ಸರ್ಕಾರಿ ನೌಕರರಿಗೆ ನೀಡುವ ಯಾವುದೇ ಸೌಲಭ್ಯಗಳನ್ನು ನೀಡುತ್ತಿಲ್ಲ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ' ಎಂದು ಪ್ರತಿಭಟನಾಕಾರರು ದೂರಿದರು.

'ಹೊಸ ಪಿಂಚಣಿ ಯೋಜನೆಗೆ ಸರ್ಕಾರ ಶೇ 14ರಷ್ಟು ವಂತಿಗೆ ನೀಡಬೇಕು. ಕೇಂದ್ರ ಸರ್ಕಾರ ನೌಕರರಿಗೆ ಆರೋಗ್ಯ ಸೌಲಭ್ಯ (ಸಿಜಿಎಚ್‌ಎಸ್) ನೀಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಪ್ರಸಾರ ಭಾರತಿಯಲ್ಲಿ ಹತ್ತಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕೂಡಲೇ ಬಡ್ತಿ ನೀಡಬೇಕು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಪ್ರತಿಭಟನೆ ನಂತರ ದೂರದರ್ಶನ ಕೇಂದ್ರದ ಮುಖ್ಯಸ್ಥರಿಗೆ ಹಾಗೂ ಪ್ರಸಾರ ಭಾರತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮನವಿ ಸಲ್ಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಕುಟುಂಬ ಪಿಂಚಣಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರಸಾರ ಭಾರತಿ ನೌಕರರು ದೂರದರ್ಶನ ಕೇಂದ್ರದ ಮುಂಭಾಗದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಹೊಸ ಮಾರ್ಗಗಳಿಗೆ ಬಿಎಂಟಿಸಿ ಬಸ್ ಸಂಚಾರ ಆರಂಭ

ಬೆಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಹೊಸಮಾರ್ಗಗಳಲ್ಲಿ ಬಿಎಂಟಿಸಿ ಬಸ್ ಸಂಚಾರ ಆರಂಭವಾಗಿದೆ.

8ನೇ ಮೈಲಿಯಿಂದ ಗಂಗೊಂಡನಹಳ್ಳಿ ಮೂಲಕ ಕಾಚೋಹಳ್ಳಿ ಗೇಟ್ ವರೆಗೆ 3 ಬಸ್‌ಗಳು ನಿತ್ಯ 27 ಟ್ರಿಪ್ ಸಂಚರಿಸಲಿವೆ.

ಜಾಲಹಳ್ಳಿ ಕ್ರಾಸ್‌ನಿಂದ ಚಿಕ್ಕಬಾಣಾವರ, ಅಬ್ಬಿಗೆರೆ ಕ್ರಾಸ್, ಗಂಗಮ್ಮ ಸರ್ಕಲ್ ಮೂಲಕ ಬಿಇಎಲ್ ಸರ್ಕಲ್‌ವರೆಗೆ 4 ಬಸ್‌ಗಳು ನಿತ್ಯ 31 ಟ್ರಿಪ್ ಸಂಚರಿಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಮ್ಮ ಯಾತ್ರಿ ಆರಂಭಿಸಿರುವ 'ಪರ್ಪಲ್ ರೈಡ್ಸ್' ಆಟೊ ಸೇವೆಯಲ್ಲಿ ಅಂಗವಿಕಲರೊಬ್ಬರನ್ನು ಚಾಲಕರು ಆಟೊಗೆ ಹತ್ತಿಸಿದರು. ಪ್ರಜಾವಾಣಿ ಚಿತ್ರ

ಅಂಗವಿಕಲರಿಗೆ ಪರ್ಪಲ್ ರೈಡ್ಸ್ ಪ್ರಾರಂಭ

ಬೆಂಗಳೂರು: 'ನಮ್ಮ ಯಾತ್ರಿ' ಆ್ಯಪ್ ಆಧಾರಿತ ಆಟೊ ಸೇವೆಯು ಎನೇಬಲ್ ಇಂಡಿಯಾ ಸಹಯೋಗದಲ್ಲಿ ಅಂಗವಿಕಲರಿಗಾಗಿ 'ಪರ್ಪಲ್ ರೈಡ್ಸ್' ಎಂಬ ಸೇವೆಗೆ ಗುರುವಾರ ಚಾಲನೆ ನೀಡಿದೆ.

'ಎನೇಬಲ್ ಇಂಡಿಯಾದ ಸಹಯೋಗದಲ್ಲಿ ನಮ್ಮ ಯಾತ್ರಿ ತನ್ನ ಕಾರ್ಯಚರಣೆಯನ್ನು ಮರುಪರಿಷ್ಕರಣೆ ಮಾಡಿಕೊಂಡಿದೆ. ಇದು ಅಂಧರು, ಶ್ರವಣದೋಷವುಳ್ಳವರು ಹಾಗೂ ಅಂಗವಿಕಲ ವಾಹನ ಸವಾರರಿಗೆ ಅನುಗುಣವಾಗಿ ಪರ್ಪಲ್ ರೈಡ್ಸ್ ಅನ್ನು ಪ್ರಾರಂಭಿಸಿದೆ. ಈಗಾಗಲೇ ಇದರಲ್ಲಿ 3,500 ಗ್ರಾಹಕರು ಮತ್ತು 1,300 ಚಾಲಕರು ಈ ಸೇವೆನ್ನು ಬಳಸುತ್ತಿದ್ದು, 6 ಸಾವಿರಕ್ಕೂ ಹೆಚ್ಚು ಟ್ರಿಪ್‌ಗಳನ್ನು ಪೂರ್ಣಗೊಳಿಸಿದ್ದಾರೆ' ಎಂದು ನಮ್ಮ ಯಾತ್ರಿ ಆ್ಯಪ್‌ನ ಎಂ.ಎಸ್. ಶಾನ್ ತಿಳಿಸಿದರು.

'ಪರ್ಪಲ್ ರೈಡ್ಸ್‌ನಲ್ಲಿ ಅಂಗವಿಕಲ ಗ್ರಾಹಕರ ಅಗತ್ಯಗಳನ್ನು ಅರ್ಥ ಮಾಡಿಕೊಂಡು ಚಾಲಕರು ಕೆಲಸ ಮಾಡುತ್ತಾರೆ. ಶ್ರವಣ ದೋಷವುಳ್ಳ ಬಳಕೆದಾರರಿಗೆ ಆಟೊ, ಬೈಕ್ ಚಾಲಕರೊಂದಿಗೆ ಫೋನ್ ಕರೆಗಳ ಬದಲಿಗೆ ಸಂದೇಶಗಳ ಮೂಲಕ ಸಂವಹನ ನಡೆಸಬಹುದು. ಅಂಧರು ಟಾಕ್‌ಬ್ಯಾಕ್ ಸಹಾಯದಿಂದ ಸಂವಹನ ನಡೆಸಬಹುದು' ಎಂದು ಮಾಹಿತಿ ನೀಡಿದರು.

ಎನೇಬಲ್ ಇಂಡಿಯಾದ ಸಂಸ್ಥಾಪಕಿ ಶಾಂತಿ ರಾಘವನ್ ಇದ್ದರು.

ಬೀದಿ ನಾಯಿಗೆ ಚಿಕಿತ್ಸೆ ಕೊಡಿಸಿದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ಬೀದಿ ನಾಯಿಗೆ ಇಲ್ಲಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ವಿದ್ಯಾರ್ಥಿಗಳು ಚಿಕಿತ್ಸೆ ಕೊಡಿಸಿದ್ದಾರೆ. ಇದರಿಂದ ನಾಯಿ ಚೇತರಿಸಿಕೊಂಡಿದೆ.

ಆರು ತಿಂಗಳ ಹಿಂದೆ ವಾಹನವೊಂದು ನಾಯಿಗೆ ಗುದ್ದಿದ ಪರಿಣಾಮ ಅದರ ಬೆನ್ನುಮೂಳೆ ಮತ್ತು ಬೆನ್ನುಹುರಿಗೆ ಹಾನಿಯಾಗಿತ್ತು. ನಡೆಯಲು ಸಾಧ್ಯವಾಗದ ಸ್ಥಿತಿಯಲ್ಲಿದ್ದ ನಾಯಿಗೆ ಸಂಸ್ಥೆಯ ವಿಜ್ಞಾನಿ ಅನುಪಮಾ ನೇತೃತ್ವದಲ್ಲಿ ವಿದ್ಯಾರ್ಥಿಗಳ ತಂಡ ಚಿಕಿತ್ಸೆ ನೀಡಲು ನಿರ್ಧರಿಸಿ, ಆರ್‌ಎಂವಿ ಮಲ್ಟಿ ಸ್ಪೆಷಾಲಿಟಿ ವೆಟರ್ನರಿ ಕ್ಲಿನಿಕ್‌ಗೆ ಕರೆದೊಯ್ದಿತ್ತು. ಅಲ್ಲಿನ ಡಾ. ಅನಿರುದ್ಧ ಅವರು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ನಾಯಿಗೆ ಶಸ್ತ್ರಚಿಕಿತ್ಸೆಯ ಬಳಿಕ ಎರಡು ತಿಂಗಳು ಕ್ಲಿನಿಕ್‌ನಲ್ಲಿಯೇ ಚಿಕಿತ್ಸೆ ಒದಗಿಸಲಾಗಿದೆ. ಲೇಸರ್ ಥೆರಪಿ, ಹೈಡ್ರೊ ಥೆರಪಿ ಮತ್ತು ಫಿಸಿಯೊ ಥೆರಪಿ ನೀಡಲಾಗಿತ್ತು. ಆರು ತಿಂಗಳ ಅವಧಿಯಲ್ಲಿ ನಾಯಿ ಚೇತರಿಸಿಕೊಂಡಿದ್ದು, ಮೊದಲಿನಂತೆ ಓಡಾಡಲು ಪ್ರಾರಂಭಿಸಿದೆ.



ವಿದ್ಯಾರ್ಥಿಗಳಿಂದ ರಕ್ಷಿಸಲ್ಪಟ್ಟ ನಾಯಿ

'ವಿದ್ಯಾರ್ಥಿಗಳ ಕಾರ್ಯ ಶ್ಲಾಘನೀಯ. ನಾಯಿಯ ಬೆನ್ನುಮೂಳೆಗೆ ಗಂಭೀರ ಹಾನಿಯಾಗಿದ್ದರಿಂದ ತುರ್ತಾಗಿ ಶಸ್ತ್ರಚಿಕಿತ್ಸೆ ನಡೆಸಬೇಕಾಗಿತ್ತು. ಇಲ್ಲವಾದಲ್ಲಿ ಅದು ಬದುಕುಳಿಯುವ ಸಾಧ್ಯತೆ ಕಡಿಮೆಯಿತ್ತು' ಎಂದು ಡಾ. ಅನಿರುದ್ಧ ತಿಳಿಸಿದ್ದಾರೆ.

ನಾಯಿಯ ಶಸ್ತ್ರಚಿಕಿತ್ಸೆ ಹಾಗೂ ಚಿಕಿತ್ಸೆಗೆ ಅಗತ್ಯ ಇದ್ದ ಹಣವನ್ನು ವಿದ್ಯಾರ್ಥಿಗಳು ದಾನಿಗಳಿಂದ ಸಂಗ್ರಹಿಸಿದ್ದಾರೆ. ಈ ಸಂಬಂಧ ಸಾಮಾಜಿಕ ಜಾಲತಾಣಗಳಲ್ಲಿಯೂ ಅಭಿಯಾನ ನಡೆಸಿ, ನೆರವು ನೀಡುವಂತೆ ಮನವಿ ಮಾಡಿಕೊಂಡಿದ್ದರು. ಅವರ ಕಾರ್ಯಕ್ಕೆ ಸಾಮಾಜಿಕ ಜಾಲತಾಣದಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.

'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0'ಛಾಯಾಚಿತ್ರ ಪ್ರದರ್ಶನ

'ಪ್ರಾಣಿಗಳಿಗೆ ತೊಂದರೆ ಕೊಡಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಣಿಗಳಿಗೆ ತೊಂದರೆಯಾಗುವ ರೀತಿಯ ಫೋಟೊಗ್ರಫಿಯನ್ನು ಯಾರೂ ಮಾಡಬಾರದು ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪಿಸಿಸಿಎಫ್) ಸುಭಾಷ್ ಮಾಳ್ಖೇಡ ಸಲಹೆ ನೀಡಿದರು.

ವನ್ಯಜೀವಿ ಸಪ್ತಾಹದ ಅಂಗವಾಗಿ ಗುರುವಾರ ನಡೆದ 'ಅರಣ್ಯ, ಪರಿಸರ ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವನ್ಯಜೀವಿಗಳ ಛಾಯಾಚಿತ್ರ ತೆಗೆಯುವುದು ತಪ್ಪಲ್ಲ. ಆದರೆ, ಅಲ್ಲಿ ಗದ್ದಲ ಇರಬಾರದು. ಪ್ರಾಣಿಗಳ ಏಕಾಂತಕ್ಕೆ ಅಡ್ಡಿ ಉಂಟು ಮಾಡಬಾರದು ಎಂದು ತಿಳಿಸಿದರು.

ನಿವೃತ್ತ ಎಪಿಸಿಸಿಎಫ್ ಎಂ.ಎನ್. ಜಯಕುಮಾರ್ ಅವರ 'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0' ಛಾಯಾಚಿತ್ರ ಪ್ರದರ್ಶನವನ್ನು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ವೀಕ್ಷಿಸಿದರು. – ಪ್ರಜಾವಾಣಿ ಚಿತ್ರ

ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, 'ಜನಸಂಖ್ಯೆ ಹೆಚ್ಚಿದಂತೆ ಕಾಡಿನ ಪ್ರಮಾಣ ಕಡಿಮೆಯಾಗುತ್ತಿದೆ. ಇದರಿಂದ ಮನುಷ್ಯ ಮತ್ತು ಪ್ರಾಣಿ ನಡುವಿನ ಸಂಘರ್ಷವೂ ಹೆಚ್ಚಾಗುತ್ತಿದೆ' ಎಂದು ವಿಶ್ಲೇಷಿಸಿದರು.

ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಎಪಿಸಿಸಿಎಫ್) ಸಿ. ಮನೋಜ್ ಕುಮಾರ್ ಮಾತನಾಡಿ, 'ಅರಣ್ಯ ಸಂರಕ್ಷಣೆಯಲ್ಲಿ ಮಾಧ್ಯಮಗಳ ಪಾತ್ರ ಪ್ರಮುಖವಾಗಿದೆ. ಅರಣ್ಯ ಇಲಾಖೆಯು ಮಾಧ್ಯಮಗಳೊಂದಿಗೆ ನಿಕಟವಾಗಿದ್ದುಕೊಂಡು ಕೆಲಸ ಮಾಡಬೇಕಿದೆ' ಎಂದು ಹೇಳಿದರು.

ನಿವೃತ್ತ ಎಪಿಸಿಸಿಎಫ್ ಎಂ.ಎನ್. ಜಯಕುಮಾರ್ ಅವರ 'ಎನ್‌ಕೌಂಟರ್ಸ್ ಇನ್ ದಿ ವೈಲ್ಡ್ 2.0' ಛಾಯಾಚಿತ್ರಗಳ ಪ್ರದರ್ಶನವನ್ನು ಅತಿಥಿಗಳು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಆರು ವರ್ಷಗಳಾದರೂ ಪೂರ್ಣಗೊಳ್ಳದ ಕಾಮಗಾರಿ • ಗಿಡಗಂಟಿಗಳಿಂದ ಆವರಿಸಿಕೊಂಡ ಕಟ್ಟಡ

ಹಾವುಗಳ ನೆಲೆಯಾದ ಗ್ರಾಫಿಕ್ ಸ್ಟುಡಿಯೊ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಲಾವಿದರ ಪ್ರತಿಭೆಗೆ ವೇದಿಕೆ ಕಲ್ಪಿಸಬೇಕಾಗಿದ್ದ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಗ್ರಾಫಿಕ್ ಸ್ಟುಡಿಯೊ ಪಾಳುಬಿದ್ದಿದ್ದು, ಹಾವುಗಳ ವಾಸಸ್ಥಾನವಾಗಿ ಮಾರ್ಪಟ್ಟಿದೆ.

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ಈ ಕಟ್ಟಡ, ಆರು ವರ್ಷಗಳು ಕಳೆದರೂ ಕಾರ್ಯಾರಂಭ ಮಾಡಿಲ್ಲ. ಅನುದಾನದ ಕೊರತೆಯಿಂದಾಗಿ ಸ್ಟುಡಿಯೊಕ್ಕೆ ಅಂತಿಮ ಸ್ಪರ್ಶ ಸಾಕಾರವಾಗಲಿಲ್ಲ. ಕಾಮಗಾರಿ ಸ್ಥಗಿತಗೊಂಡು ವರ್ಷವೇ ಕಳೆದಿದೆ. ಹೀಗಾಗಿ, ಕಟ್ಟಡಕ್ಕೆ ಬೀಗ ಹಾಕಲಾಗಿದೆ. ನಿರ್ವಹಣೆ ಇಲ್ಲದೆಯೇ ಸುತ್ತಮುತ್ತ ಗಿಡಗಂಟಿಗಳು ಬೆಳೆದಿದ್ದು, ಹಾವುಗಳು ನೆಲೆಸಿವೆ. ಇದರಿಂದಾಗಿ ಭಯದ ವಾತಾವರಣ ನಿರ್ಮಾಣವಾಗಿದೆ.

ಎಂ.ಎಸ್. ಮೂರ್ತಿ ಅವರು ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಈ ಯೋಜನೆಗೆ ಅನುಮೋದನೆ ದೊರೆತು, 2017ರ ಆಗಸ್ಟ್ ತಿಂಗಳಲ್ಲಿ ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವೆ ಉಮಾಶ್ರೀ ಶಂಕುಸ್ಥಾಪನೆ ನೆರವೇರಿಸಿದ್ದರು. ಐದು ವರ್ಷಗಳಲ್ಲಿ ನಿರ್ಮಾಣವಾದ ಕಟ್ಟಡಕ್ಕೆ ಅಂತಿಮ ಸ್ಪರ್ಶ ಒದಗಿಸಲು ಅನುದಾನದ ಕೊರತೆ ಎದುರಾಗಿತ್ತು. ₹ 1 ಕೋಟಿ ಹೆಚ್ಚುವರಿ ಅನುದಾನ ನೀಡುವಂತೆ ಅಕಾಡೆಮಿಯ ಹಿಂದಿನ ಅಧ್ಯಕ್ಷ ಡಿ. ಮಹೇಂದ್ರ ಅವರು ಇಲಾಖೆಗೆ ಪತ್ರಗಳ ಮೂಲಕ ಒತ್ತಾಯಿಸಿದ್ದರು. ಚುನಾವಣೆ ಹೊಸ್ತಿಲಲ್ಲಿ ಅನುದಾನಕ್ಕೆ ಸರ್ಕಾರ ಅನುಮೋದನೆ ನೀಡಿತ್ತು. ಆದರೆ, ಹಣ ಬಿಡುಗಡೆಯಾಗದಿದ್ದರಿಂದ ಕಾಮಗಾರಿ ನನೆಗುದಿಗೆ ಬಿದ್ದಿದೆ.

ಒಳಾಂಗಣ ವಿನ್ಯಾಸ ಬಾಕಿ: ಗ್ರಾಫಿಕ್ ಸ್ಟುಡಿಯೊದ ಕಟ್ಟಡ ನಿರ್ಮಾಣಕ್ಕೆ ಮೊದಲ ಹಂತದಲ್ಲಿ ಸರ್ಕಾರವು 2017ರಲ್ಲಿ ₹3.31 ಲಕ್ಷ ಅನುದಾನ ಬಿಡುಗಡೆ ಮಾಡಿತ್ತು. ಬಳಿಕ ಅನುದಾನ ಬಿಡುಗಡೆ ಆಗಿರಲಿಲ್ಲ. 2020ರಲ್ಲಿ ಸರ್ಕಾರ ₹ 3.33 ಕೋಟಿ ಬಿಡುಗಡೆ ಮಾಡಿತ್ತು. 2020ರ ಡಿಸೆಂಬರ್ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸಂಸ್ಕೃತಿ ಇಲಾಖೆ ಸೂಚಿಸಿತ್ತು. ಆದರೆ, ಕೋವಿಡ್‌ನಿಂದಾಗಿ ಕಾಮಗಾರಿಗೆ ಹಿನ್ನಡೆಯಾಗಿತ್ತು. ಕಳೆದ ವರ್ಷಾಂತ್ಯಕ್ಕೆ ಕಟ್ಟಡ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ಆದರೆ, ಒಳಾಂಗಣ ವಿನ್ಯಾಸ ಪೂರ್ಣಗೊಳ್ಳದಿದ್ದರಿಂದ ಇದು ಕಲಾವಿದರಿಗೆ ದೊರೆಯದಾಗಿದೆ.

25 ಕಲಾವಿದರು ಕೆಲಸ ಮಾಡುವಷ್ಟು ಅವಕಾಶ ಈ ಸ್ಟುಡಿಯೊ ಹೊಂದಿದೆ. ಲಿಥೋಗ್ರಾಫಿ ಸೇರಿ ಕಲೆಗೆ ಸಂಬಂಧಿಸಿದ ವಿವಿಧ ಯಂತ್ರಗಳ ಅಳವಡಿಕೆಯನ್ನು ಯೋಜನೆ ಒಳಗೊಂಡಿತ್ತು. ಪ್ರದರ್ಶನ ಗ್ಯಾಲರಿಯಲ್ಲಿ ಲಲಿತಕಲೆ ಹಾಗೂ ಶಿಲ್ಪಕಲೆಯ ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಬಗ್ಗೆ ಯೋಜನೆ ರೂಪಿಸಲಾಗಿತ್ತು. ಈ ಕೇಂದ್ರದಿಂದ ಗ್ರಾಫಿಕ್ ಕಲೆಗೆ ವಿಶೇಷ ಮನ್ನಣೆ ದೊರೆಯಲಿದೆ ಎಂದು ಕಲಾವಿದರು ಲೆಕ್ಕಾಚಾರ ಹಾಕಿದ್ದರು.

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ಗ್ರಾಫಿಕ್ ಸ್ಟುಡಿಯೊ ನಿರ್ವಹಣೆ ಇಲ್ಲದೆ ಪಾಳು ಬಿದ್ದಿರುವುದು ಪ್ರಜಾವಾಣಿ ಚಿತ್ರ/ ಪಿ. ರಂಜು

ಗರಿ ಸ್ಟುಡಿಯೊ ಮಾದರಿ

ಗ್ರಾಫಿಕ್ ಸ್ಟುಡಿಯೊವನ್ನು 9,846 ಚದರ ಅಡಿ ವಿಸ್ತೀರ್ಣದಲ್ಲಿ ನಿರ್ಮಿಸಲಾಗಿದೆ. ಇದು ಎರಡು ಮಹಡಿಯನ್ನು ಹೊಂದಿದೆ. ಇದರ ವಿನ್ಯಾಸವು ದೆಹಲಿಯ ಗರಿ ಸ್ಟುಡಿಯೊ ಮಾದರಿ ಹೊಂದಿದೆ. ನೆಲಮಹಡಿಯಲ್ಲಿ ನಾಲ್ಕು ಸ್ಟುಡಿಯೊಗಳನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ಸ್ಟುಡಿಯೊದಲ್ಲಿಯೂ ಪಡಸಾಲೆ, ಉಗ್ರಾಣ, ಶೌಚಾಲಯ ಇದೆ.

ಸ್ಟುಡಿಯೊ ತೆರೆದು ಕಲಾಕೃತಿಗಳ ರಚನೆ ಮತ್ತು ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು. ಬಾಕಿ ಉಳಿದ ಕಾಮಗಾರಿ ಪೂರ್ಣಗೊಳಿಸಬೇಕು.

ಡಿ. ಮಹೇಂದ್ರ, ಲಲಿತಕಲಾ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ

ಅನುದಾನದ ಕೊರತೆಯಿಂದ ಗ್ರಾಫಿಕ್ ಸ್ಟುಡಿಯೊ ಕಾಮಗಾರಿ ಸ್ಥಗಿತವಾಗಿತ್ತು. ಅಗತ್ಯ ಅನುದಾನ ಒದಗಿಸಿ, ಆದಷ್ಟು ಬೇಗ ಕಾರ್ಯಾರಂಭಿಸಲಾಗುವುದು.

ಕೆ. ಧರಣೀದೇವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಬಿತ್ತನೆ, ನಾಟಿ ಮಾಡದಂತೆ ಸೂಚನೆ: ಡಿಸಿಎಂ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ಕಣಿವೆ ಪ್ರದೇಶದಲ್ಲಿ ನಮಗೆ 106 ಟಿಎಂಸಿ ಅಡಿ ನೀರಿನ ಅಗತ್ಯವಿದ್ದು, ಸದ್ಯಕ್ಕೆ 56 ಟಿಎಂಸಿ ಅಡಿ ನೀರು ಇದೆ. ರಾಜ್ಯದಲ್ಲಿ ಬರ ಘೋಷಣೆಯಾಗಿದ್ದು, ಮುಂದೆ ಯಾವುದೇ ಬಿತ್ತನೆ, ನಾಟಿ ಮಾಡಬಾರದು ಎಂದು ರೈತರಿಗೆ ಸೂಚಿಸಿದ್ದೇವೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಎರಡು ದಿನ ಮಳೆ ಸುರಿದ ಕಾರಣ ಅ. 1ರಂದು 13 ಸಾವಿರ, 2ರಂದು 23 ಸಾವಿರ, 3ರಂದು 20 ಸಾವಿರ, 4ರಂದು 15 ಸಾವಿರ, 5ರಂದು 10 ಸಾವಿರ ಕ್ಯೂಸೆಕ್ ನೀರು ಒಳಹರಿವು ಮೂಲಕ ಕೆಆರ್‌ಎಸ್‌ನಲ್ಲಿ ಸಂಗ್ರಹವಾಗಿದೆ ' ಎಂದರು.

'ಮುಂದಿನ ತಿಂಗಳು ಮಳೆ ಬೀಳುವ ಸಾಧ್ಯತೆ ಇದೆ. ಇದು ಸಂಕಷ್ಟದ ವರ್ಷ' ಎಂದರು.

'ತಮಿಳುನಾಡಿಗೆ 3 ಸಾವಿರ ಕ್ಯೂಸೆಕ್ ನೀರು ಬಿಡಲು ನಮ್ಮಲ್ಲಿ ನೀರಿಲ್ಲ ಎಂದು ಮೇಲ್ಮನವಿ ಸಲ್ಲಿಸಿದ್ದೇವೆ. ಮೇಕೆದಾಟು ಯೋಜನೆ ಜಾರಿಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದು, ಅದಕ್ಕೆ ಸಂಬಂಧಿಸಿದಂತೆ ಕಾನೂನು ಪ್ರಕಾರ ಅನುಮತಿ ಪಡೆಯಲು ಸಿದ್ಧತೆ ಮಾಡುತ್ತಿದ್ದೇವೆ' ಎಂದು ತಿಳಿಸಿದರು.

ಇನ್‌ಸ್ಪೆಕ್ಟರ್ ಸೇರಿ ಮೂವರು ಪೊಲೀಸರ ಅಮಾನತು

ಪ್ರಜಾವಾಣಿ ವಾರ್ತೆ

ಕೊಪ್ಪಳ: ಗಂಗಾವತಿ ನಗರದಲ್ಲಿ ಪ್ರತಿಷ್ಠಾಪನೆಯಾಗಿದ್ದ ಗಣೇಶಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ಕರ್ತವ್ಯ ಲೋಪ ಎಸಗಿದ ಕಾರಣಕ್ಕಾಗಿ ಇನ್‌ಸ್ಪೆಕ್ಟರ್ ಸೇರಿ ಮೂವರ ಪೊಲೀಸರನ್ನು ಅಮಾನತು ಮಾಡಲಾಗಿದೆ.

ಗಂಗಾವತಿ ನಗರ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಅಡಿವೇಶ ಎಸ್. ಗುದಿಗೊಪ್ಪ, ಸಬ್ ಇನ್‌ಸ್ಪೆಕ್ಟರ್ ಕಾಮಣ್ಣ ಹಾಗೂ ಹೆಡ್ ಕಾನ್‌ಸ್ಟೆಬಲ್ ಮರಿಯಪ್ಪ ಅಮಾನತುಗೊಂಡವರು. ಎಸ್‌ಪಿ ಯಶೋಧಾ ವಂಟಗೋಡಿ ಈ ವಿಷಯ ಖಚಿತಪಡಿಸಿದ್ದಾರೆ.

ಇಲ್ಲಿನ ಎಂ.ಜಿ. ರಸ್ತೆಯಲ್ಲಿರುವ ಜಾಮಿಯಾ ಮಸೀದಿ ಮುಂಭಾಗ ಗಣೇಶ ವಿಸರ್ಜನೆ ಮೆರವಣಿಗೆ ವೇಳೆ ಮಂಗಳವಾರ ರಾತ್ರಿ ಕೆಲವರು ಕುಂಡದಲ್ಲಿ ಬೆಂಕಿಹಚ್ಚಿ, ಕುಂಬಳಕಾಯಿ ಒಡೆದು ಪೂಜೆ ಸಲ್ಲಿಸಿದ್ದರು. ಇದು ಮುಸ್ಲಿಂ ಸಮುದಾಯದವರ ಆಕ್ಷೇಪಕ್ಕೆ ಕಾರಣವಾಗಿ ವಾಗ್ವಾದ ನಡೆದಿತ್ತು. ಕರ್ತವ್ಯದ ವೇಳೆಯಲ್ಲಿಯೇ ಮೆರವಣಿಗೆ ಸಮಯದಲ್ಲಿ ಮರಿಯಪ್ಪ ಅವರನ್ನು ಹೊತ್ತು ಕುಣಿದಿದ್ದ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

ಸ್ವಾಭಿಮಾನಿ ಕಲ್ಯಾಣ ಪರ್ವ ಉತ್ಸವ 21ರಿಂದ

ಬೆಂಗಳೂರು: ಸ್ವಾಭಿಮಾನಿ ಕಲ್ಯಾಣ ಪರ್ವ ಉತ್ಸವ ಸಮಿತಿಯಿಂದ ಇದೇ 21 ಮತ್ತು 22ರಂದು ಸ್ವಾಭಿಮಾನಿ ಕಲ್ಯಾಣ ಪರ್ವವನ್ನು ಬೀದರ್‌ನ ಬಸವ ಕಲ್ಯಾಣದಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿಯ ಅಧ್ಯಕ್ಷ ಕುಂಬಳಗೋಡಿನ ಚನ್ನಬಸವೇಶ್ವರ ಜ್ಞಾನಪೀಠದ ಚನ್ನಬಸವಾನಂದ ಸ್ವಾಮಿಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಾತೆ ಮಹಾದೇವಿ ನೇತೃತ್ವದಲ್ಲಿ 2002ರಲ್ಲಿ ಬಸವ ಕಲ್ಯಾಣದಲ್ಲಿ ಉತ್ಸವ ಪ್ರಾರಂಭಿಸಲಾಯಿತು. ಅವರ ಸಂಕಲ್ಪ ಪೂರೈಸಲು ಸ್ವಾಭಿಮಾನಿ ಕಲ್ಯಾಣ ಪರ್ವ ನಡೆಯಲಿದ್ದು, ಇದೇ 21ರಂದು ಉದ್ಘಾಟನೆಯಾಗಲಿದೆ. ಉತ್ಸವದಲ್ಲಿ ಲಿಂಗಾಯ ಸ್ವತಂತ್ರ ಧರ್ಮ, ಮಹಿಳಾ ಗೋಷ್ಠಿ, ಭಾವೈಕ್ಯತಾ ಗೋಷ್ಠಿ, ಇಷ್ಟಲಿಂಗ ಪೂಜೆಯ ಮಹತ್ವದ ಕುರಿತು ಚರ್ಚೆಗಳು ನಡೆಯಲಿವೆ. ಉತ್ಸವದ ಸ್ವಾಗತ ಸಮಿತಿ ಅಧ್ಯಕ್ಷರನ್ನಾಗಿ ಬೆಳಗಾವಿಯ ಅಶೋಕ್ ಬೆಂಡಿಗೇರಿ, ಪ್ರಧಾನ ಕಾರ್ಯದರ್ಶಿಯಾಗಿ ಬೀದರ್‌ನ ಮಹೇಶ ಬಿರಾದರ, ದಾಸೋಹ ಸಮಿತಿಯ ಅಧ್ಯಕ್ಷರನ್ನಾಗಿ ಹೈದರಾಬಾದ್‌ನ ವೆನ್ನ ಈಶ್ವರಪ್ಪ ಅವರನ್ನು ನೇಮಕ ಮಾಡಲಾಗಿದೆ. ಸಚಿವ ಈಶ್ವರ್ ಬಿ. ಖಂಡ್ರೆ ಭಾಗವಹಿಸಲಿದ್ದಾರೆ' ಎಂದು ಹೇಳಿದರು.

ಸಚಿವರಿಗೆ ಸಿಎಂ ಔತಣಕೂಟ: ಕುತೂಹಲ

ಬೆಂಗಳೂರು: ಸಂಪುಟ ಸಹೋದ್ಯೋಗಿಗಳಿಗೆ ತಮ್ಮ ಸರ್ಕಾರಿ ನಿವಾಸ 'ಕಾವೇರಿ'ಯಲ್ಲಿ ಗುರುವಾರ ರಾತ್ರಿ ಔತಣಕೂಟ ಏರ್ಪಡಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚೆ ನಡೆಸಿದರು.

ಶಾಸಕರು ಮತ್ತು ಸಚಿವರ ನಡುವೆ ಸಮನ್ವಯದ ಕೊರತೆಯಿದೆ. ಸಚಿವರು ತಮಗೆ ಸ್ಪಂದಿಸದೇ ಇರುವ ಬಗ್ಗೆ ಕೆಲವು ಶಾಸಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಹೀಗಾಗಿ ಸಚಿವರಿಗೆ ಸಲಹೆ-ಸೂಚನೆಗಳನ್ನು ನೀಡಲು ಮುಖ್ಯಮಂತ್ರಿ ಈ ಔತಣಕೂಟ ಏರ್ಪಡಿಸಿದ್ದರು ಎನ್ನಲಾಗಿದೆ.

'ವಿರೋಧ ಪಕ್ಷದ ನಾಯಕರಾಗಿದ್ದ ಸಂದರ್ಭದಲ್ಲಿ ವಾಸ್ತವ್ಯ ಇದ್ದ ಮನೆಯಿಂದ 'ಕಾವೇರಿ' ನಿವಾಸಕ್ಕೆ ಸ್ಥಳಾಂತರಗೊಂಡ ಬಳಿಕ ಔತಣ ನೀಡುವಂತೆ ಸಚಿವರು ಬೇಡಿಕೆ ಇಟ್ಟಿದ್ದರು. ಈ ಕಾರಣಕ್ಕೆ ಮುಖ್ಯಮಂತ್ರಿಯವರು ಭೋಜನಕೂಟ ಏರ್ಪಡಿಸಿದ್ದರು' ಎಂದು ಮುಖ್ಯಮಂತ್ರಿಯ ಆಪ್ತ ಮೂಲಗಳು ಹೇಳಿವೆ.

ಎಲ್ಲ ಸಚಿವರನ್ನೂ ಮುಖ್ಯಮಂತ್ರಿ ಆಹ್ವಾನಿಸಿದ್ದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಶರಣ ಪ್ರಕಾಶ್ ಪಾಟೀಲ, ಆರ್.ಬಿ. ತಿಮ್ಮಾಪುರ, ಸಂತೋಷ್ ಲಾಡ್, ಭೈರತಿ ಸುರೇಶ್, ಲಕ್ಷ್ಮೀ ಹೆಬ್ಬಾಳಕರ, ಕೆ.ಎಚ್. ಮುನಿಯಪ್ಪ, ಜಮೀರ್ ಅಹಮ್ಮದ್, ಎಂ.ಸಿ. ಸುಧಾಕರ್, ಎನ್.ಎಸ್. ಬೋಸರಾಜ್, ಕೆ. ವೆಂಕಟೇಶ್, ಡಿ. ಸುಧಾಕರ್, ಶಿವರಾಜ್ ತಂಗಡಗಿ, ಎಚ್.ಕೆ. ಪಾಟೀಲ, ಎಸ್.ಎಸ್. ಮಲ್ಲಿಕಾರ್ಜುನ್ ಮುಂತಾದವರು ಭೋಜನಕೂಟದಲ್ಲಿ ಭಾಗವಹಿಸಿದರು. ವಿದೇಶ ಪ್ರವಾಸದಲ್ಲಿರುವ ಸಚಿವರಾದ ಎಂ.ಬಿ. ಪಾಟೀಲ, ಪ್ರಿಯಾಂಕ್ ಖರ್ಗೆ ಮತ್ತು ಜಿ. ಪರಮೇಶ್ವರ ಅವರು ಭಾಗವಹಿಸಲಿಲ್ಲ.

ಅನುದಾನ ಮತ್ತು ವರ್ಗಾವಣೆ ವಿಚಾರದಲ್ಲಿ ಶಾಸಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ. ಮೂರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿಸುವ ಕುರಿತಂತೆ ಸಚಿವ ಕೆ.ಎನ್. ರಾಜಣ್ಣ ಇತ್ತೀಚೆಗೆ ನೀಡಿರುವ ಹೇಳಿಕೆಯಿಂದ ಗೊಂದಲ ಉಂಟಾಗಿದೆ. ಮದ್ಯದಂಗಡಿ ಹೆಚ್ಚಿಸುವ ಪ್ರಸ್ತಾಪಕ್ಕೆ ಶಾಸಕ ಬಿ.ಆರ್. ಪಾಟೀಲ ಆಕ್ಷೇಪ ವ್ಯಕ್ತಪಡಿಸಿದ್ದಾರೆ. 'ಗ್ಯಾರಂಟಿ' ಯೋಜನೆಗಳಿಂದ ಸರ್ಕಾರದಲ್ಲಿ ಹಣವೇ ಇಲ್ಲದಂತಾಗಿದೆ ಎಂದು ಶಾಸಕ ಷಡಾಕ್ಷರಿ, ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳ ಸ್ಥಿತಿ ನಾಯಿ ಪಾಡಾಗಿದೆ ಎಂದು ಶಾಮನೂರು ಶಿವಶಂಕರಪ್ಪ ಇತ್ತೀಚೆಗೆ ಹೇಳಿಕೆ ನೀಡಿದ್ದರು. ಈ ಎಲ್ಲ ಬೆಳವಣಿಗೆಗಳ ಬೆನ್ನಲ್ಲೆ ಮುಖ್ಯಮಂತ್ರಿ ಔತಣಕೂಟ ಏರ್ಪಡಿಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಕೆಎಸ್‌ಒಯು ಅಕ್ರಮ: ಸಿಬಿಐ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಒಯು) 2009–10ನೇ ಸಾಲಿನಿಂದ 2015–16ರವರೆಗೆ ನಡೆದಿದೆ ಎನ್ನಲಾದ ಹಣ ದುರ್ಬಳಕೆ ಹಗರಣದ ಸಂಬಂಧ ಸಿಬಿಐಯಿಂದ ಎಫ್‌ಐಆರ್ ದಾಖಲಿಸಿದೆ.

ವಿ.ವಿಯ ಸಹಯೋಗ ಸಂಸ್ಥೆಯ ಕಾರ್ಯಕ್ರಮದಲ್ಲಿ ₹300 ಕೋಟಿಗೂ ಹೆಚ್ಚು ಹಣ ದುರುಪಯೋಗ ಆಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳ ವಿರುದ್ಧ ಸಿಬಿಐನ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್‌ಐಆರ್ ದಾಖಲಿಸಿದೆ. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೇಣಿಯ ಅಧಿಕಾರಿ ತನಿಖೆ ನಡೆಸಲಿದ್ದಾರೆ ಎಂದು ತನಿಖಾ ಸಂಸ್ಥೆಯು ತಿಳಿಸಿದೆ.

ವಿ.ವಿಯು ವಿದೇಶಗಳಲ್ಲೂ ಸಹಯೋಗ ಸಂಸ್ಥೆಗಳನ್ನು ಹೊಂದಿತ್ತು. ಈ ಸಂಸ್ಥೆಗಳಿಗೆ ದಾಖಲಾಗುವ ವಿದ್ಯಾರ್ಥಿಗಳ ದಾಖಲಾತಿ ಶುಲ್ಕ, ಪರೀಕ್ಷಾ ಶುಲ್ಕ ಹಾಗೂ ಇತರ ಶುಲ್ಕಗಳನ್ನು ವಿ.ವಿಗೆ ವರ್ಗಾಯಿಸಬೇಕಿತ್ತು. ಆದರೆ, 2013–14 ಹಾಗೂ 2014–15ರ ಆರ್ಥಿಕ ವರ್ಷದ ಲೆಕ್ಕಪರಿಶೋಧನೆಯಲ್ಲಿ ವಿವಿಧ ಸಹಯೋಗ ಸಂಸ್ಥೆಗಳಿಂದ ₹50 ಕೋಟಿಗೂ ಹೆಚ್ಚಿನ ಮೊತ್ತದ ಲೆಕ್ಕ ನಾಪತ್ತೆಯಾಗಿರುವುದು ಕಂಡು ಬಂದಿತ್ತು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಜತೆಗೆ, 2009–10ರಿಂದ 2012–13ರ ಆರ್ಥಿಕ ವರ್ಷಗಳಲ್ಲಿ ಕೂಡಾ ₹250 ಕೋಟಿ ಮೊತ್ತದ ಲೆಕ್ಕದ ವಿವರಗಳು ಇಲ್ಲ. ಈ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ಉಲ್ಲೇಖಿಸಲಾಗಿತ್ತು ಎಂದು ಎಫ್‌ಐಆರ್‌ನಲ್ಲಿ ತಿಳಿಸಲಾಗಿದೆ. ವಿ.ವಿಯ ಅಧ್ಯಯನ ಕೇಂದ್ರಗಳ ಸ್ಥಾಪನೆ, ಪರೀಕ್ಷೆ, ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಈ ಅವಧಿಯಲ್ಲಿ ₹300 ಕೋಟಿಯಷ್ಟು ಹಣ ದುರ್ಬಳಕೆ ಆಗಿರುವುದು ಕಂಡು ಬಂದಿತ್ತು. ಅಕ್ರಮಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿದ್ದ 'ಬಿ' ರಿಪೋರ್ಟ್ ತಿರಸ್ಕರಿಸಿದ್ದ ಮೈಸೂರಿನ ಸಿಜೆಎಂ ನ್ಯಾಯಾಲಯ ಹೊಸದಾಗಿ ತನಿಖೆ ನಡೆಸಲು ಆದೇಶಿಸಿತ್ತು.

ಈ ಕುರಿತು 2022ರ ಫೆಬ್ರುವರಿಯಲ್ಲಿ ಕುಲಸಚಿವರ ಪತ್ರ ಹಾಗೂ ವಿ.ವಿಯ ಆಡಳಿತ ಮಂಡಳಿಯ ಸಭೆಯ ನಿರ್ಣಯ ಆಧರಿಸಿ ರಾಜ್ಯಪಾಲರು ಪ್ರಕರಣದ ತನಿಖೆಗೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ಅದರಂತೆ ಸರ್ಕಾರವು ಈ ವರ್ಷ ಮಾರ್ಚ್ 13ರಂದು ಸಿಬಿಐ ತನಿಖೆಗೆ ಒಪ್ಪಿಗೆ ಕೊಟ್ಟಿತ್ತು. ಸಂಬಂಧಿಸಿದ ಅಧಿಕಾರಿಗಳು, ಲೆಕ್ಕಪರಿಶೋಧಕರು, ಬ್ಯಾಂಕುಗಳ ಅಧಿಕಾರಿಗಳು ಸಿಬಿಐಗೆ ಅಗತ್ಯ ಮಾಹಿತಿ ಒದಗಿಸಬೇಕೆಂದು ಸೂಚಿಸಿತ್ತು. 2009ರಿಂದ 2016ರ ಅವಧಿಯ ವರೆಗಿನ ಹಣ ದುರುಪಯೋಗ ಪ್ರಕರಣದ ತನಿಖೆ ನಡೆಸುವಂತೆ ಹಾಗೂ ಆರೋಪಿಗಳನ್ನು ಪತ್ತೆ ಹಚ್ಚುವಂತೆ ಸಿಬಿಐಗೆ ಕೋರಿತ್ತು. ಬಳಿಕ ಸಿಬಿಐ ಅಧಿಕಾರಿಗಳು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದರು.

ಈ ಅವಧಿಯಲ್ಲಿ ಪ್ರೊ. ಕೆ.ಎಸ್.ರಂಗಪ್ಪ ಮತ್ತು ಪ್ರೊ. ಎಂ.ಜಿ.ಕೃಷ್ಣನ್ ಕುಲಪತಿಗಳಾಗಿ ಕಾರ್ಯನಿರ್ವಹಿಸಿದ್ದರು.

ಗೋದಾಮು ನಿರ್ಮಾಣ ಅಕ್ರಮ: ಕ್ರಮಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಗ್ರಾಣ ನಿಗಮದ ಗೋದಾಮುಗಳ ನಿರ್ಮಾಣದಲ್ಲಿ ಅಕ್ರಮಗಳು ನಡೆದಿರುವುದರಿಂದ ಐಎಎಸ್ ಅಧಿಕಾರಿಗಳೂ ಸೇರಿ ಈ ಪ್ರಕರಣದಲ್ಲಿ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ವಿಳಂಬಕ್ಕೆ ಕಾರಣರಾದ ಸಹಕಾರ ಇಲಾಖೆಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸಚಿವ ಸಂಪುಟವು ತೀರ್ಮಾನ ಕೈಗೊಂಡಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯವನ್ನು ತಿಳಿಸಿದರು.

ಅಧಿಕಾರಿಗಳಾದ ಎಂ.ಬಿ. ರಾಜೇಶ್‌ಗೌಡ, ಜಯವಿಭವಸ್ವಾಮಿ, ನವೀನ್‌ಕುಮಾರ್, ಹನುಮಂತರಾಯಪ್ಪ, ಎಂ.ಎಸ್.ಅಲಿಪುರ ಅವರ ಮೇಲೆ ಕ್ರಿಮಿನಲ್ ಮತ್ತು ಸಿವಿಲ್ ಮೊಕದ್ದಮೆ ಜರುಗಿಸಲಾಗುವುದು ಎಂದು ಅವರು ತಿಳಿಸಿದರು.

ಆರ್ಥಿಕ ಅಶಿಸ್ತು, ನಿರ್ಮಾಣದಲ್ಲಿ ವಿಳಂಬ, ಮುಂಗಡವನ್ನು ಹೆಚ್ಚಳವಾಗಿ ಕೊಟ್ಟಿರುವುದು ಕಂಡು ಬಂದಿದೆ. ಇದರಿಂದ ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಸಚಿವ ಎಚ್.ಕೆ ಪಾಟೀಲ ಹೇಳಿದರು.

ಉಗ್ರಾಣ ನಿಗಮದ ಆರ್‌ಐಡಿಎಫ್‌–22 ಯೋಜನೆಯಡಿ ಅಪೂರ್ಣಗೊಂಡ ಉಗ್ರಾಣಗಳ ನಿರ್ಮಾಣ ಮತ್ತು ಅವಶ್ಯವಿರುವ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಲು ₹376.54 ಕೋಟಿ ಬಿಡುಗಡೆ ಮಾಡಲು ಅನುಮೋದನೆ ನೀಡಲಾಯಿತು ಎಂದರು.

ಮಿದುಳು ಆರೋಗ್ಯ ಯೋಜನೆಗೆ ಅಸ್ತು

ರಾಜ್ಯದಲ್ಲಿ ಹಬ್ ಮತ್ತು ಸ್ಪೋಕ್ಸ್ ಮಾದರಿಯಲ್ಲಿ ಬ್ರೈನ್ ಹೆಲ್ತ್ ಇನಿಶಿಯೇಟಿವ್ (ಮಿದುಳು ಆರೋಗ್ಯ ಉಪಕ್ರಮ) ಯೋಜನೆಯನ್ನು ನಿಮ್ಹಾನ್ಸ್ ಸಹಯೋಗದೊಂದಿಗೆ ₹25 ಕೋಟಿ ವೆಚ್ಚದಲ್ಲಿ ಜಾರಿಗೆ ತರಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಆರಂಭಿಸಲಾಗುವುದು. ನಂತರ ಈ ಯೋಜನೆಯನ್ನು ಇಡೀ ರಾಜ್ಯಕ್ಕೆ ಹಬ್ ಮತ್ತು ಸ್ಪೋಕ್ಸ್ ಮಾದರಿಯಲ್ಲಿ ಬ್ರೈನ್ ಹೆಲ್ತ್ ಕ್ಲಿನಿಕ್‌ಗಳನ್ನು ಆರಂಭಿಸಲಾಗುವುದು.

ಹೆಚ್ಚುತ್ತಿರುವ ನರಸಂಬಂಧಿ ಸಮಸ್ಯೆಗಳನ್ನು ತಡೆಗಟ್ಟುವ ಸಂಬಂಧ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಹಂತಗಳಲ್ಲಿ ಸಮಾನ ಆರೈಕೆಗಾಗಿ ಮಿದುಳು ಆರೋಗ್ಯ ರಕ್ಷಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪಾಟೀಲ ಹೇಳಿದರು.

ಈ ಸಾಲಿನಲ್ಲಿ ಯೋಜನೆ ಅನುಷ್ಠಾನಗೊಳಿಸಲು ₹10 ಕೋಟಿ ನಿಗದಿ ಮಾಡಲಾಗಿದೆ. ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಬ್ರೈನ್ ಹೆಲ್ತ್ ಕ್ಲಿನಿಕ್‌ಗಳನ್ನು ಸ್ಥಾಪಿಸಲು ₹25 ಕೋಟಿ ಬೇಕಾಗುತ್ತದೆ ಎಂದರು.

ರಕ್ತಹೀನತೆ ಮುಕ್ತ ಕರ್ನಾಟಕ

ರಕ್ತ ಹೀನತೆ ಮುಕ್ತ ಪೌಷ್ಟಿಕ ಕರ್ನಾಟಕ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ₹185.74 ಕೋಟಿ ವೆಚ್ಚದಲ್ಲಿ ಜಾರಿಗೊಳಿಸಲು ಸಂಪುಟ ಸಭೆ ಅನುಮೋದನೆ ನೀಡಿದೆ.

ಅನುಪಾತ ಪಾಲುದಾರಿಕೆ: ಪ್ರಕರಣವಾರು ತೀರ್ಮಾನ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಅನುಪಾತದ ಪಾಲುದಾರಿಕೆ ಅಡಿ ಭೂಮಿ ಪಡೆದು ವಸತಿ ಯೋಜನೆಗಳ ಅನುಷ್ಠಾನಕ್ಕೆ ಗೃಹ ಮಂಡಳಿಯ ಸದಸ್ಯರ ಸಲಹೆ ಪಡೆದು ಎಲ್ಲಾ ವಸತಿ ಯೋಜನೆಗಳಿಗೆ ಪ್ರಕರಣವಾರು ಅನುಪಾತ ನಿರ್ಣಯಿಸಲು ಸಂಪುಟ ಸಭೆ ಅನುಮತಿ ನೀಡಿದೆ.

ಬೆಂಗಳೂರು, ಮೈಸೂರು, ಹುಬ್ಬಳ್ಳಿ- ಧಾರವಾಡ ಮತ್ತು ಇತರ ಹೆಚ್ಚಿನ ಮೌಲ್ಯವಿರುವ ನಗರ ಪ್ರದೇಶಗಳಲ್ಲಿರುವ ಜಮೀನುಗಳನ್ನು ಗ್ರಾಮೀಣ ಪ್ರದೇಶದಲ್ಲಿಯ ಜಮೀನಿಗಿಂತ ಭಿನ್ನವಾಗಿ ಪರಿಗಣಿಸಲಾಗುವುದು. ಈವರೆಗೆ ಇದಕ್ಕೆ ಸಂಬಂಧಿಸಿದಂತೆ ಯಾವುದೇ ನೀತಿ ಇಲ್ಲ. ಪ್ರತಿಯೊಂದು ಪ್ರಕರಣವನ್ನು ಆಧರಿಸಿ ಅನುಪಾತದ ಪಾಲುದಾರಿಕೆ ಅನುಸರಿಸುವುದು ಸೂಕ್ತ ಎಂಬ ತೀರ್ಮಾನಕ್ಕೆ ಬರಲಾಯಿತು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಸದಸ್ಯರು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಿ, ತಮ್ಮ ಸಮಸ್ಯೆ, ಹಕ್ಕೊತ್ತಾಯಗಳ ಬಗ್ಗೆ ಮನವಿ ಸಲ್ಲಿಸಿದರು. ಯೂನಿಯನ್ ಅಧ್ಯಕ್ಷೆ ಜಬೀನಾಖಾನಂ, ಪ್ರಧಾನ ಕಾರ್ಯದರ್ಶಿ ಎಂ. ಕರಿಬಸಪ್ಪ, ಸದಸ್ಯರಾದ ನಾಜೀಮಾ, ನಗೀನಾ, ಶಾಹಿನಾ, ಶಿರಿನ್, ನೂರ್ ಫಾತಿಮಾ ಇದ್ದರು.

'ಸುರಂಗ ರಸ್ತೆ: ಶೀಘ್ರ ಟೆಂಡರ್'

ಒಂದನೇ ಪುಟದಿಂದ

'ಸುರಂಗ ರಸ್ತೆಗೆ ಹೆಚ್ಚಿನ ಹಣಕಾಸು ಅಗತ್ಯ. ವಿವಿಧ ಹಂತಗಳಲ್ಲಿ ಕಾಮಗಾರಿ ಮಾಡಬೇಕಾಗುತ್ತದೆ. ಬಳ್ಳಾರಿ ರಸ್ತೆ, ಹಳೇ ಮದ್ರಾಸ್ ರಸ್ತೆ, ಎಸ್ಟೀಮ್ ಮಾಲ್ ಜಕ್ಷನ್‌ನಿಂದ ಮೇಖ್ರಿ ವೃತ್ತ, ಮಿಲ್ಲರ್ ರಸ್ತೆ, ಚಾಲುಕ್ಯ ವೃತ್ತ, ಟ್ರಿನಿಟಿ ವೃತ್ತ, ಸರ್ಜಾಪುರ ರಸ್ತೆ, ಹೊಸೂರು, ಕನಕಪುರ ರಸ್ತೆಯಿಂದ ಕೃಷ್ಣರಾವ್ ಪಾರ್ಕ್, ಮೈಸೂರು ರಸ್ತೆ, ಸಿರ್ಸಿ ವೃತ್ತ, ಮಾಗಡಿ ರಸ್ತೆ, ತುಮಕೂರು ರಸ್ತೆ, ಯಶವಂತಪುರ ಜಂಕ್ಷನ್, ಗೊರಗುಂಟೆ ಪಾಳ್ಯ, ಕೆ.ಆರ್. ಪುರ, ಸಿಲ್ಕ್ ಬೋರ್ಡ್ ಪ್ರದೇಶಗಳನ್ನು ಗುರುತಿಸಲಾಗಿದೆ' ಎಂದರು.

'ಮುಂಬೈ, ಉತ್ತರ ಭಾರತದಲ್ಲಿ ಸುರಂಗ ರಸ್ತೆ ನಿರ್ಮಿಸಲಾಗುತ್ತಿದೆ. ಬೆಂಗಳೂರಿನಲ್ಲಿ ಕನಿಷ್ಠ 4 ಪಥದ ಸುರಂಗ ರಸ್ತೆ ಅಗತ್ಯ. ಈ ರಸ್ತೆಗಳು ತೆರೆದುಕೊಳ್ಳಲು ಹೆಚ್ಚಿನ ಜಾಗ ಬೇಕು. ಗಾಲ್ಫ್ ಕೋರ್ಸ್, ಟರ್ಫ್ ಕ್ಲಬ್, ಅರಮನೆ ಮೈದಾನ ಜಾಗಗಳ ಗುತ್ತಿಗೆಯನ್ನು ಹಿಂದಿನ ಸರ್ಕಾರ ವಿಸ್ತರಿಸಿದೆ. ಈ ಬಗ್ಗೆ ಮಾತುಕತೆ ನಡೆಸಬೇಕಿದೆ' ಎಂದೂ ವಿವರಿಸಿದರು.

ರಸ್ತೆ ಗುಂಡಿ ಮುಚ್ಚಲು ಕ್ರಮ: 'ಸಂಚಾರ ಪೊಲೀಸರು ಸೂಚಿಸುವ ಕಡೆಗಳಲ್ಲಿ ಪಾಲಿಕೆಯಿಂದ ತ್ವರಿತವಾಗಿ ರಸ್ತೆಗುಂಡಿ ಸರಿಪಡಿಸುವ ಕೆಲಸ ನಡೆಯಲಿದೆ. ಈ ಬಗ್ಗೆ ಸಾರ್ವಜನಿಕರು ಬಿಬಿಎಂಪಿ ಆಯುಕ್ತರಿಗೆ ಮಾಹಿತಿ ನೀಡಿದರೆ, ರಸ್ತೆಗುಂಡಿಗಳನ್ನು ತಕ್ಷಣವೇ ಸರಿಪಡಿಸಲಾಗುವುದು. ವಿಪತ್ತು ನಿರ್ವಹಣೆಗಾಗಿ ವಿಶ್ವ ಬ್ಯಾಂಕಿನಿಂದ ₹ 3 ಸಾವಿರ ಕೋಟಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ರಾಷ್ಟ್ರೀಯ ವಿಪತ್ತು ನಿರ್ವಹಣೆ ನಿಧಿಯಿಂದ ₹ 250 ಕೋಟಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ'ಎಂದರು.

'ಕೇಂದ್ರ ನೆರವಿಗೆ ಮನವಿ'

'ಸುರಂಗ ರಸ್ತೆ ನಿರ್ಮಾಣಕ್ಕೆ ಕೇಂದ್ರದಿಂದ ನೆರವು ಕೇಳುತ್ತೇವೆ. ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ನಾನು ಮತ್ತು ಮುಖ್ಯಮಂತ್ರಿ ಭೇಟಿ ಮಾಡಿದ್ದೇವೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳ ಮೂಲಕ ಬೆಂಗಳೂರಿಗೆ ವಾಹನಗಳು ಬಂದು ಸಂಚಾರ ದಟ್ಟಣೆ ಉಂಟಾಗುತ್ತಿದೆ. ತುಮಕೂರು ರಸ್ತೆ, ಕೆ.ಆರ್ ಪುರ ರಸ್ತೆ, ಮೈಸೂರು ರಸ್ತೆ ಮೂಲಕ ಸಂಚಾರ ದಟ್ಟಣೆ ಆಗುತ್ತಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೋಹನ್ ದಾಸ್ ಪೈ ಅವರ ಸಮಿತಿ ಕೊಟ್ಟಿರುವ ವರದಿಯಲ್ಲಿ ತೆರಿಗೆ ಶಿಫಾರಸಿನ ಬಗ್ಗೆ ಕೇಳಿದಾಗ, 'ಸದ್ಯ ಇರುವ ತೆರಿಗೆ ಪದ್ಧತಿಯಿಂದ ತೃಪ್ತಿ ಇಲ್ಲ. ಈಗ ಕೇವಲ ₹ 3 ಸಾವಿರ ಕೋಟಿ ತೆರಿಗೆ ಸಂಗ್ರಹವಾಗುತ್ತಿದೆ. ತೆರಿಗೆ ಸಂಗ್ರಹಿಸಲು ಹೊಸ ಚಿಂತನೆ ಮಾಡುತ್ತಿದ್ದೇವೆ. ಸರ್ಕಾರಿ ಕಚೇರಿ ಸೇರಿ, ಕೇಂದ್ರ ಸರ್ಕಾರದ ಕಚೇರಿಗಳೂ ತೆರಿಗೆ ಪಾವತಿಸಬೇಕೆಂದು ಪತ್ರ ಬರೆದಿದ್ದೇನೆ. ಎಚ್‌ಎಎಲ್‌ನವರು ₹ 93 ಕೋಟಿ ತೆರಿಗೆ ಪಾವತಿಸಿದ್ದಾರೆ. ಬೆಸ್ಕಾಂ, ಕೆಪಿಟಿಸಿಎಲ್‌ನಂಥ ರಾಜ್ಯ ಸರ್ಕಾರಿ ಕಚೇರಿಗಳೂ ಆಸ್ತಿ ತೆರಿಗೆ ಪಾವತಿಗೆ ಸೂಚಿಸಿದ್ದೇನೆ' ಎಂದರು.

'ಬ್ರ್ಯಾಂಡ್ ಬೆಂಗಳೂರು' ವಿಚಾರವಾಗಿ 70 ಸಾವಿರ ಸಲಹೆಗಳು ಬಂದಿವೆ. ಇದೇ 9ರಂದು ದೊಡ್ಡಮಟ್ಟದ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು, ಅಲ್ಲಿ ನಡೆಯುವ ಚರ್ಚೆ ಬಳಿಕ ಮುಂದಿನ ಹೆಜ್ಜೆ ಇಡುತ್ತೇವೆ

ಡಿ.ಕೆ. ಶಿವಕುಮಾರ್, ಡಿಸಿಎಂ

ಮೈಸೂರು ರೇಸ್

ಟಚ್ ಆಫ್ ಗ್ರೇ ಗೆಲ್ಲುವ ನಿರೀಕ್ಷೆ

ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರು 2000 ಗಿನ್ನೀಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಟಚ್ ಆಫ್ ಗ್ರೇ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಟ್ವಿಲೈಟ್ ಫೇಮ್ 2, ವಿಕ್ಟೋರಿಯಾನೊ 1, ಬ್ಲೂಮಿಂಗ್ ಲಿಲ್ಲಿ 8
2ನೇ ರೇಸ್: ಆರ್ಮರಿ 1, ಕೇಸರಿ ಕ್ವೀನ್ 6, ಅವಿಸೇನ 5
3ನೇ ರೇಸ್: ಪ್ರೈಮ್ ಅಬ್ಬೇಸ್ 5, ಯಾಸ್ಮಿನ್ ಫ್ರಮ್ ಯಾರ್ಕ್ 10, ಗೋಲ್ಡನ್ ಟೈಮ್ 1
4ನೇ ರೇಸ್: ಸೆರಾಯ್ 4, ಮಿಸ್ಟಿಕಲ್ ಮರ್ಕಬಾ 1, ಫಿಯರ್‌ಲೆಸ್ ಜಾಯ್ 5
5ನೇ ರೇಸ್: ಟಚ್ ಆಫ್ ಗ್ರೇ 6, ಆಸ್ಪೀಸಿಯಸ್ ಕ್ವೀನ್ 8, ರಿವರ್ ಆಫ್ ಗೋಲ್ಡ್ 4
6ನೇ ರೇಸ್: ಕಿಂಗ್ ಆಫ್ ಕೇಸರಿ 5, ಒನ್ ಡೈಮಂಡ್ 6, ಜನ್ನೈರೊ 11
7ನೇ ರೇಸ್: ನ್ಯಾಚುರಲ್ ಒನ್ 2, ಕಂಟ್ರಿ ಮ್ಯಾಜಿಕ್ 8, ಕೆಟಲಿನಾ 7

ಉತ್ತಮ ಬೆಟ್: ಕಿಂಗ್ ಆಫ್ ಕೇಸರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ನಗರದಲ್ಲಿ ಇಂದು

ಸಂಸ್ಥಾಪಕರ ದಿನಾಚರಣೆ, 'ಡಾ.ಎಸ್.ಆರ್.ಸಿ. ಸ್ಮಾರಕ ಪ್ರಶಸ್ತಿ ಪ್ರದಾನ, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ಕೆ.ಜೆ. ಜಾರ್ಜ್, ನಿರಂಜನ್ ವಾನಳ್ಳಿ, ಡಾ.ಎಸ್. ಚಂದ್ರಶೇಖರ ಶೆಟ್ಟಿ, ಅಧ್ಯಕ್ಷತೆ: ವಿ.ವಿ. ಕೃಷ್ಣರೆಡ್ಡಿ, ಪ್ರಶಸ್ತಿ ಪುರಸ್ಕೃತರು: ಬಿ.ಎಸ್. ಪ್ರೇಮಲತಾ, ಆಯೋಜನೆ: ಡಾ. ಎಸ್. ಆರ್. ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಸ್ಥಳ: ಇಂಡಿಯಾ ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರೈಸ್ಟ್, ಥಾಮಸ್ ಟೌನ್, ಬೆಳಿಗ್ಗೆ 10

ಕದಳಿ ಮಹಿಳಾ ಸಮಾವೇಶ, ಕದಳಿ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಲಕ್ಷ್ಮಿ ಹೆಬ್ಬಾಳ್ಕರ್, ಪ್ರಶಸ್ತಿ ಪ್ರದಾನ: ರಾಮಲಿಂಗಾರೆಡ್ಡಿ, 'ಅಕ್ಕ ಕೇಳವ್ವ' ಸ್ಮರಣ ಗ್ರಂಥ ಬಿಡುಗಡೆ: ಗೊ.ರು. ಚನ್ನಬಸಪ್ಪ, ಅತಿಥಿಗಳು: ಕೆ. ಧರಣಿದೇವಿ ಮಾಲಗತ್ತಿ, ಪ್ರಶಸ್ತಿ ಪುರಸ್ಕೃತರು: ವೈಜಯಂತಿ ಕಾಶಿ, ಸಂಗೀತಾ ಕುಲಕರ್ಣಿ, ಅಧ್ಯಕ್ಷತೆ: ಅಪ್ಪಾರಾವ ಅಕ್ಕೋಣೆ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಶಿವರಾತ್ರಿ ದೇಶಿಕೇಂದ್ರ ಹಾಗೂ ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ, ಬೆಳಿಗ್ಗೆ 10ರಿಂದ

ಎಸಿಇ ಟೆಕ್ ಪ್ರದರ್ಶನದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಡಿ.ಕೆ. ಶಿವಕುಮಾರ್, ಡಿ.ಕೆ. ಸುರೇಶ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ, ಬೆಳಿಗ್ಗೆ 10

'ಕಾವೇರಿ' ಅಂದು, ಇಂದು, ಮುಂದು ಚರ್ಚಾಗೋಷ್ಠಿ: ಕೆ. ಜೈರಾಜ್, ಚಂದ್ರಶೇಖರ್, ಹರೀಶ್ ಎನ್., ಆಯೋಜನೆ: ಬಿ. ಪ್ಯಾಕ್, ಸ್ಥಳ: ಕೆ.ಆರ್.ಜಿ. ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

'ಬೆಂಗಳೂರು ಇತಿಹಾಸ ಮತ್ತು ಪರಂಪರೆ' ಛಾಯಾ ಚಿತ್ರಗಳ ಪ್ರದರ್ಶನ: ಉದ್ಘಾಟನೆ: ಜಯಕರ ಎಸ್.ಎಂ., ಅತಿಥಿಗಳು: ಶೇಖ್ ಲತೀಫ್, ಸಿ. ಶ್ರೀನಿವಾಸ್, ಶಶಿಧರ್ ಎಂ., ಉಪನ್ಯಾಸ: ಎಸ್.ಕೆ. ಅರುಣಿ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ವಿಶ್ವ ಬಾಹ್ಯಾಕಾಶ ಸಪ್ತಾಹ: 'ರಸಪ್ರಶ್ನೆ ಕಾರ್ಯಕ್ರಮ' ಆಯೋಜನೆ ಮತ್ತು ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಮಧ್ಯಾಹ್ನ 12.10ರಿಂದ

'ಭಾರತ ಮತ್ತು ಅಮೆರಿಕ ಸಂವಿಧಾನಗಳಲ್ಲಿನ ನ್ಯಾಯಾಂಗ ಸ್ವಾತಂತ್ರ್ಯದ' ಬಗ್ಗೆ ಒಂದು ಇಣುಕು ನೋಟ: ಅತಿಥಿಗಳು: ಎಸ್. ರಾಜೇಂದ್ರಬಾಬು, ಕೃಷ್ಣ ಎಸ್. ದೀಕ್ಷಿತ್, ಮೈಕೆಲ್ ವಿಲ್ಸನ್, ಸಬ್ರಿನಾ ಮೆಕೆನಾ, ಟಾಡ್ ಡಬ್ಲ್ಯುಎಡ್ಡಿನ್ಸ್, ಆ್ಯನ್ ಐಕೆನ್, ಜೆನ್ನಿ ರಿವೆರಾ, ಸಾರಾ ಎಲ್.ಎಲಿಸ್, ಜೋಸೆಫಿನ್ ಎಲ್. ಸ್ಟಾಟನ್, ಕ್ಯಾಮಿಲೆ ನೆಲ್ಸನ್, ಡಗ್ಲಾಸ್ ಎಲ್.ಟೂಕಿ, ಆ್ಯಂಡ್ರೆ ಬಿರೊಟ್ಟೆ, ಶಶಿಕಿರಣ್ ಶೆಟ್ಟಿ, ಪ್ರಭುಲಿಂಗ್ ಕೆ. ನಾವದಗಿ, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲರ ಸಂಘ, ಇಂಡಿಯಾ–ಯುಎಸ್ ಲಾ ಆ್ಯಂಡ್ ಜಸ್ಟೀಸ್ ಫೋರಂ, ಸ್ಥಳ: ಹೈಕೋರ್ಟ್ ಯುನಿಟ್ ಹಾಲ್ ನಂ. 2, ಮಧ್ಯಾಹ್ನ 1.45

ಕೆ.ಈ. ರಾಧಾಕೃಷ್ಣ ಅನುವಾದಿಸಿದ ಶಶಿ ತರೂರ್ ಅವರ 'ನಾನು ಯಾಕೆ ಹಿಂದೂ?' ಪುಸ್ತಕ ಬಿಡುಗಡೆ: ಲಿಲಿ ತರೂರ್, ಎನ್. ಸಂತೋಷ್ ಹೆಗ್ಡೆ, ಅತಿಥಿಗಳು: ಎಚ್.ಕೆ. ಪಾಟೀಲ, ದಿನೇಶ್ ಗುಂಡೂರಾವ್, ಶಶಿ ತರೂರ್, ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಉಪಸ್ಥಿತಿ: ಹಂ.ಪ. ನಾಗರಾಜಯ್ಯ, ಕಮಲಾ ಹಂಪನಾ, ಸ್ಥಳ: ರೋಟರಿ ಸಭಾಂಗಣ, ಲ್ಯಾವೆಲ್ಲೆ ರಸ್ತೆ, ಸಂಜೆ 4ರಿಂದ



ಚಂದ್ರಶೇಖರ ಕಂಬಾರ

ತಿಂಗಳ ಕಾರ್ಯಕ್ರಮ 'ಗಾಂಧೀಜಿ ಸಮಕಾಲೀನ ಪ್ರಸ್ತುತತೆ' ಕುರಿತು ಉಪನ್ಯಾಸ: ಅಶ್ವತ್ಥ ನಾರಾಯಣ್, ಅಧ್ಯಕ್ಷತೆ: ಕಿಗ್ಗ ರಾಜಶೇಖರ್ ಎಸ್.ಜಿ., ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಸಚಿವಾಲಯ ಕ್ಲಬ್‌ನ, ಕಬ್ಬನ್ ಉದ್ಯಾನ, ಸಂಜೆ 5

'ಶಿವದೂತ ಪಂಜುರ್ಲಿ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸದಾಶಿವ ಅಮೀನ್, ಗಣೇಶ್ ಆಚಾರ್ಯ, ಲೋಹಿತ್ ಕೊಮೆ, ಕುಮಾರ್ ಅಮೀನ್, ಮುಮ್ಮೇಳ: ಉಪ್ಪುಂದ ನಾಗೇಂದ್ರರಾವ್, ಹೆನ್ನಾಬೈಲ್ ವಿಶ್ವನಾಥ್, ದಿನಕರ ಕುಂದರ್, ನಂದೀಶ್ ಜನ್ನಾಡಿ, ಹಾಲಾಡಿ ಸತೀಶ್, ಹರೀಶ್ ಜಪ್ತಿ, ನಾಗರಾಜ್ ದೇವಲ್ಕುಂದ, ಕೇಶವ ಆಚಾರ್ಯ, ರಾಕೇಶ್ ಶೆಟ್ಟಿ, ನಾಗರಾಜ್ ಕುಂದರ್, ರಾಘವೇಂದ್ರ ಜೋಗಿ, 'ಸನಾತನ ಭೂಮಿ ಭರತ' ಕುರಿತು ಉಪನ್ಯಾಸ: ಋಷಿ ಕುಮಾರ ಸ್ವಾಮೀಜಿ, ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಸಂಜೆ 5.30ರಿಂದ

'ಲೋಕದ ಒಳಹೊರಗೆ' ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ, ಸಂಗೀತ: ಅನೂಷ್ ಶೆಟ್ಟಿ, ಮುನ್ನ ಮೈಸೂರು, ಆಯೋಜನೆ: ರಂಗಸಂಪದ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

'ವಿದ್ಯುನ್ಮತಿ ಕಲ್ಯಾಣ' ರಾಜ ಯಯಾತಿ' ಶ್ವೇತ ಕುಮಾರ' ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷ ಮಾನಸ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 9.30

ಪ್ರವಚನ ವಾಹಿನಿ: 'ಸಮನ್ವಯ ಸೂತ್ರದಾರ ಶಂಕರ' ಕುರಿತು ಉಪನ್ಯಾಸ: ಮಂಜುನಾಥ ಭಟ್ ವಿನಾಯಕ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30



‘ಪರಿಪೂರ್ಣ ನಟನಾಗುವ ತುಡಿತ’

ನಟ ವಿನೋದ್ ಪ್ರಭಾಕರ್ ಅಭಿನಯದ ‘ಫೈಟರ್’ ಚಿತ್ರ ಇಂದು(ಅ.6) ತೆರೆ ಕಾಣುತ್ತಿದೆ. ತಮ್ಮ ವೃತ್ತಿಜೀವನದ ಮೊದಲ ಸಿನಿಮಾ ‘ದಿಲ್’ನಿಂದ ಇಲ್ಲಿತನಕದ ಸಿನಿಪಯಣದ ಕುರಿತು ಅವರು ಮಾತನಾಡಿದ್ದಾರೆ...

ವಿನೋದ್ ಪ್ರಭಾಕರ್

ವಿನಾಯಕ ಕೆ.ಎಸ್.

• ‘ಫೈಟರ್’ನಲ್ಲಿ ನಿಮ್ಮ ಪಾತ್ರವೇನು?

‘ಮೋಹಕ್’ ಎಂಬ ಪಾತ್ರ ಮಾಡಿರುವೆ. ನಾಯಕಿ ಹೆಸರು ‘ವಿಸ್ಮಯ’. ಜೋಡಿ ಹೆಸರು ಚೆನ್ನಾಗಿ ಕೇಳುತ್ತದೆ ಎಂಬ ಕಾರಣಕ್ಕೆ ಪಾತ್ರಕ್ಕೆ ಈ ಹೆಸರಿಡಲಾಗಿದೆ. ನನ್ನ ತಾಯಿ ಜಿಲ್ಲಾಧಿಕಾರಿಯಾಗಿರುತ್ತಾರೆ. ಅವರಿಗೆ ತಿಳಿಯದಂತೆ ನಾನು ಅವರ ಕೆಲಸಗಳಿಗೆ ಸಹಾಯ ಮಾಡುತ್ತಿರುತ್ತೇನೆ. ಆದರೆ, ಅವರು ನನ್ನನ್ನು ಕೆಲಸ ಇಲ್ಲದವ, ಸೋಮಾರಿ ಎಂದು ಭಾವಿಸಿರುತ್ತಾರೆ. ವಾಸ್ತವವಾಗಿ ನಾನು ರೈತನ ಮಗನಾಗಿರುತ್ತೇನೆ. ಸಿನಿಮಾದ ಕೊನೆಯ 20 ನಿಮಿಷದಲ್ಲಿ ಭೂಮಿ ಕಳೆದುಕೊಂಡ ರೈತರ ಕಥೆ ಬರುತ್ತದೆ.

• ನಿಮ್ಮ ಹಿಂದಿನ ಸಿನಿಮಾಗಳಂತೆ ಇದೂ ಆ್ಯಕ್ಷನ್ ಸಿನಿಮಾವೇ?

2018ರಲ್ಲಿ ಪ್ರಾರಂಭಗೊಂಡ ಸಿನಿಮಾವಿದು. ಕೋವಿಡ್‌ನಿಂದಾಗಿ ಈಗ ತೆರೆ ಕಾಣುತ್ತಿದೆ. ನನ್ನ ಸಿನಿಮಾಗಳಲ್ಲಿ ಆ್ಯಕ್ಷನ್ ಇರಲೇಬೇಕು. ಅದಕ್ಕೆ ಒಂದು ವರ್ಗದ ಅಭಿಮಾನಿಗಳಿದ್ದಾರೆ. ಅದರಿಂದ ಹಿಂದಿ ಡಬ್ಬಿಂಗ್ ಹಕ್ಕು ಮಾರಾಟ ಸೇರಿ ಒಂದಷ್ಟು ವಹಿವಾಟುಗಳು ನಡೆಯುತ್ತವೆ. ಹೀಗಾಗಿ ಕಥೆಯೊಂದಿಗೆ ಆ್ಯಕ್ಷನ್ ಕೂಡ ಪ್ರಮುಖವಾಗಿದೆ. ಕಾಲಕ್ಕೆ ತಕ್ಕಂತೆ ಕಥೆ, ವಿಷಯಾಧಾರಿತ ಸಿನಿಮಾ ಮಾಡಬೇಕು. ಆದರೆ ಒಂದೇ ಸಲಕ್ಕೆ ಆ್ಯಕ್ಷನ್ ಇಮೇಜ್‌ನಿಂದ ಹೊರಬರುವುದು ಕಷ್ಟ.

• ಹಿಂದಿ ಡಬ್ಬಿಂಗ್ ಹಕ್ಕುಗಳ ಮಾರುಕಟ್ಟೆ ಈಗ ಹೇಗಿದೆ?

ಮೊದಲು ಟೀಸರ್, ಟ್ರೇಲರ್ ನೋಡಿ ಆ್ಯಕ್ಷನ್ ಸಿನಿಮಾದ ಡಬ್ಬಿಂಗ್ ಹಕ್ಕು ಮಾರಾಟವಾಗುತ್ತಿತ್ತು. ಈಗ ಅಲ್ಲಿಯೂ ಕಂಟೆಂಟ್ ಕೇಳುತ್ತಿದ್ದಾರೆ. ಪೂರ್ತಿ ಸಿನಿಮಾ ನೋಡಿದ ನಂತರವೇ ವಹಿವಾಟು ನಡೆಯುತ್ತಿದೆ. ಈ ಹಿಂದೆ ಯಶಸ್ಸಾಗಿದ್ದ ಒಂದು ವರ್ಗದ ನಾಯಕರಿಗೆ ಅವರದ್ದೇ ಆದ ಮಾರುಕಟ್ಟೆ ಇದೆ. ಆದರೆ ಅದನ್ನೇ ನಂಬಿಕೊಂಡು ಸಿನಿಮಾ ಮಾಡಬೇಡಿ, ಜನ ಇಷ್ಟಪಡುವ ಸಿನಿಮಾಗಳನ್ನೇ ಮಾಡಬೇಕು ಎಂದು ನಾನೇ ಇತ್ತೀಚೆಗೆ ಒಂದು ಕಾರ್ಯಕ್ರಮದಲ್ಲಿ ಹೇಳಿರುವೆ.

• ‘ದಿಲ್’ನಿಂದ ಇಲ್ಲಿತನಕ ಸಿನಿಮಾ ಪಯಣ ಹೇಗಿತ್ತು?

ನಾನು ನಟನಾಗಬೇಕು ಎಂದುಕೊಂಡಿರಲಿಲ್ಲ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿ. ತಾಯಿ ಜೊತೆಗೆ ಬೆಳೆದವನು. ಹೀಗಾಗಿ ಅಪ್ಪನ ಸಿನಿಮಾದ ನಂಟು ನನಗೆ ಅಷ್ಟಿರಲಿಲ್ಲ. ಆದರೆ ಮೊದಲಿನಿಂದಲೂ ಆ್ಯಕ್ಷನ್ ಸಿನಿಮಾಪ್ರಿಯ. ಸಿನಿಮಾ ನೋಡುತ್ತಿದ್ದವನು ಫೈಟಿಂಗ್ ಮುಗಿದ ತಕ್ಷಣ ಎದ್ದು ಹೊರಟುಬಿಡುತ್ತಿದ್ದೆ. ಫೈಟರ್ ಆಗಬೇಕು ಎಂದು ಬಹಳ ಆಸೆಯಿತ್ತು. ನಮ್ಮದೇ ನಿರ್ಮಾಣದ ಸಿನಿಮಾದಲ್ಲಿ ತಂದೆ ನನ್ನನ್ನು ಯೋಧನಾಗಿ ಪರಿಚಯಿಸಿದರು. ಆದರೆ ಆ ಸಿನಿಮಾ ಪೂರ್ತಿಯಾಗಲೇ ಇಲ್ಲ. ಅದಾದ ಮೇಲೆ ಮೂರು ಸಿನಿಮಾಗಳಲ್ಲಿ ನಟಿಸಿದೆ. ಯಾವುದೂ ತೆರೆಗೆ ಬರಲಿಲ್ಲ. ‘ದಿಲ್’ನಲ್ಲಿ ಮೊದಲ ಸಲ ತೆರೆಯ ಮೇಲೆ ಕಾಣಿಸಿಕೊಂಡೆ. ಸತತವಾಗಿ ಮೂರು ಸಿನಿಮಾಗಳು ಸೋತವು. ‘ನವಗ್ರಹ’ ಚಿತ್ರೋದ್ಯಮಕ್ಕೆ ಮತ್ತೆ ನನ್ನನ್ನು ಪರಿಚಯಿಸಿದ ಸಿನಿಮಾ. ಅದಾದ ಬಳಿಕ ಒಳ್ಳೆ ದಿನಗಳು ಪ್ರಾರಂಭವಾದವು. ‘ಹೋರಿ’ ಯಶಸ್ವಿಯಾಯಿತು. ‘ರಗಡ್’, ‘ಟೈಸನ್’, ದರ್ಶನ್ ಜೊತೆ ‘ರಾಬರ್ಟ್’...ಹೀಗೆ ನಿರ್ಮಾಪಕನಾಗುವ ಮಟ್ಟಕ್ಕೆ ಕರೆತಂದಿವೆ.

• ನಿಮ್ಮ ಮುಂದಿನ ಯೋಜನೆಗಳ ಕುರಿತು ಹೇಳಬಹುದೇ?

‘ಲಂಕಾಸುರ’ ಬಿಡುಗಡೆಗೆ ಸಿದ್ಧವಿದೆ. ನಮ್ಮದೇ ಸಂಸ್ಥೆ ನಿರ್ಮಾಣದ ಸಿನಿಮಾ ಇದು. ‘ಮಾದೇವ’ ಸಿನಿಮಾ ಚಿತ್ರೀಕರಣ ಕೂಡ ಮುಗಿದಿದೆ. ಇದು ಕಂಟೆಂಟ್ ಆಧಾರಿತ ಸಿನಿಮಾ. ಇದರಲ್ಲಿ ನೇಣು ಹಾಕುವ ವ್ಯಕ್ತಿಯ ಪಾತ್ರ ಮಾಡಿರುವೆ. ತುಂಬ ವಿಭಿನ್ನವಾದ ಸಿನಿಮಾ. ಮತ್ತೊಂದು ಸಿನಿಮಾ ಶೀಘ್ರದಲ್ಲಿಯೇ ಘೋಷಿಸುತ್ತೇವೆ. ಅದರಲ್ಲಿ ಬೇರೆಯದೇ ರೀತಿಯ ಪಾತ್ರ ಮಾಡಿರುವೆ.

• ಇಲ್ಲಿತನಕ ನೀವಂದುಕೊಂಡು ಮಾಡಲಾಗದ ಪಾತ್ರ ಯಾವುದು?

ನನಗೆ ಯಾವ ಸ್ಟಾರ್‌ಗಿರಿ, ಯಾವ ಪಟ್ಟವೂ ಬೇಡ. ಹೀಗಾಗಿ ‘ಟೈಸನ್’ ಚಿತ್ರದ ಬಳಿಕ ಮರಿ ಟೈಗರ್ ಇತ್ಯಾದಿ ಪಟ್ಟಗಳನ್ನು ಸಿನಿಮಾದ ಪೋಸ್ಟರ್‌ಗಳಿಂದ ತೆಗೆಸಿರುವೆ. ನಾನೊಬ್ಬ ಪರಿಪೂರ್ಣ ನಟನಾಗಿ ಗುರುತಿಸಿಕೊಳ್ಳಬೇಕು. ಸಿನಿಮಾದಿಂದ ಸಿನಿಮಾಕ್ಕೆ ವಿಭಿನ್ನ ಪಾತ್ರಗಳನ್ನೇ ಮಾಡಬೇಕು. ❖

‘ಗಜರಾಮ’ನಿಗೆ ರಾಗಿಣಿ ಬಲ

ಕನ್ನಡ ಚಿತ್ರರಂಗದ ಖ್ಯಾತ ಹಾಸ್ಯ ನಟ ಡಿಂಗ್ರಿ ನಾಗರಾಜ್ ಪುತ್ರ ರಾಜವರ್ಧನ್ ನಟನೆಯ ‘ಗಜರಾಮ’ ಚಿತ್ರದಲ್ಲಿ ನಟಿ ರಾಗಿಣಿ ಹೆಜ್ಜೆ ಹಾಕಿದ್ದಾರೆ. ಹಾಡಿನ ಚಿತ್ರೀಕರಣ ಇತ್ತೀಚೆಗಷ್ಟೇ ನಡೆಯಿತು.

ಝಗಮಗಿಸುವ ಸೆಟ್‌ನಲ್ಲಿ, ಧನು ಮಾಸ್ಟರ್ ಕೊರಿಯೋಗ್ರಫಿಯಲ್ಲಿ, ಮನೋಮೂರ್ತಿ ಸಂಯೋಜಿಸಿದ ಗೀತೆಗೆ ತುಪ್ಪದ ಬೆಡಗಿ ರಾಗಿಣಿ ಚಿತ್ರತಂಡದ ಜೊತೆ ಹೆಜ್ಜೆ ಹಾಕಿದರು. ‘ಹೊಸ ಹೊಸ ಪ್ರಯತ್ನಗಳು ನಮ್ಮ ಚಿತ್ರೋದ್ಯಮದಲ್ಲಿ ಆಗಬೇಕು. ಕನ್ನಡ ಸಿನಿಮಾಗಳು ಒಳ್ಳೆ ರೀತಿಯಲ್ಲಿ ಬೆಳೆಯುತ್ತಿವೆ. ಅದನ್ನು ನೋಡಿ ಹೆಮ್ಮೆ ಎನ್ನಿಸುತ್ತದೆ’ ಎಂದರು ರಾಗಿಣಿ.

ಸುನಿಲ್ ಕುಮಾರ್ ನಿರ್ದೇಶಿಸಿರುವ ಚಿತ್ರವನ್ನು ಬೆಂಗಳೂರು, ಮೈಸೂರು, ಮಂಡ್ಯ ಸುತ್ತಮುತ್ತ ಚಿತ್ರೀಕರಣ ಮಾಡಲಾಗಿದೆ. ನರಸಿಂಹಮೂರ್ತಿ ಬಂಡವಾಳ ಹೂಡಿದ್ದಾರೆ. ‘ಶಿಷ್ಯ’ ದೀಪಕ್ ಪೊಲೀಸ್ ಪಾತ್ರದಲ್ಲಿ, ತೆಲುಗಿನ ಖ್ಯಾತ ಖಳನಟ ಕಬೀರ್ ಸಿಂಗ್ ಖಳನಾಯಕನಾಗಿ, ತಪಸ್ವಿನಿ ರಾಜವರ್ಧನ್‌ಗೆ ಜೋಡಿಯಾಗಿ ನಟಿಸಿದ್ದಾರೆ. ❖

‘ಟೆಡ್ಡಿಬೇರ್’ ಟ್ರೇಲರ್ ಬಿಡುಗಡೆ

ಶೈಲಜಾ,ಲೋಕೇಶ್,ದಿಶಾ, ಭಾರ್ಗವ್

ಹೊಸಬರಾದ ಭಾರ್ಗವ್ ನಾಯಕನಾಗಿ, ನಿರ್ದೇಶಕ ಬಿ.ಲೋಕೇಶ್ ಆ್ಯಕ್ಷನ್ ಕಟ್ ಹೇಳಿರುವ ‘ಟೆಡ್ಡಿ ಬೇರ್’, ‘ವಿದುರ’, ‘ಸುಡೊಕು’ ಮೂರೂ ಚಿತ್ರಗಳ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡವು.

‘ಟೆಡ್ಡಿಬೇರ್’ ನವ ದಂಪತಿ ಮದುವೆಯಾಗಿ ಹೊಸ ಮನೆಗೆ ಹೋದಾಗ ನಡೆಯುವ ಹಾಸ್ಯಮಯ ಘಟನೆಗಳನ್ನು ಒಳಗೊಂಡಿರುವ ಕಥೆ. ತಾರಾಗಣದಲ್ಲಿ ಶೈಲಜಾ, ದೀನಾ, ಮುತ್ತು, ಸ್ಪರ್ಶ ರೇಖಾ ಮುಂತಾದವರಿದ್ದಾರೆ. ಭರತ್ ಕುಮಾರ್-ನವೀನ್ ರೆಗಟ್ಟಿ ಜಂಟಿಯಾಗಿ ಆದ್ಯಲಕ್ಷ್ಮೀ ಪ್ರೊಡಕ್ಷನ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ’ ಎಂದರು ನಿರ್ದೇಶಕರು.

‘ಹೊಸಬರೇ ಇರುವ ‘ವಿದುರ’ ಚಿತ್ರವು ಆಧುನಿಕ ಕುಟುಂಬದ ಕಥೆ ಹೊಂದಿರುವ ಥ್ರಿಲ್ಲರ್ ಸಿನಿಮಾ. ಚಿತ್ರೀಕರಣ ಮುಗಿಸಿ ಮಾತಿನ ಮನೆಯಲ್ಲಿದೆ’ ಎಂದು ನಿರ್ಮಾಪಕ ಭರತ್ ಕುಮಾರ್ ತಿಳಿಸಿದರು. ‘ಸುಡೊಕು’ ಸೈಕಲಾಜಿಕಲ್ ಥ್ರಿಲ್ಲರ್ ಅಂಶಗಳನ್ನು ಒಳಗೊಂಡಿದೆ. ತಾರಗಣದಲ್ಲಿ ಸ್ವಾತಿ, ಯಶಸ್ವಿನಿ, ಬೇಬಿ ಆಯುಷಿ ಮೊದಲಾದವರಿದ್ದಾರೆ. ಚಿತ್ರೀಕರಣ ಮುಗಿದಿದ್ದು ಶೀಘ್ರದಲ್ಲಿ ತೆರೆಗೆ ಬರಲಿದೆ’ ಎಂದು ನಿರ್ದೇಶಕ ಬಿ.ಲೋಕೇಶ್ ಹೇಳಿದರು. ❖

ಬೆಂಗಳೂರು
ತ್ರಿವೇಣಿ DTS 4 ಆಟ
ಪ್ರಸನ್ನ (ಮಾಗಡಿ ರೋಡ್)
ನವರಂಗ್ (ರಾಜಾಜಿನಗರ)
ಉಲ್ಲಾಸ್ (ಯಶವಂತಪುರ)
ವೆಂಕಟೇಶ್ವರ (ಅವಲಹಳ್ಳಿ)
ಸಿದ್ಧೇಶ್ವರ (ಜೆ.ಪಿ. ನಗರ)
ಈಶ್ವರಿ (ಬನಶಂಕರಿ)
ವೀರಭದ್ರೇಶ್ವರ (ಕಮಲಾನಗರ)
ಬಾಲಾಜಿ (ತಾವರೆಕೆರೆ)
ಭಾರತಿ (ಪೀಣ್ಯ)
ಮೋಹನ್ (ಸುಂಕದಕಟ್ಟೆ)
ವೆಂಕಟೇಶ್ವರ (ಗೊಲ್ಲರಹಟ್ಟಿ)
ವಿಜಯಲಕ್ಷ್ಮಿ (ಗರುಡಾಚಾರ್ ಪಾಳ್ಯ)
VR (ಮಲ್ಲತ್ತಹಳ್ಳಿ)
ಗಣೇಶ (ಯಲಹಂಕ)
ವಿನಾಯಕ (ಹರಿನಗರ)
ಬಾಲಾಜಿ (ಚಿಕ್ಕಲಸಂದ್ರ)
ಆಕಾಶ್ (ಲಗ್ಗೆರೆ)
ವೈಷ್ಣವಿ (ಉತ್ತರಹಳ್ಳಿ)
ಮಾದೇಶ್ವರ (ಕದಿರೇನಹಳ್ಳಿ)
ಗೌರಿಶಂಕರ (ಅತ್ತಿಬೆಲೆ)
ಬಿಡದಿ ದೀಪಕ್

PVR Orion Mall, PVR Forum Mall, PVR Vaishnavi, PVR Regalia, PVR Market City, PVR Spirit, PVR Vega City, PVR VR, PVR Arena, PVR Up Town, PVR Aura, INOX Swagath, INOX Garuda, INOX RMZ, INOX Forum, INOX Lido, INOX Brookfield, INOX Brookfield, INOX Neighbourhood Mall, INOX SBR Mall, INOX Inox S Mall Tumkur, Cinépolis ETA, Cinépolis RMM, Cinépolis Orion East, Cinépolis Shantiniketan
Cinépolis Fun, Cinépolis SJR, Gopalan Arcade, Gopalan Innovation, Gopalan Legacy, Gopalan Signature, Gopalan Grand, Rockline Cinemas, Mukta A2 Cinemas Uttarahalli

ತುಮಕೂರು ಮಾರುತಿ
ತಿಪಟೂರು ಲಕ್ಷ್ಮಿ
ಕನಕಪುರ ಅರ್ಕಾವತಿ
ರಾಮನಗರ ಶ್ರೀರಾಮ
ಚನ್ನಪಟ್ಟಣ ಲಕ್ಷ್ಮಿ
ಮಾಗಡಿ ನಿರ್ಮಲ
ಮಧುಗಿರಿ ಶಾಂತಲ
ವಿಜಿಪುರ ಗೌರಿಶಂಕರ
ಗೌರಿಬಿದನೂರು ಅಭಿಲಾಷ್
ದೊಡ್ಡಬಳ್ಳಾಪುರ ಸೌಂದರ್ಯ ಮಹಲ್
ಶಿರಾ ಭಾಗ್ಯಲಕ್ಷ್ಮಿ
ಕುಣಿಗಲ್ ಆಕಾಶ್
ಮೈಸೂರು ಅಪೋ
DRC Cinemas, Vision Cinemas, Sathyam Cinemas

ಮಂಡ್ಯ ಮಹಾವೀರ್
ಹಾಸನ ಶ್ರೀಗುರು
ಚನ್ನರಾಯಪಟ್ಟಣ ಗಾಯತ್ರಿ
ಮದ್ದೂರು ಸಂಜಯ
ಹೊಳೆನರಸೀಪುರ ಚೆನ್ನಾಂಬಿಕ
ಚಾಮರಾಜನಗರ ಬಸವೇಶ್ವರ
ಕೊಳ್ಳೆಗಾಲ ಕೃಷ್ಣ
ಬನ್ನೂರು ರತ್ನಮಹಲ್
ಮಳವಳ್ಳಿ ರಾಜರಾಜೇಶ್ವರಿ
ಕೆ.ಎಮ್. ದೊಡ್ಡಿ ಸುಮ
ಕೆ.ಆರ್. ನಗರ ವೆಂಕಟೇಶ್ವರ
ಗುಂಡ್ಲುಪೇಟೆ ವೆಂಕಟೇಶ್ವರ
ನಂಜನಗೂಡು ಭಾರ್ಗವಿ
ಅರಸೀಕೆರೆ ಸಾಧನ
ಬೇಲೂರು ರೇಣುಕ
ಶ್ರೀರಂಗಪಟ್ಟಣ ಶ್ರೀದೇವಿ
ಟಿ. ನರಸೀಪುರ ಮುರುಗನ್
ಸಕಲೇಶಪುರ ಜೈಮಾರುತಿ
ಬಾಣಾವರ ವೆಂಕಟೇಶ್ವರ
ಪಿರಿಯಾಪಟ್ಟಣ ಶಾರದ
ಕುಶಾಲನಗರ ಕೂರ್ಗ್ ಸಿನಿಮಾಸ್
ಪಾಂಡವಪುರ ಲಾಲ್ ಬಹದ್ದೂರ್

ಚಿಕ್ಕೇರೆ ಲಕ್ಷ್ಮಿ
ದಾವಣಗೆರೆ ಅಶೋಕ
ಚಿತ್ರದುರ್ಗ ವೆಂಕಟೇಶ್ವರ
ಹೊಸಪೇಟೆ ಸರಸ್ವತಿ
ಹಗರಿಬೊಮ್ಮನಹಳ್ಳಿ ವಿಷ್ಣು
ಹಡಗಲಿ ಗಾಯತ್ರಿ
ಕೂಡ್ಲಿಗಿ ಬಸವೇಶ್ವರ
ಶಿರಗುಪ್ಪ ರಾಮಕೃಷ್ಣ
ಚಳ್ಳಕೆರೆ ಪದ್ಮ
ಬಳ್ಳಾರಿ ನಟರಾಜ ಕಾಂಪ್ಲೆಕ್ಸ್
ಹುಬ್ಬಳ್ಳಿ ಅಪ್ಸರ
PVR Lakshmi Pride, Cinépolis Oasis Mall
ಧಾರವಾಡ ಸಂಗಮ್
ಬೆಳಗಾಂ ಚಿತ್ರ
ಬಿಜಾಪುರ ಲಕ್ಷ್ಮಿ
ಗದಗ್ ವೆಂಕಟೇಶ
ರಾಣೆಬೆನ್ನೂರು ಶಕ್ತಿ
ಬಾಗಲಕೋಟೆ ವಾಸವಿ
ಇಳಕಲ್ ಶ್ರೀನಿವಾಸ
ಹಾವೇರಿ ಮಾನವಿ
ಮುಧೋಳ್ ಶುಭಾಷಿಣಿ
ಗೋಕಾಕ್ ಲಕ್ಷ್ಮಿ

ರಬಕವಿ ಶ್ರೀನಿವಾಸ
ಶಿಗ್ಗಾವ್ ರಾಜಶ್ರೀ
ಬೈಲಹೊಂಗಲ ಸಂಗಮ್
ಸಂಕೇಶ್ವರ ಸಾಯಿನಾಥ
ಬಾದಾಮಿ ಮಹಾಕೂಟೇಶ್ವರ
ಅಂಕಲಿ ಮಯೂರ
ಶಿರಸಿ ನಟರಾಜ
ಹೊನ್ನಾವರ ಪುಷ್ಪಾಂಜಲಿ
ಗುಲ್ಬರ್ಗ ತ್ರಿವೇಣಿ
ಗಂಗಾವತಿ ಮೊಹಿದ್ದೀನ್
ಕೊಪ್ಪಳ ಶಾರದ
ಷಹಪುರ ಜಯಶ್ರೀ
ಸಿಂಧನೂರು ಮಂಜುನಾಥ
ಲಿಂಗಸೂರು ಎಂಪೈರ್
ಕಾರಟಗಿ ಲಕ್ಷ್ಮಿ
ದೇವದುರ್ಗ ಆನಂದ್
ಮಸ್ಕಿ ಶರಣಬಸವೇಶ್ವರ
ಮಾನ್ವಿ ಅಪರ್ಣ
ಶಿರವಾರ ಶಿವಮಾತ
ಶಿವಮೊಗ್ಗ ಮಲ್ಲಿಕಾರ್ಜುನ

ಭದ್ರಾವತಿ ವೆಂಕಟೇಶ್ವರ
ಚಿಕ್ಕಮಂಗಳೂರು ಶ್ರೀಲೇಖಾ
ಸಾಗರ ಶ್ರೀ
ಕಡೂರು ಅನ್ನಪೂರ್ಣ
ಶಿಕಾರಿಪುರ ಕಿರಣ್
ನ್ಯಾಮತಿ ಶ್ರೀಶೈಲ
ಚನ್ನಗಿರಿ ಲಕ್ಷ್ಮಿ
ತರೀಕೆರೆ ವಿನಾಯಕ
ಆನ್ವರಿ ಶ್ರೀದೇವಿ
ಅನವಟ್ಟಿ ರೇಣುಕ
ಮಂಗಳೂರು ರೂಪವಾಣಿ
PVR Forum Fiza Mall, Cinépolis Mangalore, Bharath Cinemas, INOX Central Mall Manipal
ಉಡುಪಿ ಅಲಂಕಾರ್
ಬೆಳ್ತಂಗಡಿ ಭಾರತ್
ಸುಳ್ಯ ಸಂತೋಷ್
ಕಾರ್ಕಳ ರಾಧಿಕ
ಕುಂದಾಪುರ ವಿನಾಯಕ
ಸುರತ್ಕಲ್ ನಟರಾಜ
ಹಾಗು ರಾಜ್ಯಾದ್ಯಂತ

ಚಿರು ಕೊನೆಯ ಸಿನಿಮಾದ ಭಾವುಕ ಕ್ಷಣಗಳು

ನಟ ಚಿರಂಜೀವಿ ಸರ್ಜಾ ನಿಧನರಾಗಿ 3 ವರ್ಷಗಳ ಬಳಿಕ ಅವರು ಅಭಿನಯಿಸಿರುವ ಕೊನೆಯ ಸಿನಿಮಾ ‘ರಾಜಮಾರ್ತಾಂಡ’ ಇಂದು (ಅ.6) ತೆರೆ ಕಾಣುತ್ತಿದೆ. ಚಿರು ಜೊತೆಗಿನ ಒಡನಾಟದ ಕುರಿತು ಚಿತ್ರದ ನಿರ್ದೇಶಕರು ಒಂದಷ್ಟು ನೆನಪುಗಳನ್ನು ಹಂಚಿಕೊಂಡಿದ್ದಾರೆ...

ಚಿರು ಸರ್ಜಾ

ಅಲ್ಪಾವಧಿಯಲ್ಲಿಯೇ ಚಿತ್ರರಂಗದಲ್ಲಿ ಗುರುತಾಗಿದ್ದ ನಟ ಚಿರಂಜೀವಿ ಸರ್ಜಾ 2020ರ ಜೂನ್ 7ರಂದು ನಿಧನರಾಗಿದ್ದರು. ‘ರಾಜಮಾರ್ತಾಂಡ’ ಅವರ ಕೊನೆಯ ಸಿನಿಮಾ. ಅವರು ಬದುಕಿದ್ದಾಗಲೇ ಅದರ ಚಿತ್ರೀಕರಣ ಮುಕ್ತಾಯಗೊಂಡಿತ್ತು. ಡಬ್ಬಿಂಗ್ ಮಾತ್ರ ಬಾಕಿಯಿತ್ತು. ಅಣ್ಣನ ಪಾತ್ರಕ್ಕೆ ತಮ್ಮ ಧ್ರುವ ಸರ್ಜಾ ಧ್ವನಿ ನೀಡಿ ಚಿತ್ರವನ್ನು ಪೂರ್ತಿಗೊಳಿಸಿದ್ದು, ಅಂತಿಮವಾಗಿ ಈ ಚಿತ್ರ ತೆರೆ ಕಾಣುತ್ತಿದೆ.

“2018ರಲ್ಲಿ ಪ್ರಾರಂಭಗೊಂಡಿದ್ದ ಚಿತ್ರ ಇದು. ಕರೋನಾ ಪ್ರಾರಂಭಕ್ಕೂ ಮೊದಲು ಚಿತ್ರೀಕರಣ ಮುಕ್ತಾಯಗೊಂಡಿತ್ತು. 60 ದಿನಗಳಿಗೂ ಹೆಚ್ಚು ಕಾಲ ಬೆಂಗಳೂರು, ಮೈಸೂರಿನ ಸುತ್ತಮುತ್ತ ಚಿತ್ರೀಕರಣ ಮಾಡಿದ್ದೆವು. ಚಿರು ಸರ್ಜಾ 35–40 ದಿನಗಳ ಕಾಲ ನಮ್ಮ ಜೊತೆಗಿದ್ದರು. ಅಜ್ಜಿಗೆ ಪ್ರೀತಿಯ ಮೊಮ್ಮಗನ ಪಾತ್ರದಲ್ಲಿ ಚಿರು ಕಾಣಿಸಿಕೊಂಡಿದ್ದಾರೆ. ಅಜ್ಜಿ ಆತನನ್ನು ಕೆಲಸ, ಕಾರ್ಯ ನೀಡದೆ ರಾಜನಂತೆ ಬೆಳೆಸುತ್ತಿರುತ್ತಾರೆ. ಪಾತ್ರದ ಹೆಸರು ಕೂಡ ‘ರಾಜ’’ ಎನ್ನುತ್ತಾರೆ ಚಿತ್ರದ ನಿರ್ದೇಶಕ ರಾಮ್‌ನಾರಾಯಣ್.

ರಾಮ್‌ನಾರಾಯಣ್

‘ಚಿರು ಸೆಟ್‌ನಲ್ಲಿ ತುಂಬಾ ಜಾಲಿ ವ್ಯಕ್ತಿ. ಮುನಿಸು, ಕೋಪ ಮಾಡಿಕೊಳ್ಳುತ್ತಿರಲಿಲ್ಲ. ಚಿತ್ರದ ಡಬ್ಬಿಂಗ್ ಬಾಕಿಯಿತ್ತು. ನಾಲ್ಕು ಫೈಟ್‌ಗಳಿವೆ. ನಾಲ್ಕು ಹಾಡುಗಳಿದ್ದವು. ಆ ಪೈಕಿ ಎರಡರ ಚಿತ್ರೀಕರಣ ಮಾತ್ರ ಆಗಿದೆ. ಇನ್ನೆರಡನ್ನು ವಿದೇಶದಲ್ಲಿ ಚಿತ್ರೀಕರಿಸುವ ಆಲೋಚನೆಯಿತ್ತು. ಆದರೆ ಅಷ್ಟರೊಳಗೆ ಚಿರು ಹೋಗಿಬಿಟ್ಟರು’ ಎಂದು ಹಳೆಯ ದಿನಗಳನ್ನು ರಾಮ್‌ನಾರಾಯಣ್ ನೆನಪಿಸಿಕೊಂಡರು .

ಚಿರು ಟೀಸರ್‌ಗೆ ಡಬ್ಬಿಂಗ್ ಮಾಡಿದ್ದರು. ಆ ಟೀಸರ್ ಅನ್ನು ಸಿನಿಮಾದಲ್ಲಿಯೂ ಉಳಿಸಿಕೊಳ್ಳಲಾಗಿದೆ. ‘ಚಿರು ಕರೋನಾ ಮೊದಲ ಅಲೆ ಮುಗಿಯುತ್ತಿದ್ದಂತೆ ಒಂದು ದಿನ ಸಿನಿಮಾ ನೋಡೋಣ ಎಂದರು. ಡಿಟಿಎಸ್ ನಡೆಯುತ್ತಿತ್ತು. ನಮ್ಮ ಮನೆಗೆ ಬಂದು ಹೆಗಲ ಮೇಲೆ ಕೈಹಾಕಿ ನಿಂತುಕೊಂಡೇ ಸಿನಿಮಾ ನೋಡಿದರು. ಈ ಸಿನಿಮಾ ತುಂಬ ಚೆನ್ನಾಗಿ ಬಂದಿದೆ. ನನಗೊಂದು ದೊಡ್ಡ ಬ್ರೇಕ್ ಕೊಡಲಿದೆ ಎಂದಿದ್ದರು ಚಿರು. ಚಿತ್ರದ ಮೊದಲಾರ್ಧ ಮಾತ್ರ ತೋರಿಸಿದ್ದೆ. ದ್ವಿತೀಯಾರ್ಧವನ್ನು ಅವರು ಕೊನೆಗೂ ನೋಡದೇ ಹೊರಟುಹೋದರು’ ಎಂದು ಬೇಸರಪಟ್ಟುಕೊಂಡರು.

‘ಧ್ರುವ ಅವರಿಗೆ ಡಬ್ಬಿಂಗ್ ಮಾಡುವುದು ಬಹಳ ಕಷ್ಟವಾಯಿತು. ಕೆಲವೊಮ್ಮೆ ಅಣ್ಣನನ್ನು ನೋಡಿ ಬಹಳ ಭಾವುಕರಾಗುತ್ತಿದ್ದರು. ಧ್ರುವ ಮತ್ತು ಮೇಘನಾರಾಜ್ ಈ ಸಿನಿಮಾಕ್ಕೆ ಬೆಂಬಲವಾಗಿ ನಿಂತರು. ನಟ ದರ್ಶನ್ ಸಹಕಾರ ಮರೆಯುವಂತಿಲ್ಲ. ಚಿರು ಇಲ್ಲ ಎಂದು ಯಾರೂ ಅವರ ಕೊನೆಯ ಸಿನಿಮಾವನ್ನು ಕೈಬಿಡಲಿಲ್ಲ’ ಎನ್ನುತ್ತಾರೆ ರಾಮ್‌ನಾರಾಯಣ್. ❖

ಪ್ರಜಯ್ ಜಯರಾಮ್
ವೃಷ ಪಾಟೀಲ

ಆರು ಸಿನಿಮಾಗಳ ಸುಗ್ಗಿ

ಹೊಸಬರ ‘ಲವ್’ ಇಂದು (ಅ.6) ತೆರೆ ಕಾಣುತ್ತಿದೆ. ಮಹೇಶ ಸಿ. ಅಮ್ಮಳ್ಳಿದೊಡ್ಡಿ ಆ್ಯಕ್ಷನ್-ಕಟ್ ಹೇಳಿದ್ದು, ಹೊಸಬರಾದ ಪ್ರಜಯ್ ಜಯರಾಮ್ ಮತ್ತು ವೃಷ ಪಾಟೀಲ ಮುಖ್ಯ ಭೂಮಿಕೆಯಲ್ಲಿದ್ದಾರೆ. ಕಾಂತಾರ ಸಿನಿಮಾ ಖ್ಯಾತಿಯ ಪ್ರಭಾಕರ್ ಕುಂದರ್ ಬ್ರಹ್ಮಾವರ, ಸತೀಶ್ ಕಾಂತಾರ ಮೊದಲಾದವರು ತಾರಾಗಣದಲ್ಲಿದ್ದಾರೆ. ಶ್ರೀ ಕಾಲಭೈರವೇಶ್ವರ ಮೂವಿ ಮೇಕರ್ಸ್ ಅಡಿಯಲ್ಲಿ ದಿವಾಕರ್ ಈ ಚಿತ್ರ ನಿರ್ಮಿಸುತ್ತಿದ್ದು, ಸಿದ್ಧಾರ್ಥ್ ಎಚ್.ಆರ್. ಛಾಯಾಗ್ರಹಣ, ರೋಸಿತ್ ವಿಜಯನ್, ಶ್ರೀ ಸಾಯಿ ಕಿರಣ್ ಸಂಗೀತ, ಶಿವಪ್ರಸಾದ್ ಹಿನ್ನೆಲೆ ಸಂಗೀತ, ಲೋಕೇಶ್ ಪುಟ್ಟೇಗೌಡ ಸಂಕಲನವಿದೆ.

ಆಡನ್ನು ದೇವರಾಗಿ ಪೂಜೆ ಮಾಡಿದಾಗ ಏನೆಲ್ಲಾ ಆಗುತ್ತದೆ ಎನ್ನುವ ಕಥಾಹಂದರ ಹೊಂದಿರುವ ‘ಆಡೇ ನಮ್ God’ ಸಿನಿಮಾ ತೆರೆ ಕಾಣುತ್ತಿದೆ. ಹಾಸ್ಯಮಯ ಕಥೆ ಹೊಂದಿರುವ ಚಿತ್ರಕ್ಕೆ ಹಿರಿಯ ನಿರ್ದೇಶಕ ಪಿ.ಎಚ್.ವಿಶ್ವನಾಥ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಪ್ರೊ.ಬಿ.ಬಸವರಾಜ್ ಹಾಗೂ ರೇಣುಕಾ ಬಸವರಾಜ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ‘ರಾಮ ರಾಮ ರೇ’ ಸಿನಿಮಾ ಖ್ಯಾತಿಯ ನಟರಾಜ್, ಸಾರಿಕ ರಾವ್, ಬಿ ಸುರೇಶ್ ಮುಖ್ಯಭೂಮಿಕೆಯಲ್ಲಿರುವ ಚಿತ್ರಕ್ಕೆ ಪಿ.ಕೆ.ಎಚ್. ದಾಸ್ ಛಾಯಾಗ್ರಹಣ, ಬಿ.ಎಸ್.ಕೆಂಪರಾಜು ಸಂಕಲನವಿದೆ.

ತ್ರಿಕೋನ ಪ್ರೇಮಕಥಾಹಂದರ ಒಳಗೊಂಡಿರುವ ‘ಅಭಿರಾಮಚಂದ್ರ’ ತೆರೆಗೆ ಬರುತ್ತಿದೆ. ನಾಗೇಂದ್ರ ಗಾಣಿಗ ನಿರ್ದೇಶನದ ಚಿತ್ರಕ್ಕೆ ರಥ ಕಿರಣ್ ನಾಯಕ. ಶಿವಾನಿ ರೈ ನಾಯಕಿ. ಉಳಿದಂತೆ ಸಿದ್ದು ಮೂಲಿಮನಿ, ವೀಣಾ ಸುಂದರ್, ಎಸ್.ನಾರಾಯಣ್, ಪ್ರಕಾಶ್ ತುಮ್ಮಿನಾಡು, ಪವನ್ ಮೊದಲಾದವರು ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಎ ಸುಬ್ರಮಣಿ ರಾಮಗೊಂಡನಹಳ್ಳಿ ನಟಿಸಿ, ನಿರ್ದೇಶಿಸಿರುವ ‘ಮಿಸ್ಟರ್ & ಮಿಸಸ್ ಮನ್ಮಥ’ ತೆರೆ ಕಾಣುತ್ತಿದೆ. ಶಕುಂತಲಾ, ಚಂದನಾ, ವೈಶಾಲಿ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. ❖

ರೈತರ ಹಿತಕ್ಕೆ ಪೂರಕವಾದ ಶಿಫಾರಸು ಮಾಡಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

ಸರ್ಕಾರದ ಜತೆ ಕೇಂದ್ರ ತಂಡ ಚರ್ಚೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರಾಜ್ಯದ 42 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆ ಹಾನಿ
- ಕೇಂದ್ರ ಸರ್ಕಾರದ ಬರ ಮಾರ್ಗಸೂಚಿ ಅನ್ವಯ 195 ತಾಲ್ಲೂಕುಗಳು ಬರಪೀಡಿತ
- ಬರ ಅಧ್ಯಯನ ತಂಡದಿಂದ ರಾಜ್ಯದ 11 ಜಿಲ್ಲೆಗಳಲ್ಲಿ ಪ್ರವಾಸ

ಬೆಂಗಳೂರು: ರಾಜ್ಯದ ಬರ ಪರಿಸ್ಥಿತಿಯನ್ನು ಕೇಂದ್ರದ ಬರ ಅಧ್ಯಯನ ತಂಡಕ್ಕೆ ವಿವರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈತರ ಹಿತಕ್ಕೆ ಪೂರಕವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವಂತೆ ಸಲಹೆ ನೀಡಿದರು.

ಅಜಿತ್ ಕುಮಾರ್ ಸಾಹು ನೇತೃತ್ವದ ಕೇಂದ್ರ ತಂಡದ ಸದಸ್ಯರು ಬರ ಅಧ್ಯಯನಕ್ಕೆ ತೆರಳುವ ಮೊದಲು ಮುಖ್ಯಮಂತ್ರಿ ಅವರನ್ನು ವಿಧಾನಸೌಧದಲ್ಲಿ ಗುರುವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ನೈರುತ್ಯ ಮುಂಗಾರು ವಿಳಂಬದಿಂದ ಹಾಗೂ ಮಳೆ ಕೊರತೆಯಿಂದ ರಾಜ್ಯದಲ್ಲಿ ರೈತರು ಸಂಕಷ್ಟಕ್ಕೀಡಾಗಿದ್ದಾರೆ.

ಬರ ಪರಿಸ್ಥಿತಿ ಅಧ್ಯಯನಕ್ಕೆ ರಾಜ್ಯಕ್ಕೆ ಬಂದಿರುವ ಅಜಿತ್‌ಕುಮಾರ್ ಸಾಹು ನೇತೃತ್ವದ ಕೇಂದ್ರದ ತಂಡದ ಜತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚರ್ಚಿಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಇದ್ದರು

ಶೇ 90ರಷ್ಟು ಬಿತ್ತನೆಯಾಗಿದ್ದು, ಅದರಲ್ಲಿ 42 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಜಮೀನಿನಲ್ಲಿ ಹಸಿರು ಕಾಣಿಸಿದರೂ ಬೆಳೆಯಿಲ್ಲದ ಪರಿಸ್ಥಿತಿ ಉಂಟಾಗಿದ್ದು, ಹಸಿರು ಬರ ತಲೆದೋರಿದೆ' ಎಂದು ಮುಖ್ಯಮಂತ್ರಿ ವಿವರಿಸಿದರು.

ಕೇಂದ್ರದ ಮಾರ್ಗಸೂಚಿ ಅನ್ವಯ 195 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಇನ್ನೂ 32 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿಯಿದೆ. ಪ್ರವಾಸ ಸಂದರ್ಭದಲ್ಲಿ ವಸ್ತುಸ್ಥಿತಿ ಅರಿತು ಕೇಂದ್ರಕ್ಕೆ ಮನವರಿಕೆ ಮಾಡುವ ಮೂಲಕ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕು ಎಂದು ಮುಖ್ಯಮಂತ್ರಿ ತಿಳಿಸಿದರು.

ಮುಂಗಾರು ವಿಳಂಬ ಮತ್ತು ಆಗಸ್ಟ್‌ನಲ್ಲಿ 122 ವರ್ಷಗಳಲ್ಲೇ ಅತಿ ಕಡಿಮೆ ಮಳೆಯಾಗಿರುವ ಕಾರಣ ರಾಜ್ಯದ ಅಣೆಕಟ್ಟುಗಳು ಬರಿದಾಗಿವೆ. ಸೆಪ್ಟೆಂಬರ್ ತಿಂಗಳಲ್ಲಿ ಅಲ್ಲಲ್ಲಿ ಚದುರಿದಂತೆ ಮಳೆ ಆಗಿದೆ. ಕುಡಿಯುವ ನೀರಿಗೆ ರಾಜ್ಯಕ್ಕೆ 33 ಟಿಎಂಸಿ ಅಡಿ ನೀರು ಅವಶ್ಯವಿದೆ. ಜೊತೆಗೆ, ವಿದ್ಯುತ್ ಕೊರತೆ ಆತಂಕವೂ ಸೃಷ್ಟಿಯಾಗಿದೆ. ಕೊಡಗು ಜಿಲ್ಲೆಯಲ್ಲಿ ಮಳೆ ಕೊರತೆಯಿಂದಾಗಿ ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ಕಡಿಮೆಯಾಗಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಸಣ್ಣ ಮತ್ತು ಮಧ್ಯಮ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆ ದತ್ತಾಂಶವನ್ನು ಫ್ರೂಟ್ಸ್ ತಂತ್ರಾಂಶದಲ್ಲಿ ಸಂಗ್ರಹಿಸಲಾಗಿದೆ. ಜೊತೆಗೆ ಬೆಳೆ ಸಮೀಕ್ಷೆಯನ್ನೂ ಡಿಜಿಟೈಸ್ ಮಾಡಿರುವುದರಿಂದ ನಿಖರ ಮಾಹಿತಿ ಲಭ್ಯವಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ನಿಗದಿಪಡಿಸಿರುವ ಬೆಳೆ ನಷ್ಟ ಪರಿಹಾರವನ್ನು ಹೆಚ್ಚಿಸುವ ಅಗತ್ಯವಿದೆ ಎಂದೂ ಹೇಳಿದರು.

ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಶ್ಮಿ ಇದ್ದರು.

ಮತ್ತೆ 15 ತಾಲ್ಲೂಕು ಬರಪೀಡಿತ: ಶೀಘ್ರ ಘೋಷಣೆ– ಕೃಷ್ಣ ಬೈರೇಗೌಡ ಭರವಸೆ

ಬೆಂಗಳೂರು: 'ಇದೇ 9ರಂದು ಮತ್ತೆ ಸಂಪುಟ ಉಪ ಸಮಿತಿ ಸಭೆಯಿದೆ. 41 ತಾಲ್ಲೂಕುಗಳಲ್ಲಿ ಬರ ಘೋಷಣೆಗೆ ಬಾಕಿ ಇದ್ದು, ಈ ಪೈಕಿ 15 ತಾಲ್ಲೂಕುಗಳು ಕೇಂದ್ರ ಸರ್ಕಾರದ ಬರ ಮಾನದಂಡದ ವ್ಯಾಪ್ತಿಗೆ ಬರಬಹುದೆಂಬ ಮಾಹಿತಿಯಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

'ಮುಂಗಾರು ಅವಧಿಯಲ್ಲಿ ಶೇ 28ರಷ್ಟು ಮಳೆ ಕೊರತೆ ಆಗಿದೆ. ಹಿಂಗಾರು ವಾಡಿಕೆ ಅಥವಾ ವಾಡಿಕೆಗಿಂತ ಕಡಿಮೆ ಮಳೆಯ ಮುನ್ಸೂಚನೆ ಇದೆ. ಆಹಾರೋತ್ಪಾದನೆ ಕುಸಿತ ಆಗುವ ಅಪಾಯ ಇದೆ' ಎಂದೂ ಹೇಳಿದರು.

'ಕೇಂದ್ರ ಬರ ಅಧ್ಯಯನ ತಂಡಕ್ಕೆ ರಾಜ್ಯದ ಬರ ಪರಿಸ್ಥಿತಿಯ ಸಮಗ್ರ ಚಿತ್ರಣ, ರೈತರಿಗೆ ಆಗಿರುವ ತೊಂದರೆ, ಆರ್ಥಿಕತೆ ಮೇಲಾಗಿರುವ ದುಷ್ಪರಿಣಾಮ, ಬೆಳೆ ನಷ್ಟದ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. 10 ಅಧಿಕಾರಿಗಳು ಮೂರು ತಂಡಗಳಾಗಿ 11 ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಬೆಳೆಯನ್ನಷ್ಟೇ ನೋಡಬೇಡಿ, ರೈತರೊಂದಿಗೆ ಚರ್ಚಿಸುವಂತೆ ತಂಡಕ್ಕೆ ಮನವಿ ಮಾಡಿದ್ದೇವೆ. ಮೇಲೆ ಗಿಡ ಕಾಣಿಸುತ್ತದೆ. ಆದರೆ, ನೆಲದಡಿ ಶೇಂಗಾ ಬೀಜವೇ ಇಲ್ಲ. ಜೋಳದ ಗಿಡಗಳಲ್ಲಿ ತೆನೆ ಕಾಳುಗಟ್ಟಿಲ್ಲ. ಇದನ್ನು ಹಸಿರು ಬರ ಎಂದೂ ಹೇಳಿದ್ದೇವೆ' ಎಂದು ಅವರು ವಿವರಿಸಿದರು.

ಮನೆಮನೆಗೆ ಔಷಧ ಪೆಟ್ಟಿಗೆ

ಒಂದನೇ ಪುಟದಿಂದ

ಮೊದಲ ಬಾರಿಗೆ ನೀಡಿದ ಮಾತ್ರೆಗಳು ಖಾಲಿಯಾದ ಬಳಿಕ ಮತ್ತೆ ಮೂರು ತಿಂಗಳಿಗೆ ಆಗುವಷ್ಟು ಮಾತ್ರೆಗಳನ್ನು ಮನೆಗಳಿಗೆ ತಲುಪಿಸಲಾಗುತ್ತದೆ. 30 ವರ್ಷ ಮೇಲ್ಪಟ್ಟವರು ಈ ಮಾತ್ರೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಮಧುಮೇಹ ಹಾಗೂ ಅಧಿಕ ರಕ್ತದೊತ್ತಡಕ್ಕೆ ತಲಾ ಮೂರು ಮಾದರಿಯ ಮಾತ್ರೆಗಳನ್ನು ಸರ್ಕಾರ ಗುರುತಿಸಿದೆ. ಆ ಮಾತ್ರೆಗಳನ್ನು ಮಾತ್ರ ನೀಡಲಾಗುತ್ತದೆ.

ಔಷಧ ಖರೀದಿ ಸೇರಿ ಒಟ್ಟು ₹82 ಕೋಟಿ ವೆಚ್ಚದಲ್ಲಿ ಈ ಯೋಜನೆ ಜಾರಿ ಮಾಡಲಾಗುತ್ತಿದೆ. ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮದಿಂದ ಔಷಧ ಖರೀದಿಸಿ, ವಿತರಿಸಲಾಗುತ್ತದೆ. ಔಷಧ ಪಡೆದ ವ್ಯಕ್ತಿಯ ಹೆಸರು ಹಾಗೂ ವಿವರವನ್ನು ಪೆಟ್ಟಿಗೆಯ ಮೇಲೆ ನಮೂದಿಸಲಾಗುತ್ತದೆ. ಅದೇ ರೀತಿ, ಅವರ ಆರೋಗ್ಯ ಸ್ಥಿತಿಗತಿಯ ಮಾಹಿತಿ, ಔಷಧ ವಿತರಿಸಿದ ವಿವರವನ್ನು ಇಲಾಖೆಯೂ ದಾಖಲಿಸಿಕೊಳ್ಳಲಿದೆ.

ತಪಾಸಣಾ ತಂಡವು ಪ್ರತಿ ಸೋಮವಾರ, ಬುಧವಾರ ಹಾಗೂ ಶುಕ್ರವಾರ ತಲಾ 20 ಮನೆಗಳಿಗೆ ಭೇಟಿ ನೀಡಲಿದೆ. ಮನೆ ಮನೆ ಭೇಟಿ ವೇಳೆ ಬಾಯಿ, ಸ್ತನ ಹಾಗೂ ಗರ್ಭ ಕಂಠದ ಕ್ಯಾನ್ಸರ್ ಪತ್ತೆಗೂ ತಪಾಸಣೆ ನಡೆಸಲಾಗುತ್ತದೆ. ಕ್ಯಾನ್ಸರ್ ದೃಢಪಟ್ಟಲ್ಲಿ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಶಿಫಾರಸು ಮಾಡಲಾಗುತ್ತದೆ. ಭೇಟಿ ಸಂದರ್ಭದಲ್ಲಿ ಮನೆಯ ಸದಸ್ಯರು ಇರದಿದ್ದಲ್ಲಿ ತಂಡವು ಮರುದಿನ ಮತ್ತೆ ಭೇಟಿ ನೀಡಲಿದೆ.

ಯೋಜನೆಯಡಿ ವಿತರಿಸಲಾಗುವ ಮಾದರಿ ಔಷಧ ಪೆಟ್ಟಿಗೆ

> **ಗೃಹ ಆರೋಗ್ಯ ಯೋಜನೆಯಡಿ ಉಚಿತವಾಗಿ ಔಷಧಗಳನ್ನು ಒದಗಿಸಲಾಗುತ್ತದೆ. ಈ ವರ್ಷ ಎಂಟು ಜಿಲ್ಲೆಗಳಲ್ಲಿ ಪ್ರಾರಂಭಿಸಿ, ಮುಂದಿನ ವರ್ಷ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಗುತ್ತದೆ**
> **ದಿನೇಶ್ ಗುಂಡೂರಾವ್**, ಸಚಿವ

ತಪಾಸಣೆ ಬಗ್ಗೆ ತರಬೇತಿ: ಮನೆ ಮನೆ ಆರೋಗ್ಯ ತಪಾಸಣೆಗೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿ (ಡಿಎಚ್‌ಒ), ಜಿಲ್ಲಾ ಕಣ್ಗಾವಲು ಅಧಿಕಾರಿಗಳಿಗೆ (ಡಿಎಸ್‌ಒ) ರಾಷ್ಟ್ರೀಯ ಆರೋಗ್ಯ ಅಭಿಯಾನದ ವ್ಯವಸ್ಥಾಪಕ ನಿರ್ದೇಶಕರ ನೇತೃತ್ವದಲ್ಲಿ ತರಬೇತಿ ನೀಡಲಾಗುತ್ತದೆ. ಇವರು ಜಿಲ್ಲೆಗಳಲ್ಲಿ ಸಭೆ ನಡೆಸಿ, ವೈದ್ಯಾಧಿಕಾರಿಗಳಿಗೆ ತರಬೇತಿ ಕೊಡಬೇಕಾಗುತ್ತದೆ. ಅವರು ಪ್ರಾಥಮಿಕ ಆರೋಗ್ಯ ಕೇಂದ್ರಗಳಡಿ ಮುಖ್ಯ ಆರೋಗ್ಯಾಧಿಕಾರಿ, ಸಮುದಾಯ ಆರೋಗ್ಯಾಧಿಕಾರಿ, ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಸಹಾಯಕರಿಗೆ ತರಬೇತಿ ನೀಡುತ್ತಾರೆ.

'ಔಷಧ ಖರೀದಿಗೆ ಸರ್ಕಾರದಿಂದ ಅನುಮೋದನೆ ದೊರೆತ ಬಳಿಕ, ತಪಾಸಣೆ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ನಂತರ ಔಷಧ ಪೆಟ್ಟಿಗೆಯೊಂದಿಗೆ ತಂಡವು ಮನೆ ಮನೆಗೆ ಭೇಟಿ ನೀಡಲಿದೆ. ಪ್ರಾರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡುವುದರಿಂದ ಮುಂದಾಗುವ ಅಪಾಯ ತಡೆಯಲು ಸಾಧ್ಯ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಪಾವಗಡ ತಾಲ್ಲೂಕಿನ ತಿರುಮಣಿ ಗ್ರಾಮದ ಬಳಿ ನಿರ್ಮಾಣವಾಗಿರುವ ಸೋಲಾರ್ ಪಾರ್ಕ್

ಸೋಲಾರ್ ಪಾರ್ಕ್ ವಿಸ್ತರಣೆ

ಒಂದನೇ ಪುಟದಿಂದ

ಈ ಯೋಜನೆಗೆ ಒಟ್ಟು 13 ಸಾವಿರ ಎಕರೆ ಜಮೀನನ್ನು ರೈತರಿಂದ ಬಾಡಿಗೆ ಪಡೆಯಲಾಗಿತ್ತು. ಅದರಲ್ಲಿ ಖಾಲಿ ಉಳಿದಿದ್ದ 1,200 ಎಕರೆಯಲ್ಲಿ ಎರಡನೇ ಹಂತದ ಯೋಜನೆ ತಲೆ ಎತ್ತಲಿದೆ.

ಖಾಸಗಿ ಕಂಪನಿಗಳಿಂದ ಟೆಂಡರ್ ಕರೆಯುವ ಪ್ರಕ್ರಿಯೆ ಶೀಘ್ರ ಆರಂಭವಾಗಲಿದೆ ಎಂದು ಎಂದು ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎನ್.ಅಮರನಾಥ್ ಬುಧವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಮೂರನೇ ಹಂತದಲ್ಲಿ ರಾಪ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2,500 ಮೆ.ವಾ ಮತ್ತು ನಾಲ್ಕನೇ ಹಂತದಲ್ಲಿ ತಿರುಮಣಿ ಗ್ರಾ.ಪಂ ವ್ಯಾಪ್ತಿಯಲ್ಲಿ 500 ಮೆ.ವಾ ವಿದ್ಯುತ್ ಉತ್ಪಾದನೆಗೆ ಪಾರ್ಕ್ ವಿಸ್ತರಣೆ ಯೋಜನೆ ರೂಪಿಸಲಾಗಿದೆ. ಈಗಾಗಲೇ ರೂಪುರೇಷೆ ಸಿದ್ಧವಾಗಿದ್ದು, ಅಧಿಸೂಚನೆ ಹೊರಡಿಸಲಾಗಿದೆ. ಹಂತ, ಹಂತವಾಗಿ ಈ ಯೋಜನೆಗಳನ್ನು ಜಾರಿಗೊಳಿಸಲಾಗುವುದು ಎಂದು ತಿಳಿಸಿದರು.

ಒಟ್ಟು ನಾಲ್ಕು ಹಂತದ ವಿಸ್ತರಣೆ ಮತ್ತು ಅಭಿವೃದ್ಧಿ ಯೋಜನೆ ಪೂರ್ಣಗೊಂಡರೆ ಪಾವಗಡ ಸೋಲಾರ ಪಾರ್ಕ್‌ನಲ್ಲಿ ಒಟ್ಟು 5,350 ಮೆ.ವಾ ಸೌರ ವಿದ್ಯುತ್ ಉತ್ಪಾದನೆಯಾಗಲಿದೆ. ಅಲ್ಲಿಗೆ ಪಾವಗಡ ಸೋಲಾರ ಪಾರ್ಕ್ ಜಗತ್ತಿನ ಅತಿದೊಡ್ಡ ಸೋಲಾರ್ ಪಾರ್ಕ್ ಎಂಬ ಹಿರಿಮೆಗೆ ಪಾತ್ರವಾಗಲಿದೆ.

ಉದ್ಯೋಗಾವಕಾಶ: ಸೋಲಾರ್ ಪಾರ್ಕ್‌ಗೆ ಜಮೀನು ನೀಡಿದ ರೈತರಿಗೆ ಬಾಡಿಗೆ ಜೊತೆ ಕೆಲಸ ನೀಡಲಾಗುತ್ತದೆ. 1,600ಕ್ಕೂ ಹೆಚ್ಚು ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲಾಗುತ್ತದೆ. ಅಲ್ಲದೇ, ಸ್ಥಳೀಯವಾಗಿ ಅಭಿವೃದ್ಧಿ ಚಟುವಟಿಕೆಗಳಿಗೆ ಕಾರ್ಪೊರೇಟ್ ಸಂಸ್ಥೆಗಳ ಸಾಮಾಜಿಕ ಹೊಣೆಗಾರಿಕೆ ನಿಧಿಯ (ಸಿಎಸ್‌ಆರ್) ₹102.50 ಕೋಟಿ ವಿನಿಯೋಗಿಸಲಾಗುತ್ತದೆ.

ಉತ್ತರಪ್ರದೇಶಕ್ಕೂ ಪಾವಗಡದ ಸೌರ ವಿದ್ಯುತ್

ತುಮಕೂರು, ಬೆಂಗಳೂರು, ಮೈಸೂರು, ಹಿರಿಯೂರು, ಗುತ್ತಿ, ಬಳ್ಳಾರಿ ಸೇರಿದಂತೆ ವಿವಿಧ ಕಡೆ ಪಾವಗಡ ಗ್ರಿಡ್‌ನಿಂದ ಸೌರ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಇಲ್ಲಿಂದಲೇ ವಿದ್ಯುತ್ ಪೂರೈಸಲಾಗುತ್ತಿದೆ.

ಸದ್ಯ ಪಾವಗಡದಲ್ಲಿ ಉತ್ಪಾದನೆಯಾಗುತ್ತಿರುವ 2,050 ಮೆ.ವಾ ಪೈಕಿ 1,850 ಮೆ.ವಾ ಸೌರ ವಿದ್ಯುತ್ ಅನ್ನು ರಾಜ್ಯದ ಬೇರೆ ವಿದ್ಯುತ್ ವಿತರಣಾ ಕಂಪನಿಗಳು ಖರೀದಿಸುತ್ತಿವೆ. ಉಳಿದ 200 ಮೆ.ವಾ ವಿದ್ಯುತ್ ಅನ್ನು ಉತ್ತರಪ್ರದೇಶ ಖರೀದಿಸುತ್ತಿದೆ ಎಂದು ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಮುಖ್ಯ ವ್ಯವಸ್ಥಾಪಕ ಎಸ್.ರೆಡ್ಡಿ ಮಾಹಿತಿ ನೀಡಿದರು.

ಔಷಧ ನಿಯಂತ್ರಣ ಇಲಾಖೆ
ಔಷಧ ನಿಯಂತ್ರಕರ ಕಛೇರಿ, ಅರಮನೆ ರಸ್ತೆ, ಬೆಂಗಳೂರು
ಸಂಖ್ಯೆ: ಔನಿಇ/ಯೋಜನೆ/103/2023–24 ದಿನಾಂಕ: 05–10–2023

ಪ್ರಕಟಣೆ

ಅರ್ಹ ವಿದ್ಯಾರ್ಥಿಗಳಿಗೆ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಸುಬ್ಬಯ್ಯ ವೃತ್ತ, ಬೆಂಗಳೂರು–27 ರಲ್ಲಿ ಭರ್ತಿಯಾಗದೇ ಉಳಿದಿರುವ ಪ್ರಥಮ ಬಿ.ಫಾರ್ಮ್ ಕೋರ್ಸ್‌ಗಳಿಗೆ ದಿನಾಂಕ: **09–10–2023 ರಂದು ಬೆಳಿಗ್ಗೆ 10.00 ರಿಂದ 11.30 ಗಂಟೆಯೊಳಗೆ** ನೋಂದಣಿ ಸಮಿತಿಯ ಮುಂದೆ ಸಂದರ್ಶನಕ್ಕೆ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯದಲ್ಲಿ **ಮೂಲ ದಾಖಲಾತಿಗಳೊಂದಿಗೆ (ಎಸ್.ಎಸ್.ಎಲ್.ಸಿ, ಪಿ.ಯು.ಸಿ., ಬಿ.ಇ.ಓರವರಿಂದ ದೃಢೀಕರಣಗೊಂಡಿರುವ ವ್ಯಾಸಂಗ ಪ್ರಮಾಣ ಪತ್ರ ಹಾಗೂ ಸಿ.ಇ.ಟಿ. ರ್‍ಯಾಂಕ್ ಪ್ರಮಾಣ ಪತ್ರವು ಕಡ್ಡಾಯವಾಗಿರುತ್ತದೆ.)** ಹಾಜರಾಗಲು ಸೂಚಿಸಿದೆ. ಹಾಗೂ ಆಯ್ಕೆಯಾದ ವಿದ್ಯಾರ್ಥಿಗಳು ಅದೇ ದಿನಾಂಕದಂದು ಪ್ರವೇಶವನ್ನು ಪಡೆಯತಕ್ಕದ್ದು. **ಪ್ರಥಮ ಬಿ.ಫಾರ್ಮ್ ಕೋರ್ಸ್‌ನ ಪ್ರವೇಶ ಶುಲ್ಕ ರೂ. 14,450/– ಆಗಿರುತ್ತದೆ. ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080 – 22270666.** ಇ–ಮೇಲ್: **principal.gcp123@gmail.com**
ವೆಬ್‌ಸೈಟ್: **www.govtcopblr.org**
ಸಹಿ/– ಪ್ರಾಂಶುಪಾಲರು
ವಾಸಾಸಂಇ/ವಾ.ಪ್ರ/1569/ಅಡ್ವರ್ಟೋರ್/2023–24 ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು–27

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#03, 4ನೇ ಮಹಡಿ, ಎಂಬೆಸ್ಸಿ ಐಕಾನ್ ಕಟ್ಟಡ, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001
ನಂ. ಕೆ.ಟಿ.ಐ.ಎಲ್/ಯೋ–1/ಮೈ.ವಿ/50/2022–23 ದಿನಾಂಕ: 05.10.2023

ಟೆಂಡರ್ ರದ್ದುಗೊಳಿಸುವಿಕೆ ಪ್ರಕಟಣೆ

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದಿಂದ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ ಪ್ರಸಾದ್ ಯೋಜನೆಯಡಿಯಲ್ಲಿ ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಾಲಯ ಯಾತ್ರಾಸ್ಥಳ ಅಭಿವೃದ್ಧಿಪಡಿಸುವ ಕಾಮಗಾರಿಗೆ ಇ–ಸಂಗ್ರಹಣಾ ವೇದಿಕೆಯಲ್ಲಿ **ದಿನಾಂಕ: 03.10.2023ರಂದು Indent No. KTIL/2023-24/OW-WORK/INDENT7** ರಲ್ಲಿ ಪ್ರಕಟಿಸಿದ ಟೆಂಡರ್ ಅನ್ನು ರದ್ದುಪಡಿಸಲಾಗಿದೆ.
DIPR/CP/YC/1576/2023-24 ಸಹಿ/– ಕಾರ್ಯಪಾಲಕ ಅಭಿಯಂತರರು

ನಗರಸಭಾ ಕಾರ್ಯಾಲಯ, ಉಡುಪಿ
ಉಡುಪಿ ಜಿಲ್ಲೆ–576101
web: www.udupicity.mrc.gov.in, E-mail: itstaff_ulb_udupi@yahoo.com,
Phone: 0820-2520446/2520306, Fax: 0820-2524236
एक कदम स्वच्छता की ओर
NO:UCMC/HS/MP/CR-02/2023-24 Date: 04.10.2023

ಟೆಂಡರ್ ಪ್ರಕಟಣೆ 2 ಕರೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಸಿ–8ರ ನಿಯಮದನ್ವಯ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 20/10/2023 ಸಮಯ 5.00 ಗಂಟೆಯವರೆಗೆ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಕ್ರ.ಸಂ.	ಕೆಲಸದ ಹೆಸರು	ಟೆಂಡರ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ
1.	Tenders for the work of providing Manpower Services like loaders, supervisors, weed cutter operator, sprayer on out source basis for the swm activity in the limits of udupi city municipal council (Total 42 Members)	DMA/2023-24/SE0197/CALL-2	ರೂ. 98.13 ಲಕ್ಷ	Rs. 1,47,195.00/-

ಸಹಿ/– ಪೌರಾಯುಕ್ತರು, ನಗರಸಭಾ ಕಾರ್ಯಾಲಯ, ಉಡುಪಿ–576101

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ
ಸಂ:ಶಿಮನಪಾಶಿ:ಆವಿ:ಸಿ.ಆರ್:78/2023-24 ದಿನಾಂಕ:04.10.2023

ಟೆಂಡರ್ ಪ್ರಕಟಣೆ (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ಸೇವೆಯನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ನಿಯಮದನ್ವಯ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಸರಬರಾಜುದಾರರು ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದು.
(1) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಚಾಲ್ತಿಗೆ ಬರುವ ದಿನಾಂಕ: **06.10.2023** ರಿಂದ (2) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **06.11.2023** **ಕ್ರ.ಸಂ: 01 ರ ಕಾಮಗಾರಿಗೆ ದಿನಾಂಕ: 21.10.2023 ಕ್ರ.ಸಂ : 02 ಮತ್ತು 03ರ ಕಾಮಗಾರಿಗಳಿಗೆ (3) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ as per KPP portal** (4) ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ. ಸಂ	ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಅನುದಾನ
1	ಶಿವಮೊಗ್ಗ ಮಹಾನಗರ ಪಾಲಿಕೆಗೆ ಘನತ್ಯಾಜ್ಯ ವಸ್ತು ನಿರ್ವಹಣೆ ಮಾಡಲು 6 cum ಸಾಮರ್ಥ್ಯದ ಟಿಪ್ಪರ್ ಟ್ರಕ್/ಲಾರಿ ವಾಹನಗಳನ್ನು (GVW-8990 Kg) ಖರೀದಿಸುವುದು. (6 ಸಂಖ್ಯೆ)	180.00	2,70,000/-	2023-24ನೇ ಸಾಲಿನ 15ನೇ ಹಣಕಾಸು ಅನುದಾನ
2	ಶಿವಮೊಗ್ಗ ಮಹಾನಗರ ಪಾಲಿಕೆಯ ರಾಜೀವ್ ಗಾಂಧಿ ಬಡಾವಣೆಯ ಘನತ್ಯಾಜ್ಯ ನಿರ್ವಹಣ ಘಟಕದಲ್ಲಿ Automatic Organic waste converter ಯಂತ್ರವನ್ನು ಅಳವಡಿಸುವುದು	65.00	1,30,000/-	
3	ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಪಾರ್ಕ್/ಉದ್ಯಾನವನದಲ್ಲಿ Leaf mould machine (1 TPD) ಯಂತ್ರವನ್ನು ಅಳವಡಿಸಿ ವಾರ್ಷಿಕವಾಗಿ ನಿರ್ವಹಣೆ ಮಾಡುವುದು.	70.50	1,41,000/-	

ಸೂಚನೆ: ಯಾವುದೇ ತಿದ್ದುಪಡಿ ಅಥವಾ ಬದಲಾವಣೆಯನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ತಿಳಿಸಲಾಗುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ವಿ–1)/ (ಪ್ರ)
ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.
ವಾ.ಸಾ.ಸಂ.ಇ./ಶಿ/ನಂ.11-10/ಝೇಂಕಾರ್/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ವಾಣಿಜ್ಯ ತೆರಿಗೆ ಕಛೇರಿ ಕಟ್ಟಡ ಹಿಂಭಾಗ, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು–572102
E-mail–domcmanglore@gmail.com ಫೋನ್ : 08262–295848
ಸಂಖ್ಯೆ:ಅಸಂಕಇ/ಆಟೆ/ಸಿಆರ್–70/2023–24 ದಿನಾಂಕ :03.10.2023

ಇ–ಟೆಂಡರ್ ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಮಗಳೂರು. ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳು ಮತ್ತು ವಿದ್ಯಾರ್ಥಿ ನಿಲಯಗಳಿಗೆ ಆಹಾರ ಮತ್ತು ಇತರೆ ಸಾಮಾಗ್ರಿಗಳನ್ನು ಸರಬರಾಜಿಗೆ ಇ–ಟೆಂಡರ್ ಕರೆಯಲಾಗಿದ್ದು, ಇ–ಪೋರ್ಟಲ್ https://kppp.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಟೆಂಡರ್ ಮೊತ್ತ: ರೂ. 197,00 ಲಕ್ಷಗಳು, ಇ.ಎಂ.ಡಿ. ಮೊತ್ತ: ರೂ. 296625.00 ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 02–11–2023 ಸಂಜೆ : 4.00 ಗಂಟೆ ಹೆಚ್ಚಿನ ಮಾಹಿತಿಗಾಗಿ; https://kppp.karnataka.gov.in ವೆಬ್ ಸೈಟ್ ಗೆ ಲಾಗಿನ್ ಆಗಬಹುದು ಅಥವಾ ಜಿಲ್ಲಾ ಕಚೇರಿ ದೂರವಾಣಿ ಸಂಖ್ಯೆ 08262–205848

ಸಹಿ/–ಜಿಲ್ಲಾ ಅಧಿಕಾರಿ,
ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಮಗಳೂರು

ನಗರಸಭೆ ಕಾರ್ಯಾಲಯ, ರಾಣೇಬೆನ್ನೂರು
ತಾ॥ ರಾಣೇಬೆನ್ನೂರು–581 115 ಜಿಲ್ಲಾ॥ ಹಾವೇರಿ ರಾಜ್ಯ॥ ಕರ್ನಾಟಕ
Phone : 08373-266466 Helpline : 08373-260266 Fax : 08373-266475
Website : http://www.ranebennurcity.gov.in
email : itstaff_ulb_ranebennur@yahoo.co.in
NSR/OPB/V-1/2023-24 Date : 30-09-2023

Sl	Indent No	Name of the work	Quantity required	Estimated Amount
1	DMA/2023-24/IND0111	TENDER FOR Supply of Daily Morning Breakfast to Pourakarmikas and other sanitation staff of CMC,Ranebennur	247 food packets per day	Rs 31,55,425/-

Tender Processing Fee	As per KPPP Portal
EMD	Rs 63,110/- to be paid online through eportal
Last date for submission of Tender (Tender Due	18-10-2023 before 16.30
Date and Time of opening of technical bid	20-10-2023 @11.00 am
Date and Time of opening of financial bid	23-10-2023@ 11.00 am

Municipal Commissioner
CMC,Ranebennur
ವ.ಸಾ.ಇ./ಹಾವೇರಿ/249/2023–24 ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ–4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು– 570 009.
Ph: 0821-2545894, Email: kwbcemys2014@gmail.com
IFT ಸಂಖ್ಯೆ: 817 ದಿನಾಂಕ: 03.10.2023

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾಮಗಾರಿಯ ವಿವರ: "ಕೇಂದ್ರ ಪುರಸ್ಕೃತ ಅಮೃತ್–2.0 ಯೋಜನೆಯಡಿ ಮೈಸೂರು ಜಿಲ್ಲೆಯ ಹುಣಸೂರು ಪಟ್ಟಣ, ಕೊಡಗು ಜಿಲ್ಲೆಯ ಸೋಮವಾರಪೇಟೆ ಹಾಗೂ ವಿರಾಜಪೇಟೆ ಪಟ್ಟಣ ಮತ್ತು ಹಾಸನ ಜಿಲ್ಲೆಯ ಆಲೂರು ಹಾಗೂ ಸಕಲೇಶಪುರ ಪಟ್ಟಣಗಳ ನೀರು ಸರಬರಾಜು ವ್ಯವಸ್ಥೆಯ ಸುಧಾರಣೆ ಹಾಗೂ 5 ವರ್ಷ ಕಾರ್ಯಚರಣೆ ಮತ್ತು ನಿರ್ವಹಣೆ ಕಾಮಗಾರಿಯ (ಡಿ.ಬಿ.ಒ.ಟಿ ಮುಖಾಂತರ)" ರೂ.9754.27 ಲಕ್ಷಗಳಿಗೆ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಇಂಡೆಂಟ್ ಸಂಖ್ಯೆ: KUWSDB/2023-24/WS/WORK_INDENT58 ರಲ್ಲಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಸಂಪರ್ಕಿಸುವುದು.
ಸಹಿ/– ಮುಖ್ಯ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಮೈಸೂರು
DIPR/DDMYS/KSMCA/469/2023-24

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ, ಗದಗ.
ಕಾರ್ಯನಿರ್ವಾಹಕ ಇಂಜಿನೀಯರ, ಪಂ.ರಾಜ್.ಇಂ. ವಿಭಾಗ, ಗದಗ.
ನಂ:ಪಂ.ರಾಜ್.ಇಂ.ವಿ/ಗದಗ/ಪಿಬಿ.2/ಟೆಂಡರ/2023–24/1156 ದಿನಾಂಕ: 05.10.2023

ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ

Standard Bid Document KW–1&2 [ಎಕಲಕೋಟಿ ಪದ್ಧತಿ]
ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ Standard Bid Document KW–1&2ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 20 ಕಾಮಗಾರಿಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: **2022–23ನೇ** ಸಾಲಿನ ಎಂ.ಜಿ.ಎನ್.ಆರ್.ಇ.ಜಿ.ಎ, ಸ್ವಚ್ಛ ಭಾರತ ಮಿಷನ್ ಹಾಗೂ 15ನೇ ಹಣಕಾಸು ಒಗ್ಗೂಡುವಿಕೆ ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಪಿ.ಡಬ್ಲು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತವೆ.

Indent Nos: RDPR/2023–24/WORK_INDENT : **601, 602, 606, 665, 666, 668, 674, 677, 680, 681, 682, 685, 691, 581, 586, 612, 614, 615, 622, 623**

ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. 18.72 ಲಕ್ಷ ಮತ್ತು ಗರಿಷ್ಠ ಮೊತ್ತ ರೂ. 34.42 ಲಕ್ಷಗಳು ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ:– ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 06–10–2023 ರಿಂದ 20–10–2023ರಂದು 16.00 ಗಂಟೆಯವರೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.10.2023 ರಂದು 16.30 ಗಂಟೆಗೆ ತೆರೆಯಲಾಗುವುದು. ಟೆಂಡರನ್ನು ಅನಾವರಣ ಗೊಳಿಸಿದ ದಿನಾಂಕದಿಂದ ಭಾಗವಹಿಸಿದ ಗುತ್ತಿಗೆದಾರರಲ್ಲಿ ಆರ್ಥಿಕ ಬಿಡ್‌ದಲ್ಲಿ ಅರ್ಹ ಗುತ್ತಿಗೆದಾರರು ಈ ಕಾರ್ಯಾಲಯಕ್ಕೆ ಹಾಜರಾಗಿ ವ್ಯತ್ಯಾಸದ ಮೊತ್ತ ಹಾಗೂ ಪಿ.ಎಸ್.ಡಿ. ಮೊತ್ತವನ್ನು ಎಫ್.ಡಿ.ಆರ್ ರೂಪದಲ್ಲಿ 20 ದಿನಗಳ ಒಳಗಾಗಿ (ಷರತ್ತು ಕ್ರ.ಸಂ :13 ರಂತೆ) ಭರಣಾ ಮಾಡಬೇಕು. ಇ–ಪದ್ಧತಿ ಇರುವುದರಿಂದ ಕಾಗದ ರಹಿತವಾಗಿದ್ದು ಯಾವುದೇ ಪತ್ರ ವ್ಯವವಹಾರಕ್ಕೆ ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ವಾ.ಸಾ.ಇ./ಗದಗ/225/2023–24/ದೇಶಪಾಂಡೆಪಬ್ಲಿಸಿಟಿ ಪಂ.ರಾಜ್.ಇಂಜಿನೀಯರಿಂಗ್ ವಿಭಾಗ, ಗದಗ.

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ, ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ. ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059. ದೂರವಾಣಿ: 080–28484515/28484518
ಅಧಿಸೂಚನೆ ಸಂಖ್ಯೆ: ಡಿಪಿಎಸ್20ಪಿಯುಆರ್(ಸಿ)2023–24/ಟಿಆರ್‌ಪಿ ದಿನಾಂಕ: 04.10.2023

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಮುದ್ರಿತ ಸಾಮಗ್ರಿಗಳು, ಲೇಖನ ಮತ್ತು ಉಗ್ರಾಣ ಸಾಮಗ್ರಿಗಳ ಸಾಗಾಣಿಕೆಗಾಗಿ ದರಗುತ್ತಿಗೆ ಆಧಾರದ ಮೇರೆಗೆ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 50.00** ಲಕ್ಷಗಳಾಗಿರುತ್ತದೆ ಹಾಗೂ ಇ.ಎಂ.ಡಿ.ಯು **ರೂ.2.50** ಲಕ್ಷಗಳಾಗಿರುತ್ತದೆ. ಟೆಂಡರ್‌ನ ಪೂರ್ವಭಾವಿ ಸಭೆಯು ದಿನಾಂಕ: **12–10–2023, ಬೆಳಿಗ್ಗೆ 11.30 ಕ್ಕೆ** ಹಾಗೂ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: **19–10–2023, 17.30 ಗಂಟೆಗಳು.** ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/–
ನಿರ್ದೇಶಕರು
ವಾಸಾಸಂಇ/ವಾ.ಪ್ರ/1590/ಎಂಎಎ/2023–24

ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು (ಅಭಿವೃದ್ಧಿ ಶಾಖೆ)
ದೂರವಾಣಿ ಸಂಖ್ಯೆ : 08262–220211, ಫ್ಯಾಕ್ಸ್ : 08262 220001
ಇ–ಮೇಲ್ : development.zp.ckm@gmail.com
File No:ZP/D4/e-Tender/E1/2023-24 Date: 05-10-2023

: Short term e-Tender:

TENDER NOTIFICATION
(Through e-procurement mode-Two Cover System)
Tender are invited in accordance with Karnataka Transparency in public procurement Act for reputed **Mysore Dasara-2023 Tablo** through kppp portal only for under Two Bidding systems,

Events of Tender

SLNo	Particulars	Details
1	Bid Reference No.	ZP/D4/e-Tender/E1/2023-24
2	Date of issue of Notification	05-10-2023
3	Last Date and Time to submit tender document	12-10-2023 at 5.00pm
4	Time and date of opening of technical bids	16-10-2023 at 10.30am
5	Time and date of opening of Financial Bids	16-10-2023 at 11.30am

1) The Institution there should be in Local District.
2) Tender notification is available at **www.kppp.karnataka.gov.in**
Further details can had from the below office
Deputy Secretary (Development), Zilla Panchayath, Jyothi Nagar, Chikkamagalur.
Sd/-
Deputy Secretary (Development), Zilla Panchayath,Chikkamagalur.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು–572 120 ತುಮಕೂರು ಜಿಲ್ಲೆ.
ಫೋನ್ ನಂ.0816–2957008 ಇ–ಮೇಲ್:
eehcidhebbur@gmail.com
ಸಂಖ್ಯೆ:02/2023–24 ದಿನಾಂಕ: 03.10.2023

ಅಲ್ಪಾವಧಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 05 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂ ರೇಟ್ ಆಧಾರದ ಮೇಲೆ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.eproc.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ, ಹೆಬ್ಬೂರು
DIPR/TUM/2247/KSMCA/2022-23

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ವಿಭಾಗ ಬೆಳಗಾವಿ.
ಸಂ: ವಾಕರಸಾ/ಕಾನಿಅ/ಬೆವಿ/ನಕ್ಷೆ/462 ರಿಂದ 464/2023–24 ದಿನಾಂಕ:05/10/2023

ಕೆ.ಪಿ.ಪಿ.ಪಿ ಪೋರ್ಟಲ್ ಟೆಂಡರ್ ಪ್ರಕಟಣೆ ಸಂ: 04 ರಿಂದ 06/2023–24
Through Gok Karnataka Public Procurement Portal www.kppp.karnataka.gov.in

ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ/ಕೇಂದ್ರ ಲೋಕೋಪಯೋಗಿ ಇಲಾಖೆ, ಎಂ.ಇ.ಎಸ್ ಗಳಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರಿಂದ Gok Karnataka Public Procurement Portal ಮುಖಾಂತರ ಟೆಂಡರ್ ಅಹ್ವಾನಿಸಲಾಗಿದೆ. ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ www.kppp.karnataka.gov.in ವೆಬ್‌ಸೈಟ್‌ಗೆ ಲಾಗ್‌ಆನ್ ಮಾಡಿ ಪಡೆದುಕೊಳ್ಳಬಹುದು.
ಕ್ರ.ಸಂ:1:ಟೆಂಡರ್ ಪ್ರಕಟಣೆ ಸಂಖ್ಯೆ:04:ಕಾಮಗಾರಿಯ ಹೆಸರು:ಚಿಕ್ಕೋಡಿ ವಿಭಾಗದ ಸಂಕೇಶ್ವರ, ನಿಪ್ಪಾಣಿ ಮತ್ತು ರಾಯಬಾಗ ಬಸ್ ಘಟಕಗಳಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಿಸುವುದು, ಟೆಂಡರ್ ಆಧಾರ:ದ್ವಿ ಲಕೋಟೆ, ಟೆಂಡರಿಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ):15=30,ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ):38,250=00, ಗುತ್ತಿಗೆದಾರರ ದರ್ಜೆ:ದರ್ಜೆ–II ಮತ್ತು ಮೇಲ್ಪಟ್ಟು, ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:21/10/2023, ಕ್ರ.ಸಂ:2:ಟೆಂಡರ್ ಪ್ರಕಟಣೆ ಸಂಖ್ಯೆ:05:ಕಾಮಗಾರಿಯ ಹೆಸರು:ಬೆಳಗಾವಿ ವಿಭಾಗದ ಬಸ್ ಘಟಕ–01, ಬಸ್ ಘಟಕ–02, ಬಸ್ ಘಟಕ–03, ಬಸ್ ಘಟಕ–04 ಮತ್ತು ಖಾನಾಪೂರ ಬಸ್ ಘಟಕಗಳಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಿಸುವುದು, ಟೆಂಡರ್ ಆಧಾರ:ದ್ವಿ ಲಕೋಟೆ, ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ):25=50, ಮುಂಗಡ ಠೇವಣಿ ಮೊತ್ತ(ರೂ.ಗಳಲ್ಲಿ):51,000=00, ಗುತ್ತಿಗೆದಾರರ ದರ್ಜೆ:ದರ್ಜೆ–I, ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:21/10/2023, ಕ್ರ.ಸಂ:3:ಟೆಂಡರ್ ಪ್ರಕಟಣೆ ಸಂಖ್ಯೆ:06:ಕಾಮಗಾರಿಯ ಹೆಸರು:ಬಾಗಲಕೋಟ ವಿಭಾಗದ ಬಾಗಲಕೋಟ, ಇಲಕಲ್, ಬಾದಾಮಿ, ಜಮಖಂಡಿ ಮತ್ತು ಮುಧೋಳ ಬಸ್ ಘಟಕಗಳಲ್ಲಿ ತ್ಯಾಜ್ಯ ನೀರು ಶುದ್ಧೀಕರಣ ಘಟಕ ನಿರ್ಮಿಸುವುದು, ಟೆಂಡರ್ ಆಧಾರ:ದ್ವಿ ಲಕೋಟೆ, ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ):25=50, ಮುಂಗಡ ಠೇವಣಿ ಮೊತ್ತ (ರೂ.ಗಳಲ್ಲಿ): 51,000=00, ಗುತ್ತಿಗೆದಾರರ ದರ್ಜೆ:ದರ್ಜೆ–I, ಭರ್ತಿಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:21/10/2023.
ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. 0831–2451475 ಗೆ ಸಂಪರ್ಕಿಸ ಬಹುದಾಗಿದೆ ಹಾಗೂ ಸಹಾಯವಾಣಿ (help desk) :+91-8046010000 and +91-8068948777 ಸಂಪರ್ಕಿಸಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ದಿನಾಂಕಗಳಲ್ಲಿನ ಮುಂದೂಡಿಕೆಗಳಿದ್ದಲ್ಲಿ Gok Karnataka Public Procurement Portal ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ವಾಕರಸಾ ಸಂಸ್ಥೆ, ಕಾಮಗಾರಿ ವಿಭಾಗ, ಬೆಳಗಾವಿ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಹಾನಿಕರವಾದದ್ದನ್ನು ಮಾಡಬೇಕೆಂದಾದರೆ ಮಾತ್ರ ನಿಮಗೆ ಅಧಿಕಾರ ಬೇಕು. ಇಲ್ಲವಾದರೆ, ಬೇರೆ ಯಾವುದೇ ಕೆಲಸ ಕಾರ್ಯಗತಗೊಳಿಸಲು ಪ್ರೀತಿಯಷ್ಟೇ ಸಾಕು.

–ಚಾರ್ಲಿ ಚಾಪ್ಲಿನ್

‘ನ್ಯೂಸ್ ಕ್ಲಿಕ್’ ಮೇಲೆ ದಾಳಿ ಮಾಧ್ಯಮ ಸ್ವಾತಂತ್ರ್ಯದ ದಮನ

ಸುದ್ದಿ ಪೋರ್ಟಲ್ ‘ನ್ಯೂಸ್ ಕ್ಲಿಕ್’ಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ಮಂಗಳವಾರ ಬೆಳಗಿನ ಜಾವ ಶೋಧ ನಡೆಸಲಾಗಿದೆ; ನ್ಯೂಸ್ ಕ್ಲಿಕ್‌ನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರನ್ನು ಬಂಧಿಸಲಾಗಿದೆ; ಪತ್ರಕರ್ತರೂ ಸೇರಿದಂತೆ ನ್ಯೂಸ್ ಕ್ಲಿಕ್‌ನ ಹಲವು ಸಿಬ್ಬಂದಿಯನ್ನು ಸುದೀರ್ಘ ಹೊತ್ತು ವಶದಲ್ಲಿ ಇರಿಸಿಕೊಂಡು ತನಿಖೆ ನಡೆಸಲಾಗಿದೆ. ಮಾಧ್ಯಮ ಸಂಸ್ಥೆಗಳ ಮೇಲೆ ಮುಗಿಬೀಳುವ ಪ್ರವೃತ್ತಿಗೆ ಇತ್ತೀಚಿನ ಸೇರ್ಪಡೆ ಇದು. ಅತ್ಯಂತ ಯೋಜಿತವಾಗಿ ಈ ಕಾರ್ಯಾಚರಣೆ ನಡೆದಿದೆ. ಪೋರ್ಟಲ್‌ನ ಪತ್ರಕರ್ತರು, ಸಿಬ್ಬಂದಿ ಮಾತ್ರವಲ್ಲದೆ ಈ ಸಂಸ್ಥೆಯ ಜೊತೆ ಸಣ್ಣ ಮಟ್ಟದ ಸಂಪರ್ಕ ಇರುವವರನ್ನೂ ಹಾಗೂ ಮಾನವ ಹಕ್ಕುಗಳ ಕಾರ್ಯಕರ್ತರನ್ನು ಗುರಿಯಾಗಿಸಲಾಗಿದೆ. ವಿದ್ಯುನ್ಮಾನ ಸಾಧನಗಳನ್ನು ವಶಕ್ಕೆ ಪಡೆಯಲಾಗಿದೆ. ಜಪ್ತಿ ಮಾಡಿರುವುದಕ್ಕೆ ಯಾವುದೇ ಮೆಮೊ ನೀಡಲಾಗಿಲ್ಲ ಮತ್ತು ಉಪಕರಣಗಳ ಮೌಲ್ಯ ಎಷ್ಟು ಎಂಬುದನ್ನೂ ನಮೂದಿಸಿಲ್ಲ ಎಂದು ಹೇಳಲಾಗಿದೆ. ಕಾನೂನುಬಾಹಿರ ಚಟುವಟಿಕೆ (ತಡೆ) ಕಾಯ್ದೆ (ಯುಎಪಿಎ) ಮತ್ತು ಭಾರತೀಯ ದಂಡ ಸಂಹಿತೆ ಅಡಿಯಲ್ಲಿ ಪ್ರಕರಣಗಳನ್ನು ದಾಖಲಿಸಲಾಗಿದೆ. ನ್ಯೂಸ್ ಕ್ಲಿಕ್ ಸಂಸ್ಥೆಗೆ ಸೇರಿದ ಸ್ಥಳಗಳಲ್ಲಿ 2021ರಲ್ಲಿ ಕೂಡ ಜಾರಿ ನಿರ್ದೇಶನಾಲಯ ಹಾಗೂ ಆದಾಯ ತೆರಿಗೆ ಅಧಿಕಾರಿಗಳು ಶೋಧ ನಡೆಸಿದ್ದರು. ಚೀನಾದಿಂದ ಹಣಕಾಸು ನೆರವು ಪಡೆದುಕೊಂಡು ‘ಭಾರತ ವಿರೋಧಿ ಅಭಿಯಾನ’ ನಡೆಸುತ್ತಿದೆ ಎಂಬ ಆರೋಪದ ಕುರಿತು ಈ ಸಂಸ್ಥೆಗಳು ತನಿಖೆ ನಡೆಸಿದ್ದವು.

ಮಾಧ್ಯಮ ಸಂಸ್ಥೆಗಳ ಮೇಲೆ ಮುಗಿಬೀಳುವ ಪ್ರವೃತ್ತಿಗೆ ಇತ್ತೀಚಿನ ಸೇರ್ಪಡೆ ಇದು

ಮಾಧ್ಯಮ ಸಂಸ್ಥೆಯೊಂದರ ಮೇಲೆ ಯುಎಪಿಎಯಂತಹ ಕಠಿಣ ಕಾನೂನನ್ನು ಇದೇ ಮೊದಲು ಬಳಸಲಾಗಿದೆ. ಸಂಪಾದಕರನ್ನು ಉಗ್ರಗಾಮಿ ಎಂದು ಆರೋಪಿಸಿ ಬಂಧಿಸಲಾಗಿದೆ. ಜಾರಿ ನಿರ್ದೇಶನಾಲಯದ ಆರ್ಥಿಕ ಅಪರಾಧಗಳ ವಿಭಾಗ ಮತ್ತು ಪೊಲೀಸ್ ಇಲಾಖೆಯು ಪೋರ್ಟಲ್ ವಿರುದ್ಧದ ಪ್ರಕರಣದ ತನಿಖೆ ನಡೆಸುತ್ತಿವೆ. ಅಮೆರಿಕದ ಕಂಪನಿಯೊಂದರಿಂದ ಕಾನೂನು ಉಲ್ಲಂಘಿಸಿ ವಿದೇಶಿ ನೇರ ಹೂಡಿಕೆ ಪಡೆದುಕೊಂಡ ಪ್ರಕರಣದಲ್ಲಿ 2021ರಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಿರ್ದಿಷ್ಟ ಆರೋಪಗಳು ಏನು ಮತ್ತು ತನಿಖೆಯಲ್ಲಿ ಏನು ತಿಳಿದುಬಂದಿದೆ ಎಂಬ ಮಾಹಿತಿ ಈಗಲೂ ಹೊರಗೆ ಬಂದಿಲ್ಲ. ಇಂತಹ ತನಿಖೆಗಳು ನಡೆಯುತ್ತಲೇ ಇರುತ್ತವೆ ಮತ್ತು ಮಾಧ್ಯಮ ಹಾಗೂ ಪತ್ರಕರ್ತ ಸಮುದಾಯವೂ ಸೇರಿದಂತೆ ಸರ್ಕಾರದ ಟೀಕಾಕಾರರಿಗೆ ಕಿರುಕುಳ ನೀಡುವುದಕ್ಕಾಗಿ ಇಂತಹ ತನಿಖೆಗಳನ್ನು ಬಳಸಿಕೊಳ್ಳಲಾಗುತ್ತಿದೆ. 2021ರಲ್ಲಿ ನಡೆದ ರೈತರ ಪ್ರತಿಭಟನೆ, ದೆಹಲಿ ಗಲಭೆ, ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧದ ಪ್ರತಿಭಟನೆ ಸುದ್ದಿಗಳ ಪ್ರಕಟಣೆಗೆ ಸಂಬಂಧಿಸಿ ಪೋರ್ಟಲ್‌ನ ಹಲವು ಪತ್ರಕರ್ತರನ್ನು ಪ್ರಶ್ನಿಸಲಾಗಿದೆ. ಈ ಪತ್ರಕರ್ತರ ಹಿನ್ನೆಲೆ, ಕುಟುಂಬದ ವಿವರಗಳು, ಉದ್ಯೋಗದ ವಿವರಗಳು ಮತ್ತು ಇತರ ವೈಯಕ್ತಿಕ ಮಾಹಿತಿಯನ್ನೂ ಪಡೆದುಕೊಳ್ಳಲಾಗಿದೆ.

ಸಮರ್ಪಕ ಪ್ರಕ್ರಿಯೆ ಅನುಸರಿಸಿ ತನಿಖೆ ನಡೆಸಲಾಗಿಲ್ಲ. ಆರೋಪಗಳೆಲ್ಲವೂ ಪೊಲೀಸರು ಹೇಳಿದ ‘ಅಂತೆ-ಕಂತೆ’ಗಳೇ ಆಗಿವೆ. ಅಕ್ರಮಗಳು ನಡೆದಿದ್ದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲೇಬೇಕು. ಆದರೆ, ಅದಕ್ಕೆ ಸಂಬಂಧಿಸಿದ ಎಲ್ಲ ಮಾಹಿತಿಯೂ ಬಹಿರಂಗಗೊಳ್ಳಬೇಕು. ಏಕೆಂದರೆ, ಮಾಧ್ಯಮ ಸಂಸ್ಥೆಗಳು ಎಂದರೆ ಅವು ಸಾರ್ವಜನಿಕ ಸಂಸ್ಥೆಗಳೇ ಆಗಿವೆ. ಇಲ್ಲದೇಹೋದರೆ, ಸರ್ಕಾರವನ್ನು ನ್ಯೂಸ್ ಕ್ಲಿಕ್ ಪೋರ್ಟಲ್ ಟೀಕಿಸಿತ್ತು, ಇದಕ್ಕಾಗಿ ಸರ್ಕಾರವು ದ್ವೇಷ ಸಾಧಿಸುತ್ತಿದೆ ಎಂದೇ ಭಾವಿಸಬೇಕಾಗುತ್ತದೆ. ಇಂತಹ ಕ್ರಮಗಳನ್ನು ಸರ್ಕಾರ ನಿರಂತರವಾಗಿ ಕೈಗೊಂಡಿದೆ. ಮಾಧ್ಯಮವನ್ನು ದಮನ ಮಾಡಲು, ಮಾಧ್ಯಮ ಸ್ವಾತಂತ್ರ್ಯವನ್ನು ಹತ್ತಿಕ್ಕಲು, ಭಿನ್ನಾಭಿಪ್ರಾಯವನ್ನು ಹಣಿಯಲು ಇಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರದ ಕುರಿತಾದ ಸತ್ಯಗಳನ್ನು ಬಹಿರಂಗವಾಗಿ ಹೇಳಿದವರ ಮೇಲೆಯೂ ಇವೇ ಕ್ರಮಗಳನ್ನು ಕೈಗೊಳ್ಳಲಾಗಿದೆ. ಮಾಧ್ಯಮ ಸ್ವಾತಂತ್ರ್ಯದ ತಳಹದಿಯಾಗಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾಪ್ರಭುತ್ವದ ತಿರುಳು ಕೂಡ ಹೌದು. ಸರ್ಕಾರದ ಮಾತಿನಂತೆ ನಡೆದು-ಕೊಳ್ಳಬೇಕು ಮತ್ತು ಸರ್ಕಾರವನ್ನು ಬೆಂಬಲಿಸಬೇಕು ಎಂದು ಮಾಧ್ಯಮವೂ ಸೇರಿದಂತೆ ಪ್ರಜಾಸತ್ತಾ-ತ್ಮಕ ಸಂಸ್ಥೆಗಳ ಮೇಲೆ ನಿರಂತರ ಒತ್ತಡ ಹೇರಿದರೆ, ಟೀಕಾಕಾರರಿಗೆ ಕಿರುಕುಳ ನೀಡಿದರೆ ಭಾರತವು ಪ್ರಜಾಪ್ರಭುತ್ವದ ತಾಯಿ ಎಂದು ನಾವು ಕರೆದುಕೊಳ್ಳುವುದು ಅರ್ಥಹೀನ ಮತ್ತು ವಿರೋಧಾಭಾಸಕರ ಎನಿಸಿಕೊಳ್ಳುತ್ತದೆ.

ದಿನದ ಟ್ವೀಟ್

ಕಳೆದುಹೋಗುತ್ತಿದೆಯೇ ಸಂವೇದನೆ?

ತಂದೆ–ತಾಯಿ ವೈದ್ಯಕೀಯ ಸಲಹೆ ಪಡೆಯಲು ಹದಿಹರೆಯದ ಮಕ್ಕಳೊಂದಿಗೆ ಬಂದಾಗ ನಾನು ಒಂದು ಬಗೆಯ ನಮೂನೆಯನ್ನು ಗಮನಿಸಿದ್ದೇನೆ. ತಂದೆತಾಯಿಯ ಅನಾರೋಗ್ಯದ ಬಗ್ಗೆ ಆಸಕ್ತಿಯನ್ನೇ ಹೊಂದಿರದ ಮಕ್ಕಳು ಫೋನ್‌ನಲ್ಲಿ ಮುಳುಗಿ ಹೋಗಿರುತ್ತಾರೆ. ಅಂಥದ್ದೇ ಒಂದು ಕೆಟ್ಟ ಪ್ರಕರಣದಲ್ಲಿ, ತಂದೆಯೊಂದಿಗೆ ಆತ ಹೊಂದಿರಬಹುದಾದ ಥೈರಾಯಿಡ್ ಸಮಸ್ಯೆಯ ಬಗ್ಗೆ ಮಾತ-ನಾಡುತ್ತಿದ್ದೆ. ಮಗ ಅದರ ಪರಿವೆಯೇ ಇಲ್ಲದೆ ತನ್ನ ಫೋನ್ ಸ್ಕ್ರಾಲ್ ಮಾಡುವುದರಲ್ಲಿ ಮಗ್ನನಾಗಿದ್ದ. ನನ್ನನ್ನು ನೀವು ಹಳೆಯ ಕಾಲದವನೆಂದು ಹೇಳಿದರೂ ಪರವಾಗಿಲ್ಲ, ಆ ತಂದೆಯ ಬಗ್ಗೆ ಅಯ್ಯೋ ಎನಿಸಿತು. ಹಲವರಿಗೆ ಕುಟುಂಬಗಳು ಇರುತ್ತವಾದರೂ ವಾಸ್ತವದಲ್ಲಿ ಅವರು ಅನಾಥರಂತೆಯೇ ಇರುತ್ತಾರೆ.

ಕಾರ್ತಿಕ್ ಬಾಲಚಂದ್ರನ್, ಎಂಡೊಕ್ರೈನಾಲಜಿಸ್ಟ್

ಕಿಡಿನುಡಿ

ರೇಡ್ ರಾಜ್! ಮತ್ತೊಂದು ದಿನ, ಇನ್ನಷ್ಟು ದಾಳಿಗಳು, ಎಲ್ಲವೂ ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳಲ್ಲಿ. ಪಶ್ಚಿಮ ಬಂಗಾಳದ ಸಚಿವರ ಮನೆ ಮೇಲೆ ಇ.ಡಿ. (ಜಾರಿ ನಿರ್ದೇಶನಾಲಯ) ದಾಳಿ; ತಮಿಳುನಾಡಿನ ಡಿಎಂಕೆ ನಾಯಕ ಹಾಗೂ ತೆಲಂಗಾಣದ ಬಿಆರ್‌ಎಸ್ ನಾಯಕನ ಮನೆಗಳ ಮೇಲೆ ಐ.ಟಿ. ದಾಳಿ; ಕರ್ನಾಟಕದ ಶಿವಮೊಗ್ಗದಲ್ಲಿ ಇ.ಡಿ. ದಾಳಿ. ಬಿಜೆಪಿ ಆಡಳಿತವಿರುವ ರಾಜ್ಯಗಳಿಂದ ಇಂತಹ ಯಾವ ಪ್ರಕರಣಗಳೂ ವರದಿಯಾಗುವುದಿಲ್ಲ; ಅಲ್ಲಿ ಯಾವ ಭ್ರಷ್ಟಾಚಾರವೂ ಕಾನೂನು ಜಾರಿ ಸಂಸ್ಥೆಗಳ ಕಣ್ಣಿಗೆ ಬಿದ್ದಿಲ್ಲ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 6-10-1998

• **ತೃತೀಯ ರಾಜಕೀಯ ರಂಗಕ್ಕೆ ಸಿಪಿಎಂ ಒಲವು**

ಇಎಂಎಸ್ ನಗರ (ಕಲ್ಕತ್ತ) ಅ. 5 (ಯುಎನ್‌ಐ, ಪಿಟಿಐ)– ಭಾರತೀಯ ಜನತಾ ಪಕ್ಷವನ್ನು ಮೂಲೆಗುಂಪು ಮಾಡಲು ಪ್ರಜಾಸತ್ತಾತ್ಮಕ ಹಾಗೂ ಎಡಪಕ್ಷಗಳನ್ನು ಒಳಗೊಂಡ ತೃತೀಯ ಪರ್ಯಾಯ ಶಕ್ತಿ ಕಟ್ಟುವ ಯತ್ನವನ್ನು ಮುಂದುವರಿಸಬೇಕೆಂಬ ಕರೆಯೊಂದಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16ನೇ ಸಮ್ಮೇಳನ ಇಂದು ಇಲ್ಲಿ ಆರಂಭವಾಯಿತು.

ಸಮ್ಮೇಳನದ ಉದ್ಘಾಟನಾ ಅಧಿವೇಶನದಲ್ಲಿ ರಾಜಕೀಯ ನಿರ್ಣಯದ ಕರಡನ್ನು ಮಂಡಿಸಿದ ಸಿಪಿಎಂ ಪ್ರಧಾನ ಕಾರ್ಯದರ್ಶಿ ಹರ್‌ಕಿಷನ್ ಸಿಂಗ್ ಸುರ್ಜಿತ್ ಅವರು, ಬಿಜೆಪಿ, ಆರ್‌ಎಸ್‌ಎಸ್ ನಡುವಣ ಸಂಬಂಧ ಹಾಗೂ ಅದರ ನೀತಿ- ಸಿದ್ಧಾಂತ ದೇಶಕ್ಕೆ ಅಪಾಯಕಾರಿ ಎಂದು ಟೀಕಿಸಿದರು.

ಬಿಜೆಪಿ ಅಧಿಕಾರಕ್ಕೆ ಬರುವುದರೊಂದಿಗೆ ಬಲಿಷ್ಠಗೊಂಡಿರುವ ಮತೀಯ ಶಕ್ತಿಗಳ ವಿರುದ್ಧದ ಹೋರಾಟಕ್ಕೆ ಎಡ ಹಾಗೂ ಪ್ರಜಾ-ಸತ್ತಾತ್ಮಕ ಶಕ್ತಿಗಳನ್ನು ಅಣಿಗೊಳಿಸಬೇಕಾಗಿದೆ. ಹಾಗೆಯೇ, ಆರ್ಥಿಕ ಉದಾರೀಕರಣದ ವಿರುದ್ಧವೂ ಚಳವಳಿ ಮುಂದುವರಿಸಬೇಕಿದೆ ಎಂದು ಸುರ್ಜಿತ್ ಹೇಳಿದರು.

• **ವಿಧಾನಸಭೆ ವಿಸರ್ಜನೆ ಬೆದರಿಕೆ**

ಬೆಂಗಳೂರು, ಅ. 5–‘ನಮ್ಮ ಪಕ್ಷದ ಶಾಸಕರಿಗೆ ಮಧ್ಯಂತರ ಚುನಾವಣೆ ನಡೆಯಬೇಕು ಅಥವಾ ರಾಷ್ಟ್ರಪತಿ ಆಡಳಿತ ಜಾರಿಗೆ ಬರಬೇಕೆಂಬ ಅಪೇಕ್ಷೆ ಇದ್ದರೆ, ನನ್ನದೇನೂ ಅಭ್ಯಂತರ ಇಲ್ಲ’ ಎಂದು ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಇಲ್ಲಿ ವಿಷಾದದಿಂದ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಶನಿವಾರ ಜನತಾದಳದ ಕೆಲವು ಶಾಸಕರು ಸಭೆ ನಡೆಸಿ ಸರ್ಕಾರದ ಕಾರ್ಯವೈಖರಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ನಾಯಕತ್ವದ ಬದಲಾವಣೆಯಾಗಬೇಕೆಂಬ ಅರ್ಥದಲ್ಲಿ ಮಾತನಾಡಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿರುವ ಬಗ್ಗೆ ಮುಖ್ಯಮಂತ್ರಿ ತಮ್ಮನ್ನು ಭೇಟಿ ಮಾಡಿದ ಪಕ್ಷದ ಕೆಲವು ಶಾಸಕರು, ನಾಯಕರ ಮುಂದೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಸರ್ಕಾರದ ಕಾರ್ಯವೈಖರಿ ಬಗ್ಗೆ ಅಥವಾ ರಾಜಕೀಯವಾಗಿ ವಿರೋಧ ಪಕ್ಷಗಳು ನಮ್ಮ ಸರ್ಕಾರಕ್ಕೆ ಸವಾಲು ಹಾಕಿದರೆ ನಾನು ಅದನ್ನು ವಿಧಾನಸಭೆಯಲ್ಲೇ ಸಮರ್ಪಕವಾಗಿ ಎದುರಿಸಲು ಸಿದ್ಧನಿದ್ದೇನೆ. ಆದರೆ, ನಮ್ಮ ಪಕ್ಷದವರೇ ಆಗಾಗ್ಗೆ ಸಭೆ ಸೇರಿ ನಾಯಕತ್ವ ಬದಲಾವಣೆ ಆಗಬೇಕೆಂದು ಒತ್ತಾಯಿಸುತ್ತಾ ಕಿರಿಕಿರಿ ಮಾಡುತ್ತಿರುವುದಕ್ಕೆ ಕೊನೆ ಎಲ್ಲಿ ಎಂದು ಮುಖ್ಯಮಂತ್ರಿ ಪ್ರಶ್ನಿಸಿದರು ಎಂದು ಹೇಳಲಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವ ಎಂ.ಪಿ. ಪ್ರಕಾಶ್ ಮತ್ತು ಕೇಂದ್ರದ ಮಾಜಿ ಸಚಿವ ಎಸ್.ಆರ್. ಬೊಮ್ಮಾಯಿ ಅವರನ್ನು ಪಟೇಲ್ ಅವರ ವಿರುದ್ಧ ಎತ್ತಿಕಟ್ಟಲು ಶಾಸಕರ ಒಂದು ಗುಂಪು ಈ ರೀತಿಯ ಹತಾಶ ಪ್ರಯತ್ನ ನಡೆಸುತ್ತಿದೆ ಎಂದು ಕೆಲವರು ಹೇಳಿದಾಗ, ‘ಈ ರೀತಿಯ ತಂತ್ರ ನನ್ನ ಮುಂದೆ ನಡೆಯುವುದಿಲ್ಲ’ ಎಂದು ಮುಖ್ಯಮಂತ್ರಿ ಖಾರವಾಗಿಯೇ ಹೇಳಿದರು ಎಂದು ಹೇಳಲಾಗಿದೆ.

• **ಮುಖ್ಯಮಂತ್ರಿ ಆಸ್ಪತ್ರೆಗೆ ದಾಖಲು**

ಬೆಂಗಳೂರು ಅ. 5– ಹರ್ನಿಯಾ ಶಸ್ತ್ರ ಚಿಕಿತ್ಸೆಗಾಗಿ ಮುಖ್ಯಮಂತ್ರಿ ಜೆ. ಎಚ್. ಪಟೇಲ್ ಅವರು ಇಂದು ಇಲ್ಲಿ ಆಸ್ಪತ್ರೆಗೆ ದಾಖಲಾದರು.

ಅಧಿಕಾರಿಗಳ ಸ್ಥಾನಗಳಿಗೆ ಬಳಸುವ ‘ಆಯಕಟ್ಟಿನ’ ಪದ ಬಹಳ ‘ಅರ್ಥ’ಪೂರ್ಣವಾಗಿದೆ!

ಅಧಿಕಾರಿಗಳಿಗೆ ‘ಆಯಕಟ್ಟಿನ’ ಸ್ಥಳ ಏಕೆ?

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಕಾಂಗ್ರೆಸ್ ಪಕ್ಷದ ಅತ್ಯಂತ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ನೀಡಿರುವ, ‘ಈ ಸರ್ಕಾರದಲ್ಲಿ ಲಿಂಗಾಯತ ಅಧಿಕಾರಿಗಳದ್ದು ನಾಯಿಪಾಡು’ ಎಂಬ ಹೇಳಿಕೆಯಿಂದ ರಾಜಕೀಯ–ಸಾಮಾಜಿಕ ವಿವಾದ ಮಾತ್ರ ಸೃಷ್ಟಿಯಾಗಿಲ್ಲ; ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಹಲವು ಬಹಿರಂಗ ರಹಸ್ಯಗಳ ಅವಲೋಕನಕ್ಕೆ ಆಸ್ಪದವಾಗಿದೆ. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷರೂ ಆದ ಶಿವಶಂಕರಪ್ಪ ಅವರ ಹೇಳಿಕೆಯ ಮೂಲದಲ್ಲಿ ಎರಡು ಪ್ರಮುಖ ಅಂಶಗಳು ಅಡಕವಾಗಿವೆ. ಮೊದಲನೆಯದು, ವರ್ತಮಾನದ ಕೊರಗು ಮತ್ತು ಎರಡನೆಯದು, ಭೂತಕಾಲದ ವೈಭವ.

‘ಯಾರೇ ಮುಖ್ಯಮಂತ್ರಿಯಾದರೂ ಅವರ ಸಮುದಾಯದ ಅಧಿಕಾರಿಗಳಿಗೆ ಒಳ್ಳೆಯ ಸ್ಥಾನ ಕೊಡುತ್ತಾರೆ. ಈಗಿನ ಸರ್ಕಾರದಲ್ಲಿ ವೀರಶೈವ ಲಿಂಗಾಯತ ಅಧಿಕಾರಿಗಳಿಗೆ ಅಂತಹ ‘ಒಳ್ಳೆಯ’ ಸ್ಥಾನಗಳು ಸಿಗುತ್ತಿಲ್ಲ’ ಎಂಬ ಅವರ ಅಸಹನೆಯಲ್ಲಿ ವರ್ತಮಾನದ ಕೊರಗನ್ನು ಗುರುತಿಸಬಹುದು. ಹಾಗೆಯೇ, ‘ಎಸ್.ನಿಜಲಿಂಗಪ್ಪ ಅವರಿಂದ ಹಿಡಿದು ಬಸವರಾಜ ಬೊಮ್ಮಾಯಿವರೆಗೆ ನಮ್ಮ ಸಮುದಾಯದ ಮುಖ್ಯಮಂತ್ರಿಗಳು ಇದ್ದಾಗ ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ‘ಆಯಕಟ್ಟಿನ’ ಸ್ಥಾನಗಳು ಇರುತ್ತಿದ್ದವು’ ಎಂಬ ಅವರ ವಿವರಣೆಯಲ್ಲಿ ಗತವೈಭವ ಹೊಳೆಯುತ್ತದೆ.

ಶಿವಶಂಕರಪ್ಪನವರು ಅಧಿಕಾರಿಗಳ ಸ್ಥಾನಗಳಿಗೆ ಸಂಬಂಧಿಸಿದಂತೆ ಬಳಸಿದ ‘ಒಳ್ಳೆಯ’ ಮತ್ತು ‘ಆಯಕಟ್ಟಿನ’ ಪದಗಳು ಬಹಳ ‘ಅರ್ಥ’ಪೂರ್ಣವಾಗಿವೆ. ಅಧಿಕಾರಿಗಳ ವಲಯದಲ್ಲಿ ಆಯಕಟ್ಟಿನ ಸ್ಥಾನಬಲದಿಂದ ಪ್ರಾಮಾಣಿಕವಾಗಿ, ಜನಪರವಾಗಿ, ದಕ್ಷವಾಗಿ ಸೇವೆ ಸಲ್ಲಿಸುವ ಮನಸ್ಸುಗಳು ಇಲ್ಲವಾಗಿ ಬಹಳ ಕಾಲವಾಗಿದೆ. ಈಗೇನಿದ್ದರೂ ದಂಡಿಯಾಗಿ ಕಬಳಿಕೆಗೆ ಅನುಕೂಲ ಕಲ್ಪಿಸುವ ಸ್ಥಾನಗಳನ್ನೇ ಆಯಕಟ್ಟಿನವು ಎಂದು ಪರಿಗಣಿಸಲಾಗುವುದು. ಅನ್ಯ ಮಾರ್ಗಗಳಿಂದ ಹಣ ಹುಟ್ಟಿಸುವ ಸಾಮರ್ಥ್ಯವನ್ನೇ ದಕ್ಷತೆ ಎಂದು ಕರೆಯುವ ಕಾಲವನ್ನು ನಾವು ಪ್ರವೇಶಿಸಿಯಾಗಿದೆ.

ಶಿವಶಂಕರಪ್ಪನವರು ಕಳಕಳಿ ತೋರುತ್ತಿರುವ ಅಧಿಕಾರಿಗಳು ಸಹ ಸಾಮಾನ್ಯ ವರ್ಗದವರೇನಲ್ಲ. ಅವರು ಐಎಎಸ್, ಐಪಿಎಸ್, ಕೆಎಎಸ್ ದರ್ಜೆಯ ಉನ್ನತ ಅಧಿಕಾರಿಗಳು. ಅಧಿಕಾರಿಗಳನ್ನು ಆಯಕಟ್ಟಿನ ಸ್ಥಾನಗಳಿಗೆ ನಿಯೋಜಿಸುವ ಮೂಲಕ ಲಭಿಸುವ ಆದಾಯ ಮತ್ತು ಅಧಿಕಾರದಲ್ಲಿ ಅವರನ್ನು ರಕ್ಷಿಸುವ ಜನಪ್ರತಿ-ನಿಧಿಗಳ ಪಾಲು ಪೂರ್ವನಿಗದಿತವಾಗಿರುತ್ತದೆ ಎಂದು ಪ್ರತ್ಯೇಕವಾಗಿ ಉಲ್ಲೇಖಿಸುವ ಅಗತ್ಯವಿಲ್ಲ. ಉಳಿದಂತೆ ಈ ಆಯಕಟ್ಟಿನ ಸ್ಥಳ ಮಹಿಮೆಯು ರಾಜಕಾರಣಿಗಳ ಪಾಲಿಗೆ ವರದಾನವಾಗುವ ವಿಶೇಷ ಸಂದರ್ಭಗಳೆಂದರೆ ಚುನಾವಣೆ ಮತ್ತು ಸ್ಥಳೀಯ ಬಿಕ್ಕಟ್ಟುಗಳ ಸಮಯ. ಆಗ ಆಯಕಟ್ಟಿನ ಸ್ಥಾನಗಳಲ್ಲಿ ಆಸೀನರಾದ ಅಧಿಕಾರಿಗಳು ತಮ್ಮ ರಕ್ಷಕರಿಗೆ ಲಾಭದಾಯಕವಾಗುವಂತೆ ಪರಿಸ್ಥಿತಿಯನ್ನು ನಿಭಾಯಿಸುವ ಮೂಲಕ ಋಣಭಾರ ಇಳಿಸಿಕೊಳ್ಳುತ್ತಾರೆ.

ಸರ್ಕಾರ ನಡೆಸುವವರು ಆಯಕಟ್ಟಿನ ಸ್ಥಳಗಳಿಗೆ ಅಧಿಕಾರಿಗಳನ್ನು ನಿಯೋಜನೆ ಮಾಡುವಾಗ ತಮ್ಮ ಸಮುದಾಯಗಳಿಗೆ ಆದ್ಯತೆ ನೀಡುತ್ತಾರೆ ಎಂಬ ಶಿವಶಂಕರಪ್ಪನವರ ಹೇಳಿಕೆಯಲ್ಲಿ ಕೂಡ ಅರ್ಧಸತ್ಯ ಮಾತ್ರವಿದೆ. ಇನ್ನರ್ಧ ಸತ್ಯ ಆಯಾ ಸ್ಥಾನಗಳಿಗೆ ನಿಗದಿಯಾಗಿರುವ ‘ಬೆಲೆ’ಯನ್ನು ಅವಲಂಬಿಸಿರುತ್ತದೆ ಎಂಬುದರಲ್ಲಿ ಅಡಗಿರುತ್ತದೆ. ಇತ್ತೀಚೆಗೆ ಭೇಟಿಯಾಗಿದ್ದ, ಆಯಕಟ್ಟಿನ ಸ್ಥಾನದ ಕನಸನ್ನು ಕಾಣಲೂ ಸಾಧ್ಯವಿಲ್ಲದ ಅಪ್ಪಟ ಪ್ರಾಮಾಣಿಕ ಅಧಿಕಾರಿಯೊಬ್ಬರು ಹೇಳಿದ ಹೊಸ ಬೆಳವಣಿಗೆ ಕೇಳಿದರೆ ಯಾರಾದರೂ ಬೆಚ್ಚಿಬೀಳಬೇಕು. ಅದು ಹೀಗಿದೆ:

ಕೆಲವು ಆಯ್ದ ಆಯಕಟ್ಟಿನ ಸ್ಥಾನಗಳ ಆಕಾಂಕ್ಷಿ ಅಧಿಕಾರಿಗಳು ತಾವೇ ‘ಸ್ಥಾನಬೆಲೆ’ ಸಂದಾಯ ಮಾಡುವ ಅಗತ್ಯವಿಲ್ಲವಂತೆ. ಅಗತ್ಯವಿರುವ ಬಂಡವಾಳ ಹೂಡುವ ಮಧ್ಯವರ್ತಿಗಳೇ ಹುಟ್ಟಿಕೊಂಡಿದ್ದಾರೆ. ಒಂದು ನಿರ್ದಿಷ್ಟ ಸ್ಥಾನಕ್ಕೆ ನಿಗದಿಯಾಗಿರುವ ಮೊತ್ತವನ್ನು ಅಧಿಕಾರಿ ಪರವಾಗಿ ಹೂಡಿಕೆ ಮಾಡುವ ಈ ಹೊಸ ವರ್ಗದವರು ಅಧಿಕಾರಿಯ ವ್ಯಾಪ್ತಿಯಲ್ಲಿನ ಎಲ್ಲಾ ಆದಾಯ ಮೂಲಗಳನ್ನು ತಾವೇ ನಿರ್ವಹಿಸಿ ಅದರಲ್ಲಿ ಸಣ್ಣ ಪಾಲನ್ನು ಅಧಿಕಾರಿಗೂ ಕೊಡುತ್ತಾರೆ. ಅಧಿಕಾರಿಗಳ ಆಯಕಟ್ಟಿನ ಸ್ಥಾನಗಳಿಗೆ ಸಂಬಂಧಿಸಿದಂತೆ ಎಷ್ಟೊಂದು ಆಕರ್ಷಣೆ, ಬದಲಾವಣೆ, ಬೆಳವಣಿಗೆ!

ಅಧಿಕಾರಿಗಳ ಆಯಕಟ್ಟಿನ ಸ್ಥಾನ‘ಮಾನ’ ಹೀಗಿರುವಾಗ ಶಾಮನೂರು ಶಿವಶಂಕರಪ್ಪನವರು ‘ಎಸ್.ನಿಜಲಿಂಗಪ್ಪ ಅವರಿಂದ ಹಿಡಿದು ಬಸವರಾಜ ಬೊಮ್ಮಾಯಿವರೆಗೆ ನಮ್ಮ ಸಮುದಾಯದ ಮುಖ್ಯಮಂತ್ರಿಗಳು ಇದ್ದಾಗ ವೀರಶೈವ ಲಿಂಗಾಯತ ಸಮುದಾಯದ ಅಧಿಕಾರಿಗಳಿಗೆ ‘ಆಯಕಟ್ಟಿನ’ ಸ್ಥಾನಗಳು ಇರುತ್ತಿದ್ದವು’ ಎಂದು ಹೇಳುವಾಗ ತಮ್ಮ ಸಮಾಜದ ಮಾಜಿ ಮುಖ್ಯಮಂತ್ರಿಗಳಿಗೆ ಮತ್ತು ಆಗಿನ ಸರ್ಕಾರಗಳಿಗೆ ಮಾಡುತ್ತಿರುವ ಅವಮಾನ ಮತ್ತು ಹಾನಿಯ ಅರಿವು ಅವರಿಗೆ ಇದ್ದಂತಿಲ್ಲ! ಅವರು ಸಾರಾಸಗಟಾಗಿ ತಮ್ಮ ಸಮುದಾಯದಿಂದ ಆಗಿಹೋದ ಎಲ್ಲಾ ಮುಖ್ಯಮಂತ್ರಿ-ಗಳನ್ನು, ಅದರಲ್ಲೂ ವೀರೇಂದ್ರ ಪಾಟೀಲರನ್ನು ಒಂದೇ ಸರಣಿಯಲ್ಲಿ ಸೇರಿಸಿರುವುದು ಮತ್ತಷ್ಟು ಅನಾಹುತಕಾರಿ.

ನಿವೃತ್ತ ಐಎಎಸ್ ಅಧಿಕಾರಿ ವಿ.ಬಾಲಸುಬ್ರಮಣಿಯನ್ ಲಿಂಗಸುಗೂರಿನಲ್ಲಿ ಅಸಿಸ್ಟೆಂಟ್ ಕಮಿಷನರ್ ಆಗಿದ್ದಾಗ, ವೀರೇಂದ್ರ ಪಾಟೀಲರ ನೇತೃತ್ವದ ಆಗಿನ ಮಂತ್ರಿಮಂಡಲದಲ್ಲಿ ಸಂಪುಟ ದರ್ಜೆ ಸಚಿವೆಯಾಗಿದ್ದ ಲಿಂಗಾಯತ



ಸಮುದಾಯದ ಬಸವರಾಜೇಶ್ವರಿ ಅವರಿಗೆ ಸೇರಿದ ಟ್ರ್ಯಾಕ್ಟರುಗಳನ್ನು ಜಪ್ತಿ ಮಾಡುತ್ತಾರೆ. ಎಷ್ಟೇ ಒತ್ತಡ ಇದ್ದರೂ ಪ್ರಾಮಾಣಿಕ ಅಧಿಕಾರಿಯನ್ನು ವರ್ಗಾಯಿಸಲು ಮುಖ್ಯಮಂತ್ರಿ ಒಪ್ಪುವುದಿಲ್ಲ. ಬಾಲಸುಬ್ರಮಣಿಯನ್ ಅವರೇ ಈ ಪ್ರಸಂಗವನ್ನು ತಮ್ಮ ಆತ್ಮಚರಿತ್ರೆ ‘ಕಲ್ಯಾಣ ಕೆಡುವ ಹಾದಿ’ ಕೃತಿಯಲ್ಲಿ ಉಲ್ಲೇಖಿಸಿ ಅಲ್ಲಿಂದಲೇ ಆಡಳಿತ ವ್ಯವಸ್ಥೆಯ ಪತನವನ್ನು ಗುರುತಿಸಿದ್ದಾರೆ.

ಮುಖ್ಯಮಂತ್ರಿಗಳಾದವರು ತಮ್ಮ ಸಮುದಾಯದ ಅಧಿಕಾರಿಗಳಿಗೆ ಒಳ್ಳೆಯ ಸ್ಥಾನಗಳನ್ನು ಕೊಡುತ್ತಾರೆ ಮತ್ತು ಈಗಿನ ಸರ್ಕಾರದಲ್ಲಿ ಲಿಂಗಾಯತರಿಗೆ ಅವಕಾಶಗಳಿಲ್ಲ ಎಂಬ ಶಿವಶಂಕರಪ್ಪ ಅವರ ಮಾತಿನಲ್ಲಿ ಹೊರನೋಟಕ್ಕೆ ತೋರುವಂತೆ ವೈರುಧ್ಯವಿಲ್ಲ. ಲಿಂಗಾಯತ ಮುಖ್ಯಮಂತ್ರಿಯ ಇಂಗಿತ ಸ್ಪಷ್ಟವಾಗಿದೆ! ಇದಕ್ಕೆ ಪೂರಕವಾಗಿ ಎಂಬಂತೆ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಅರವಿಂದ ಬೆಲ್ಲದ, ವಿಜಯೇಂದ್ರ ಪಕ್ಷಭೇದವಿಲ್ಲದೆ ತಮ್ಮ ಸಮುದಾಯದ ನಾಯಕನ ಬೆಂಬಲಕ್ಕೆ ನಿಂತಿದ್ದಾರೆ.

ಶಿವಶಂಕರಪ್ಪನವರು ಮುಂದುವರಿದು, ‘ನಾವು ಒಗ್ಗಟ್ಟಾಗಿ ಇಲ್ಲದ ಕಾರಣ ಅನ್ಯಾಯಕ್ಕೆ ಒಳಗಾಗುತ್ತಿದ್ದೇವೆ. ಉಪಪಂಗಡಗಳೆಲ್ಲಾ ಒಂದಾಗಬೇಕು’ ಎಂದೂ ಕರೆ ಕೊಟ್ಟಿದ್ದಾರೆ. ಹಾಗೆ ನೋಡಿದರೆ ಲಿಂಗಾಯತ ಧರ್ಮವೇ ವಿವಿಧ ಕಸುಬು ಹಿನ್ನೆಲೆಯ ಹಲವಾರು ಉಪಜಾತಿಗಳ ಬಹುದೊಡ್ಡ ಸಮೂಹ. ಆದರೆ ಮುನ್ನೆಲೆಯಲ್ಲಿ ಆದ್ಯತೆ, ಪ್ರಾತಿನಿಧ್ಯ, ಅಧಿಕಾರ ಅನುಭವಿಸುತ್ತಿರುವುದು ಮೇಲ್ಪಟ್ಟದಲ್ಲಿರುವ ಬೆರಳೆಣಿಕೆಯಷ್ಟು ಲಿಂಗಾಯತ ಉಪಜಾತಿಗಳು. ಸಮಾನತೆ ಸಾರಿದ ಬಸವಣ್ಣನ ಅನುಯಾಯಿಗಳೇ ಅದನ್ನು ಪಾಲಿಸದಿದ್ದರೆ ಹೇಗೆ? ಆ ದೃಷ್ಟಿಯಿಂದ ಲಿಂಗಾಯತರಲ್ಲಿ ಎಲ್ಲಾ ಹಂತಗಳಲ್ಲಿ ಒಳಮೀಸಲಾತಿಯ ಅಳವಡಿಕೆ ಅತ್ಯಗತ್ಯ ಎನ್ನಿಸುತ್ತದೆ. ಭ್ರಷ್ಟ ಅಧಿಕಾರಿಗಳ ಆಯಕಟ್ಟಿನ ಸ್ಥಾನಗಳಿಗಾಗಿ ದನಿಯೆತ್ತುವ ಬದಲು ವೀರಶೈವ ಲಿಂಗಾಯತ ಮಹಾಸಭಾದಂತಹ ಸಂಘಟನೆಯು ಉಪೇಕ್ಷೆಗೆ ಒಳಗಾಗಿರುವ ಉಪಪಂಗಡಗಳಿಗೆ ನ್ಯಾಯ ದೊರಕಿಸುವ ಕಾರ್ಯಕ್ರಮ ಹಾಕಿಕೊಳ್ಳಬೇಕಿದೆ.

ಇತ್ತೀಚೆಗೆ ಅನೇಕ ಜಾತಿಗಳು, ಧರ್ಮಗಳು ಅಸ್ಮಿತೆ ಕಾರಣಕ್ಕಾಗಿಯೋ ರಾಜಕೀಯ ಅಧಿಕಾರಕ್ಕಾಗಿಯೋ ನೇತಾರರ ಸ್ವಾರ್ಥ ಸಾಧನೆಗಾಗಿಯೋ ಸಂಘಟಿತವಾ-ಗುವುದನ್ನು ಗಮನಿಸುತ್ತಿದ್ದೇವೆ. ದುರ್ಬಲ ವ್ಯಕ್ತಿಗಳು, ಶೋಷಿತ ಸಮುದಾಯ ಸಂಘಟಿತವಾಗುವುದರಲ್ಲಿ ಅರ್ಥ, ಅಗತ್ಯ, ಸಮರ್ಥನೆ ಎಲ್ಲವೂ ಇರುತ್ತವೆ. ಇದಕ್ಕೆ ತದ್ವಿರುದ್ಧವಾಗಿ ಪ್ರಬಲರು, ಶೋಷಕರ ಸಂಘಟನೆ ಸ್ವಸ್ಥ ಸಮಾಜಕ್ಕೆ ಅಪಾಯಕಾರಿ.

ನಿಜವಾಗಿಯೂ ಅಸ್ಪೃಶ್ಯತೆಯ ಬೇಗೆಯಲ್ಲಿ ಬೆಂದ ಸಮುದಾಯಗಳು ಮತ್ತು ದೃಶ್ಯದಲ್ಲೇ ಬಾರದ ಸಣ್ಣಪುಟ್ಟ ಶೋಷಿತ ಜಾತಿ-ಪಂಗಡಗಳಿಗೆ ಅವಕಾಶ ಕಲ್ಪಿಸುವ ದಿಸೆಯಲ್ಲಿ ದೊಡ್ಡ ಸಮಾಜಗಳು ಸಂಯಮ ವಹಿಸಬೇಕಿದೆ. ಪರಿಶಿಷ್ಟ ಜಾತಿ, ಪಂಗಡಗಳಲ್ಲದೆ ಹಿಂದುಳಿದ ಹಾಗೂ ಇತರೆ ಹಿಂದುಳಿದ ಜಾತಿಗಳೆಲ್ಲವೂ ಒಳಮೀಸಲಾತಿ ಸಾಧ್ಯತೆಯನ್ನು ಗಂಭೀರವಾಗಿ ಪರಿಗಣಿಸುವುದು ಕಾಲದ ಅಗತ್ಯವಾಗಿ ಕಾಣಿಸುತ್ತಿದೆ. ಹುಟ್ಟಿನ ಕಾರಣಕ್ಕೋ ನಂಬಿಕೆ-ಆಚರಣೆ ಕಾರಣಕ್ಕೋ ಆಯಾ ಜಾತಿಗಳಲ್ಲಿ ಗುರುತಿಸಲ್ಪಡುವ ಎಲ್ಲಾ ಬಲಾಢ್ಯ ಜಾತಿಗಳ ಪ್ರಜ್ಞಾವಂತರು ಈ ವಿಷಯದಲ್ಲಿ ಆಂತರಿಕ ವಿಮರ್ಶಕರಾಗಿ ಹೊಮ್ಮಿದರೆ ನಾಲ್ಕು ಹೆಜ್ಜೆ ಹಾಕಬಹುದು.

ಚುರುಮುರಿ

ಎಸ್ ಬಾಸ್...

• ಬಿ.ಎನ್.ಮಲ್ಲೇಶ್

‘ಲೇ ಗುಡ್ಡೆ, ಯಾಕೋ ಗಡ್ಡ ಬಿಟ್ಟಿದೀಯ? ಏನ್ಕತೆ?’ ತೆಪರೇಸಿ ಕೇಳಿದ.

‘ಬರ ಅಧ್ಯಯನ ಮಾಡಾಕೆ ಯಾರೋ ಬರ್ತಾರಂತಲ್ಲಲೆ, ಅದ್ಕೆ ಇರ್ಲಿ ಅಂತ ಬಿಟ್ಟಿದೀನಿ’ ಗುಡ್ಡೆ ಗಡ್ಡ ಕೆರ್ಕಂಡು ಹೇಳಿದ.

‘ಅಂದ್ರೆ ಅವ್ರು ನಿನ್ ಗಡ್ಡ ನೋಡಿ ಬರ ಡಿಸೈಡ್ ಮಾಡ್ತಾರಾ? ಅವ್ರೆಲ್ಲ ಐಎಎಸ್ ಆಫೀಸರ್‌ಗಳು, ಅವ್ರು ನೋಡಾದೇ ಬೇರೆ’.

‘ಗೊತ್ತು ಬಿಡಲೆ, ಹೋದ್ಸಲ ಅವ್ರು ಬಂದಿದ್ದಾಗ ಶೇಂಗಾ ಗಿಡ ಬರೀ ಹೂವು ಬಿಟ್ಟಿದೆ, ಒಂದೂ ಕಾಯಿ ಬಿಟ್ಟಿಲ್ಲ ಅಂತ ಬರ್ಕಂಡು ಹೋಗಿದ್ರು. ಇನ್ನೊಬ್ಬ ಆಫೀಸರು ಬದ್ನೆಕಾಯಿ ಗಿಡ ಕಿತ್ತು, ಒಂದೂ ಆಲೂಗಡ್ಡೆ ಬಿಟ್ಟಿಲ್ಲ ಅಂತ ರಿಪೋರ್ಟ್ ಕೊಟ್ಟಿದ್ರು ಗೊತ್ತಾ?’ ಗುಡ್ಡೆ ನಕ್ಕ.

‘ಹೆಂಗೋ ನಮ್ ರೈತರಿಗೆ ಅನುಕೂಲ ಆದ್ರೆ ಸಾಕು ಬಿಡ್ರಪ. ಅದಿರ್ಲಿ, ನಮ್ ಭಾರತದೋರು ಏಷ್ಯಾ ಕ್ರೀಡಾಕೂಟದಲ್ಲಿ ಭರ್ಜರಿ ಪದಕ ಗೆದ್ದು ನಾಲ್ಕನೇ ಸ್ಥಾನಕ್ಕೆ ಬಂದಾರಂತೆ, ನೋಡಿದ್ರಾ?’ ದುಬ್ಬೀರ ಮಾತು ಬದಲಿಸಿದ.

‘ನಾಲ್ಕನೇ ಸ್ಥಾನ ಯಾವ ದೊಡ್ಡದು ಬಿಡಲೆ, ಹಿಂದೆಲ್ಲ ಮೊದಲ್ನೇ ಸ್ಥಾನದಾಗಿದ್ರು ಪದಕ ಪಟ್ಟೀಲಿ ಕೆಳಗಿಂದ’.

ತೆಪರೇಸಿ ಜೋರಾಗಿ ನಕ್ಕಾಗ ಮಂಜಮ್ಮಗೆ ಸಿಟ್ಟು ಬಂತು. ‘ಲೇಯ್, ದೇಶದ ಬಗ್ಗೆ ಕೆಟ್ಟದಾಗಿ ಮಾತಾಡಿದ್ರೆ ಗ್ರಾಚಾರ ಬಿಡಿಸಿಬಿಡ್ತೀನಿ, ನೆಟ್ಟಗೆ ಮಾತಾಡು ಇಲ್ದಿದ್ರೆ ಜಾಗ ಖಾಲಿ ಮಾಡು’ ಎಂದು ರೇಗಿದಳು.

‘ಆತು ಬಿಡು ಹೋಗ್ತೀನಿ, ಇಲ್ಲಿಂದ ಸೀದಾ ಬಿಗ್ ಬಾಸ್ ಮನಿಗೆ ಹೋಗ್ತೀನಿ. ನಿನ್ ತಗಡು ಹೋಟ್ಲು ಯಾವನಿಗ್ ಬೇಕು’ ಎನ್ನುತ್ತ ತೆಪರೇಸಿ ಎದ್ದು ನಿಂತ.

‘ಬಿಗ್ ಬಾಸ್‌ಗೆ ಹೋಗೋ ಮೂತಿ ನೋಡು, ಅದರ ಬದ್ಲು ನೆಟ್ಟಗೆ ಮನಿಗೋಗು’.

‘ಮನೀಗಾ? ಯಾಕೆ?’

‘ನಿನ್ ಹೆಂಡ್ತಿ ಮುಂದೆ ಸೊಂಟ ಬಗ್ಸಿ ‘ಎಸ್ ಬಾಸ್’ ಅನ್ನಾಕೆ...!’

ಮಂಜಮ್ಮನ ಮಾತಿಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಭಾಷೆ ಮತ್ತು ವಿಷಯ: ಮುಚ್ಚಬೇಕಿದೆ ಕಂದಕ

ಕನ್ನಡ ಪಠ್ಯಪುಸ್ತಕದ ಮೂಲಕ ಕನ್ನಡ ಭಾಷೆ ಬಿಟ್ಟು ಬೇರೆಲ್ಲವನ್ನೂ ಕಲಿಸಲಾಗುತ್ತಿದೆ!

• ಪ್ರೊ. ಎಂ.ಅಬ್ದುಲ್ ರೆಹಮಾನ್ ಪಾಷ

ಪ್ರಥಮ್ ಫೌಂಡೇಷನ್ ರಾಜ್ಯದ 5-16 ವರ್ಷ ವಯಸ್ಸಿನ ಮಕ್ಕಳನ್ನು ಒಳಗೊಂಡು 2021ರ ಮಾರ್ಚ್‌ನಲ್ಲಿ ನಡೆಸಿದ ಸಮೀಕ್ಷೆಯಲ್ಲಿ, ಮುಖ್ಯವಾಗಿ ಪ್ರಾಥಮಿಕ ತರಗತಿಗಳಲ್ಲಿ ಮೂಲಭೂತ ಕೌಶಲಗಳ ಕೊರತೆ ಇರುವುದು ಕಂಡುಬಂದಿದೆ. ಇದು ಸರ್ಕಾರಿ ಮತ್ತು ಖಾಸಗಿ ಎರಡೂ ಬಗೆಯ ಶಾಲೆಗಳಲ್ಲಿ ಕನ್ನಡ ಓದುವ ಸಾಮರ್ಥ್ಯಕ್ಕೂ ಅನ್ವಯಿಸುತ್ತದೆ.

ಪ್ರಥಮ್ ಅಧ್ಯಯನದಲ್ಲಿ 13,365 ಕುಟುಂಬಗಳ 18,385 ಮಕ್ಕಳು ಒಳಗೊಂಡಿದ್ದರು. ಅದರ ಪ್ರಕಾರ, ಒಂದನೇ ತರಗತಿಯ ಮಕ್ಕಳಲ್ಲಿ ಶೇ 56.8ರಷ್ಟು ಮಕ್ಕಳಿಗೆ ಮೂಲ ಅಕ್ಷರಗಳನ್ನು ಓದಲು ಆಗಲಿಲ್ಲ. 7ನೇ ತರಗತಿಯ ಶೇ 66ರಷ್ಟು ಮಕ್ಕಳಿಗೆ 2ನೇ ತರಗತಿಯ ಪಠ್ಯಪುಸ್ತಕವನ್ನು ಓದಲು ಬರಲಿಲ್ಲ. 8ನೇ ತರಗತಿಯವರಲ್ಲಿ ಶೇ 9.8ರಷ್ಟು ಮಕ್ಕಳು ಮಾತ್ರ 2ನೇ ತರಗತಿಯ ಪಠ್ಯಪುಸ್ತಕವನ್ನು ಓದಬಲ್ಲವ-ರಾಗಿದ್ದರು. ಗ್ರಹಿಕೆಯ ಕೌಶಲವಾದ ಓದುವುದರ ಸ್ಥಿತಿಯೇ ಹೀಗಿರುವಾಗ ಇನ್ನು ಉತ್ಪಾದಕ ಕೌಶಲವಾದ ಬರೆಯುವ ಕೌಶಲದ ಸ್ಥಿತಿ ಹೇಗಿರಬಹುದು ಎಂಬುದನ್ನು ಊಹಿಸಬಹುದಾಗಿದೆ.

ಇನ್ನೂ ದೊಡ್ಡ ದುರಂತ ಎಂದರೆ, ಕನ್ನಡ ಮಾಧ್ಯಮ ಶಾಲೆಗಳಲ್ಲಿ ಕನ್ನಡವನ್ನು ಬರೀ ಒಂದು ಭಾಷೆಯಾಗಿ ಕಲಿಯುವುದಿಲ್ಲ, ಅದನ್ನು ವಿಜ್ಞಾನ, ಸಮಾಜವಿಜ್ಞಾನ, ಗಣಿತದಂಥ ವಿಷಯಗಳನ್ನು ಗ್ರಹಿಸುವ, ಮಾತನಾಡುವ, ಓದುವ ಮತ್ತು ಬರೆಯುವ ‘ಮಾಧ್ಯಮ’ವನ್ನಾಗಿಯೂ ಕಲಿಯಬೇಕಾಗುತ್ತದೆ. ಆಯಾ ತರಗತಿಯಲ್ಲಿ ಕಲಿಯುವ ಮೂಲಭೂತ ಭಾಷಾ ಸಾಧನೆಯೇ ಇಷ್ಟು ದುರ್ಬಲ ಆಗಿರುವಾಗ ಅದರ ಮೂಲಕ ವಿಷಯಗಳ ಕಲಿಕೆ ಎಷ್ಟು ದುರ್ಬಲ ಇರಬಹುದು ಎಂಬುದನ್ನು ಊಹಿಸಲೂ ದಿಗಿಲಾಗುತ್ತದೆ.

ಈ ಸ್ಥಿತಿಗೆ ಕಾರಣಗಳನ್ನು ಗುರುತಿಸುವುದು ಅಷ್ಟು ಸುಲಭದ ಕೆಲಸವೇನಲ್ಲ. ಆದರೂ ಎದ್ದು ಕಾಣುವ, ಪರಿಹರಿಸಲು ಸಾಧ್ಯವಿರುವ ಒಂದೆರಡು ಸಮಸ್ಯೆಗಳನ್ನಾದರೂ ಗುರುತಿಸಬಹುದಾಗಿದೆ. ಮೂಲಭೂತ ಸಮಸ್ಯೆಯೆಂದರೆ, ಸರ್ಕಾರದ ಪಠ್ಯಪುಸ್ತಕ ಸಮಿತಿಯು ಭಾಷೆಯನ್ನು ಭಾಷಾ ಕೌಶಲಗಳ ಒಂದು ಸಂಯೋಜನೆ ಎಂದು ಸ್ಪಷ್ಟವಾಗಿ ಗುರುತಿಸದೇ ಇರುವುದು. ಭಾಷೆಯನ್ನು ಮೂಲಭೂತವಾಗಿ ಅಭಿವ್ಯಕ್ತಿ, ಅದಕ್ಕೂ ಮುಖ್ಯವಾಗಿ ಸಂವಹನದ ಸಾಧನವನ್ನಾಗಿ ಕಲಿಯಬೇಕು. ಆ ಸಾಧನವನ್ನು ಬಳಸಿ ನಾವು ಯಾವುದೇ ವಿಷಯವನ್ನು ಗ್ರಹಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಸಾಧ್ಯವಾಗಬೇಕು.

ಕನ್ನಡ ಪಠ್ಯಪುಸ್ತಕಗಳನ್ನು ಒಮ್ಮೆ ನೋಡಿ. ಸುಮಾರು 3ನೇ ತರಗತಿ ದಾಟಿದ ಕೂಡಲೇ ಕನ್ನಡ ಭಾಷಾ ಪುಸ್ತಕಗಳು ‘ಕನ್ನಡ ಸಾಹಿತ್ಯ’ ಪಠ್ಯಗಳಾಗಿಬಿಟ್ಟಿ-ರುತ್ತವೆ. ಇಲ್ಲಿನ ಪಾಠಗಳಲ್ಲಿ ಹಳಗನ್ನಡ, ನಡುಗನ್ನಡ, ವಚನ, ನವೋದಯ, ದಲಿತ, ಮಹಿಳಾ, ಮುಸ್ಲಿಂ, ಕ್ರೈಸ್ತ ಹೀಗೆ ವಿವಿಧ ಬಗೆಯ ಸಾಹಿತ್ಯಕ್ಕೆ ಮೀಸಲಾ-ಗಿರುತ್ತವೆ. ಅದರಲ್ಲಿಯೂ ಪದ್ಯ, ಪ್ರಬಂಧ, ನಾಟಕ, ಪ್ರವಾಸ ಸಾಹಿತ್ಯದಂತಹ ಪ್ರಕಾರಗಳನ್ನು ಒಳಗೊಂಡಿ-ರುತ್ತವೆ. ಜೊತೆಗೆ, ಪ್ರಾಯೋಗಿಕ ಕನ್ನಡ ಬಳಕೆಯನ್ನು ಕಲಿಸುವ ಬದಲಿಗೆ, ಸಂಸ್ಕೃತ, ಕನ್ನಡ ಸಂಧಿ, ಸಮಾಸ, ವ್ಯಾಕರಣ, ಛಂದಸ್ಸು ಎಂದೆಲ್ಲಾ ಇರುತ್ತವೆ. ಎಂದರೆ ಕನ್ನಡ ‘ಸಾಹಿತ್ಯ’ವೇ ಕನ್ನಡ ಭಾಷೆ ಎನ್ನುವಂತೆ ಭಾವಿಸಲಾಗಿದೆ.

ಸಮಾಜವಿಜ್ಞಾನ, ವಿಜ್ಞಾನ, ಗಣಿತ ಇವುಗಳ ಹಾಗೆ ಕನ್ನಡ ಸಾಹಿತ್ಯವೂ ಒಂದು ವಿಷಯವೇ. ಇವೆಲ್ಲವನ್ನೂ ಕಲಿಯಲು ಬಳಸುವ ಸಾಧನ ಕನ್ನಡ ಭಾಷೆ. ಈ ಸೂಕ್ಷ್ಮವನ್ನು ಪಠ್ಯಪುಸ್ತಕ ಸಂಘವು ಪರಿಗಣಿಸುವುದೇ ಇಲ್ಲ. ಸಾಹಿತ್ಯವು ವಿಶೇಷ ಆಸಕ್ತಿಯ ವಿಷಯ. ಆದರೂ, ಇತರ ವಿಷಯಗಳಷ್ಟೇ ಸಾಹಿತ್ಯವೂ ಜೀವನದ ಮೂಲಭೂತ ಅಗತ್ಯ ಎಂದು ಶಿಕ್ಷಣ ತಜ್ಞರಿಗೆ ಅನ್ನಿಸಿದರೆ ಅದನ್ನೂ ಒಂದು ಪ್ರತ್ಯೇಕ ವಿಷಯವನ್ನಾಗಿ ಪರಿಚಯಿಸಲಿ. ಕನ್ನಡ ಭಾಷಾ ಕೌಶಲಗಳನ್ನು ರೂಢಿ-ಸುವುದಕ್ಕಾಗಿ ಮೀಸಲಾಗಬೇಕಾಗಿದ್ದ ಪಠ್ಯಕ್ರಮವನ್ನು ಸಾಹಿತ್ಯ ಆಕ್ರಮಿಸಿಕೊಳ್ಳದಿರಲಿ.

ವಿಜ್ಞಾನ, ಸಮಾಜವಿಜ್ಞಾನ, ಗಣಿತದಂಥ ವಿಷಯಗಳ ನಿರೂಪಣೆಯಲ್ಲಿ ಬಳಸಲಾಗಿರುವ ಕನ್ನಡ ಭಾಷೆಯ ಮಟ್ಟವನ್ನು ಗಮನಿಸಿದ್ದೀರಾ? ಆಯಾ ಕ್ಷೇತ್ರಕ್ಕೆ ವಿಶೇಷವಾದ ಪಾರಿಭಾಷಿಕ ಪದಗಳು, ವಾಕ್ಯ-ರಚನೆಗಳು, ತರ್ಕ, ಲೇಖನ ಮತ್ತು ಗಣಿತದ ಚಿಹ್ನೆಗಳು-

ಇವೆಲ್ಲವೂ ಕಲಿಕೆ ಮತ್ತು ಸಂವಹನ ಕೌಶಲದ ಅಂಗಾಂಶಗಳು. ವಿಜ್ಞಾನದಂತಹ ವಿಷಯಗಳ ಪಠ್ಯ-ಪುಸ್ತಕಗಳಲ್ಲಿ ಈ ಭಾಷಾಕೌಶಲಗಳನ್ನು ಕಲಿಸುವ ಉದ್ದೇಶ, ವ್ಯವಸ್ಥೆ ಇರುವುದಿಲ್ಲ. ಆ ಪ್ರೌಢ ಮಟ್ಟದ ಭಾಷಾ ಕೌಶಲ ಮಕ್ಕಳಲ್ಲಿ ಸಾಧಿತವಾಗಿರುತ್ತದೆ ಎಂದು ಪರಿಭಾವಿಸಲಾಗುತ್ತದೆ. ಆದರೆ, ಅದಕ್ಕಾಗಿ ಇರುವ ಕನ್ನಡ ಪಠ್ಯಕ್ರಮ ಅಥವಾ ಪುಸ್ತಕದಲ್ಲಿ ಈ ಉದ್ದೇಶವೇ ಕಾಣೆಯಾಗಿರುತ್ತದೆ. ಕನ್ನಡ ಪಠ್ಯಪುಸ್ತಕದ ಮೂಲಕ ಕನ್ನಡ ಭಾಷೆಯೊಂದನ್ನು ಬಿಟ್ಟು ಬೇರೆಲ್ಲವನ್ನೂ ಕಲಿಸ-ಲಾಗುತ್ತದೆ. ಭಾಷೆ ಮತ್ತು ವಿಷಯ ಇವುಗಳ ನಡುವಿನ ಈ ಅಪಾಯಕಾರಿ ಕಂದಕವನ್ನು ಮುಚ್ಚುವವರು ಯಾರು?

ಸರ್ಕಾರವು ಇತ್ತೀಚೆಗೆ ಪಠ್ಯಪುಸ್ತಕಗಳ ಸಮಗ್ರ ಪರಿಷ್ಕರಣೆಗಾಗಿ ನೇಮಿಸಿರುವ ಹಲವಾರು ಸಮಿತಿಗಳಲ್ಲಿ ಕನ್ನಡ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯೂ ಒಂದು. ಈ ಸಮಿತಿಗೆ ನಾವು ಮೇಲೆ ಚರ್ಚಿಸಿರುವ ಸಮಸ್ಯೆಯ ಅರಿವು ಇರಬೇಕಾಗಿರುವುದು ಅಗತ್ಯ. ಇಲ್ಲದಿದ್ದರೆ, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ತಯಾರಾಗುವ ಪರಿಷ್ಕೃತ ಪಠ್ಯಪುಸ್ತಕಗಳೂ ವಿದ್ಯಾರ್ಥಿಗಳಲ್ಲಿ ಶೈಕ್ಷಣಿಕ ಕಲಿಕೆ ಮತ್ತು ಮುಂದಿನ ಬದುಕಿಗೆ ಅಗತ್ಯವಾದ ಭಾಷಾ ಸಾಮರ್ಥ್ಯ ಮೂಡಿಸುವುದರಲ್ಲಿ ಮತ್ತೆ ಸೋಲುವ ಸಾಧ್ಯತೆ ಇರುತ್ತದೆ.

ವಾಚಕರ ವಾಣಿ

ಇಲಾಖೆಗಳಿಗೆ ಪುಸ್ತಕ ಖರೀದಿ: ಸಮಿತಿ ರಚಿಸಿ

ಪುಸ್ತಕ ಖರೀದಿಯಲ್ಲಿ ವಿಳಂಬ ಸಲ್ಲ ಎಂಬ ಸಂಪಾದಕೀಯ (ಪ್ರ.ವಾ., ಅ. 5) ಸಮಂಜಸವಾಗಿದೆ. ಮೂರು ವರ್ಷಗಳಿಂದ ಸರ್ಕಾರವು ಪ್ರಕಾಶಕರ ಕೋರಿಕೆಯನ್ನು ಮನ್ನಿಸಿ ಪುಸ್ತಕ ಸಗಟು ಖರೀದಿಗೆ ಚಾಲನೆ ಕೊಡದೇ ಇರುವುದರಿಂದ, ಪ್ರಕಾಶಕರು, ಲೇಖಕರು, ಪುಸ್ತಕ ಮಾರಾಟಗಾರರು ಸಂಕಷ್ಟದ ಪರಿಸ್ಥಿತಿಯಲ್ಲಿ ಇದ್ದಾರೆ. ಗ್ರಾಮೀಣ ಗ್ರಂಥಾಲಯಗಳಿಗೆ ಪುಸ್ತಕಗಳು ಸಮರ್ಪಕವಾಗಿ ಸರಬರಾಜಾಗದ ಕಾರಣ ಅಲ್ಲಿನ ವಿದ್ಯಾರ್ಥಿಗಳು ಮತ್ತು ಓದುಗರು ತೊಂದರೆ ಅನುಭವಿಸುತ್ತಿದ್ದಾರೆ. ಈ ಪರಿಸ್ಥಿತಿ ಪ್ರಕಾಶಕರಿಗೆ ಹೊಸ ಪುಸ್ತಕಗಳನ್ನು ಪ್ರಕಟಿಸುವುದಕ್ಕೆ ಧೈರ್ಯವಿಲ್ಲದಂತೆ ಮತ್ತು ಲೇಖಕರಿಗೆ ಪುಸ್ತಕ ಬರೆಯುವುದಕ್ಕೆ ಉತ್ಸಾಹವಿಲ್ಲದಂತೆ ಮಾಡಿದೆ.

ಸರ್ಕಾರವು ಸಾರ್ವಜನಿಕ ಗ್ರಂಥಾಲಯಗಳಿಗೆ ಮಾತ್ರವಲ್ಲದೆ ವಿವಿಧ ಇಲಾಖೆಗಳಿಗೆ ಹಲವು ಕೋಟಿ ವ್ಯಯಿಸಿ ಪುಸ್ತಕಗಳನ್ನು ಖರೀದಿಸುತ್ತದೆ. ಈ ವ್ಯವಹಾರವಂತೂ ಪ್ರಕಾಶಕರು, ಲೇಖಕರು, ಪ್ರಕಾಶಕರ ಸಂಘದ ಗಮನಕ್ಕೂ ಬಾರದೆ ನಡೆದುಹೋಗುತ್ತದೆ. ಈ ಪ್ರಕ್ರಿಯೆಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮಾದರಿಯಂತೆ ಆಯ್ಕೆ ಸಮಿತಿ ರಚಿಸಿ, ಏಕಗವಾಕ್ಷಿಯ ಮೂಲಕ ಖರೀದಿಸಬೇಕಾದ ಅಗತ್ಯವಿದೆ.

ಸೃಷ್ಟಿ ನಾಗೇಶ್, ಬೆಂಗಳೂರು

ಪಂಚಾಯಿತಿ ಅಧ್ಯಕ್ಷರ ಕಡೆಗಣನೆ ಅಕ್ಷಮ್ಯ

ಊರಿನ ಉತ್ಸವವನ್ನು ಶ್ರೀಮಂತ ಕುಳಗಳು ತಮ್ಮ ಗಮನಕ್ಕೆ ತಾರದೇ ನಡೆಸಿದ್ದರಿಂದ ಮನನೊಂದ ಗ್ರಾಮ ಪಂಚಾಯಿತಿ ಅಧ್ಯಕ್ಷರೊಬ್ಬರು, ‘ಶ್ರೀಮಂತರು ಅಧ್ಯಕ್ಷರಾಗಿದ್ದಿದ್ದರೆ ಹೀಗೆ ಮಾಡುತ್ತಿದ್ದರೇ’ ಎಂದು ಪ್ರಶ್ನಿಸಿದ್ದನ್ನು ವಿವರಿಸಿರುವ ಚಾವಲ್ಮನೆ ಸುರೇಶ್ ನಾಯಕ್ ಅವರ ಪತ್ರವನ್ನು (ವಾ.ವಾ., ಅ. 5) ಓದಿ ಮನಸ್ಸಿಗೆ ನೋವಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷರು ಹೀಗೆ ಅಳಲು ತೋಡಿಕೊಂಡು ಕಣ್ಣೀರು ಹಾಕಿದ್ದನ್ನು ತಿಳಿದು ಕರುಳು ಚುರ್ ಎಂದಿತು. ಪ್ರಜಾಸತ್ತಾತ್ಮಕ ರೀತಿಯಲ್ಲಿ ಚುನಾವಣೆ ನಡೆದು, ಅದರಲ್ಲಿ ಮೀಸಲು ಕ್ಷೇತ್ರದಿಂದ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು ಅವರ ತಪ್ಪೇ? ಆ ಪಂಚಾಯಿತಿ ವ್ಯಾಪ್ತಿಯ ಪ್ರಥಮ ಪ್ರಜೆ ಅವರು. ಅವರಿಗೇ ವಿಷಯವನ್ನು ತಿಳಿಸದೆ ಕತ್ತಲಲ್ಲಿಟ್ಟು, ಹಣವಿದ್ದವರು ಗ್ರಾಮದಲ್ಲಿ ಭರ್ಜರಿಯಾಗಿ ಉತ್ಸವ ಏರ್ಪಡಿಸಿ ಭೋಜನ ವ್ಯವಸ್ಥೆ ಮಾಡಿ ಅಧ್ಯಕ್ಷರನ್ನು ಕಡೆಗಣಿಸಿದ್ದು ಆ ಹುದ್ದೆಗೆ ಮಾಡಿದ ಅವಮಾನ ಹಾಗೂ ಅದನ್ನು ಯಾರೂ ಕ್ಷಮಿಸಲಾರರು.

ನಾಗೋಜಿರಾವ್ ಡಿ., ಭದ್ರಾವತಿ

ಅಂತಹ ಶಾಸಕರೂ ಇಲ್ಲ, ಅಧಿಕಾರಿಗಳೂ ಇಲ್ಲ!

ಶಿವಮೊಗ್ಗದ ರಾಗಿಗುಡ್ಡ ಪ್ರದೇಶದಲ್ಲಿ ಎರಡು ಕೋಮುಗಳ ನಡುವೆ ಇತ್ತೀಚೆಗೆ ಗಲಭೆ ನಡೆದಾಗ, ರಾಜ್ಯದ ಎರಡು ಪ್ರಮುಖ ರಾಜಕೀಯ ಪಕ್ಷಗಳ ನಾಯಕರು ಒಬ್ಬರ ಮೇಲೊಬ್ಬರು ಆರೋಪ, ಪ್ರತ್ಯಾರೋಪ ಮಾಡಿ, ಪ್ರಚೋದನಾತ್ಮಕ ಹೇಳಿಕೆ ನೀಡಿದರೇ ವಿನಾ ಪರಿಸ್ಥಿತಿಯನ್ನು ತಿಳಿಗೊಳಿಸುವ ಕೆಲಸ ಮಾಡಲಿಲ್ಲ. ಇಂತಹ ಗಲಭೆಗಳಾದಾಗ ಕೆಲವು ರಾಜಕೀಯ ನಾಯಕರು ಅದಕ್ಕೆ ಇನ್ನಷ್ಟು ಕಾವು ಕೊಟ್ಟು ತಮ್ಮ ಮೈ ಕಾಯಿಸಿಕೊಳ್ಳಲು ಹವಣಿಸುತ್ತಾರೆ. ಹಿಂದೆಲ್ಲ ಗಲಭೆ ನಡೆದ ಭಾಗದ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಎರಡೂ ಸಮಾಜದ ಧರ್ಮಗುರುಗಳು ಶಾಂತಿ ಸ್ಥಾಪನೆಗಾಗಿ ಸೌಹಾರ್ದ ಸಭೆ ನಡೆಸಿ, ಸಾರ್ವಜನಿಕರಿಗೆ ತಿಳಿವಳಿಕೆ ನೀಡಲು ಮುಂದಾಗುತ್ತಿದ್ದರು. ಆ ಮೂಲಕ ಸಮಾಜದಲ್ಲಿ ಶಾಂತಿ ನೆಲೆಸಲು ಪೂರಕ ಪ್ರಯತ್ನ ಮಾಡುತ್ತಿದ್ದರು.

ಇದಕ್ಕೊಂದು ಉದಾಹರಣೆ ಎಂದರೆ, ಸುಮಾರು 35 ವರ್ಷಗಳ ಹಿಂದೆ ನಾನು ಮೈಸೂರು ಜಿಲ್ಲೆಯ ಕೆ.ಆರ್. ನಗರದಲ್ಲಿ ಓದುತ್ತಿದ್ದ ಸಮಯದಲ್ಲಿ, ಅಲ್ಲಿ ಹಿಂದೂ- ಮುಸ್ಲಿಮರ ನಡುವೆ ದೊಡ್ಡ ಪ್ರಮಾಣದಲ್ಲಿ ಕೋಮು ಗಲಭೆ ಸಂಭವಿಸಿತು. ಆಗ ಕೆ.ಆರ್. ನಗರದ ಶಾಸಕರಾಗಿದ್ದ ಎಸ್.ನಂಜಪ್ಪ ಮತ್ತು ತಹಶೀಲ್ದಾರ್ ಜಬ್ಬಾರ್ ಅವರು, ಗಲಭೆ ನಡೆದಿದ್ದ ಎರಡೂ ಸಮುದಾಯದ ಕೇರಿಗಳ ಎಲ್ಲ ಮನೆಗಳಿಗೆ ಭೇಟಿ ನೀಡಿ, ಸಾರ್ವಜನಿಕರಿಗೆ ತಿಳಿವಳಿಕೆ ನೀಡಿ, ಶಾಂತಿ ನೆಲೆಸುವಂತೆ ಮಾಡಿದ್ದರು. ಈಗ ನಂಜಪ್ಪ ಅವರಂತಹ ಆದರ್ಶ ಶಾಸಕರೂ ಇಲ್ಲ, ಜಬ್ಬಾರ್ ಅವರಂತಹ ದಕ್ಷ ಅಧಿಕಾರಿಗಳೂ ಇಲ್ಲದಂತಾಗಿದೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಬದಲಾಗುವ ಆಚರಣೆ: ನಿಲುಕದ ವ್ಯಾಖ್ಯಾನ

‘ಒಂದು ಕವಲಿನ ಪಾರಮ್ಯ...’ ಎಂಬ ಲೇಖನದಲ್ಲಿ ಎ.ನಾರಾಯಣ ಅವರು (ಪ್ರ.ವಾ., ಅ. 5) ಹಿಂದೂ ಧರ್ಮದ ಆಚರಣೆಗಳನ್ನು ವೈದಿಕ ಮತ್ತು ಅವೈದಿಕ ಎಂದು ಸ್ಪಷ್ಟವಾಗಿ ಗೆರೆ ಎಳೆದಿದ್ದಾರೆ. ಆದರೆ ಇದು ಜನಸಾಮಾನ್ಯರಿಗೆ ಎಷ್ಟು ಅರ್ಥವಾಗುತ್ತದೆ? ವಚನ ಚಳವಳಿಯಂತಹವನ್ನು ಹಿಂದೂ ಧರ್ಮದಲ್ಲಿನ ವೈಚಾರಿಕ ನೆಲೆಗಳು ಎಂದು ಗುರುತಿಸಬಹುದು. ಆದರೆ ಹಬ್ಬಗಳನ್ನು, ತೇರು ಎಳೆಯುವುದನ್ನು, ಒಂದಷ್ಟು ಕಿಲೊಮೀಟರ್‌ಗೂ ಬದಲಾಗುವ ಸಣ್ಣಪುಟ್ಟ ಆಚರಣೆಗಳನ್ನು ಯಾವ ರೀತಿ ನೋಡಲು ಸಾಧ್ಯ ಎಂಬುದು ಬಹಳ ಕ್ಲಿಷ್ಟವಾದ ಪ್ರಶ್ನೆಯಾಗಿದೆ.

ಗುರು ಜಗಳೂರು, ಹರಿಹರ

ದಸರಾ ರಜೆಗಿರಲಿ ಯೋಜಿತ ಚಟುವಟಿಕೆ

ದಸರಾ ರಜೆ ಇನ್ನೇನು ಆರಂಭವಾಗಲಿದೆ. ಈ ರಜೆಯನ್ನು ಮಕ್ಕಳು ಅರ್ಥಪೂರ್ಣವಾಗಿ ಕಳೆಯದಿದ್ದರೆ ಹೇಗೆ? ಪ್ರಸ್ತುತ ಮೊಬೈಲ್ ಫೋನ್, ಟಿ.ವಿ. ಹಾಗೂ ಕಂಪ್ಯೂಟರ್ ಹಾವಳಿ ಪ್ರತಿ ಮನೆಯನ್ನೂ ಆವರಿಸಿದೆ. ಮಕ್ಕಳು ರಜಾ ಅವಧಿಯಲ್ಲಿ ಇವುಗಳ ಮುಂದೆ ಕೂತು ಗೇಮ್ ಆಡುತ್ತಾ ಮಾನಸಿಕ ಒತ್ತಡಕ್ಕೆ ಸಿಲುಕುತ್ತಾರೆ. ಇದು ತಪ್ಪಬೇಕು. ರಜಾ ಅವಧಿಯಲ್ಲಿ ಮಕ್ಕಳಿಗೆ ಒಳಾಂಗಣ ಕ್ರೀಡೆಗಳಿಗಿಂತ ಹೊರಾಂಗಣ ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಗಾಳಿಪಟ ಆಡಿಸುವುದು, ಗೋಲಿ ಆಟ, ಚಿನ್ನಿದಾಂಡು, ಸಂಬಂಧಿಕರ ಊರುಗಳಿಗೆ ಸುತ್ತಾಟ, ಅಜ್ಜ ಅಜ್ಜಿಯರಿಂದ ಕಥೆ ಹೇಳಿಸಿಕೊಳ್ಳುವುದು, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಿಕೆ, ಜಾತ್ರೆ ಹಾಗೂ ಉತ್ಸವಗಳಲ್ಲಿ ನಾಟಕಗಳನ್ನು ನೋಡಿ ಸಂಭ್ರಮಿಸುವಂತಹ ಹತ್ತು ಹಲವು ಕಾರ್ಯಚಟುವಟಿಕೆಗಳಲ್ಲಿ ಮಕ್ಕಳು ಭಾಗಿಯಾದರೆ ಎಷ್ಟೊಂದು ಚಂದ ಅಲ್ಲವೇ?

ಇದರಿಂದ ಮಕ್ಕಳು ಒತ್ತಡರಹಿತವಾಗಿ ಮೋಜಿನ ಜೊತೆ ರಜೆಯ ಮಜವನ್ನೂ ಅನುಭವಿಸಿದಂತೆ ಆಗುತ್ತದೆ. ಮಕ್ಕಳ ಚಿಂತನಾಲಹರಿ ಬದಲಾಗಿ ಅವರ ಜ್ಞಾನ ಮತ್ತಷ್ಟು ವಿಸ್ತಾರವಾಗುತ್ತದೆ. ಸ್ನೇಹಬಾಂಧವ್ಯ ಹೆಚ್ಚಾಗಿ ಮಕ್ಕಳ ಏಕಾಂಗಿತನ ದೂರವಾಗುತ್ತದೆ. ಈ ದಿಸೆಯಲ್ಲಿ ಮಕ್ಕಳ ಮನಸ್ಸನ್ನು ಪ್ರಫುಲ್ಲಗೊಳಿಸಲು ಪೋಷಕರು ಮುಂದಾಗಬೇಕು.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜನಗಣತಿಗೆ ಮೀನ ಮೇಷ

ಭಾರತದ ಜನಗಣತಿಗೆ ದೀರ್ಘವಾದ ಇತಿಹಾಸವಿದೆ. ಬ್ರಿಟಿಷ್ ಸರ್ಕಾರದ ಅವಧಿಯಲ್ಲಿ ಭಾರತದ ಮೊದಲ ಜನಗಣತಿ ನಡೆದಿತ್ತು. 1881ರ ಜನಗಣತಿಯ ನಂತರ ಪ್ರತಿ ಹತ್ತು ವರ್ಷಗಳಿಗೆ ಒಮ್ಮೆ ಜನಗಣತಿ ನಡೆಸುತ್ತಾ ಬರಲಾಗಿತ್ತು. ಸ್ವಾತಂತ್ರ್ಯ ಬಂದ ಬಳಿಕವೂ ಇದು ಮುಂದುವರಿದಿತ್ತು. ಬರೋಬ್ಬರಿ 130 ವರ್ಷಗಳವರೆಗೆ ಇದನ್ನು ಮುಂದುವರಿಸಿಕೊಂಡು ಬರಲಾಗಿತ್ತು. 140ನೇ ವರ್ಷದಲ್ಲೂ ಇದು ಮುಂದುವರಿಯಬೇಕಿತ್ತು. 2021ರಲ್ಲಿ ಜನಗಣತಿಗೆ ಕೇಂದ್ರ ಸರ್ಕಾರ ದಿನಾಂಕ ನಿಗದಿ ಮಾಡಿತ್ತು. ಆದರೆ, ಕೋವಿಡ್ ಸಾಂಕ್ರಾಮಿಕದ ಕಾರಣಕ್ಕೆ ಜನಗಣತಿಯನ್ನು ಅನಿರ್ದಿಷ್ಟಾವಧಿ ಮುಂದೂಡಲಾಯಿತು. ನಂತರ ಜನಗಣತಿಗೆ ಕೇಂದ್ರ ಸರ್ಕಾರ ಆಸಕ್ತಿ ತೋರಲೇ ಇಲ್ಲ

ಪ್ರಜಾವಾಣಿ ವಾರ್ತೆ

‘ರಾಷ್ಟ್ರವ್ಯಾಪಿ ಜಾತಿಗಣತಿಯನ್ನು ಮಾಡಲೇಬೇಕು ಎನ್ನುವ ಮೂಲಕ ಹಿಂದೂಗಳನ್ನು ಒಡೆಯುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ. ಜನಗಣತಿಯ ಆಧಾರದಲ್ಲಿಯೇ ಸಂಪನ್ಮೂಲಗಳ ಹಂಚಿಕೆ ಆಗಬೇಕು ಎನ್ನುವುದಾದರೆ, ಮುಸ್ಲಿಮರ ಹಕ್ಕುಗಳನ್ನು ಮೊಟಕು ಮಾಡಲು ಕಾಂಗ್ರೆಸ್ ಬಯಸುತ್ತದೆಯೇ? ಈ ದೇಶದ ಜನಸಂಖ್ಯೆಯಲ್ಲಿ ಬಡವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ. ಜಾತಿ, ಧರ್ಮವನ್ನು ಮೀರಿ ದೇಶದ ಸಂಪನ್ಮೂಲಗಳ ಮೇಲೆ ಬಡವರಿಗೆ ಹಕ್ಕಿದೆ. ಮತಬ್ಯಾಂಕ್ ರಾಜಕಾರಣಕ್ಕಾಗಿ ಸಮಾಜವನ್ನು ಕಾಂಗ್ರೆಸ್ ಒಡೆಯುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಛತ್ತೀಸಗಢದಲ್ಲಿ ಮಂಗಳವಾರ ನಡೆದ ರ‍್ಯಾಲಿಯಲ್ಲಿ ಹೇಳಿದ್ದಾರೆ.

ಬಿಹಾರದಲ್ಲಿ ಜಾತಿಗಣತಿ ವರದಿಯನ್ನು ಬಿಡುಗಡೆ ಮಾಡಲಾಗಿದೆ. ಶೇ 84.46ರಷ್ಟು ಇತರೆ ಹಿಂದುಳಿದ ವರ್ಗ, ಅತ್ಯಂತ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪಂಗಡದವರು ಇಲ್ಲಿ ಇದ್ದಾರೆ ಎಂಬುದು ವರದಿಯಿಂದ ಗೊತ್ತಾಗಿದೆ.

ಜಾತಿಗಣತಿ ಮಾಡಬೇಕು ಎನ್ನುವ ಒತ್ತಾಯ ಇತ್ತೀಚಿನ ವರ್ಷಗಳಲ್ಲಿ ತೀವ್ರಗೊಂಡಿದೆ. ಪ್ರಮುಖ ವಿರೋಧ ಪಕ್ಷಗಳು ಈ ಬಗ್ಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿವೆ. ಕೋವಿಡ್ ಕಾರಣದಿಂದ ಹೇಗೂ ಜನಗಣತಿ ಮಾಡಲಾಗಲಿಲ್ಲ. ಆದ್ದರಿಂದ ಈಗಲಾದರೂ ಜನಗಣತಿಯ ಹೊತ್ತಿನಲ್ಲೇ ಜಾತಿಗಣತಿಯನ್ನೂ ಮಾಡಿಬಿಡಿ ಎನ್ನುತ್ತಿವೆ. ಜಾತಿಗಣತಿ ಬೇಡಿಕೆಯನ್ನು ಬಿಜೆಪಿ ಹಿಂದಿನಿಂದಲೂ ವಿರೋಧಿಸಿಕೊಂಡೇ ಬಂದಿದೆ. ಇದಕ್ಕಾಗಿಯೇ ಕೇಂದ್ರವು ಜನಗಣತಿಯನ್ನು ಮುಂದೂಡುತ್ತಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

1990ರಲ್ಲಿ ಮಂಡಲ್ ಸಮಿತಿಯ ವರದಿಯನ್ನು ವಿ.ಪಿ. ಸಿಂಗ್ ಅವರು ಒಪ್ಪಿಕೊಂಡು ಶೇ 27ರಷ್ಟು ಮೀಸಲಾತಿಯನ್ನು ಇತರೆ ಹಿಂದುಳಿದ ವರ್ಗಕ್ಕೆ ನೀಡಿದರು. ಇದನ್ನು ವಿರೋಧಿಸಿ ಬಿಜೆಪಿಯು ರಾಷ್ಟ್ರಮಟ್ಟದಲ್ಲಿ ದೊಡ್ಡ ಹೋರಾಟವನ್ನೇ ಮಾಡಿತು. ‘ಮಂಡಲದ ವಿರುದ್ಧ ಕಮಂಡಲ’ ಎನ್ನುತ್ತಾ ಎಲ್.ಕೆ. ಅಡ್ವಾಣಿ ಅವರು ರಥಯಾತ್ರೆಯನ್ನು ಕೈಗೊಂಡರು. ಜಾತಿಗಳ ಆಧಾರದಲ್ಲಿ ಅಲ್ಲದೇ ‘ಹಿಂದೂ’ ಎಂಬ ಹೆಸರಿನಲ್ಲಿ ರಾಜಕೀಯ ಸಂಕಥನವನ್ನು ದೊಡ್ಡ ಮಟ್ಟದಲ್ಲಿ ಆರಂಭಿಸಿದರು. 2014ರಿಂದ ಈಚೆಗೆ ಮೋದಿ ನೇತೃತ್ವದ ಸರ್ಕಾರ ಕೂಡ ‘ಹಿಂದೂ’ ಎನ್ನುವ ಸಂಕಥನದ ಅಡಿಯಲ್ಲಿಯೇ ರಾಜಕೀಯ ನಡೆಸಿದೆ.

ಮಂಡಲ್ ಸಮಿತಿ ವರದಿಯನ್ನು ವಿರೋಧಿಸುವ ಸಂಕಥನವನ್ನು ಆರಂಭಿಸಲು, ಈ ವರದಿಯಿಂದಾಗಿ ಹುಟ್ಟಿಕೊಂಡ ಅನೇಕ ಪ್ರಾದೇಶಿಕ ಪಕ್ಷಗಳನ್ನು ಹಿಂದಿಕ್ಕಲು ಬಿಜೆಪಿಗೆ ಹಲವು ವರ್ಷಗಳೇ ಬೇಕಾಯಿತು. ಈ ಎಲ್ಲ ಪ್ರಯತ್ನಗಳಿಂದಾಗಿ 2014ರಲ್ಲಿ ಬಿಜೆಪಿ ದೇಶದ ಅಧಿಕಾರದ ಗದ್ದುಗೆಗೆ ಏರಿತು. ಈ ಹಂತದಲ್ಲಿ ಜಾತಿಗಣತಿ ನಡೆಸಿದರೆ, ಬಿಜೆಪಿಯು ತನ್ನೆಲ್ಲಾ ರಾಜಕೀಯ ಸಂಕಥನಗಳನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ. ಮತ್ತು ಪ್ರಸ್ತುತ ಅದು ತನ್ನ ರಾಜಕೀಯ ನೆಲೆಯನ್ನು ಕಳೆದುಕೊಳ್ಳುತ್ತದೆ ಎನ್ನುವುದು ರಾಜಕೀಯ ವಿಶ್ಲೇಷಕರಲ್ಲಿ ಹಲವರ ಅಭಿಪ್ರಾಯವಾಗಿದೆ. ಪ್ರಧಾನಿ ಮೋದಿ ಅವರ ಹೇಳಿಕೆಯು ಈ ಎಲ್ಲಾ ಆತಂಕಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಮನಮೋಹನ ಸಿಂಗ್ ಅವರು ಪ್ರಧಾನಿ ಆಗಿದ್ದ 2011ರ ಸಂದರ್ಭದಲ್ಲಿ ಜಾತಿಗಣತಿ ಮಾಡಲಾಗಿತ್ತು. ಆದರೆ, ವರದಿಯನ್ನು ಬಹಿರಂಗಗೊಳಿಸಿರಲಿಲ್ಲ. ಕೊನೇ ಪಕ್ಷ ಇದನ್ನಾದರೂ ಬಹಿರಂಗಗೊಳಿಸಿ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಕೇಂದ್ರವನ್ನು ಹಲವು ಬಾರಿ ಒತ್ತಾಯಿಸಿದ್ದಾರೆ. ಆದರೆ, ಕೇಂದ್ರವು ಈ ವರದಿಯನ್ನೂ ಬಿಡುಗಡೆ ಮಾಡಿಲ್ಲ.

ಯಾವ ದತ್ತಾಂಶವೂ ಇಲ್ಲ ಕೇವಲ ಅಂದಾಜಷ್ಟೆ...

ಜನಗಣತಿಯ ದತ್ತಾಂಶಗಳು ಇಲ್ಲದೇ ಇದ್ದರೆ, ಕೇಂದ್ರ ಸರ್ಕಾರವು ತನ್ನೆಲ್ಲಾ ಯೋಜನೆಗಳಿಗೆ ಯಾವ ದತ್ತಾಂಶಗಳನ್ನು ಆಧಾರವಾಗಿ ತೆಗೆದುಕೊಂಡಿದೆ ಎಂಬುದು ಪ್ರಶ್ನೆ. ವಿರೋಧ ಪಕ್ಷಗಳ ಸದಸ್ಯರೂ ರಾಜ್ಯಸಭೆಯಲ್ಲಿ ಇದೇ ಪ್ರಶ್ನೆ ಕೇಳಿದ್ದರು. ಆ ಪ್ರಶ್ನೆಗೆ 2022ರ ಜುಲೈನಲ್ಲಿ ಉತ್ತರಿಸಿದ್ದ ಗೃಹಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು, ‘ಸರ್ಕಾರದ ಬಳಿ 2011–2036ರ ಜನಸಂಖ್ಯಾ ಅಂದಾಜು ವರದಿ ಇದೆ’ ಎಂದು ಹೇಳಿದ್ದರು.

ಜನಸಂಖ್ಯಾ ಅಂದಾಜು ಆಧಾರದಲ್ಲಿ ಯಾವೆಲ್ಲಾ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ ಎಂಬುದರ ಮಾಹಿತಿಯನ್ನು ಸರ್ಕಾರ ನೀಡಿಲ್ಲ. ಅಂದಾಜು ವರದಿಯಲ್ಲಿ ವಿವಿಧ ವಯಸ್ಸಿನ ಜನರ ಪ್ರಮಾಣ, ಲಿಂಗಾನುಪಾತದ ವಿವರಗಳಷ್ಟೇ ಇವೆ. ಸಾಕ್ಷರತೆ ಪ್ರಮಾಣ, ಬಡತನದ ಪ್ರಮಾಣ, ನಿರುದ್ಯೋಗದ ಪ್ರಮಾಣದ ವಿವರಗಳು ಇಲ್ಲ. ಈ ಎಲ್ಲಾ ದತ್ತಾಂಶಗಳನ್ನು ಸಮೀಕ್ಷೆ ರೂಪದಲ್ಲಿ ಸಂಗ್ರಹಿಸುವ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಹ ನಡೆದಿಲ್ಲ. ಹಾಗಿದ್ದಲ್ಲಿ ಬಡತನ ನಿರ್ಮೂಲನೆಗೆ, ಉದ್ಯೋಗ ಸೃಷ್ಟಿಗೆ ಮತ್ತು ಅನಕ್ಷರತೆ ನಿವಾರಣೆಗೆ ಕ್ರಮ ತೆಗೆದುಕೊಳ್ಳಲು ಸರ್ಕಾರವು ಯಾವ ದತ್ತಾಂಶಗಳನ್ನು ಬಳಸಿಕೊಳ್ಳುತ್ತಿದೆ ಎಂಬ ಮಾಹಿತಿ ಇಲ್ಲ.

ಹಲವು ಕೊರತೆಗಳು

ಕೇಂದ್ರ ಸರ್ಕಾರವು ಪ್ರತಿ ವರ್ಷ ಎಲ್ಲಾ ರಾಜ್ಯ ಸರ್ಕಾರಗಳಿಗೆ ಅನುದಾನ ಹಂಚಿಕೆ ಮಾಡುತ್ತದೆ. ಯಾವ ರಾಜ್ಯಕ್ಕೆ ಎಷ್ಟು ಅನುದಾನ ನೀಡಬೇಕು ಎಂಬುದನ್ನು ಹಣಕಾಸು ಆಯೋಗವು ಶಿಫಾರಸು ಮಾಡುತ್ತದೆ. ಹೀಗೆ ಅನುದಾನದ ಪ್ರಮಾಣವನ್ನು ನಿಗದಿ ಮಾಡುವಲ್ಲಿ ಆಯಾ ರಾಜ್ಯದ ಜನಸಂಖ್ಯೆ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಆಧಾರವಾಗಿ ಇಟ್ಟುಕೊಳ್ಳಲಾಗುತ್ತದೆ. ಈ ಕಾರಣದಿಂದಲೇ ಹೆಚ್ಚು ಜನಸಂಖ್ಯೆ ಹೊಂದಿರುವ ಮತ್ತು ಬಡತನ ಹೆಚ್ಚಿರುವ ರಾಜ್ಯಗಳಿಗೆ ಹೆಚ್ಚಿಗೆ ಅನುದಾನ ಸಿಗುತ್ತದೆ. ಜನಸಂಖ್ಯೆ ಮತ್ತು ಆರ್ಥಿಕ ಸ್ಥಿತಿ ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಕಾಲಕ್ಕೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಅದು ಬದಲಾಗಿದೆ ಎಂಬುದು ಗೊತ್ತಾಗುವುದು ಜನಗಣತಿಯ ಮೂಲಕ ಮಾತ್ರ. ಈಗಿನ ಜನಗಣತಿ ದತ್ತಾಂಶಗಳು ಇಲ್ಲದೇ ಇರುವ ಕಾರಣಕ್ಕೆ, ಈ ಹಿಂದೆ ಬಡತನ ಹೆಚ್ಚು ಇದ್ದು ಈಗ ಉತ್ತಮ ಸ್ಥಿತಿಯಲ್ಲಿ ಇರುವ ರಾಜ್ಯಗಳಿಗೆ ಹೆಚ್ಚು ಅನುದಾನ ಹಂಚಿಕೆಯಾಗುತ್ತಿರುವ ಸಾಧ್ಯತೆ ಇದೆ.

ಉದಾಹರಣೆಗೆ: ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತು ಉತ್ತರ ಪ್ರದೇಶಗಳನ್ನು ಬಡತನ ಹೆಚ್ಚಿರುವ ಮತ್ತು ಅತಿಹಿಂದುಳಿದಿರುವ ರಾಜ್ಯಗಳು ಎಂದು ಗುರುತಿಸಲಾಗಿದೆ. ಇಲ್ಲಿ ಸಂಗ್ರಹವಾಗುವ ತೆರಿಗೆಗಿಂತ ಹಲವು ಪಟ್ಟು ಹೆಚ್ಚು ಅನುದಾನವನ್ನು ನೀಡಲಾಗುತ್ತದೆ. ಆದರೆ ಮಧ್ಯ ಪ್ರದೇಶ ಸರ್ಕಾರವು, ಕೇಂದ್ರ ಸರ್ಕಾರಕ್ಕೆ ಈಚೆಗೆ ಒಂದು ಮನವಿ ಮಾಡಿತ್ತು. ‘ನಮ್ಮಲ್ಲಿ ಆರ್ಥಿಕ ಸ್ಥಿತಿ ಸುಧಾರಿಸಿದೆ. ಹಾಗಾಗಿ ಅತಿಹಿಂದುಳಿದ ರಾಜ್ಯಗಳ ಪಟ್ಟಿಯಿಂದ ನಮ್ಮನ್ನು ತೆಗೆದುಹಾಕಬೇಕು’ ಎಂದು ಕೋರಿತ್ತು. ಆದರೆ ಜನಗಣತಿಯ ದತ್ತಾಂಶಗಳು ಇಲ್ಲದೆ ಕೇಂದ್ರವು ಅಂಥ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಬಡವರಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಉಚಿತವಾಗಿ ಇನ್ನು ಕೆಲವು ರಾಜ್ಯಗಳಲ್ಲಿ ಅತ್ಯಂತ ಕಡಿಮೆ ದರದಲ್ಲಿ ಪಡಿತರವನ್ನು ನೀಡಲಾಗುತ್ತಿದೆ. ಇದರಲ್ಲಿ ಬಹುಪಾಲನ್ನು ಕೇಂದ್ರವು ‘ಆಹಾರ ಭದ್ರತಾ ಕಾಯ್ದೆ’ಯ ಅಡಿಯಲ್ಲಿ ರಾಜ್ಯಗಳಿಗೆ ಒದಗಿಸುತ್ತದೆ. ಹೀಗೆ ಕೇಂದ್ರ ಸರ್ಕಾರವು 2011ರ ಜನಗಣತಿಯ (121 ಕೋಟಿ) ಆಧಾರದಲ್ಲಿ 80 ಕೋಟಿ ಜನಕ್ಕೆ ತನ್ನ ಪಾಲಿನ ಪಡಿತರವನ್ನು ಒದಗಿಸುತ್ತಿದೆ. ಆದರೆ ಈಗ ಭಾರತದ ಜನಸಂಖ್ಯೆ 141 ಕೋಟಿಯನ್ನು ಮೀರಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ವಿಶ್ವ ಬ್ಯಾಂಕ್‌ನ ವರದಿಯ ಪ್ರಕಾರ ಈಗ ಭಾರತವು 97 ಕೋಟಿ ಜನರಿಗೆ ಪಡಿತರ ಒದಗಿಸಬೇಕಿತ್ತು. ಜನಸಂಖ್ಯಾ ವರದಿ ಇಲ್ಲದೇ ಇರುವ ಕಾರಣಕ್ಕೆ 80 ಕೋಟಿ ಜನರಿಗಷ್ಟೇ ಪಡಿತರ ಒದಗಿಸಲಾಗುತ್ತಿದ್ದು, 13 ಕೋಟಿಗೂ ಹೆಚ್ಚು ಜನ ಈ ಯೋಜನೆಯಿಂದ ವಂಚಿತರಾಗಿದ್ದಾರೆ ಎಂದು ಕೇಂದ್ರವೇ ರಾಜ್ಯಸಭೆಗೆ ಮಾಹಿತಿ ನೀಡಿತ್ತು. ಜನಗಣತಿಯ ದತ್ತಾಂಶಗಳು ಇಲ್ಲದೆ ಕೇಂದ್ರ ಸರ್ಕಾರವು ಪಡಿತರದಲ್ಲಿ ತನ್ನ ಪಾಲನ್ನು ಹೆಚ್ಚಿಸಿಕೊಳ್ಳಲು ಆಗುವುದಿಲ್ಲ.

ಕೋವಿಡ್ ಕಾಲದಲ್ಲಿ ಗಣತಿ

ದೇಶ	ಜನಗಣತಿ ನಡೆದ ವರ್ಷ	ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ
ಅಮೆರಿಕ	2020	15,536
ಜಪಾನ್	2020	527
ಇಟಲಿ	2021	23,477
ಬ್ರಿಟನ್	2021	41,508
ಚೀನಾ	2020	34

- ಭಾರತದಲ್ಲಿ ಒಂದು ವೇಳೆ 2021ರಲ್ಲಿ ನಿಗದಿಯಂತೆ ಜನಗಣತಿ ನಡೆದಿದ್ದರೆ, ಮೊದಲ ಹಂತದ ಪ್ರಕ್ರಿಯೆ ನಡೆಯುವ ಸೆಪ್ಟೆಂಬರ್‌ನಲ್ಲಿ (ಸೆ.1,2020) ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 69,921 ಇತ್ತು. ಎರಡನೇ ಹಂತದ ಪ್ರಕ್ರಿಯೆ ನಡೆಯುವ ಫೆಬ್ರುವರಿಯಲ್ಲಿ (ಫೆ.1,2021) ಈ ಸಂಖ್ಯೆ 11,427 ಇತ್ತು
- ಇಟಲಿಯಲ್ಲಿ 2021ರಲ್ಲಿ ಗಣತಿ ಪ್ರಕ್ರಿಯೆ ಆರಂಭವಾದ ಮಾಹಿತಿ ಇದೆ. ಆದರೆ, ಯಾವ ತಿಂಗಳಲ್ಲಿ ಎನ್ನುವ ಎಂಬ ಮಾಹಿತಿ ದೊರಕದ ಕಾರಣ, 2021ರ ಜನವರಿ 1 ಸಕ್ರಿಯ ಪ್ರಕರಣ ಮಾಹಿತಿಯನ್ನು ನೀಡಲಾಗಿದೆ. ಇತರ ದೇಶಗಳಿಗೆ ಸಂಬಂಧಿಸಿ, ಜನಗಣತಿ ಆರಂಭಗೊಂಡ ತಿಂಗಳ ಮೊದಲ ದಿನದ ಸಕ್ರಿಯ ಪ್ರಕರಣಗಳ ಮಾಹಿತಿಯನ್ನು ನೀಡಲಾಗಿದೆ

ಜನಗಣತಿ ಏಕೆ ಅಗತ್ಯ

- ದೇಶದಲ್ಲಿನ ಬಡತನದ ಪ್ರಮಾಣದ ನೈಜ ಚಿತ್ರಣ ದೊರೆಯುವುದಿಲ್ಲ. ಬಡತನ ನಿರ್ಮೂಲನೆಗೆ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದು ಗೊತ್ತಾಗುವುದಿಲ್ಲ
- ದೇಶದಲ್ಲಿನ ಜನರ ಸಾಕ್ಷರತೆ ಪ್ರಮಾಣ ಎಷ್ಟು ಎಂಬುದನ್ನು ಜನಗಣತಿಯಲ್ಲಿ ಕಲೆಹಾಕಲಾಗುತ್ತದೆ. ಜನಗಣತಿಯೇ ನಡೆಯದಿದ್ದರೆ, ಈ ದತ್ತಾಂಶ ಸರ್ಕಾರಕ್ಕೆ ಲಭ್ಯವಾಗುವುದಿಲ್ಲ. ದೇಶದಲ್ಲಿ ಸಾಕ್ಷರತೆ ಯಾವ ಮಟ್ಟದಲ್ಲಿದೆ, ಸಾಕ್ಷರತೆ ಹೆಚ್ಚಿಸುವ ಉದ್ದೇಶದ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿವೆಯೇ, ಸಾಕ್ಷರತೆ ಹೆಚ್ಚಿಸಲು ಯಾವ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಕರಾರುವಾಕ್ಕಾಗಿ ನಿರ್ಧರಿಸಲು ಸಾಧ್ಯವಾಗುವುದಿಲ್ಲ
- ನಿರುದ್ಯೋಗದ ಪ್ರಮಾಣದ ಮಾಹಿತಿ ದೊರೆಯುವುದಿಲ್ಲ. ನಿರುದ್ಯೋಗ ನಿವಾರಣೆಗೆ ಪರಿಣಾಮಕಾರಿಯಾದ ನೀತಿ ರೂಪಿಸಲು ಆಗುವುದಿಲ್ಲ. ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸಹ ನಿರುದ್ಯೋಗ ಪ್ರಮಾಣ ಕುರಿತು ವರದಿ ನೀಡುತ್ತದೆ. ಈಗ ಜನಗಣತಿಯ ದತ್ತಾಂಶಗಳು ಲಭ್ಯವಿಲ್ಲದೇ ಇರುವ ಕಾರಣ, ಎನ್‌ಎಸ್‌ಒವಿನ ನಿರುದ್ಯೋಗದ ವರದಿಗಳಲ್ಲಿ ನಿಖರತೆ ಇಲ್ಲ ಎಂದು ಅವುಗಳನ್ನು ತಡೆಹಿಡಿಯಲಾಗಿದೆ

ಆಧಾರ: ಪಿಟಿಐ, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಸಚಿವಾಲಯ ನೀಡಿದ್ದ ಉತ್ತರ

ಸಿನಿ ಬಿಟ್ಸ್

ಮಾತು ಮುಗಿಸಿದ ‘ಮಾಫಿಯಾ’



ಪ್ರಜ್ವಲ್ ದೇವರಾಜ್

ಪ್ರಜ್ವಲ್ ದೇವರಾಜ್, ಅದಿತಿ ಪ್ರಭುದೇವ ಜೋಡಿಯಾಗಿರುವ ‘ಮಾಫಿಯಾ’ ಚಿತ್ರದ ಡಬ್ಬಿಂಗ್ ಇತ್ತೀಚೆಗಷ್ಟೇ ಮುಕ್ತಾಯಗೊಂಡಿದೆ.

ಲೋಹಿತ್ ಎಚ್. ನಿರ್ದೇಶಿಸಿ, ಕುಮಾರ್ ಬಿ. ನಿರ್ಮಿಸಿರುವ ಚಿತ್ರ ಆ್ಯಕ್ಷನ್ ಕಥೆ ಹೊಂದಿದ್ದು, ಬೆಂಗಳೂರು, ಮೈಸೂರು ಹಾಗೂ ಹೈದರಾಬಾದ್‌ನಲ್ಲಿ ಚಿತ್ರೀಕರಣ ನಡೆದಿದೆ.

‘ಅಕ್ಟೋಬರ್‌ನಲ್ಲಿ ಟೀಸರ್ ಬರಲಿದ್ದು, ನವೆಂಬರ್ ಅಂತ್ಯದ ವೇಳೆಗೆ ಸಿನಿಮಾ ತೆರೆಗೆ ಬರಲಿದೆ. ಮೈನವಿರೇಳಿಸುವ ಐದು ಸಾಹಸ ಸನ್ನಿವೇಶಗಳಿದ್ದು, ಪ್ರಜ್ವಲ್ ಅವರು ಸಾಕಷ್ಟು ಶ್ರಮವಹಿಸಿದ್ದಾರೆ’ ಎಂದು ನಿರ್ದೇಶಕ ಲೋಹಿತ್ ಹೇಳಿದ್ದಾರೆ.

ಈ ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಅನೂಪ್ ಸೀಳಿನ್ ಸಂಗೀತ ನೀಡಿದ್ದಾರೆ. ಎಸ್. ಪಾಂಡಿಕುಮಾರ್ ಛಾಯಾಗ್ರಹಣವಿರುವ ಈ ಚಿತ್ರದಲ್ಲಿ ದೇವರಾಜ್, ಸಾಧುಕೋಕಿಲ, ಶೈನ್ ಶೆಟ್ಟಿ, ವಿಜಯ್ ಚೆಂಡೂರ್, ವಾಸುಕಿ ವೈಭವ್ ಮುಂತಾದವರಿದ್ದಾರೆ.

‘ಶುಗರ್ ಫ್ಯಾಕ್ಟರಿ’ಯಲ್ಲಿ ಡಾರ್ಲಿಂಗ್ ಕೃಷ್ಣ

ರುಹಾನಿ ಶೆಟ್ಟಿ

‘ಕೌಸಲ್ಯ ಸುಪ್ರಜಾ ರಾಮ’ ಯಶಸ್ಸಿನ ನಂತರ ಡಾರ್ಲಿಂಗ್ ಕೃಷ್ಣ ನಾಯಕರಾಗಿ ನಟಿಸಿರುವ ‘ಶುಗರ್ ಫ್ಯಾಕ್ಟರಿ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ದೀಪಕ್ ಅರಸ್ ನಿರ್ದೇಶಿಸಿರುವ ಈ ಚಿತ್ರ ಮನರಂಜನೆ ಹಾಗೂ ಹಾಸ್ಯಭರಿತವಾಗಿದೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ತಿಳಿಯುತ್ತಿದೆ.

‘ಇದು ಕಲರ್‌ಫುಲ್, ಯೂತ್ ಸಿನಿಮಾವಾಗಿದೆ. ಹಾಗಂತ ಬರೀ ಯುವಕರಿಗೆ ಸೀಮಿತವಾದ ಸಿನಿಮಾವಲ್ಲ. ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ಕುಳಿತು ನೋಡಬಹುದಾದ ಮನೋರಂಜನಾತ್ಮಕ ಸಿನಿಮಾವಿದು’ ಎಂದರು ಚಿತ್ರದ ನಿರ್ದೇಶಕ ದೀಪಕ್ ಅರಸ್.

ಗಿರೀಶ್ ನಿರ್ಮಿಸಿರುವ ಚಿತ್ರ ನವೆಂಬರ್ 24ರಂದು ರಾಜ್ಯದಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಸೋನಾಲ್ ಮಾಂತೆರೊ, ಅದ್ವಿತಿ ಶೆಟ್ಟಿ, ರುಹಾನಿ ಶೆಟ್ಟಿ ಚಿತ್ರದ ನಾಯಕಿಯರು.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸೇತುವೆಯೊಂದರ ಮೇಲೆ ಭದ್ರತಾ ಸಿಬ್ಬಂದಿಯ ಟ್ರಕ್ ಇರುವ, ಅಕ್ಕ-ಪಕ್ಕದಲ್ಲಿ ಪೊಲೀಸರು ಎಂದು ತೋರುವ ಕೆಲವು ವ್ಯಕ್ತಿಗಳ ಮೇಲೆ ಗುಂಪೊಂದು ದಾಳಿ ನಡೆಸುತ್ತಿರುವುದನ್ನು ತೋರಿಸುವ ವಿಡಿಯೊವೊಂದು ವ್ಯಾಟ್ಸ್‌ಆ್ಯಪ್‌ನಲ್ಲಿ ಹಂಚಿಕೆಯಾಗುತ್ತಿದೆ. ‘ಮಣಿಪುರದಲ್ಲಿ ಭದ್ರತಾ ಸಿಬ್ಬಂದಿ ಮೇಲೆ ಮೈತೇಯಿ ಸಮುದಾಯದವರು ದಾಳಿ ನಡೆಸುತ್ತಿದ್ದಾರೆ. ಆ ಸಮುದಾಯದವರು ಅಶ್ರುವಾಯು ಷೆಲ್‌ಗಳನ್ನು ಭದ್ರತಾ ಸಿಬ್ಬಂದಿ ಮೇಲೆ ಸಿಡಿಸುತ್ತಿದ್ದಾರೆ. ಬಹಳ ದುಃಖಕರ ಸಂಗತಿ’ ಎಂಬ ಬರಹ ಕೂಡ ಇದೆ. ಆದರೆ, ಇದು ಮಣಿಪುರದ ಘಟನೆ ಅಲ್ಲ.

ಜುಲೈನಲ್ಲಿ ಈ ವಿಡಿಯೊ ಇರುವ ಪೋಸ್ಟ್ ಫೇಸ್‌ಬುಕ್‌ನಲ್ಲಿ ಹಂಚಿಕೆಯಾಗಿತ್ತು. ಇದು ಕೆನ್ಯಾ ದೇಶಕ್ಕೆ ಸಂಬಂಧಿಸಿ ವಿಡಿಯೊವಾಗಿದೆ. ಅಲ್ಲಿನ ಆಡಳಿತ ಪಕ್ಷದ ವಿರುದ್ಧ ವಿರೋಧ ಪಕ್ಷವು ತೀವ್ರ ಪ್ರತಿಭಟನೆ, ಹೋರಾಟ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಕೆನ್ಯಾ ಪೊಲೀಸರ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿದ್ದಾರೆ. ಈ ವಿಡಿಯೊವನ್ನು ಎನ್‌ಟಿವಿ ಕೆನ್ಯಾ ಎನ್ನುವ ಅಲ್ಲಿನ ಸುದ್ದಿ ಸಂಸ್ಥೆ ಕೂಡ ಪ್ರಕಟಿಸಿದೆ. ಆದ್ದರಿಂದ, ಇದು ಮಣಿಪುರದಲ್ಲಿ ನಡೆದ ಘಟನೆ ಅಲ್ಲ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಯೋಚಿಸಿದಂತೆ ಬದುಕು

ನುಡಿ ಬೆಳಗು



ಪ್ರೊ.ಎಂ. ಕೃಷ್ಣೇಗೌಡ

ಅದೊಂದು ಬಿಲ್ಲು ವಿದ್ಯೆ ಕಲಿಸುವ ಶಾಲೆ. ಹಿಮಾಲಯ ತಪ್ಪಲಿನ ಕಾಡಿನ ಮಧ್ಯದಲ್ಲಿತ್ತು ಅದು. ಆ ಶಾಲೆಗೆ ತನ್ನ ಮಗನನ್ನು ಸೇರಿಸಲು ಹೋಗುತ್ತಿದ್ದ ರಾಮ್ ಪಾಲ್. ಶಾಲೆ ಸಮೀಪಿಸಿದಂತೆ ಅವನು ಒಂದು ವಿಶೇಷವನ್ನು ಗಮನಿಸಿದ. ಸುತ್ತಮುತ್ತಲ ಮರಗಳ ಕಾಂಡದ ಮೇಲೆ ಒಂದೊಂದು ವೃತ್ತಾಕಾರದ ಗುರುತಿನ ಸರೀ ಮಧ್ಯಕ್ಕೆ ಬಾಣಗಳು ನಾಟಿದ್ದವು. ರಾಮ್ ಪಾಲ್ ಸರಿಯಾಗಿಯೇ ಊಹಿಸಿದ. ಈ ಪ್ರದೇಶದಲ್ಲಿ ಶಾಲೆಯ ವಿದ್ಯಾರ್ಥಿಗಳಿಗೆ ಬಿಲ್ಲು ವಿದ್ಯಾಭ್ಯಾಸ ನಡೆಯುತ್ತದೆ. ವಿದ್ಯಾರ್ಥಿಗಳು ಮರದ ಕಾಂಡಗಳಿಗೆ ಬಾಣ ಬಿಟ್ಟು ಆ ವೃತ್ತಾಕಾರದ ಗುರುತುಗಳ ಮಧ್ಯಕ್ಕೆ ಬಾಣಗಳನ್ನು ನಾಟಿದ್ದಾರೆ. ಆದರೆ ಅವನಿಗೆ ಅಚ್ಚರಿಯಾದುದೇನೆಂದರೆ ಎಲ್ಲ ಬಾಣಗಳೂ ಗುರಿಯ ಮಧ್ಯಕ್ಕೆ ಸರಿಯಾಗಿ ನಾಟಿವೆ. ಎಲಾ ಎಲಾ! ಎಷ್ಟು ಚಂದ ಬಿಲ್ಲು ವಿದ್ಯಾಭ್ಯಾಸ ನಡೆದಿದೆ ಇಲ್ಲಿ ಅಂದುಕೊಂಡ.

ರಾಮ್ ಪಾಲ್ ತನ್ನ ಮಗನೊಂದಿಗೆ ಹೋಗಿ ಶಾಲೆಯ ಪ್ರಿನ್ಸಿಪಾಲರನ್ನು ಕಂಡ. ಪ್ರಿನ್ಸಿಪಾಲರು ಕೆಲವು ಪ್ರಶ್ನೆಗಳನ್ನು ಕೇಳಿ ವಿದ್ಯಾರ್ಥಿಯನ್ನು ಶಾಲೆಗೆ ಸೇರಿಸಿಕೊಳ್ಳಲು ಒಪ್ಪಿಕೊಂಡರು.

ಆಗ ರಾಮ್ ಪಾಲ್ ತಾನು ಬರುವ ದಾರಿಯಲ್ಲಿ ಕಂಡ ವಿಶೇಷವನ್ನು ಹೇಳಿ ಪ್ರಿನ್ಸಿಪಾಲರನ್ನು ಕೇಳಿದ- ‘ಮರಗಳ ಕಾಂಡದ ಮೇಲೆ ಆ ವೃತ್ತಾಕಾರದ ಗುರುತುಗಳ ಮಧ್ಯಕ್ಕೆ ಸರಿಯಾಗಿ ನಿಮ್ಮ ವಿದ್ಯಾರ್ಥಿಗಳು ಬಾಣಗಳನ್ನು ನಾಟಿದ್ದಾರಲ್ಲ, ಅದು ಹೇಗೆ ಸಾಧ್ಯ? ಅವರಲ್ಲಿ ಯಾರೊಬ್ಬರೂ ಗುರಿ ತಪ್ಪುವುದೇ ಇಲ್ಲವೆ’.

ಪ್ರಿನ್ಸಿಪಾಲರು ನಕ್ಕು ಉತ್ತರಿಸಿದರು- ‘ಅದು ಹಾಗಲ್ಲ, ನಾವು ವಿದ್ಯಾರ್ಥಿಗಳಿಗೆ ಮನಸೋ ಇಚ್ಛೆ ಬಾಣಪ್ರಯೋಗ ಮಾಡಲು ಹೇಳುತ್ತೇವೆ. ಅವರು ಬಾಣ ಪ್ರಯೋಗ ಮಾಡಿದ ಮೇಲೆ ಬಾಣಗಳು ಎಲ್ಲೆಲ್ಲಿ ನಾಟಿವೆಯೋ ಅದರ ಸುತ್ತಾ ವೃತ್ತಾಕಾರದ ಗುರುತುಗಳನ್ನು ಹಾಕುತ್ತೇವೆ. ಎಷ್ಟೋ ಬಾಣಗಳು ಮರದ ಕಾಂಡಗಳಿಗೆ ತಾಕದೇ ಎಲ್ಲೆಲ್ಲೋ ಬಿದ್ದುಹೋಗುತ್ತವೆ. ಅಂಥವನ್ನು ಅಲ್ಲಿಂದ ಎತ್ತಿಕೊಂಡು ಬಂದುಬಿಡುತ್ತೇವೆ, ಅಷ್ಟೆ’

ರಾಮ್ ಪಾಲ್‌ಗೆ ಬೇಸರವಾಯಿತು. ‘ಹೀಗೆ ಮಾಡುವುದು ಸರಿಯಾ ನೀವು’ ಅಂತ ಪ್ರಿನ್ಸಿಪಾಲರನ್ನು ಕೇಳಿದ. ಅದಕ್ಕೆ ಅವರು ಹೇಳಿದರು- ‘ನಮ್ಮ ಬದುಕಿನಲ್ಲೂ ಬಹಳ ಸಲ ಹೀಗೇ ಆಗುತ್ತದೆ ಅಲ್ಲವಾ? ನಾವು ಸರಿಯಾದ ಗುರಿ ತಲುಪದೆ ಹೋದಾಗ ತಲುಪಿದ್ದನ್ನೇ ಗುರಿ ಎಂದುಕೊಳ್ಳುತ್ತೇವೆ. ಸರಿಯಾದುದನ್ನು ಮಾಡಲಾಗದೆ ಹೋದಾಗ ನಾವು ಮಾಡಿದ್ದನ್ನೇ ಸರಿ ಎನ್ನುತ್ತೇವೆ. ಹೌದು ತಾನೆ?’

ಯಾರೋ ಒಬ್ಬ ಜ್ಞಾನಿ ಹೇಳಿದ ಮಾತು ನೆನಪಾಗುತ್ತಿದೆ- ‘ನಾವು ಆಲೋಚಿಸಿದಂತೆ ಬದುಕಬೇಕು. ಇಲ್ಲವಾದರೆ ಕ್ರಮೇಣ ನಾವು ಬದುಕಿದಂತೆಯೇ ಆಲೋಚಿಸುವುದಕ್ಕೆ ಶುರುಮಾಡುಬಿಡುತ್ತೇವೆ’.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 6, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಸಪ್ತಮಿ ಗಂ. 06-36 ನಕ್ಷತ್ರ: ಆರ್ದ್ರಾ ಗಂ. 21-32 ಯೋಗ: ಪರಿಘ ಗಂ. 29-30 ಕರಣ: ಬವ ಗಂ. 06-36, ಕನ್ಯಾ ಮಾಸದ 19 ನೇ ದಿನ, ಮಳೆನಕ್ಷತ್ರ: ಹಸ್ತ 3.ರಾಹುಕಾಲ : ಬೆಳಿಗ್ಗೆ 10-30 – 12-00 ಸೂರ್ಯೋದಯ : 06-24 ಸೂರ್ಯಾಸ್ತ : 06-14
ಮುಸ್ಲಿಂ ದಿನಾಂಕ : 20 ರಬಿಉಲ್ಲಾವಲ್
ದಿನ ವಿಶೇಷ : ಮಹಾಲಕ್ಷ್ಮಿ ವ್ರತ ಸಂಪನ್ನಾ
ಅದೃಷ್ಟ ಸಂಖ್ಯೆ : 5, 10

ಮೇಷ: ಇಂದು ಮುಂಜಾನೆ ಏಳುವಾಗಲೇ ನೀವು ಉತ್ಸಾಹಿಗಳಾಗಿರುತ್ತೀರಿ. ಹಾಗೆಯೇ ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರು ವೃತ್ತಿ ಪರವಾಗಿ ಈ ದಿನ ಜವಾಬ್ದಾರಿಯುತವಾಗಿ ನಡೆದುಕೊಳ್ಳುವುದು ಉತ್ತಮ.

ವೃಷಭ: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಅವಕಾಶ ಸಿಗುವುದು. ನೆರೆ-ಹೊರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು. ಹೆಚ್ಚಿನ ಗಳಿಕೆಯ ಬಗ್ಗೆ ಚಿಂತಿಸಬೇಡಿ. ಕೆಲಸದಲ್ಲಿ ಅಸ್ತಿತ್ವ ಕಾಪಾಡಿಕೊಳ್ಳಿ.

ಮಿಥುನ: ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸುವಿರಿ. ಹಲವಾರು ಕಾರಣಗಳಿಗೆ ಸ್ನೇಹಿತರು ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರವನ್ನು ಅಪೇಕ್ಷಿಸಬಹುದು.

ಕರ್ಕಾಟಕ: ನೆಮ್ಮದಿಯ ವಿಷಯವೇನೆಂದರೆ ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ಆರಿಸಿಕೊಂಡ ಮಾರ್ಗದಲ್ಲಿ ಸರಿ ತಪ್ಪುಗಳ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ. ಲಾಭದಾಯಕ ದಿನ.

ಸಿಂಹ: ಎಲ್ಲರೊಂದಿಗೆ ಬೆರೆಯುವ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಸಂದರ್ಭವೊಂದು ಇಂದು ಬರಲಿದೆ. ತಾಳ್ಮೆ ಈ ದಿನದ ಮೂಲ ಮಂತ್ರವಾಗಲಿದೆ. ನಿರ್ಣಯ ಕೈಗೊಳ್ಳುವ ಸಮಯದಲ್ಲಿ ಸಹನೆ ಮುಖ್ಯ.

ಕನ್ಯಾ: ನೈತಿಕವಾಗಿ ಪರಸ್ಪರ ಬೆಂಬಲವಾಗಿರುವ ಸ್ನೇಹ ಸಂಬಂಧಕ್ಕೆ ಇನ್ನೂ ಹೆಚ್ಚಿನ ಪೌಷ್ಟಿಕತೆ ಸಿಕ್ಕಿ ಮುಂದುವರೆಯಲಿ. ನಿಮ್ಮ ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆಯನ್ನು ಆರಂಭಿಸುವ ಬಗ್ಗೆ ಅವರೊಂದಿಗೆ ಚರ್ಚೆ ನಡೆಸುವಿರಿ.

ತುಲಾ: ಬಟ್ಟೆ ವ್ಯಾಪಾರಿಗಳಿಗೆ ಉತ್ತಮ ಮಾರಾಟ ಹಾಗೂ ಉತ್ತಮ ಲಾಭವಾಗುವುದು. ಪತ್ರಿಕೆಯವರ ಸಹಕಾರದಿಂದ ಪ್ರಚಾರ ಪಡೆದುಕೊಳ್ಳುವಿರಿ. ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವಿರಿ.

ವೃಶ್ಚಿಕ: ಬೇರೆಯವರನ್ನು ಮರುಳುಗೊಳಿಸುವ ಮಾತಿನ ಕೌಶಲ ನಿಮ್ಮಲ್ಲಿದೆ, ಅದು ಮುಳ್ಳಾಗಬಹುದು. ಪ್ರಾಮಾಣಿಕತೆಯನ್ನು ದುರುಪಯೋಗಪಡಿಸಿಕೊಳ್ಳಲು ಬಿಡಬೇಡಿ. ಷೇರು ಇಂದು ಅದೃಷ್ಟದಾಯಕವಾಗಿರುತ್ತದೆ.

ಧನು: ಬೆಟ್ಟದಂತೆ ಕಂಡು ಬಂದ ಸಮಸ್ಯೆಯು ಬುದ್ಧಿವಂತಿಕೆಯಿಂದ ಮಂಜಿನಂತೆ ಕರಗುವುದು. ಅವಕಾಶಗಳನ್ನು ಹೆಚ್ಚಿಸಿಕೊಳ್ಳಲು ಈ ಸುಸಂದರ್ಭವನ್ನು ಸೂಕ್ತವಾಗಿ ಬಳಸಿಕೊಳ್ಳಿ. ಸ್ವಂತ ಉದ್ಯೋಗಿಗಳಿಗೆ ಲಾಭದಾಯಕ

ಮಕರ: ಆದರ್ಶ ವ್ಯಕ್ತಿಗಳ ತತ್ವವನ್ನು ಅನುಸರಿಸುವ ಜತೆಗೆ ಹಿರಿಯರ ಸಲಹೆಯನ್ನು ಅಳವಡಿಸಿಕೊಂಡಲ್ಲಿ ಯೋಚಿಸಿದ ಕಾರ್ಯಗಳು ನೆರವೇರುವುದು. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಕುಂಭ: ಆರೋಗ್ಯ ಉತ್ತಮವಾಗಿರುವುದು. ಬಂಡವಾಳ ಹೂಡಿಕೆ, ಷೇರು ಖರೀದಿ ವಿಚಾರಗಳತ್ತ ಆಸಕ್ತಿ ಹೆಚ್ಚಲಿದ್ದು, ಯೋಚಿಸಿ ವ್ಯವಹರಿಸಿ. ಬಹಳ ದಿನಗಳ ನಂತರ ಈ ನಿರ್ಣಯವನ್ನು ಕೈಗೊಳ್ಳಲಿದ್ದೀರಿ.

ಮೀನ: ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕವಾದ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಗೃಹ ನಿರ್ಮಾಣದ ಕೆಲಸವನ್ನು ಆರಂಭಿಸಲು ಸೂಕ್ತ ಸಮಯ ತಿಳಿದುಕೊಳ್ಳುವಿರಿ.

ಪದಬಂಧ 5462

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ರಾಜ ನಡುವಿದ್ದಾಗಲೇ ಸೋಲು! (4)
3.ಜೊತೆಯಲ್ಲಿ ವಾಸಿಸುವುದು (4)
5.ಕುಂಬಾರನ ಚಕ್ರವಿದು (3)
7.ಸುಮಗಳನ್ನು ಹಿಡಿದಿರುವ ಸುತ! (2)
8.ಮಡಿವಂತಿಕೆಯನ್ನು ತೋರಿಸುವಾತನ ಬುದ್ಧಿ (2)
10.ಇದು ಮುಖ್ಯವಲ್ಲ ಬಿಡಿ! (3)
11.ಸುಂಕ ಕಟ್ಟುವಾಗ ಆದ ನೋವು (3)
13.ಸಮಿತಿಯಲ್ಲಿರುವ ಎಲ್ಲೆ (2)
15.ವ್ಯಾಸ ಋಷಿ ಮಗನ ಹತ್ತಿರವಿರುವ ಗಿಳಿ (2)
16.ಸ್ಲೇಟಿನ ಮೇಲೆ ಬರೆಯುವ ಸಾಧನ (3)
18.ಕಲೆಯನ್ನು ತೋರುವ ಆಹ್ವಾನ ಪತ್ರಿಕೆ (4)
19.ಬಾಳೆ ಹಣ್ಣಿನಿಂದ ಮಾಡಿರುವ ಖಾದ್ಯ (4)

ಮೇಲಿಂದ ಕೆಳಕ್ಕೆ
1.ಶ್ರೇಷ್ಠವಾದ ನೆಲೆಯಿದು (4)
2.ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವವನು (2)
3.ತಪ್ಪು ಪದದ ವಿರುದ್ಧ ಪದ (2)
4.ಸಲುಗೆಯಿಂದ ಹತ್ತಿರ ಬಂದ ಗಂಡಾನೆ (3)
6.ವಸ್ತುಗಳನ್ನು ಸಂಗ್ರಹಿಸುವ ಉಗ್ರಾಣ (3)
7.ಏನೇನೂ ಬೆಳೆಯದ ಬಂಜರು ನೆಲ (4)
9.ಎಳ್ಳು ನೀರು ಬಿಡುವಿಕೆ (4)
12.ಕಳವಳದಿಂದ ತಿಂದಿರುವ ತುತ್ತು (3)
14.ರೋಧನ ಕೇಳಿಸಿದಾಗ ಕಾಣದಾಗುವುದು! (4)
15.ಶುಕದ ಹತ್ತಿರವಿರುವ ಸೊಣಗ (3)
16.ಅಬಲೆ ಹಿಡಿದಿರುವ ಗಾಳ (2)
17.ದ್ವಾಪರ ಯುಗದಲ್ಲಿ ಮೋಕ್ಷ ಸಿಕ್ಕಿತೇ? (2)



5461ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತಿಹೀನ 3.ವರಮಾನ
5.ಗಹನ 7.ವಿದ್ರೋಹ
9.ಬಾಲಕ 10.ಪ್ರಭವ
11.ಬಯಕೆ 13.ನಯನ
14.ಕಲಭ 16.ಮಾನ್ಯತೆ
18.ಕಳೆಬರ 19.ನೆರೆಮನೆ

ಮೇಲಿಂದ ಕೆಳಕ್ಕೆ:
1.ಮನವಿ 2.ನಗ
3.ವನ 4.ನಡುಕ
6.ಹಡಪ 8.ಹಯವದನ
9.ಬಾಲಬಡುಕ 12.ಅನನ್ಯ
13.ನರ್ತಕ 15.ಭಜನೆ
16.ಮಾರ 17.ತೆನೆ

ಸುಡೊಕು 5848

		3		6				2
	4						5	
	1	2		5		6		4
	8			1		4		
3		4	2		7		8	
	9		4		3			6
6		5				8		
				7				1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5847ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಉತ್ತರ ಸಿಕ್ಕಿಂನ ತೀಸ್ತಾ ನದಿ ಪ್ರವಾಹ : 277 ಮನೆಗಳು ನೆಲಸಮ, ಸಂಕಷ್ಟದಲ್ಲಿ ಸಾವಿರಾರು ಜನ

ಮೃತರ ಸಂಖ್ಯೆ 18ಕ್ಕೆ, 102 ಮಂದಿ ಪತ್ತೆ ಇಲ್ಲ

ಗ್ಯಾಂಗ್ಟಕ್ (ಪಿಟಿಐ): ಉತ್ತರ ಸಿಕ್ಕಿಂನ ತೀಸ್ತಾ ನದಿ ಜಲಾನಯನ ಪ್ರದೇಶದಲ್ಲಿ ಹಠಾತ್ ಪ್ರವಾಹದಿಂದ ಮೃತಪಟ್ಟವರ ಸಂಖ್ಯೆ 18ಕ್ಕೆ ಏರಿದೆ. ಕಾಣೆಯಾಗಿರುವ 22 ಸೇನಾ ಸಿಬ್ಬಂದಿ ಸೇರಿದಂತೆ 102 ಮಂದಿ ಇನ್ನೂ ಪತ್ತೆಯಾಗಿಲ್ಲ.

ನೀರ್ಗಲ್ಲು ಸರೋವರದಲ್ಲಿ ಉಂಟಾದ ಪ್ರವಾಹದಿಂದ ತೀಸ್ತಾ ನದಿ ಉಕ್ಕಿ ಹರಿಯುತ್ತಿದ್ದು, ಹಲವು ಪ್ರದೇಶಗಳು ಜಲಾವೃತಗೊಂಡಿವೆ. ಪ್ರಮುಖ ರಸ್ತೆ, ಸೇತುವೆಗಳು ಕೊಚ್ಚಿ ಹೋಗಿವೆ. ಈವರೆಗೂ 2,011 ಜನರನ್ನು ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ. ಪ್ರವಾಹದಿಂದಾಗಿ 22,034 ಜನರು ಬಾಧಿತರಾಗಿದ್ದು, 26 ಜನರು ಗಾಯಗೊಂಡಿದ್ದಾರೆ ಎಂದು ಸಿಕ್ಕಿಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಸ್‌ಎಸ್‌ಡಿಎಂಎ) ಪ್ರಕಟಣೆ ತಿಳಿಸಿದೆ.

ಪ್ರವಾಹ ಪೀಡಿತ ನಾಲ್ಕು ಜಿಲ್ಲೆಗಳಲ್ಲಿ ಸರ್ಕಾರ 26 ಕಾಳಜಿ ಕೇಂದ್ರಗಳನ್ನು ತೆರೆದಿದೆ. ಗ್ಯಾಂಗ್ಟಕ್ ಜಿಲ್ಲೆಯ ಎಂಟು ಕೇಂದ್ರಗಳಲ್ಲಿ ಒಟ್ಟು 1,025 ಜನರು ಆಶ್ರಯ ಪಡೆದಿದ್ದಾರೆ. ಆದರೆ, ಇತರೆ 18 ಕೇಂದ್ರಗಳಲ್ಲಿ ಸಂತ್ರಸ್ತರ ಸಂಖ್ಯೆ ತಕ್ಷಣಕ್ಕೆ ಲಭ್ಯವಾಗಿಲ್ಲ.

ಪ್ರವಾಹದಿಂದ ತೀವ್ರ ಬಾಧಿತವಾಗಿರುವ ಸಿಂಗ್‌ತಮ್ ಪ್ರದೇಶಕ್ಕೆ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಂಗ್ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಬಳಿಕ ತಮಂಗ್ ಅವರು ಸಿಂಗ್‌ತಮ್ ಸಮುದಾಯ ಕೇಂದ್ರದಲ್ಲಿ ಅಧಿಕಾರಿಗಳ ಜತೆ ತುರ್ತು ಸಭೆ ನಡೆಸಿದರು.

‘ಸಂತ್ರಸ್ತರಿಗೆ ಅಗತ್ಯವಿರುವ ಎಲ್ಲಾ ಸಹಾಯ ಮತ್ತು ಪರಿಹಾರ ಒದಗಿಸಲು ಸರ್ಕಾರ ಸಂಪೂರ್ಣವಾಗಿ ಬದ್ಧವಾಗಿದೆ. ನಾಗರಿಕರ ಸುರಕ್ಷತೆ ಮತ್ತು ಯೋಗಕ್ಷೇಮ ಖಚಿತಪಡಿಸಿಕೊಳ್ಳಲು ಲಭ್ಯವಿರುವ ಎಲ್ಲಾ ಸಂಪನ್ಮೂಲಗಳನ್ನು ಸಜ್ಜುಗೊಳಿಸುತ್ತಿದ್ದೇವೆ’ ಎಂದು ತಮಂಗ್ ತಿಳಿಸಿದರು.

ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿರುವ ಸೇನಾ ಸಿಬ್ಬಂದಿ ಮತ್ತು ನಾಗರಿಕರ ಪತ್ತೆಗೆ ರಕ್ಷಣಾ ಇಲಾಖೆ ಸಿಬ್ಬಂದಿ ಗುರುವಾರ ಉತ್ತರ ಸಿಕ್ಕಿಂನಲ್ಲಿ ಕಾರ್ಯಾಚರಣೆ ನಡೆಸಿದರು – ಪಿಟಿಐ ಚಿತ್ರ

ಪ್ರವಾಹ ಪರಿಸ್ಥಿತಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ದೂರವಾಣಿ ಮೂಲಕ ತಮಂಗ್ ವಿವರಿಸಿದ್ದಾರೆ. ಅಗತ್ಯವಿರುವ ಪ್ರದೇಶಗಳಿಗೆ ನೆರವು ಕೋರಿ ಪ್ರಧಾನಿಗೆ ಪತ್ರ ಸಹ ಬರೆದಿದ್ದಾರೆ. ರಾಜ್ಯಕ್ಕೆ ಅಗತ್ಯವಿರುವ ಎಲ್ಲ ಸಹಾಯ ಮಾಡುವುದಾಗಿ ಪ್ರಧಾನಿ ಭರವಸೆ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಹದಿಂದಾಗಿ ರಾಜ್ಯದಲ್ಲಿ 11 ಸೇತುವೆಗಳು ನಾಶವಾಗಿವೆ. ಮಂಗನ್ ಜಿಲ್ಲೆಯೊಂದರಲ್ಲೇ ಎಂಟು ಸೇತುವೆಗಳು ಕೊಚ್ಚಿಹೋಗಿವೆ. ನಾಮ್ಚಿಯಲ್ಲಿ ಎರಡು ಸೇತುವೆಗಳು ಮತ್ತು ಗ್ಯಾಂಗ್ಟಕ್‌ನಲ್ಲಿ ಒಂದು ಸೇತುವೆ ನಾಶವಾಗಿವೆ. ಪ್ರವಾಹ ಪೀಡಿತ ನಾಲ್ಕು ಜಿಲ್ಲೆಗಳಲ್ಲಿ ನೀರಿನ ಪೈಪ್ ಲೈನ್ ಗಳು, ಒಳಚರಂಡಿ ಮಾರ್ಗಗಳು ಮತ್ತು ಕುಚ್ಚಾ ಹಾಗೂ ಕಾಂಕ್ರೀಟ್ ಎರಡೂ ಸೇರಿ 277 ಮನೆಗಳು ನೆಲಸಮವಾಗಿವೆ.

ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ವಿವಿಧ ಇಲಾಖೆಗಳಿಗೆ ಜಾಗರೂಕತೆ ವಹಿಸಲು ಸೂಚಿಸಲಾಗಿದೆ ಎಂದು ತಮಂಗ್ ಹೇಳಿದರು.

ಪ್ರವಾಹದಿಂದ ಚುಂಗ್‌ತಾಂಗ್ ಪಟ್ಟಣವು ಶೇಕಡ 80 ರಷ್ಟು ಬಾಧಿತವಾಗಿದೆ. ಸಿಕ್ಕಿಂ ಹಾಗೂ ಪಶ್ಚಿಮ ಬಂಗಾಳ ಸಂಪರ್ಕಿಸುವ ಮುಖ್ಯ ಮಾರ್ಗ ರಾಷ್ಟ್ರೀಯ ಹೆದ್ದಾರಿ 10 ಅನೇಕ ಕಡೆ ಕೊಚ್ಚಿಹೋಗಿದೆ.

‘ಚುಂಗ್‌ತಾಂಗ್ ಮತ್ತು ಮಂಗನ್ ನಲ್ಲಿ ನಾಲ್ಕು ಪ್ರಮುಖ ಸೇತುವೆಗಳು ತೀವ್ರವಾಗಿ ಹಾನಿಗೊಳಗಾಗಿವೆ. ರಕ್ಷಣಾ ಕಾರ್ಯಾಚರಣೆಯಲ್ಲಿ ಗಡಿ ರಸ್ತೆ ಸಂಸ್ಥೆ (ಬಿಆರ್‌ಒ) ರಾಜ್ಯಕ್ಕೆ ಸಹಾಯ ಮಾಡುತ್ತಿದೆ. ನಿರಂತರ ಮಳೆ ಮತ್ತು ಪ್ರತಿಕೂಲ ಹವಾಮಾನದ ಹೊರತಾಗಿಯೂ 200ಕ್ಕೂ ಹೆಚ್ಚು ಜನರನ್ನು ಬಿಆರ್‌ಒ ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ’ ಎಂದು ರಕ್ಷಣಾ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಮಹೇಂದ್ರ ರಾವತ್ ತಿಳಿಸಿದ್ದಾರೆ.

ಚುಂಗ್‌ತಾಂಗ್, ಲಾಚುಂಗ್ ಮತ್ತು ಲಾಚೆನ್‌ನಲ್ಲಿರುವ ಸಿಲುಕಿರುವ ನಾಗರಿಕರು ಮತ್ತು ಪ್ರವಾಸಿಗರೊಂದಿಗೆ ಮೊಬೈಲ್ ಮೂಲಕ ಸಂಪರ್ಕ ಸಾಧಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದ್ದಾರೆ.

ನಿರಂತರ ಮಳೆಯಿಂದಾಗಿ ನೀರಿನ ಮಟ್ಟ ಏರುತ್ತಿರುವುದರಿಂದ ತೀಸ್ತಾ ನದಿ ಪಾತ್ರದ ಜನರು ಬೇರೆಡೆಗೆ ಹೋಗುವಂತೆ ಎಸ್‌ಎಸ್‌ಡಿಎಂಎ ಸಲಹೆ ನೀಡಿದೆ.

ಪ್ರವಾಸ ಮುಂದೂಡಿ: ಪ್ರವಾಹದ ಹಿನ್ನೆಲೆಯಲ್ಲಿ ಸಿಕ್ಕಿಂ ರಾಜ್ಯ ಪ್ರವಾಸ ಮುಂದೂಡುವಂತೆ ಪ್ರವಾಸಿಗರಿಗೆ ಸರ್ಕಾರ ಮನವಿ ಮಾಡಿದೆ.

ಪ್ರವಾಹ ಪೀಡಿತ ಮಂಗನ್ ಜಿಲ್ಲೆಯಲ್ಲಿ ಸಿಲುಕಿರುವವರನ್ನು ಶುಕ್ರವಾರದಿಂದ ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಗಲಿದೆ. ಅಂದಾಜಿನ ಪ್ರಕಾರ, ವಿದೇಶಿಯರು ಸೇರಿ ಮೂರು ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಸಿಕ್ಕಿಂನ ವಿವಿಧ ಭಾಗಗಳಲ್ಲಿ ಸಿಲುಕಿದ್ದಾರೆ.

ಸೇನಾ ಸಿಬ್ಬಂದಿಗಾಗಿ ಶೋಧ

ಗ್ಯಾಂಗ್ಟಕ್ (ಪಿಟಿಐ): ತೀಸ್ತಾ ನದಿ ಪ್ರವಾಹದಿಂದ ಕೊಚ್ಚಿಹೋದ ಜನರನ್ನು ಹುಡುಕುವ ಕೆಲಸವನ್ನು ಸೇನೆ ಮತ್ತು ಎನ್‌ಡಿಆರ್‌ಎಫ್ ತಂಡಗಳು ಎರಡನೇ ದಿನವಾದ ಗುರವಾರವೂ ಮುಂದುವರಿಸಿವೆ.

ಈವರೆಗೂ ಹದಿನಾಲ್ಕು ಮೃತದೇಹಗಳು ಪತ್ತೆಯಾಗಿವೆ. ರಕ್ಷಣಾ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ. ಸೇನಾ ಸಿಬ್ಬಂದಿಗಾಗಿ ಶೋಧಕಾರ್ಯ ಮುಂದುವರೆದಿದೆ. ಸೇನಾ ಕುಟುಂಬಗಳಿಗೆ ಪರಿಸ್ಥಿಗೆ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಕ್ಷಣೆ, ಪರಿಹಾರ, ಪುನರ್ವಸತಿಗಾಗಿ ವ್ಯವಸ್ಥಿತ ಕಾರ್ಯವಿಧಾನ ರೂಪಿಸುವಂತೆ ಮುಖ್ಯಮಂತ್ರಿ ತಮಂಗ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ವಿಷಯ ತಜ್ಞರು, ವಿಜ್ಞಾನಿಗಳು, ಪರಿಸರವಾದಿಗಳು, ಜಲವಿದ್ಯುತ್ ತಜ್ಞರು, ಎಂಜಿನಿಯರ್‌ಗಳು, ನಾಗರಿಕ ಸಮಾಜದ ಸದಸ್ಯರನ್ನು ಒಳಗೊಂಡ ಉನ್ನತ ಮಟ್ಟದ ತಾಂತ್ರಿಕ ಸಮಿತಿಯು ಪ್ರವಾಹದ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಭವಿಷ್ಯದ ಮಾರ್ಗಸೂಚಿ ರೂಪಿಸುವಂತೆ ನಿರ್ದೇಶಿಸಿದ್ದಾರೆ.

ಸುರಕ್ಷಿತ ಸ್ಥಳಕ್ಕೆ ಕನ್ನಡಿಗರು

ಬೆಂಗಳೂರು: ಸಿಕ್ಕಿಂ ಪ್ರವಾಸಕ್ಕೆ ತೆರಳಿ ಸಂಕಷ್ಟಕ್ಕೆ ಸಿಲುಕಿದ್ದ ಬೆಂಗಳೂರಿನ 17 ಪ್ರವಾಸಿಗರು ಸುರಕ್ಷಿತವಾಗಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹೇಳಿದೆ.

ನಾಗರಭಾವಿಯ ಟ್ರಾವೆಲ್ಸ್ ಏಜೆನ್ಸಿ ಮೂಲಕ ಉತ್ತರ ಭಾರತದ ಪ್ರವಾಸಕ್ಕೆ ತೆರಳಿದ್ದವರು ಮೇಘಸ್ಫೋಟನಡೆದಾಗ ಉತ್ತರ ಸಿಕ್ಕಿಂನಲ್ಲಿ ಸಿಲುಕಿದ್ದರು. ವಾಹನಕ್ಕೆ ಡೀಸೆಲ್ ತುಂಬಿಸಿಕೊಳ್ಳಲು ಸಾಧ್ಯವಾಗದೆ ಪರದಾಡಿದ್ದರು.

ಇಂದ್ರೇನಿ ಉಕ್ಕಿನ ಸೇತುವೆ ಕೊಚ್ಚಿಹೋಗಿದ್ದರಿಂದ ಸಂಪರ್ಕವೂ ಕಡಿತಗೊಂಡಿತ್ತು. ಸಾಕಷ್ಟು ತೊಂದರೆ ಅನುಭವಿಸಿದ್ದರು. ಸ್ಥಳೀಯರು, ಸೇನೆ ನೆರವಿನಿಂದ ಸುರಕ್ಷಿತ ಸ್ಥಳ ತಲುಪಿದ್ದಾರೆ ಎಂದು ಪ್ರಾಧಿಕಾರ ಮಾಹಿತಿ ನೀಡಿದೆ.

ಸುದ್ದಿ 2 ನಿಮಿಷ

ಹಣ, ಉಚಿತ ಕೊಡುಗೆಗಳ ಮೇಲೆ ನಿಗಾ: ಚುನಾವಣಾ ಆಯೋಗ

ಹೈದರಾಬಾದ್ (ಪಿಟಿಐ): ಮುಕ್ತ, ನ್ಯಾಯಸಮ್ಮತ, ಪಾರದರ್ಶಕ ಮತ್ತು ಆಮಿಷ ಮುಕ್ತ ಚುನಾವಣೆ ನಡೆಸಲು ಚುನಾವಣಾ ಆಯೋಗ ಸಂಪೂರ್ಣ ಬದ್ಧವಾಗಿದೆ. ಹಣ, ಉಚಿತ ಕೊಡುಗೆಗಳ ಮೇಲೆ ನಿಗಾ ಇರಿಸಲಾಗುವುದು ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಗುರುವಾರ ಹೇಳಿದ್ದಾರೆ.

ತೆಲಂಗಾಣದಲ್ಲಿ ಚುನಾವಣಾ ಸಿದ್ಧತೆಗಳ ಬಗ್ಗೆ ಪರಿಶೀಲಿಸಲು ಸಿಇಸಿ ನೇತೃತ್ವದ 17 ಸದಸ್ಯರ ತಂಡ ನಗರದಲ್ಲಿದೆ. ಅದರ ಭಾಗವಾಗಿ, ರಾಜೀವ್ ಕುಮಾರ್ ರಾಜಕೀಯ ಪಕ್ಷಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರಿ ಅಧಿಕಾರಿಗಳು ಮತ್ತು ಜಾರಿ ಸಂಸ್ಥೆಗಳೊಂದಿಗೆ ಸಭೆಗಳನ್ನು ನಡೆಸಿದರು.

ರಾಜೀವ್ ಕುಮಾರ್ ಮಾತನಾಡಿ, ಚುನಾವಣೆ ಸಮಯದಲ್ಲಿ ಹಣ ಬಳಕೆ ವಿರುದ್ಧ ಕಟ್ಟುನಿಟ್ಟಾಗಿ ಕಾರ್ಯನಿರ್ವಹಿಸಲು ಜಾರಿ ಸಂಸ್ಥೆಗಳಿಗೆ ಸ್ಪಷ್ಟ ಸಂದೇಶ ನೀಡಲಾಗಿದೆ. ಹಣ, ಉಚಿತ ಕೊಡುಗೆಗಳ ಮೇಲೆ ನಿಗಾ ಇರಿಸಲಾಗುವುದು. ಅವರು (ಜಾರಿ ಸಂಸ್ಥೆಗಳು) ಕ್ರಮ ಕೈಗೊಳ್ಳದಿದ್ದರೆ ನಾವು ಅವರನ್ನು ಕ್ರಮ ಕೈಗೊಳ್ಳುವಂತೆ ಮಾಡುತ್ತೇವೆ. ಆನ್‌ಲೈನ್ ನಗದು ವರ್ಗಾವಣೆಯ ಮೇಲೆ ನಿಗಾ ಇಡಲು ಬ್ಯಾಂಕ್‌ಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು.

9ರಂದು ಸಿಡಬ್ಲ್ಯುಸಿ ಸಭೆ

ನವದೆಹಲಿ: ಜಾತಿ ಗಣತಿ, ಪಂಚ ರಾಜ್ಯಗಳ ಚುನಾವಣೆ ಮತ್ತು ತನಿಖಾ ಸಂಸ್ಥೆಗಳಿಂದ ವಿರೋಧ ಪಕ್ಷದ ರಾಜಕಾರಣಿಗಳನ್ನು ಗುರಿಯಾಗಿಸುವುದು ಸೇರಿದಂತೆ ದೇಶದಲ್ಲಿನ ರಾಜಕೀಯ ಪರಿಸ್ಥಿತಿ ಕುರಿತು ಚರ್ಚಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು (ಸಿಡಬ್ಲ್ಯುಸಿ) ಮುಂದಿನ ಸೋಮವಾರ ಇಲ್ಲಿ ಸಭೆ ಸೇರಲಿದೆ.

ಅಕ್ಟೋಬರ್ 9ರಂದು ಬೆಳಿಗ್ಗೆ 10.30ಕ್ಕೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಸಹ ಭಾಗವಹಿಸಲಿದ್ದಾರೆ.

ಮಧ್ಯಪ್ರದೇಶ, ತೆಲಂಗಾಣ, ರಾಜಸ್ಥಾನ, ಛತ್ತೀಸಗಢ ಹಾಗೂ ಮಿಜೋರಾಂ ವಿಧಾನಸಭೆಗಳಿಗೆ ಮುಂದಿನ ವಾರ ಚುನಾವಣೆ ಘೋಷಣೆಯಾಗುವ ನಿರೀಕ್ಷೆ ಇದೆ. ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಚುನಾವಣಾ ಸಿದ್ಧತೆ ಕುರಿತು ಚರ್ಚೆ ನಡೆಯಲಿದ್ದು, ಕಾರ್ಯತಂತ್ರ ರೂಪಿಸಲಾಗುತ್ತದೆ. ಪ್ರಚಾರದ ವೇಳೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ಪಕ್ಷದ ನಾಯಕರಿಗೆ ಸೂಚಿಸುವ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ಮಣಿಪುರ: ಎರಡು ಮನೆ ಬೆಂಕಿಗಾಹುತಿ

ಇಂಫಾಲ್ (ಪಿಟಿಐ): ಮಣಿಪುರದ ಇಂಫಾಲ್ ಪಶ್ಚಿಮ ಜಿಲ್ಲೆಯ ನ್ಯೂ ಕೀಥೆಲ್ಮನಬಿ ಪ್ರದೇಶದಲ್ಲಿ ಬುಧವಾರ ರಾತ್ರಿ ಎರಡು ಮನೆಗಳಿಗೆ ಬೆಂಕಿ ಹಚ್ಚಲಾಗಿದ್ದು, ಉದ್ವಿಗ್ನ ಸ್ಥಿತಿ ತಲೆದೋರಿದೆ.

ದುಷ್ಕರ್ಮಿಯೊಬ್ಬ ಹಲವು ಸುತ್ತು ಗುಂಡಿನ ದಾಳಿ ನಡೆಸಿ ಪರಾರಿಯಾಗಿದ್ದಾನೆ ಎಂದು ಗುರುವಾರ ಪೊಲೀಸರು ತಿಳಿಸಿದ್ದಾರೆ.

ಸ್ಥಳಕ್ಕೆ ತೆರಳಿದ ರಕ್ಷಣಾ ಪಡೆಗಳು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತವನ್ನು ತಪ್ಪಿಸಿದರು. ಸುದ್ದಿ ತಿಳಿದ ತಕ್ಷಣ ಮೈತೇಯಿ ಸಮುದಾಯದ ಮಹಿಳೆಯರು ಸ್ಥಳದಲ್ಲಿ ಗುಂಪುಗೂಡಿದ್ದರು. ಸಂಘರ್ಷಪೀಡಿತ ಪ್ರದೇಶದಲ್ಲಿ ಹೆಚ್ಚುವರಿ ಸಿಬ್ಬಂದಿ ಮೊಕ್ಕಾಂ ಹೂಡಿದ್ದು, ಅನಾಹುತ ಸಂಭವಿಸದಂತೆ ನಿಗಾವಹಿಸಿದ್ದಾರೆ ಎಂದು ತಿಳಿಸಿದ್ದಾರೆ.

ಡಿಎಂಕೆ ಸಂಸದನ ಮನೆ, ಕಚೇರಿ ಮೇಲೆ ಐ.ಟಿ ದಾಳಿ

ಚೆನ್ನೈ: ಡಿಎಂಕೆ ಸಂಸದ ಮತ್ತು ಕೈಗಾರಿಕೋದ್ಯಮಿ ಎಸ್. ಜಗತ್ ರಕ್ಷಕನ್ ಅವರಿಗೆ ಸಂಬಂಧಿಸಿದ ತಮಿಳುನಾಡು ಮತ್ತು ಪುದುಚೇರಿಯ 40 ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಗುರುವಾರ ಶೋಧ ನಡೆಸಿದೆ.

ಅರಕ್ಕೋಣಂನ ಸಂಸದ ಜಗತ್ರಕ್ಷಕನ್ ಅವರು ತಮಿಳುನಾಡಿನಲ್ಲಿ ಹಲವು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳನ್ನು ಹೊಂದಿದ್ದಾರೆ. ಸಂಸದರ ಬಂಗಲೆ, ಇತರ ಪ್ರದೇಶಗಳಲ್ಲಿನ ಕಚೇರಿಗಳು ಮತ್ತು ಬಾಲಾಜಿ ಡೆಂಟಲ್ ಕಾಲೇಜು ಸೇರಿದಂತೆ 40 ಸ್ಥಳಗಳ ಮೇಲೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಟಿ ನಗರದಲ್ಲಿರುವ ಸಂಸದರ ಹೋಟೆಲ್ ಮೇಲೂ ದಾಳಿ ನಡೆಸಲಾಗಿದೆ. ನೆರೆಯ ಪುದುಚೇರಿಯಲ್ಲಿ ಶ್ರೀ ಲಕ್ಷ್ಮಿ ನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ನಲ್ಲೂ ಶೋಧ ನಡೆಸಿದ್ದಾರೆ. ಐ.ಟಿ ದಾಳಿ ಖಂಡಿಸಿರುವ ಮುಖ್ಯಮಂತ್ರಿ ಸ್ಟಾಲಿನ್, ಬಿಜೆಪಿಯ ಸೇಡಿನ ರಾಜಕಾರಣಕ್ಕೆ ಮಿತಿ ಇಲ್ಲ ಎಂದು ಹೇಳಿದ್ದಾರೆ .

ಸಂಸದರು ಕಾನೂನಿಗೆ ಅತೀತರಲ್ಲ: ಕೇಂದ್ರ

ಸಿಜೆಐ ಚಂದ್ರಚೂಡ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠದ ಮುಂದೆ ಹೇಳಿಕೆ

ನವದೆಹಲಿ (ಪಿಟಿಐ): ಸಂಸದರಿಗೆ ನೀಡಿರುವ ವಿಶೇಷ ರಕ್ಷಣೆಯು ಅವರನ್ನು ಕಾನೂನಿಗೆ ಅತೀತರನ್ನಾಗಿಸುವ ಉದ್ದೇಶ ಹೊಂದಿಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನ ಏಳು ನ್ಯಾಯಮೂರ್ತಿಗಳ ಸಂವಿಧಾನ ಪೀಠಕ್ಕೆ ತನ್ನ ನಿಲುವು ತಿಳಿಸಿದೆ.

ಶಾಸನ ಸಭೆಗಳಲ್ಲಿ ಮತ ಚಲಾಯಿಸಲು ಅಥವಾ ಅಲ್ಲಿ ಮಾತನಾಡಲು ಸಂಸದರು, ಶಾಸಕರು ಲಂಚ ಪಡೆದಿದ್ದರೆ ಅವರಿಗೆ ಕಾನೂನು ಕ್ರಮದಿಂದ ರಕ್ಷಣೆ ಇದೆ ಎಂದು 1998ರ ತೀರ್ಪನ್ನು ಮರುಪರಿಶೀಲಿಸಬೇಕೇ ಎಂಬುದರ ಕುರಿತ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಕಾಯ್ದಿರಿಸಿದೆ.

ಕೇಂದ್ರದ ನಿಲುವನ್ನು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಕೋರ್ಟ್‌ಗೆ ತಿಳಿಸಿದರು.

‘ಲಂಚ ಕೊಟ್ಟಾಗ, ಅದನ್ನು ಶಾಸನ ಸಭೆಯ ಸದಸ್ಯ ಪಡೆದುಕೊಂಡಾಗ ಅಪರಾಧ ಕೃತ್ಯ ನಡೆದಿರುತ್ತದೆ. ಇದನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿಯಲ್ಲಿ ನಿಭಾಯಿಸಬಹುದು’ ಎಂದು ಮೆಹ್ತಾ ವಾದಿಸಿದರು.

‘ದೇಶದ ಕಾನೂನು ಸ್ಪಷ್ಟವಾಗಿ ಅಪರಾಧ ಎಂದು ಹೇಳಿರುವ ಕೃತ್ಯಕ್ಕೆ ಸಂವಿಧಾನದ ವಿಧಿಗಳ (105 ಮತ್ತು 194) ಅಡಿಯಲ್ಲಿ ರಕ್ಷಣೆ ನೀಡಲು ಆಗದು. ಯಾವುದೇ ಜವಾಬ್ದಾರಿಯುತ ಸರ್ಕಾರ ಅಥವಾ ಸಾರ್ವಜನಿಕ ಪ್ರಾಧಿಕಾರವು ಅಂತಹ ನಿಲುವು ತೆಗೆದುಕೊಳ್ಳಲು ಸಾಧ್ಯವಿಲ್ಲ’ ಎಂದು ವೆಂಕಟರಮಣಿ ಅವರು ಹೇಳಿದರು.

‘ಸಾಂವಿಧಾನಿಕ ವಿಶೇಷ ಅಧಿಕಾರಗಳು ವೈಯಕ್ತಿಕ ರಕ್ಷಣಾ ಕ್ರಮಗಳಲ್ಲ. ಬದಲಿಗೆ ಅವು ನಿರ್ದಿಷ್ಟ ವೃತ್ತಿಯಲ್ಲಿ ತೊಡಗಿದವರಿಗೆ ಇರುವ ರಕ್ಷಣೆಗಳು. ಪ್ರತಿನಿಧಿಯು ತನ್ನ ಕರ್ತವ್ಯವನ್ನು ತಪ್ಪಿಲ್ಲದೆ ಮಾಡಲು ಸಾಧ್ಯವಾಗಲಿ ಎಂಬ ಕಾರಣಕ್ಕೆ ಇಂತಹ ರಕ್ಷಣೆಯನ್ನು ನೀಡಲಾಗಿದೆ. ಈ ರಕ್ಷಣೆಯು ಸಂಸದರನ್ನು ಕಾನೂನಿಗೆ ಮಿಗಿಲಾದ ವ್ಯಕ್ತಿಯನ್ನಾಗಿಸುವ ಉದ್ದೇಶ ಹೊಂದಿಲ್ಲ. ಆದರೆ ಅವರ ವಿರುದ್ಧ ರಾಜಕೀಯ ಪ್ರೇರಿತವಾದ ಆಧಾರರಹಿತ ಆರೋಪಗಳು ಬಾರದೆ ಇರಲಿ ಎಂಬ ಉದ್ದೇಶ ಹೊಂದಿವೆ’ ಎಂದು ಮೆಹ್ತಾ ವಿವರಿಸಿದರು.

ಹಣದ ಹರಿವಿಗೆ ಸಾಕ್ಷಿ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಹಣದ ಹರಿವನ್ನು ತೋರಿಸುವ ಸಾಕ್ಷಿ ಎಲ್ಲಿದೆ ಎಂದು ಸುಪ್ರೀಂ ಕೋರ್ಟ್, ಜಾರಿ ನಿರ್ದೇಶನಾಲಯವನ್ನು (ಇ.ಡಿ) ಗುರುವಾರ ಪ್ರಶ್ನಿಸಿತು.

ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ತಪ್ಪು ಮಾಡಿದ್ದಾರೆ ಎನ್ನಲು ಮಾಫಿ ಸಾಕ್ಷಿಯ ಹೇಳಿಕೆಯೊಂದನ್ನೇ ಆಧರಿಸಲು ಸಾಧ್ಯವಿಲ್ಲ ಎಂದು ಕೋರ್ಟ್, ಇ.ಡಿ.ಗೆ ಹೇಳಿದೆ.

ಸಿಸೋಡಿಯಾ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್.ವಿ.ಎನ್. ಭಟ್ಟಿ ಅವರು ಸಿಬಿಐ ಮತ್ತು ಇ.ಡಿ. ಪರ ಹಾಜರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರಿಗೆ ಸರಣಿ ಪ್ರಶ್ನೆಗಳನ್ನು ಕೇಳಿದರು.

ಬುಧವಾರದ ವಿಚಾರಣೆ ಸಂದರ್ಭದಲ್ಲಿ ಕೇಳಿದ್ದ ‘ರಾಜಕೀಯ ಪಕ್ಷವನ್ನು ಆರೋಪಿಯನ್ನಾಗಿ ಮಾಡದಿರುವುದು ಏಕೆ’ ಎಂಬ ಪ್ರಶ್ನೆಯು, ಕಾನೂನಿಗೆ ಸಂಬಂಧಿಸಿದ ಪ್ರಶ್ನೆಯೇ ವಿನಾ ಅದು ಒಂದು ರಾಜಕೀಯ ಪಕ್ಷವು ಅಪರಾಧ ಎಸಗಿದೆ ಎಂದು ಹೇಳುವ ಉದ್ದೇಶ ಹೊಂದಿಲ್ಲ ಎಂದು ಸ್ಪಷ್ಟಪಡಿಸಿತು.

ತನಿಖಾ ಸಂಸ್ಥೆಯು ಹಣದ ಹರಿವನ್ನು ಸಾಬೀತು ಮಾಡಬೇಕು. ಅಬಕಾರಿ ಲಾಬಿಯಿಂದ ವ್ಯಕ್ತಿಗೆ ಹಣ ಸಂದಿದೆ ಎಂಬುದನ್ನು ಸಾಬೀತು ಮಾಡುವುದು ಕಷ್ಟ ಎಂಬುದು ಗೊತ್ತು. ಆದರೆ ತನಿಖಾ ಸಂಸ್ಥೆಯ ದಕ್ಷತೆ ಕೆಲಸಕ್ಕೆ ಬರುವುದು ಅಲ್ಲೇ ಎಂದು ಪೀಠವು ಹೇಳಿತು. ‘ಮನೀಶ್ ಸಿಸೋಡಿಯಾ ಅವರು ಇಲ್ಲಿ ಭಾಗಿಯಾಗಿರುವಂತೆ ಕಾಣುತ್ತಿಲ್ಲ. ಅವರನ್ನು ನೀವು ಹಣದ ಅಕ್ರಮ ವರ್ಗಾವಣೆ ಕಾಯ್ದೆಯ ಅಡಿಯಲ್ಲಿ ಹೇಗೆ ತರುತ್ತೀರಿ’ ಎಂದು ಪೀಠವು ಪ್ರಶ್ನಿಸಿತು. ವಿಚಾರಣೆಯನ್ನು ಅಕ್ಟೋಬರ್ 12ರಂದು ಮುಂದುವರಿಸುವುದಾಗಿ ಕೋರ್ಟ್ ಹೇಳಿದೆ.

‘ಭಾರತ– ಅಮೆರಿಕ ಬಾಂಧವ್ಯಕ್ಕೆ ಧಕ್ಕೆ ಇಲ್ಲ’

ನವದೆಹಲಿ (ಪಿಟಿಐ): ಕೆನಡಾ– ಭಾರತ ನಡುವೆ ಏರ್ಪಟ್ಟಿರುವ ರಾಜತಾಂತ್ರಿಕ ಬಿಕ್ಕಟ್ಟು ಭಾರತ– ಅಮೆರಿಕ ಸಂಬಂಧದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಭಾರತದ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ ಮತ್ತು ಅವರ ತಂಡ ಎಚ್ಚರಿಕೆ ನೀಡಿರುವುದಾಗಿ ವರದಿಯಾಗಿತ್ತು. ಈ ವರದಿಗಳನ್ನು ಅಮೆರಿಕ ರಾಯಭಾರ ಕಚೇರಿಯು ಗುರುವಾರ ತಳ್ಳಿಹಾಕಿದೆ.

ಭಾರತದ ಅಧಿಕಾರಿಗಳ ಜೊತೆ ಅಮೆರಿಕವು ಅನಿಶ್ಚಿತ ಅವಧಿಯವರೆಗೆ ಸಂವಹನವನ್ನು ಕಡಿಮೆ ಮಾಡಿಕೊಳ್ಳಬೇಕಾಗುತ್ತದೆ ಎಂದೂ ಗಾರ್ಸೆಟ್ಟಿ ಹೇಳಿರುವುದಾಗಿ ಅಮೆರಿಕದ ‘ದಿ ಪೊಲಿಟಿಕೊ’ ಪತ್ರಿಕೆ ವರದಿ ಮಾಡಿತ್ತು.

‘ಅಮೆರಿಕದ ಜನರು ಮತ್ತು ಸರ್ಕಾರವು ಭಾರತ ಜೊತೆ ಹೊಂದಿರುವ ಸಂಬಂಧವನ್ನು ಮತ್ತಷ್ಟು ಗಾಢಗೊಳಿಸುವ ದಿಸೆಯಲ್ಲಿ ಹಾಗೂ ಭಾರತದ ಜೊತೆ ನಾವು ಹೊಂದಿರುವ ಮಹತ್ವಪೂರ್ಣ ಸಹಭಾಗಿತ್ವವನ್ನು ವೃದ್ಧಿಸುವ ನಿಟ್ಟಿನಲ್ಲಿ ಗಾರ್ಸೆಟ್ಟಿ ಪ್ರತಿದಿನ ಶ್ರಮಿಸುತ್ತಿದ್ದಾರೆ’ ಎಂದು ಅಮೆರಿಕ ರಾಯಭಾರ ಕಚೇರಿಯ ವಕ್ತಾರರು ಹೇಳಿದ್ದಾರೆ.

ಅಧಿಕಾರಿಗಳ ಸಂಖ್ಯೆ ಕಡಿತ- ಚರ್ಚೆ: ಭಾರತದಲ್ಲಿರುವ ಕೆನಡಾದ ರಾಜತಾಂತ್ರಿಕ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆಗೊಳಿಸುವ ವಿಚಾರಕ್ಕೆ ಸಂಬಂಧಿಸಿ ಆ ದೇಶದ ಜೊತೆ ಮಾತುಕತೆ ನಡೆಸಲಾಗುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಅವರು ತಿಳಿಸಿದ್ದಾರೆ.

‘ಬಿಜೆಪಿ ರಾಹುಲ್ ಹತ್ಯೆ ಬಯಸುತ್ತಿದೆ’

ರಾವಣನಂತೆ ಬಿಂಬಿಸಿದ ಚಿತ್ರ ಬಿಡುಗಡೆ: ಕಾಂಗ್ರೆಸ್ ಟೀಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಬಿಜೆಪಿಯು, ‘ದುಷ್ಟ, ಧರ್ಮ ವಿರೋಧಿ ಮತ್ತು ರಾಮ ವಿರೋಧಿ’ ಎಂದು ಜರಿದು, ‘ರಾವಣ’ನಂತೆ ಚಿತ್ರಿಸಿರುವ ಫೋಟೊವನ್ನು ಸಾಮಾಜಿಕ ಜಾಲತಾಣದಲ್ಲಿ ಗುರುವಾರ ಬಿಡುಗಡೆ ಮಾಡಿದೆ. ಇದನ್ನು ಟೀಕಿಸಿರುವ ಕಾಂಗ್ರೆಸ್, ‘ಬಿಜೆಪಿಯ ಕಟು ಟೀಕಾಕಾರ ರಾಹುಲ್ ಅವರನ್ನು ಕೊಲ್ಲುವ ನೀಚ ಉದ್ದೇಶವನ್ನು ಆ ಪಕ್ಷವು ಹೊಂದಿದೆ’ ಎಂದು ಆರೋಪಿಸಿದೆ.

‘ಇದು ಕ್ರೂರವಾದ ಗ್ರಾಫಿಕ್ ಆಗಿದ್ದು, ಅಪಾಯಕಾರಿಯಾಗಿದೆ. ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರ ಮೇಲೆ ಹಿಂಸಾಚಾರವನ್ನು ಪ್ರಚೋದಿಸುವ ಉದ್ದೇಶವನ್ನು ಇದು ಹೊಂದಿದೆ’ ಎಂದು ಕಾಂಗ್ರೆಸ್ ಹೇಳಿದೆ.

ರಾಹುಲ್ ಅವರಿಗೆ ಹತ್ತು ತಲೆಗಳಿರುವಂತೆ ಚಿತ್ರಿಸಿ, ಅದಕ್ಕೆ ‘ರಾವಣ’ ಎಂದು ಶೀರ್ಷಿಕೆ ನೀಡಿದ ಚಿತ್ರವನ್ನು ಕೇಸರಿ ಪಕ್ಷವು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ. ಅಲ್ಲದೆ ಇದು ಅಂತರ ರಾಷ್ಟ್ರೀಯ ದಾನಿ ಜಾರ್ಜ್ ಸೊರೊಸ್ ನಿರ್ದೇಶಿಸಿದ ಚಲನಚಿತ್ರ ಎಂದು ಬಿಜೆಪಿ ಹೇಳಿಕೊಂಡಿದೆ. ಸೊರೊಸ್ ಅವರು ಭಾರತ ವಿರೋಧಿ ಸಂಘಟನೆಗಳಿಗೆ ಧನಸಹಾಯ ಮಾಡುತ್ತಿದ್ದಾರೆ ಎಂದು ಕೇಂದ್ರ ಸರ್ಕಾರ ಹಿಂದಿನಿಂದಲೂ ಆರೋಪಿಸುತ್ತಿದೆ.

‘ಹೊಸ ಯುಗದ ರಾವಣ ಇಲ್ಲಿದ್ದಾನೆ. ಈತ ದುಷ್ಟ, ಧರ್ಮ ವಿರೋಧಿ. ರಾಮನ ವಿರೋಧಿ. ಈತನ ಗುರಿ ಭಾರತವನ್ನು ನಾಶ ಮಾಡುವುದಾಗಿದೆ’ ಎಂದು ಬಿಜೆಪಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಬಿಜೆಪಿ ಕ್ರಮವನ್ನು ತೀವ್ರವಾಗಿ ಖಂಡಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು, ‘ಈ ಗ್ರಾಫಿಕ್ ಮಾಡಿದ ಬಿಜೆಪಿಗೆ ನಾಚಿಕೆಯಾಗಬೇಕು. ಇದನ್ನು ಖಂಡಿಸಲು ಯಾವುದೇ ಪದಗಳಿಲ್ಲ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಬಿಜೆಪಿಯವರ ಕೆಟ್ಟ ಉದ್ದೇಶಗಳು ಸ್ಪಷ್ಟವಾಗಿವೆ. ಅವರು ರಾಹುಲ್ ಅವರನ್ನು ಕೊಲ್ಲಲು ಬಯಸಿದ್ದಾರೆ. ರಾಹುಲ್ ಗಾಂಧಿ ಅವರ ಅಜ್ಜಿ ಮತ್ತು ತಂದೆ ಹತ್ಯೆಯಾಗಿದ್ದಾರೆ. ಹೀಗಿರುವಾಗ ಸರ್ಕಾರ ಕ್ಷುಲ್ಲಕ ರಾಜಕೀಯಕ್ಕಾಗಿ, ಅವರಿಗೆ ನೀಡಿದ್ದ ಎಸ್‌ಪಿಜಿ ಭದ್ರತೆಯನ್ನೂ ಹಿಂಪಡೆಯಿತು’ ಎಂದು ಅವರು ಹೇಳಿದ್ದಾರೆ.

‘ಈ ಗ್ರಾಫಿಕ್‌ನ ನಿಜವಾದ ಉದ್ದೇಶವೇನು?’ ಎಂದು ಪ್ರಶ್ನಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ‘ಕಾಂಗ್ರೆಸ್ ಮಾಜಿ ಅಧ್ಯಕ್ಷರ ವಿರುದ್ಧ ಹಿಂಸಾಚಾರವನ್ನು ಪ್ರಚೋದಿಸಲು ಇದನ್ನು ಸೃಷ್ಟಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ’ ಎಂದಿದ್ದಾರೆ.

ಬಂಧನ ವಿರೋಧಿಸಿ ಎಎಪಿ ಕಾರ್ಯಕರ್ತರ ಪ್ರತಿಭಟನೆ

ಸಂಜಯ್ ಸಿಂಗ್ 5 ದಿನ ಇ.ಡಿ ವಶಕ್ಕೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಬಂಧಿಸಲಾಗಿರುವ ಎಎಪಿ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರನ್ನು ದೆಹಲಿಯ ನ್ಯಾಯಾಲಯವು ಇದೇ 10ರವರೆಗೆ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿದೆ.

ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್ಪಾಲ್ ಅವರು ಹೆಚ್ಚಿನ ವಿಚಾರಣೆಗಾಗಿ ಸಂಜಯ್ ಸಿಂಗ್ ಅವರನ್ನು ಇ.ಡಿ. ವಶಕ್ಕೆ ನೀಡಿದ್ದಾರೆ.

‘ಪ್ರಕರಣದಲ್ಲಿ ಆರೋಪಿಗಳಾಗಿರುವ ಅಮಿತ್ ಅರೋರಾ ಮತ್ತು ದಿನೇಶ್ ಅರೋರಾ ಅವರು ಹಲವಾರು ಹೇಳಿಕೆಗಳನ್ನು ನೀಡಿದ್ದಾರೆ. ಆದರೆ ಅವರು ನನ್ನ ಹೆಸರನ್ನು ಉಲ್ಲೇಖಿಸಿಲ್ಲ. ಅವರು ನನ್ನ ಹೆಸರನ್ನು ಮರೆಯುವಷ್ಟು ಅಪರಿಚಿತ ನಾನಲ್ಲ. ಆದರೆ, ಈಗ ದಿಢೀರ್ ಆಗಿ ನನ್ನ ಹೆಸರನ್ನು ನೆನಪಿಸಿಕೊಂಡಿದ್ದಾರೆ. ಇ.ಡಿ. ಒಮ್ಮೆಯೂ ನನಗೆ ಸಮನ್ಸ್ ನೀಡಿಲ್ಲ. ನನಗಷ್ಟೇ ಪ್ರತ್ಯೇಕ ನಿಯಮ ಏಕೆ’ ಎಂದು ಸಂಜಯ್ ಸಿಂಗ್ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ.

ಉದ್ಯಮಿ ದಿನೇಶ್ ಅರೋರಾ ಅವರಿಂದ ₹2 ಕೋಟಿ ಪಡೆದಿದ್ದಾರೆ ಎಂಬ ಇ.ಡಿ. ಆರೋಪವನ್ನೂ ಅವರು ತಳ್ಳಿ ಹಾಕಿದ್ದಾರೆ.

‘ತಮ್ಮ ಬಂಧನವು ಪ್ರಧಾನಿ ನರೇಂದ್ರ ಮೋದಿ ಅವರ ಅನ್ಯಾಯದ ಕ್ರಮ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಅವರ ಪಕ್ಷವು ಸೋಲಲಿದೆ’ ಎಂದು ನ್ಯಾಯಾಲಯಕ್ಕೆ ಕರೆತರುವ ವೇಳೆ ಸಂಜಯ್ ಸಿಂಗ್ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಎಎಪಿ ಸಂಸದ ಸಂಜಯ್ ಸಿಂಗ್ ಅವರ ಬಂಧನ ವಿರೋಧಿಸಿ ಪಕ್ಷದ ಕಾರ್ಯಕರ್ತರು ದೆಹಲಿಯಲ್ಲಿರುವ ಬಿಜೆಪಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ಈ ವೇಳೆ ಭದ್ರತಾ ಸಿಬ್ಬಂದಿಯಿಂದ ಬಿಡಿಸಿಕೊಳ್ಳಲು ಹರಸಾಹಸಪಡುತ್ತಿರುವ ಎಎಪಿ ಕಾರ್ಯಕರ್ತ– ಪಿಟಿಐ ಚಿತ್ರ

ಅಬಕಾರಿ ನೀತಿ ಹಗರಣದ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಸಂಜಯ್ ಸಿಂಗ್ ಅವರನ್ನು ಇ.ಡಿ. ಅಧಿಕಾರಿಗಳು ಬುಧವಾರ ಬಂಧಿಸಿದ್ದರು.

ಪ್ರತಿಭಟನೆ: ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರ ಬಂಧನ ವಿರೋಧಿಸಿ ಪಕ್ಷದ ಕಾರ್ಯಕರ್ತರು ನವದೆಹಲಿಯಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಪಕ್ಷದ ಕಚೇರಿ ಬಳಿ ಸೇರಿದ್ದ ನೂರಾರು ಕಾರ್ಯಕರ್ತರು ಸಂಜಯ್ ಸಿಂಗ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಘೋಷಣೆಗಳನ್ನು ಕೂಗಿದರು.

ಸಂಸತ್ತಿನ ಕಲಾಪದಲ್ಲಿ ಉದ್ಯಮಿ ಅದಾನಿ ಗ್ರೂಪ್ ಹಗರಣಗಳನ್ನು ಪ್ರಶ್ನಿಸಿದ್ದಕ್ಕಾಗಿ ಸಂಜಯ್ ಸಿಂಗ್ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಬಂಧಿಸಿದೆ ಎಂದು ದೂರಿದರು.

ಧ್ವನಿ ಅಡಗಿಸಲು ಯತ್ನ: ಟೀಕೆ

ನವದೆಹಲಿ (ಪಿಟಿಐ): ಎಎಪಿ ಸಂಸದ ಸಂಜಯ್ ಸಿಂಗ್ ಅವರನ್ನು ಬಂಧಿಸುವ ಮೂಲಕ ಅವರ ಧ್ವನಿಯನ್ನು ಅಡಗಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಯತ್ನಿಸುತ್ತಿದೆ ಎಂದು ಎಎಪಿ ಆರೋಪಿಸಿದೆ.

ಅವರ ವಿರುದ್ಧ ಯಾವುದಾದರೂ ಸಾಕ್ಷ್ಯಾಧಾರ ಲಭ್ಯವಾಗಿದ್ದರೆ, ಅದನ್ನು ಸಾರ್ವಜನಿಕಗೊಳಿಸಬೇಕು. ಇಲ್ಲದಿದ್ದರೆ ಬಿಜೆಪಿ ನಾಯಕರು ರಾಜಕೀಯದಿಂದ ನಿವೃತ್ತಿ ಪಡೆಯಬೇಕು ಎಂದು ಎಎಪಿ ನಾಯಕಿ ಅತಿಶಿ ಸವಾಲು ಹಾಕಿದ್ದಾರೆ.

ಗುತ್ತಿಗೆದಾರ ಕಮಿಷನ್ ಪಾವತಿಸಲು ನಿರಾಕರಿಸಿದ್ದಕ್ಕೆ ಆಕ್ರೋಶ

ಹೊಸ ರಸ್ತೆ ಅಗೆದ ಬಿಜೆಪಿ ಶಾಸಕರ ಬೆಂಬಲಿಗ

ಷಹಜಹಾನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಗುತ್ತಿಗೆದಾರ ಶೇ 5ರಷ್ಟು ಕಮಿಷನ್ ಪಾವತಿಸಲು ನಿರಾಕರಿಸಿದ್ದಕ್ಕೆ ಆಕ್ರೋಶಗೊಂಡ ಬಿಜೆಪಿ ಶಾಸಕರ ಬೆಂಬಲಿಗರೊಬ್ಬರು, ಹೊಸದಾಗಿ ಡಾಂಬರ್ ಹಾಕಿ ಅಭಿವೃದ್ಧಿಪಡಿಸಿದ್ದ ರಸ್ತೆಯನ್ನು ಬುಲ್ಡೋಜರ್ ಬಳಸಿ ಸುಮಾರು ಅರ್ಧ ಕಿ.ಮೀ. ದೂರದಷ್ಟು ಕಿತ್ತು ಹಾಕಿರುವ ಘಟನೆ ಉತ್ತರ ಪ್ರದೇಶದ ಷಹಜಹಾನ್‌ಪುರದಲ್ಲಿ ನಡೆದಿದೆ.

ಷಹಜಹಾನ್‌ಪುರದಿಂದ ನಾವಡಾ ಮತ್ತು ಜೈತಿಪುರ ಮಾರ್ಗವಾಗಿ ಬುಡೌನ್ ಜಿಲ್ಲೆಗೆ ಸಂಪರ್ಕ ಬೆಸೆಯುವ ಈ ರಸ್ತೆಯು ಲೋಕೋಪಯೋಗಿ ಇಲಾಖೆಗೆ ಸೇರಿದೆ.

ಘಟನೆ ಬಗ್ಗೆ ಮಾಹಿತಿ ಪಡೆದಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಈ ಕೃತ್ಯ ಎಸಗಿದವರಿಂದಲೇ ಹಾನಿಯ ಸಂಪೂರ್ಣ ವೆಚ್ಚ ವಸೂಲಿ ಮಾಡುವಂತೆ ಸೂಚಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ ಸಂಜಯ್ ಕುಮಾರ್ ಪಾಂಡೆ ಅವರು, ಈ ಕುರಿತು ಪಿಡಬ್ಲ್ಯುಡಿ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರಿಂದ ಮಾಹಿತಿ ಪಡೆದಿದ್ದು, ತಿಲ್ಹರ್ ಉಪ ವಿಭಾಗದ ಮ್ಯಾಜಿಸ್ಟ್ರೇಟ್ ನೇತೃತ್ವದಡಿ ತನಿಖೆಗೆ ಆದೇಶಿಸಿದ್ದಾರೆ.

ಉತ್ತರ ಪ್ರದೇಶದ ಷಹಜಹಾನ್‌ಪುರದಲ್ಲಿ ದುಷ್ಕರ್ಮಿಗಳು ಅಗೆದಿರುವ ರಸ್ತೆಯನ್ನು ಅಧಿಕಾರಿಗಳು ಪರಿಶೀಲಿಸಿದರು –ಪಿಟಿಐ ಚಿತ್ರ

ತಂಡವು ವರದಿ ಸಲ್ಲಿಸಿದ ಬಳಿಕ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

ಬಿಜೆಪಿ ಶಾಸಕ ಯಾರು?: ಕತ್ರಾ ಕ್ಷೇತ್ರದ ಶಾಸಕ ವೀರ ವಿಕ್ರಮ್ ಸಿಂಗ್ ಅವರ ಬೆಂಬಲಿಗ ಎನ್ನಲಾದ ಜಗವೀರ್ ಸಿಂಗ್ ಸೇರಿದಂತೆ 15ರಿಂದ 20 ಅಪರಿಚಿತರ ವಿರುದ್ಧ ರಸ್ತೆ ನಿರ್ಮಾಣ ಕಂಪನಿಯ ಮ್ಯಾನೇಜರ್ ನೀಡಿದ ದೂರಿನ ಅನ್ವಯ ಎಫ್‌ಐಆರ್ ದಾಖಲಾಗಿದೆ.

‘ಜಗವೀರ್ ಹಲವು ಬಾರಿ ಕಂಪನಿಯ ನೌಕರರನ್ನು ಬೆದರಿಸಿದ್ದಾರೆ. ಕಮಿಷನ್‌ಗೆ ಒತ್ತಾಯಿಸಿದ್ದಾರೆ. ಇದಕ್ಕೆ ನಿರಾಕರಿಸಿದ್ದಕ್ಕೆ ಅಕ್ಟೋಬರ್ 2ರಂದು ಅಪರಿಚಿತರ ತಂಡದೊಟ್ಟಿಗೆ ತೆರಳಿ ಕೆಲಸಗಾರರನ್ನು ಥಳಿಸಿದ್ದಾರೆ. ಬಳಿಕ ರಸ್ತೆಯನ್ನು ಅಗೆದು ಹಾಕಿದ್ದಾರೆ’ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಸದ್ಯ ರಸ್ತೆ ಅಭಿವೃದ್ಧಿ ಕಾರ್ಯ ಮತ್ತೆ ಆರಂಭಗೊಂಡಿದ್ದು, ಕಾಮಗಾರಿಯಲ್ಲಿ ತೊಡಗಿರುವವರಿಗೆ ಪೊಲೀಸ್ ಭದ್ರತೆ ಒದಗಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶಾಸಕ ವೀರ ವಿಕ್ರಮ್ ಸಿಂಗ್, ‘ಜಗವೀರ್ ಬಿಜೆಪಿ ಕಾರ್ಯಕರ್ತನಾಗಿರುವುದು ನಿಜ. ಆದರೆ, ಆತ ನನ್ನ ಬೆಂಬಲಿಗನಲ್ಲ. ಆತನಿಗೂ, ನನಗೂ ಯಾವುದೇ ಸಂಬಂಧ ಇಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ನ್ಯೂಸ್‌ಕ್ಲಿಕ್ ಮೇಲೆ ದಾಳಿ: ಗಣ್ಯರಿಂದ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯೂಸ್‌ಕ್ಲಿಕ್ ಸುದ್ದಿತಾಣದ ಸಂಪಾದಕ ಪ್ರಬೀರ್ ಪುರಕಾಯಸ್ಥ ಸೇರಿದಂತೆ ಇಬ್ಬರ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿ, ಬಂಧಿಸಿರುವುದು ಹಾಗೂ ನ್ಯೂಸ್‌ಕ್ಲಿಕ್ ಜೊತೆ ನಂಟು ಹೊಂದಿದ್ದ 46 ಮಂದಿ ಸುದ್ದಿಗಾರರ ಮನೆಗಳ ಮೇಲೆ ಪೊಲೀಸರು ನಡೆಸಿದ ದಾಳಿಯು ಕಳವಳ ಮೂಡಿಸಿದೆ ಎಂದು ಎಂಟು ಮಂದಿ ಲೇಖಕರು, ಸಾಮಾಜಿಕ ಕಾರ್ಯಕರ್ತರು ಪತ್ರಿಕಾ ಹೇಳಿಕೆ ನೀಡಿದ್ದಾರೆ.

ನ್ಯೂಸ್‌ಕ್ಲಿಕ್ ಮೇಲೆ ಕೈಗೊಂಡಿರುವ ಕ್ರಮವು ಅಲ್ಲಿನ ಧೈರ್ಯಶಾಲಿ ದನಿಗಳನ್ನು ಹತ್ತಿಕ್ಕುವ ಯತ್ನ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಟೀಕೆಗಳು ಬಹಳ ಅಗತ್ಯ. ದನಿಯನ್ನು ಹತ್ತಿಕ್ಕುವ ಯಾವುದೇ ಯತ್ನವು ಭಾರತದ ಪ್ರಜಾತಾಂತ್ರಿಕ ಆಶಯದ ಮೇಲಿನ ಹಲ್ಲೆ ಎಂದು ಅವರು ಟೀಕಿಸಿದ್ದಾರೆ.

ಈ ಹೇಳಿಕೆಗೆ ಸಾಮಾಜಿಕ ಕಾರ್ಯಕರ್ತೆಯರಾದ ಅರುಣಾ ರಾಯ್, ವಿ. ಗೀತಾ, ಲೇಖಕಿಯರಾದ ಗೀತಾಂಜಲಿ ಶ್ರೀ, ಕೆ.ಆರ್. ಮೀರಾ, ಪತ್ರಕರ್ತ ಪಿ. ಸಾಯಿನಾಥ್, ಲೇಖಕ ಪೆರುಮಾಳ್ ಮುರುಗನ್, ಇತಿಹಾಸಕಾರ ರಾಮಚಂದ್ರ ಗುಹಾ, ಗಾಯಕ ಟಿ.ಎಂ. ಕೃಷ್ಣ ಅವರು ಸಹಿ ಮಾಡಿದ್ದಾರೆ.

ಯುಎಪಿಎ ಅಡಿಯಲ್ಲಿ ಪ್ರಕರಣ ದಾಖಲಿಸುವ ಮೂಲಕ ಹಾಗೂ ನ್ಯೂಸ್‌ಕ್ಲಿಕ್ ಸುದ್ದಿತಾಣದ ಕಚೇರಿಯ ಬಾಗಿಲು ಮುಚ್ಚಿಸುವ ಮೂಲಕ ಪ್ರಭುತ್ವವು, ಅನ್ಯಾಯವನ್ನು ಎತ್ತಿ ತೋರಿಸುವ ಕೆಲಸ ಮಾಡಿದ ಪತ್ರಕರ್ತರನ್ನು ಕಳಂಕಿತರು ಎಂಬಂತೆ ಚಿತ್ರಿಸಲು ಯತ್ನಿಸಿದೆ.

‘ಯುಎಪಿಎ ಅಡಿಯಲ್ಲಿ ಬಂಧಿತರಾಗಿದ್ದ ಸಾಮಾಜಿಕ ಕಾರ್ಯಕರ್ತರಿಂದ ಮುಟ್ಟುಗೋಲು ಹಾಕಿಕೊಂಡಿದ್ದ ಸಾಧನಗಳಲ್ಲಿ ಕೆಲವು ಸಾಕ್ಷಿಗಳನ್ನು ಸೃಷ್ಟಿಸಿ ತುರುಕಿದ್ದ ವರದಿಗಳು ಇವೆ. ನ್ಯೂಸ್‌ಕ್ಲಿಕ್‌ನ ಪತ್ರಕರ್ತರಿಗೆ ಸಂಬಂಧಿಸಿದ ಪ್ರಕರಣದಲ್ಲಿಯೂ ಇದೇ ಬಗೆಯ ಯತ್ನಗಳು ನಡೆಯಬಹುದು ಎಂಬ ಆತಂಕ ನಮ್ಮದು’ ಎಂದು ಅವರು ಹೇಳಿದ್ದಾರೆ. ‘ಈ ಸಂದರ್ಭದಲ್ಲಿ ನ್ಯೂಸ್‌ಕ್ಲಿಕ್‌ನ ಎಲ್ಲ ಸಿಬ್ಬಂದಿ ಜೊತೆ ನಾವು ನಿಲ್ಲುತ್ತೇವೆ’ ಎಂದು ಕೂಡ ಅವರು ತಿಳಿಸಿದ್ದಾರೆ.

ಊರ್ಮಿಳೇಶ್, ಶರ್ಮ ಮತ್ತೆ ವಿಚಾರಣೆ (ಪಿಟಿಐ ವರದಿ): ನ್ಯೂಸ್‌ಕ್ಲಿಕ್ ಸುದ್ದಿತಾಣವು ಚೀನಾ ಪರ ಪ್ರಚಾರಾಂದೋಲನ ನಡೆಸಲು ಹಣ ಪಡೆದುಕೊಂಡಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಆ ಸುದ್ದಿತಾಣದ ಪತ್ರಕರ್ತರಾದ ಊರ್ಮಿಳೇಶ್ ಮತ್ತು ಅಭಿಸಾರ್ ಶರ್ಮ ಅವರನ್ನು ಗುರುವಾರವೂ ವಿಚಾರಣೆಗೆ ಗುರಿಪಡಿಸಿದರು.

ಷೇರುಪೇಟೆ ವಹಿವಾಟು 405



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,436
ಇಂದಿನ ಅಂತ್ಯ	19,545
▲	109
ದಿನದ ಗರಿಷ್ಠ	19,576

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹535
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹537

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650 (1690)
ಸೋಯಾ (ರಿಫೈನ್ಡ್)	₹865 (875)
ಸೂರ್ಯಕಾಂತಿ (ರಿಫೈನ್ಡ್)	₹875 (875)
ಪಾಮೋಲಿನ್	₹810 (820)

ವಿನಿಮಯ ದರ

$ ಡಾಲರ್	83.30
£ ಪೌಂಡ್	100.92
€ ಯುರೊ	87.46
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ ಆರ್ ಪೇಟೆ	₹8100-8100
ತಿಪಟೂರು	₹7200-8600

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹285-485
ದ್ವಿತಳಿ (ಬಿ.ವಿ)	₹311-596

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹138
ಗುಡ್ ಲಾಟ್	₹127

ಎನ್‌ಡಿಟಿವಿ ಪ್ರವರ್ತಕರ ವಿರುದ್ಧದ ಸೆಬಿ ಆದೇಶ ರದ್ದು

ನವದೆಹಲಿ (ಪಿಟಿಐ): ನ್ಯೂ ಡೆಲ್ಲಿ ಟೆಲಿವಿಷನ್ ಲಿಮಿಟೆಡ್‌ನ (ಎನ್‌ಡಿಟಿವಿ) ಪ್ರವರ್ತಕರಾದ ಪ್ರಣಯ್ ರಾಯ್ ಮತ್ತು ರಾಧಿಕಾ ರಾಯ್ ವಿರುದ್ಧ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ನೀಡಿದ್ದ ಆದೇಶವನ್ನು ಷೇರುಪೇಟೆ ಮೇಲ್ಮನವಿ ನ್ಯಾಯಮಂಡಳಿಯು (ಎಸ್‌ಎಟಿ) ಗುರುವಾರ ರದ್ದುಪಡಿಸಿದೆ.

ಷೇರುಪೇಟೆಯಲ್ಲಿ ಕಾನೂನುಬಾಹಿರವಾಗಿ ವಹಿವಾಟು ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಡಿಟಿವಿ ಸ್ಥಾಪಕರು ಎರಡು ವರ್ಷಗಳವರೆಗೆ ಸಾಲಪತ್ರ ಮಾರುಕಟ್ಟೆ ಪ್ರವೇಶಿಸುವಂತಿಲ್ಲ ಎಂದು 2020ರ ನವೆಂಬರ್‌ನಲ್ಲಿ ಸೆಬಿ ಆದೇಶಿಸಿತ್ತು. ಅಕ್ರಮವಾಗಿ ಗಳಿಸಿಕೊಂಡಿರುವ ₹ 16.97 ಕೋಟಿಯನ್ನು ಹಿಂದಿರುಗಿಸುವಂತೆಯೂ ಸೂಚನೆ ನೀಡಿತ್ತು.

ಪ್ರಣಯ್ ಮತ್ತು ರಾಧಿಕಾ ಅವರು ಎನ್‌ಡಿಟಿವಿಯ ಅನುಸರಣಾ ಅಧಿಕಾರಿಯಿಂದ ವಹಿವಾಟಿಗೂ ಮುನ್ನವೇ ಅನುಮತಿ ಪಡೆದುಕೊಂಡಿದ್ದರು. ಹೀಗಾಗಿ ಎನ್‌ಡಿಟಿವಿಯ ನೀತಿ ಸಂಹಿತೆ ಮತ್ತು ಷೇರು ಸಂಬಂಧಿತ ಗೋಪ್ಯ ಮಾಹಿತಿಯ ದುರ್ಬಳಕೆ ತಡೆ ನಿಯಮಗಳಿಗೆ (ಪಿಐಟಿ) ಅನುಗುಣವಾಗಿ ಈ ಇಬ್ಬರು ವಹಿವಾಟು ನಡೆಸಿದ್ದಾರೆ ಎಂದು ಎಸ್‌ಎಟಿ ತಿಳಿಸಿದೆ.

ಆದರೆ, ಸಮೂಹದ ಸಿಇಒ ವಿಕ್ರಮಾದಿತ್ಯ ಚಂದ್ರ ಅವರ ವಿರುದ್ಧದ ಸೆಬಿ ಆದೇಶವನ್ನು ಸದ್ಯದ ಮಟ್ಟಿಗೆ ತಡೆ ಹಿಡಿದಿದ್ದು, ಮರುಪರಿಶೀಲನೆ ನಡೆಸುವಂತೆ ಸೆಬಿಗೆ ಸೂಚನೆ ನೀಡಿದೆ.

ಎನ್‌ಡಿಟಿವಿ ಸುದ್ದಿವಾಹಿನಿಯ ಪ್ರವರ್ತಕ ಕಂಪನಿಯಾಗಿರುವ ಆರ್‌ಆರ್‌ಪಿಆರ್ ಹೋಲ್ಡಿಂಗ್ಸ್ ಪ್ರೈ. ಲಿ. ನಿರ್ದೇಶಕ ಸ್ಥಾನಕ್ಕೆ ಪ್ರಣಯ್ ಮತ್ತು ರಾಧಿಕಾ ಅವರು 2022ರ ನವೆಂಬರ್‌ನಲ್ಲಿ ರಾಜೀನಾಮೆ ನೀಡಿದ್ದಾರೆ.

ಹೊಸ ವಹಿವಾಟುಗಳಿಗೆ ಬೇಡಿಕೆಯು ತೀವ್ರ ಗತಿಯಲ್ಲಿ ಹೆಚ್ಚಳ: ಎಸ್ ಆ್ಯಂಡ್ ಪಿ ವರದಿ

ಸೇವಾ ವಲಯ: 13 ವರ್ಷದ ಗರಿಷ್ಠ

ನವದೆಹಲಿ/ಬೆಂಗಳೂರು (ಪಿಟಿಐ/ರಾಯಿಟರ್ಸ್): ದೇಶದ ಸೇವಾ ವಲಯದ ಚಟುವಟಿಕೆಗಳು ಸೆಪ್ಟೆಂಬರ್ ತಿಂಗಳಿನಲ್ಲಿ ಉತ್ತಮ ಬೆಳವಣಿಗೆ ಕಂಡಿದ್ದು, 13 ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ತಿಳಿಸಿದೆ.

ಹೊಸ ವಹಿವಾಟುಗಳಿಗೆ ಬೇಡಿಕೆಯು ತೀವ್ರ ಗತಿಯಲ್ಲಿ ಹೆಚ್ಚಾಗಿದೆ. ಇದರ ಜೊತೆಗೆ ಉದ್ಯೋಗ ಸೃಷ್ಟಿಯೂ ಹೆಚ್ಚಾಗುತ್ತಿರುವುದರಿಂದ ಒಟ್ಟಾರೆ ವಹಿವಾಟಿನಲ್ಲಿ ಈ ಮಟ್ಟದ ಬೆಳವಣಿಗೆ ಕಂಡುಬಂದಿದೆ ಎಂದು ಅದು ಹೇಳಿದೆ.

ಸೇವಾ ವಲಯದ ಚಟುವಟಿಕೆಗಳನ್ನು ತಿಳಿಸುವ ಸರ್ವಿಸಸ್ ಪಿಎಂಐ ಬಿಸಿನೆಸ್ ಆ್ಯಕ್ಟಿವಿಟಿ ಇಂಡೆಕ್ಸ್ ಆಗಸ್ಟ್‌ನಲ್ಲಿ 60.1ರಷ್ಟು ಇದ್ದಿದ್ದು ಸೆಪ್ಟೆಂಬರ್‌ನಲ್ಲಿ 61ಕ್ಕೆ ಏರಿಕೆ ಆಗಿದೆ. 2010ರ ಜೂನ್ ನಂತರ ಎರಡನೇ ವೇಗದ ಬೆಳವಣಿಗೆ ಇದಾಗಿದೆ.

ಮುಖ್ಯಾಂಶಗಳು

- 9 ವರ್ಷಗಳ ಗರಿಷ್ಠ ಮಟ್ಟಕ್ಕೆ ವಹಿವಾಟು ನಡೆಸುವ ವಿಶ್ವಾಸ
- ಜಾಗತಿಕ ಮಾರುಕಟ್ಟೆಗಳಿಂದ ಹೆಚ್ಚಿದ ಬೇಡಿಕೆ

ಸೇವಾ ವಲಯದ 400 ಕಂಪನಿಗಳಿಂದ ಅಭಿಪ್ರಾಯ ಸಂಗ್ರಹಿಸಿ ಈ ವರದಿಯನ್ನು ಸಂಸ್ಥೆಯು ನೀಡಿದೆ. ಸೂಚ್ಯಂಕವು 50ರ ಮಟ್ಟಕ್ಕಿಂತಲೂ ಹೆಚ್ಚಿಗೆ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ, 50ಕ್ಕಿಂತಲೂ ಕಡಿಮೆ ಇದ್ದರೆ ನಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.



ಒಟ್ಟಾರೆ ವಹಿವಾಟು ಏರಿಕೆ ಆಗುತ್ತಿರುವ ಜೊತೆಗೆ, ಜಾಗತಿಕ ಮಾರುಕಟ್ಟೆಯಲ್ಲಿಯೂ ಭಾರತದ ಸೇವೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಅದರಲ್ಲಿಯೂ ಮುಖ್ಯವಾಗಿ ಏಷ್ಯಾ, ಯುರೋಪ್ ಮತ್ತು ಉತ್ತರ ಅಮೆರಿಕದಿಂದ ಹೆಚ್ಚಿನ ಬೇಡಿಕೆ ಬರುತ್ತಿದೆ ಎಂದು ಸಂಸ್ಥೆಯು ಮಾಹಿತಿ ನೀಡಿದೆ.

ವಲಯದ ಮುನ್ನೋಟದಲ್ಲಿಯೂ ಸುಧಾರಣೆ ಕಂಡುಬಂದಿದೆ. ಕಂಪನಿಗಳ ವಹಿವಾಟು ನಡೆಸುವ ವಿಶ್ವಾಸವು 9 ವರ್ಷಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಈ ವರ್ಷದ ಮುಂಬರುವ ದಿನಗಳಲ್ಲಿಯೂ ಮಾರುಕಟ್ಟೆ ಸ್ಥಿತಿಯು ಉತ್ತಮವಾಗಿ ಇರುವ ಮತ್ತು ಬೇಡಿಕೆಯು ಏರುಗತಿಯಲ್ಲಿ ಸಾಗುವ ನಿರೀಕ್ಷೆಯನ್ನು ಕಂಪನಿಗಳು ಹೊಂದಿವೆ.

‘ಸೇವೆಗಳ ಮೇಲಿನ ವೆಚ್ಚವು ನಿಧಾನಗತಿಯಲ್ಲಿ ಏರಿಕೆ ಕಂಡಿದ್ದು, ಎರಡೂವರೆ ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ತಲುಪಿದೆ. ಅಲ್ಪಾವಧಿಯಲ್ಲಿ ಹಣದುಬ್ಬರ ತುಸು ಇಳಿಕೆ ಆಗಬಹುದು, ಆದರೆ, ಎಲ್‌ನಿನೊ ಪರಿಣಾಮದಿಂದಾಗಿ ಆಹಾರ ವಸ್ತುಗಳ ದರ ಏರಿಕೆ ಆಗುವ ಸಾಧ್ಯತೆ ಇದ್ದು, ಆರ್‌ಬಿಐ ಮುಂದಿನ ವರ್ಷದವರೆಗೂ ಬಡ್ಡಿದರ ಕಡಿತ ಮಾಡುವ ಸಾಧ್ಯತೆ ತೀರಾ ಕಡಿಮೆ ಇದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ತಿಳಿಸಿದ್ದಾರೆ.

ತಯಾರಿಕೆ ಮತ್ತು ಸೇವಾ ವಲಯಗಳ ಒಟ್ಟು ಬೆಳವಣಿಗೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಆಗಸ್ಟ್‌ನಲ್ಲಿ 60.9 ಇದ್ದಿದ್ದು ಸೆಪ್ಟೆಂಬರ್‌ನಲ್ಲಿ 61ಕ್ಕೆ ಏರಿಕೆ ಕಂಡಿದೆ. ಭಾರತದ ಸರಕು ಮತ್ತು ಸೇವೆಗಳಿಗೆ ಬೇಡಿಕೆಯು 13 ವರ್ಷಗಳಲ್ಲಿಯೇ ಎರಡನೇ ವೇಗದ ಬೆಳವಣಿಗೆ ಕಂಡಿದೆ ಎಂದೂ ಎಸ್ ಆ್ಯಂಡ್ ಪಿ ತಿಳಿಸಿದೆ.

ಕೇಂದ್ರಕ್ಕೆ ₹88 ಕೋಟಿ ಲಾಭಾಂಶ: ಬಿಎಚ್‌ಇಎಲ್

ನವದೆಹಲಿ(ಪಿಟಿಐ): 2022–23ನೇ ಹಣಕಾಸು ವರ್ಷಕ್ಕೆ ಅಂತಿಮ ಲಾಭಾಂಶದ ರೂಪದಲ್ಲಿ ಕೇಂದ್ರ ಸರ್ಕಾರಕ್ಕೆ ₹88 ಕೋಟಿ ಪಾವತಿ ಮಾಡಿರುವುದಾಗಿ ಸರ್ಕಾರಿ ಸ್ವಾಮ್ಯದ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿಎಚ್‌ಇಎಲ್) ಗುರುವಾರ ತಿಳಿಸಿದೆ.

ಬಿಎಚ್‌ಇಎಲ್‌ನ ಅಧ್ಯಕ್ಷ ನಳಿನ್ ಸಿಂಘಲ್ ಅವರು ಲಾಭಾಂಶದ ಚೆಕ್ ಅನ್ನು ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಸಚಿವ ಮಹೇಂದ್ರನಾಥ್ ಪಾಂಡೆ ಅವರಿಗೆ ನೀಡಿದ್ದಾರೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹10800
ಎಸಿ	₹6300
ಆರ್‌ಪಿ	₹9400
ಆರ್‌ಸಿ	₹5830

ಕೆಫೆ ಮೇಲೆ ರಷ್ಯಾದ ಶೆಲ್ ದಾಳಿ: 51 ಮಂದಿ ಸಾವು

ಕೀವ್ (ಉಕ್ರೇನ್) (ಎಪಿ/ಎಎಫ್‌ಪಿ): ಉಕ್ರೇನ್ ದೇಶದ ಈಶಾನ್ಯ ಭಾಗದ ಹಳ್ಳಿಯೊಂದರ ಮೇಲೆ ಗುರುವಾರ ರಷ್ಯಾ ನಡೆಸಿದ ದಾಳಿಯಲ್ಲಿ 51 ಜನರು ಮೃತಪಟ್ಟಿದ್ದು, ಆರು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ ಪಡೆಗಳು ಹಾರ್ಕಿವ್ ಪ್ರದೇಶದ ಹ್ರೋಜಾ ಗ್ರಾಮದಲ್ಲಿ ಮಧ್ಯಾಹ್ನ 1 ಗಂಟೆ ಸುಮಾರಿಗೆ ಅಂಗಡಿ ಮತ್ತು ಕೆಫೆ ಮೇಲೆ ಶೆಲ್ ದಾಳಿ ನಡೆಸಿವೆ. ಇದರಲ್ಲಿ ಮೃತಪಟ್ಟವರಲ್ಲಿ 6 ವರ್ಷದ ಬಾಲಕ ಮತ್ತು ಗಾಯಗೊಂಡವರಲ್ಲಿ ಒಂದು ಮಗು ಕೂಡ ಇದೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿಯ ಸಿಬ್ಬಂದಿ ಮುಖ್ಯಸ್ಥ ಆಂಡ್ರಿ ಯೆರ್ಮಾಕ್ ಮತ್ತು ಹಾರ್ಕಿವ್ ಗವರ್ನರ್ ಒಲೆಹ್ ಸಿನಿಹುಬೊವ್ ತಿಳಿಸಿದ್ದಾರೆ.

ಪಾಶ್ಚಿಮಾತ್ಯ ಮಿತ್ರರಾಷ್ಟ್ರಗಳಿಂದ ಬೆಂಬಲ ಗಿಟ್ಟಿಸಲು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಯುರೋಪ್‌ನ ಸುಮಾರು 50 ನಾಯಕರ ಶೃಂಗಸಭೆಯಲ್ಲಿ ಭಾಗವಹಿಸಲು ಸ್ಪೇನ್‌ಗೆ ತೆರಳಿದ ಬೆನ್ನಲ್ಲೇ ಗುರುವಾರ ನಸುಕಿನಲ್ಲಿ ರಷ್ಯಾ, ಉಕ್ರೇನ್ ಮೇಲೆ ಭಾರಿ ಡ್ರೋನ್ ದಾಳಿ ನಡೆಸಿದೆ.

ದಕ್ಷಿಣ ಒಡೆಸಾ, ಮೈಕೊಲೈವ್ ಮತ್ತು ಕಿರೊವೊಹ್ರಾಡ್ ಪ್ರದೇಶಗಳಲ್ಲಿ ರಷ್ಯಾ ಉಡಾಯಿಸಿದ 29 ಇರಾನಿ ಡ್ರೋನ್‌ಗಳ ಪೈಕಿ 24 ಡ್ರೋನ್‌ಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಲಾಗಿದೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ಉಕ್ರೇನ್‌ನ ಹಾರ್ಕಿವ್ ಪ್ರದೇಶದ ಹ್ರೋಜಾ ಗ್ರಾಮದಲ್ಲಿ ಕೆಫೆ ಮೇಲೆ ರಷ್ಯಾ ಪಡೆಗಳು ನಡೆಸಿದ ದಾಳಿಯಲ್ಲಿ ಕಟ್ಟಡ ಧ್ವಂಸಗೊಂಡಿದ್ದು ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿದರು– ಎಪಿ/ಪಿಟಿಐ ಚಿತ್ರ

ಡ್ರೋನ್ ದಾಳಿಯಿಂದ ಈ ಪ್ರದೇಶದಲ್ಲಿ ಮೂಲಸೌಕರ್ಯಗಳು ಹಾನಿಗೊಂಡಿವೆ. ಹೊತ್ತಿರುವ ಬೆಂಕಿ ನಂದಿಸಲು ತುರ್ತು ಸೇವೆ ಸಿಬ್ಬಂದಿ ನಿಯೋಜಿಸಲಾಗಿದೆ. ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಕಿರೊವೊಹ್ರಾಡ್ ಪ್ರಾದೇಶಿಕ ಆಡಳಿತದ ಮುಖ್ಯಸ್ಥ ಆಂಡ್ರಿ ರೇಕೊವಿಚ್ ತಿಳಿಸಿದರು.

ಉಕ್ರೇನ್ ಪಡೆಗಳೂ ರಷ್ಯಾದ ಗಡಿ ಭಾಗದ ಪ್ರದೇಶಗಳ ಮೇಲೆ ಡ್ರೋನ್ ದಾಳಿ ನಡೆಸಿವೆ. ಗಡಿ ಪಟ್ಟಣಗಳ ಹಲವು ಕಡೆಗಳಲ್ಲಿ ಮೂಲಸೌಕರ್ಯಗಳಿಗೆ ಹಾನಿಯಾಗಿದೆ. ಅಲ್ಲದೆ, ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿದೆ ಎಂದು ರಷ್ಯಾದ ಕರ್ಸ್ಕ್ ಪ್ರದೇಶದ ಗವರ್ನರ್ ರೋಮನ್ ಸ್ಟಾರ್ವೊಯಿಟ್ ಹೇಳಿದ್ದಾರೆ.

26 ಸಾವಿರ ಜನ ನಾಪತ್ತೆ: ಕಳೆದ ವರ್ಷ ರಷ್ಯಾ ತನ್ನ ಪೂರ್ಣ ಪ್ರಮಾಣದ ಆಕ್ರಮಣ ಪ್ರಾರಂಭಿಸಿದಾಗಿನಿಂದ ಅನೇಕ ನಾಗರಿಕರು ಸೇರಿ ಸಾವಿರಾರು ಜನರು ನಾಪತ್ತೆಯಾಗಿದ್ದು, ಕಣ್ಮರೆಯಾದವರ ಸಂಖ್ಯೆ 26 ಸಾವಿರಕ್ಕೂ ಹೆಚ್ಚಿದೆ ಎಂದು ಉಕ್ರೇನ್ ಗುರುವಾರ ಹೇಳಿದೆ.

‘ಈವರೆಗೆ ನಾಪತ್ತೆಯಾದವರಲ್ಲಿ 11 ಸಾವಿರ ನಾಗರಿಕರು ಮತ್ತು 15 ಸಾವಿರ ಯೋಧರು ಸೇರಿದ್ದಾರೆ’ ಎಂದು ಉಪ ಆಂತರಿಕ ಭದ್ರತಾ ಸಚಿವ ಲಿಯೊನಿಡ್ ಟಿಮ್‌ಚೆಂಕೊ ತಿಳಿಸಿದ್ದಾರೆ.

‘ಕಾರ್ಯತಂತ್ರದ ಸ್ವಾಯತ್ತೆ ಪ್ರತಿಪಾದಿಸಬೇಕಿದೆ’

ನವದೆಹಲಿ: ಚೀನಾ ಪ್ರಬಲಗೊಂಡಂತೆ ಅದರ ಆಕ್ರಮಣಶೀಲತೆ ಈಗ ಹೆಚ್ಚು ಸ್ಪಷ್ಟವಾಗುತ್ತಿದೆ. ಭಾರತವು ತನ್ನ ಕಾರ್ಯತಂತ್ರದ ಲೆಕ್ಕಾಚಾರದಲ್ಲಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕಾದ ಅಗತ್ಯವಿದೆ ಎಂದು ರಕ್ಷಣಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಅಭಿಪ್ರಾಯಪಟ್ಟಿದ್ದಾರೆ.

ನವದೆಹಲಿಯ ಮಾಣೆಕ್ ಶಾ ಕೇಂದ್ರದಲ್ಲಿ ನಡೆದ ಜನರಲ್ ಕೆ.ವಿ ಕೃಷ್ಣರಾವ್ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಭದ್ರತಾ ಸವಾಲುಗಳು ಮತ್ತು ಭೌಗೋಳಿಕ ರಾಜಕೀಯ ಬದಲಾವಣೆಗಳ ಕುರಿತು ಒಳನೋಟವನ್ನು ಒದಗಿಸಿದರು. ಚೀನಾ ನಡುವಿನ ಗಡಿ ವಿವಾದದ ಕುರಿತು ಮಾತನಾಡಿದ ಚೌಹಾಣ್, ಭಾರತ ಈಗ ತನ್ನ ಕಾರ್ಯತಂತ್ರ ಸ್ವಾಯತ್ತೆಯನ್ನು ಪ್ರಬಲವಾಗಿ ಪ್ರತಿಪಾದಿಸಬೇಕಿದೆ ಎಂದು ಹೇಳಿದರು.

‘ಅವಕಾಶಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ಕಾರ್ಯತಂತ್ರದ ಸ್ವಾಯತ್ತೆಯು ಹೆಚ್ಚು ಪ್ರಸ್ತುತವೆನಿಸುತ್ತದೆ. ನಮ್ಮ ಭವಿಷ್ಯವೂ ಅವಕಾಶಗಳ ಮೇಲೆಯೇ ನಿರ್ಧಾರವಾಗುತ್ತದೆ. ಹೀಗಾಗಿ ನಾವು ಅವಕಾಶಗಳ ಬಗ್ಗೆ ಹೆಚ್ಚು ಯೋಚಿಸಬೇಕು. ಚೀನಾದ ಕಾರಣಕ್ಕೆ ನಾನು ಈ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದೇನೆ. ಚೀನಾ ಪ್ರಮುಖ ಶಕ್ತಿಯಾಗಿ ಹೊರಹೊಮ್ಮುತ್ತಿರುವುದನ್ನು ಭಾರತವು ತನ್ನ ಕಾರ್ಯತಂತ್ರದ ಲೆಕ್ಕಾಚಾರದಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ವಿವರಿಸಿದರು.

‘ಅಪ್ಲೈಡ್ ಮೆಟೀರಿಯಲ್ಸ್’ನಿಂದ ವೈಟ್‌ಫೀಲ್ಡ್‌ನಲ್ಲಿ ಪ್ರಯೋಗಾಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್‌ನಲ್ಲಿ ಉತ್ಕೃಷ್ಟತಾ ಕೇಂದ್ರ ಮತ್ತು ಆರ್ ಆ್ಯಂಡ್ ಡಿ (ಸಂಶೋಧನೆ ಮತ್ತು ಅಭಿವೃದ್ಧಿ) ಪ್ರಯೋಗಾಲಯ ಸ್ಥಾಪಿಸುವ ಕುರಿತಂತೆ ಚಿಪ್ ತಯಾರಿಕಾ ಕಂಪನಿ ‘ಅಪ್ಲೈಡ್ ಮೆಟೀರಿಯಲ್ಸ್’ನ ಪ್ರತಿನಿಧಿಗಳ ಜೊತೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ನಿಯೋಗ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಬುಧವಾರ ಮಾತುಕತೆ ನಡೆಸಿತು.

ಕರ್ನಾಟಕಕ್ಕೆ ಹೂಡಿಕೆ ಸೆಳೆಯಲು ಪಾಟೀಲರ ನೇತೃತ್ವದ ನಿಯೋಗವು ಅಮೆರಿಕ ಪ್ರವಾಸದಲ್ಲಿದೆ. ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಕೂಡ ನಿಯೋಗದಲ್ಲಿದ್ದರು.

ಪ್ರಯೋಗಾಲಯ ಸ್ಥಾಪನೆಗೆ ಅಗತ್ಯವಾದ ಪೂರ್ವಾನುಮತಿಗಳನ್ನು ನೀಡುವ ಪ್ರಕ್ರಿಯೆಯನ್ನು ಚುರುಕುಗೊಳಿಸುವಂತೆ ಕಂಪನಿಯ ಪ್ರತಿನಿಧಿಗಳು ಇದೇ ಸಂದರ್ಭದಲ್ಲಿ ಮನವಿ ಮಾಡಿದರು. ಕಂಪನಿಯ ಅಧಿಕಾರಿಗಳಾದ ಪ್ರಭು ಜಿ. ರಾಜ ಮತ್ತು ಶ್ರೀನಿವಾಸ ಸತ್ಯ ಅವರು ಉತ್ಕೃಷ್ಟತಾ ಕೇಂದ್ರದ ಬಗ್ಗೆ ವಿಚಾರ ವಿನಿಮಯ ನಡೆಸಿದರು.

ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಸೆಂಟರ್ ಸ್ಥಾಪಿಸಲು ನಾಲ್ಕು ವರ್ಷಗಳ ಅವಧಿಯಲ್ಲಿ ₹3,200 ಕೋಟಿ ಹೂಡಿಕೆ ಮಾಡುವುದಾಗಿ ಕೆಲವು ದಿನಗಳ ಹಿಂದೆ ಕಂಪನಿ ತಿಳಿಸಿತ್ತು.

ಜುಪಿಟರ್ ನೆಟ್‌ವರ್ಕ್ಸ್ ಕಂಪನಿಯ ಪ್ರತಿನಿಧಿಗಳ ಜೊತೆ ನಡೆದ ಸಭೆಯಲ್ಲಿ ಆರ್ ಆ್ಯಂಡ್ ಡಿ ವಿಸ್ತರಣೆ ಮತ್ತು ಹಾರ್ಡ್‌ವೇರ್ ತಯಾರಿಕೆ ಕುರಿತು ಚರ್ಚೆ ನಡೆಯಿತು. ಡಿಸೈನ್ ಮತ್ತು ವೈರ್‌ಲೆಸ್ ಉತ್ಪನ್ನಗಳಿಗಾಗಿ 2024ರ ಮಾರ್ಚ್ ಹೊತ್ತಿಗೆ ಉತ್ಕೃಷ್ಟತಾ ಕೇಂದ್ರ ಸ್ಥಾಪಿಸುವ ಬಗ್ಗೆಯೂ ಮಾತುಕತೆ ನಡೆಯಿತು.

ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಯುವಜನರಿಗೆ ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆ, ಐಒಟಿ ಮತ್ತು ಸೈಬರ್ ಸೆಕ್ಯುರಿಟಿ ವಿಷಯಗಳಲ್ಲಿ ತರಬೇತಿ ನೀಡುವ ಕುರಿತು ಚರ್ಚಿಸಲಾಯಿತು. ಹಾರ್ಡ್ ಡಿಸ್ಕ್ ಡ್ರೈವ್ ಅಭಿವೃದ್ಧಿಗೆ ಹೆಸರಾದ ವೆಸ್ಟ್ರನ್ ಡಿಜಿಟಲ್ ಕಂಪನಿಯ ಪ್ರತಿನಿಧಿಗಳು ಅಬಕಾರಿ ಸುಂಕಕ್ಕೆ ಸಂಬಂಧಿಸಿದ ವಿಚಾರಗಳ ಕುರಿತು ಸಮಾಲೋಚನೆ ನಡೆಸಿದರು.

ನಾರ್ವೆ ಲೇಖಕ ಫಾಸಿಗೆ ನೊಬೆಲ್ ಸಾಹಿತ್ಯ ಪ್ರಶಸ್ತಿ

ಸ್ಟಾಕ್‌ಹೋಂ (ಎಪಿ/ರಾಯಿಟರ್ಸ್): ಸಾಹಿತ್ಯಕ್ಕಾಗಿ ನೀಡುವ ನೊಬೆಲ್ ಪ್ರಶಸ್ತಿಯು 2023ನೆಯ ಸಾಲಿನಲ್ಲಿ ನಾರ್ವೆ ಲೇಖಕ ಜಾನ್ ಫಾಸಿ ಅವರಿಗೆ ಸಂದಿದೆ.



‘ಫಾಸಿ ಅವರ ಹೊಸತನದ ನಾಟಕಗಳು ಮತ್ತು ಗದ್ಯವು ಹೇಳಲಾಗದ ಸಂಗತಿಗಳಿಗೆ ಧ್ವನಿ ನೀಡುತ್ತವೆ’ ಎಂದು ನೊಬೆಲ್ ಪ್ರಶಸ್ತಿ ನೀಡುವ ಸ್ವೀಡಿಷ್ ಅಕಾಡೆಮಿ ಹೇಳಿದೆ.

ನೊಬೆಲ್ ಪ್ರಶಸ್ತಿಯು 1 ಮಿಲಿಯನ್ ಡಾಲರ್ (ಅಂದಾಜು ₹8.32 ಕೋಟಿ) ನಗದು, ಚಿನ್ನದ ಪದಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ನಾರ್ವೆಯ ಪಶ್ಚಿಮ ಕರಾವಳಿಯ ನಗರ ಹಾಗೆಸಂಡ್‌ನಲ್ಲಿ 1959ರಲ್ಲಿ ಜನಿಸಿದ ಫಾಸಿ ಅವರು ನಾಟಕಗಳು, ಕಾದಂಬರಿಗಳು, ಪ್ರಬಂಧಗಳು, ಮಕ್ಕಳ ಪುಸ್ತಕಗಳ ಬರವಣಿಗೆ ಹಾಗೂ ಅನುವಾದಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಫಾಸಿ ಅವರ ಕೃತಿಗಳು ಮನುಷ್ಯನ ಅತ್ಯಂತ ಆಳವಾದ ಭಾವನೆಗಳಾದ ಆತಂಕ, ಅಭದ್ರತೆ, ಸಾವು ಮತ್ತು ಬದುಕಿನ ಕುರಿತ ಪ್ರಶ್ನೆಗಳನ್ನು ಸ್ಪರ್ಶಿಸುವಂತಿವೆ ಎಂದು ಸ್ವೀಡಿಷ್ ಅಕಾಡೆಮಿಯ ಸದಸ್ಯ ಆ್ಯಂಡರ್ಸ್ ಆಲ್ಸನ್ ಹೇಳಿದ್ದಾರೆ.

ಪ್ರಶಸ್ತಿ ಘೋಷಣೆಯಾಗಿದ್ದು ಕೇಳಿ ‘ಭಾವುಕನಾಗಿದ್ದೇನೆ, ಒಂದಿಷ್ಟು ಹೆದರಿಕೆಯೂ ಉಂಟಾಗಿದೆ’ ಎಂದು ಫಾಸಿ ಅವರು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ !

ಅತೀ ವಂದನೀಯ ಫಾ. ಎ. ಫ್ರಾನ್ಸಿಸ್ ಕ್ಸೇವಿಯರ್

ಜನನ : 20.06.1936
ಯಾಜಕದೀಕ್ಷೆ : 09.04.1963
ಮರಣ : 04.10.2023

ಇವರ ಪಾರ್ಥಿವ ಶರೀರವನ್ನು 06.10.2023 ಶುಕ್ರವಾರ ಮಧ್ಯಾಹ್ನ: 12:30 ಗಂಟೆಯ ನಂತರ ಬೆಂಗಳೂರು ಮಹಾಧರ್ಮಕ್ಷೇತ್ರದ ರಿಚ್ಮಂಡ್ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ತದನಂತರ ಮಧ್ಯಾಹ್ನ 2.30 ಗಂಟೆಗೆ ಬಲಿಪೂಜೆಯನ್ನು ನೆರವೇರಿಸಿ, ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.

ಬೆಂಗಳೂರು ಮಹಾಧರ್ಮಕ್ಷೇತ್ರದ ಭಾವಪೂರ್ಣ ಶ್ರದ್ಧಾಂಜಲಿ

ಪ್ರಜಾವಾಣಿ@75 DH DECCAN HERALD

ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ವಿ. ಶಂಕರ್**, ನಂ. 06, 10ನೇ ಅಡ್ಡರಸ್ತೆ, ವಿದ್ಯಮಾನ್ ನಗರ ಪೂರ್ವ, ರಘು ವರ್ಮ ನಗರ	40,000
2	**ಮಂಗಳಗೌರಮ್ಮ**	30,000
3	**ಬಿ.ಎಸ್ ಶಾರದಾಂಬಾ**, ನಂ 1047/26, 2ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ವಿದ್ಯಾರಣ್ಯಪುರ, ಮೈಸೂರು	25,000
4	**ಬಿ.ಆರ್ ಕಮಲಮ್ಮ**, ವೇಲಕಾತ್ರಿ ನಿಲಯ, 2ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ವಿಜಯನಗರ, ತುಮಕೂರು	15,000
5	**ಎಚ್,ಎಸ್ ನಂಜೇಗೌಡ**, ನಂ.517, 7ನೇ ಮುಖ್ಯರಸ್ತೆ, 4ನೇ ‘ಎ’ ಅಡ್ಡರಸ್ತೆ, ಹಂಪಿನಗರ, ಬೆಂಗಳೂರು	15,000
6	**ದೀಪಕ್ ಕುಮಾರ್**, ನಂ.2794, 7ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಕುಮಾರಸ್ವಾಮಿ ಲೇಔಟ್, 2ನೇ ಹಂತ (ಪೂರ್ವ)	10,000
7	**ಅನಿಲ್ ಕುಮಾರ್ ಚನ್ನೇಗೌಡ**, ನಂ. 2003, 1ನೇ ‘ಸಿ’ ಮುಖ್ಯರಸ್ತೆ, ವಿಜಯನಗರ 2ನೇ ಹಂತ, ವಿಜಯನಗರ, ಬೆಂಗಳೂರು	10,000
8	**ಜಿ.ಜೆ ರಾಮಯ್ಯ**, ನಂ.626, ವೆಂಕಟೇಶ್ವರ ನಿಲಯ, 2ನೇ ಅಡ್ಡರಸ್ತೆ, 2ನೇ ಹಂತ, 7ನೇ ಬ್ಲಾಕ್, ಬನಶಂಕರಿ ಮೂರನೇ ಹಂತ, ಬೆಂಗಳೂರು	5,001
9	**ರೇವಪ್ಪ ನಾಯ್ಕ**, ನಂ.35, 9ನೇ ಮುಖ್ಯರಸ್ತೆ, ಮಾರುತಿ ಲೇಔಟ್, ಬಿಟಿಎಂ ಲೇಔಟ್ 1ನೇ ಹಂತ, ಬಿಟಿಎಂ ಲೇಔಟ್	5,000
10	**ಜಿ.ಶ್ರೀದೇವಿ**, ನಂ.243, 12ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, ಸರಸ್ವತಿ ಪುರ	5,000
11	**ಗಿರಿಜಾಂಬಾ ಎಚ್.**, ನಂ.222, 14ನೇ ಮುಖ್ಯರಸ್ತೆ, ಬನಶಂಕರಿ 1ನೇ ಹಂತ, 2ನೇ ಬ್ಲಾಕ್, ಬನಶಂಕರಿ, ಬೆಂಗಳೂರು	5,000
12	**ಎನ್.ರಾಘವನ್**, ನಂ.472, 15ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಲಕ್ಕಸಂದ್ರ ಎಕ್ಸ್‌ಟೆನ್ಷನ್, ವಿಲ್ಸನ್ ಗಾರ್ಡನ್, ಬೆಂಗಳೂರು	3,000
13	**ವಿ. ಅಣ್ಣಯ್ಯಪ್ಪ**, ನಂ.275, 5ನೇ ಅಡ್ಡರಸ್ತೆ, ಚನ್ನಮ್ಮನ ಕೆರೆ ಅಚ್ಚುಕಟ್ಟು, ಬನಶಂಕರಿ 3ನೇ ಹಂತ, ಬೆಂಗಳೂರು	3,000
14.	**ಎಂ.ಎಸ್. ಚೆಲುವರಾಜು**; ನಂ. 518, ರೈಲ್ವೆ ರಸ್ತೆ, 8ನೇ ಮುಖ್ಯರಸ್ತೆ, ರೈಲ್ವೆ ಅಂಡರ್‌ಪಾಸ್, ಹಂಪಿನಗರ, ಬೆಂಗಳೂರು	2,502
15	**ಕೆಪಿ ಗುಪ್ತಾ**, ಬಿ.ಎಚ್ ರಸ್ತೆ, ಕುಣಿಗಲ್, ತುಮಕೂರು	2,222
16	**ಲೋಕೇಶ್ ಬಿ.ಸಿ**, ನಂ.201/1, ಬೆಳಕು, ಮಂಜುನಾಥ ನಗರ	2,000
17	**ಮಮತಾ ನಾಯಕ್**, ವಿಲ್ಲಾ ನಂ. 800, ‘ಆದರ್ಶ ಪಾಮ್ ರಿಟ್ರೀಟ್’, 3ನೇ ಹಂತ, ಕಣ್ಣೇಹಳ್ಳಿ, ಬೆಳ್ಳಂದೂರು ಪೋಸ್ಟ್	2,000
18	**ಪಿ.ಡಿ ನಳಿನಿ ಕುಮಾರಿ**, ನಂ.1013, 1ನೇ ಎ ಮುಖ್ಯರಸ್ತೆ, ಹನುಮಂತನಗರ, ಬನಶಂಕರಿ, ಬೆಂಗಳೂರು	2,000
19	**ಟಿ.ಸಿ ರಮ್ಮಿ**	2000
20	**ಆರ್. ರಾಮಯ್ಯ**, ನಂ.12, ಶ್ರೀನಿಲಯ, ಅಮರ ಜ್ಯೋತಿ ನಗರ	2,000
21	**ಜಗದೇವ್ ಬಸವಣ್ಣಪ್ಪ ನಿಗುಡ್ಗಿ**, ನಂ.4–801, ಎಂ.ಬಿ ನಗರ, ಕಲಬುರಗಿ	2,000
22	**ಕೆ.ಬಿ ಬಸವ ಶೆಟ್ಟಿ**, ಕುವೆಂಪು ನಗರ, ಬೇಲೂರು, ಹಾಸನ	1,500
23	**ಟಿ. ಬಾಲಯ್ಯ, ನಂ 7–4–80**, ಗಜನಗರ ಪೇಟೆ, ಚೌಡಮ್ಮ ಗುಡಿ ಹತ್ತಿರ, ರಾಯಚೂರು	1,175
24	**ಹಕ್ಕಿಕೋಟೆ ಬಸವಯ್ಯ ಚಂದ್ರಶೇಖರ್**, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಹಿರಿಯ ಉಪನ್ಯಾಸಕ, ರಾಜರಾಜೇಶ್ವರಿ ನಗರ, ಬೆಂಗಳೂರು	1,000
25	**ಎಚ್.ಆರ್ ದೊರೆಸ್ವಾಮಿ**, ನಂ 847, ಕೊಪ್ಪಲೂರು ಬಡಾವಣೆ, ರಮಾಬಾಯಿ ನಗರ, ಮೈಸೂರು	1,000
	ಇಂದಿನ ಮೊತ್ತ	1,92,400
	ಒಟ್ಟು ಮೊತ್ತ	6,61,046

* ಈಗಾಗಲೇ ಹಣ ನೀಡಿರುವ ದಾನಿಗಳು ತಮ್ಮ ಹೆಸರು, ವಿಳಾಸ, ಮೊತ್ತದ ವಿವರವನ್ನು dept.finc@printersmysore.co.in ಇ–ಮೇಲ್‌ಗೆ ಕಳುಹಿಸಲು ವಿನಂತಿ.

ಬಡ್ಡಿದರ ಯಥಾಸ್ಥಿತಿ ಸಾಧ್ಯತೆ

ಕೋಲ್ಕತ್ತ (ಪಿಟಿಐ): ಹಣದುಬ್ಬರದ ಆತಂಕ ಮತ್ತು ಜಾಗತಿಕ ವಿದ್ಯಮಾನಗಳಿಂದಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ದ್ವೈಮಾಸಿಕ ಹಣಕಾಸು ನೀತಿ ಪರಾಮರ್ಶೆಯಲ್ಲಿ ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರ ನೇತೃತ್ವದ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಬುಧವಾರದಿಂದ ಸಭೆ ಸೇರಿದ್ದು, ಶುಕ್ರವಾರ ಸಭೆಯ ನಿರ್ಧಾರಗಳು ಪ್ರಕಟವಾಗಲಿವೆ.

ಹೊಂದಾಣಿಕೆಯ ನೀತಿಯನ್ನು ಕೈಬಿಡುವ ಜೊತೆಗೆ ಬಡ್ಡಿದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಬ್ಯಾಂಕ್ ಆಫ್ ಬರೋಡದ ಮುಖ್ಯ ಆರ್ಥಿಕ ತಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

2022ರ ಮೇ ತಿಂಗಳಿನಿಂದ 2023ರ ಫೆಬ್ರುವರಿ ಅವಧಿಯಲ್ಲಿ ಆರ್‌ಬಿಐ ರೆಪೊ ದರವನ್ನು ಶೇ 2.50ರಷ್ಟು ಹೆಚ್ಚಳ ಮಾಡಿದೆ. ಚಿಲ್ಲರೆ ಹಣದುಬ್ಬರವು ಆಗಸ್ಟ್‌ನಲ್ಲಿ ಶೇ 6.83ರಷ್ಟು ಆಗಿದ್ದು, ಆರ್‌ಬಿಐ ಹಾಕಿಕೊಂಡಿರುವ ಗರಿಷ್ಠ ಮಿತಿಯಾದ ಶೇ 6ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ದಾಖಲಾಗಿದೆ.

ಮುಂಬೈ ಧಾರಣೆ

ಶೇಂಗಾ

05-10-2023

ಜಾವಾ 70/80(ಹೊಸ)	12300-12400
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	10600-10700
ದಪ್ಪ ಗುಜರಾತ್(ಹೊಸ)	11400-11500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660 (1700)
ಒಂದು ವಾರದ ಡೆಲಿವರಿ	1655 (1695)
ಸೋಯಾ ಕಚ್ಚಾ	820 (835)
ಪಾಮ್ ವಾರದ ಡೆಲಿವರಿ	808 (818)
ಸೂರ್ಯಕಾಂತಿ ಎಣ್ಣೆ ಕಚ್ಚಾ	800 (805)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,250 (56,350)
ಬೆಳ್ಳಿ ಕೆ.ಜಿ 67,250 (67,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಂಚನೆ: ಭಾರತೀಯ ಮೂಲದ ವ್ಯಕ್ತಿಗೆ ಶಿಕ್ಷೆ

ಹ್ಯೂಸ್ಟನ್ (ಪಿಟಿಐ): ಕೋವಿಡ್ ಸಾಂಕ್ರಾಮಿಕದ ನಂತರ ಅಮೆರಿಕ ಸರ್ಕಾರದ ಆರ್ಥಿಕ ನೆರವಿನ ಯೋಜನೆಯಡಿ ಸುಮಾರು ₹166.49 ಕೋಟಿಗೂ (20 ದಶಲಕ್ಷ ಡಾಲರ್) ಹೆಚ್ಚು ಹಣ ಪಡೆದು ವಂಚನೆ ಮಾಡಿದ ಪ್ರಕರಣದಲ್ಲಿ ಭಾಗಿಯಾಗಿದ್ದ ಅಪರಾಧಿ ಭಾರತೀಯ ಮೂಲದ ವ್ಯಕ್ತಿಗೆ ನ್ಯಾಯಾಲಯವು ಮೂರು ವರ್ಷ ಐದು ತಿಂಗಳ ಜೈಲು ಶಿಕ್ಷೆ ವಿಧಿಸಿದೆ.

ಪರ್ದೀಪ್ ಬಾಸ್ರಾ (54) ಶಿಕ್ಷೆಗೆ ಗುರಿಯಾದ ವ್ಯಕ್ತಿ. ಇವರ ಜತೆ ಇತರ ಆರು ಆರೋಪಿಗಳಿಗೂ ಶಿಕ್ಷೆ ವಿಧಿಸಲಾಗಿದೆ. ಈ ಪ್ರಕರಣದ ಪ್ರಮುಖ ಸೂತ್ರಧಾರಿ ಅಮಿರ್ ಅಖಿಲ್ ಅವರಿಗೆ 15 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಹೊಸಚಾಲಿ	36779-40069	ಕೋಕ	29369-34699
ಕೋಕ	15000-25000	**ಪುತ್ತೂರು**		ಕೆಂಪುಗೋಟು	31860-36808
ಹಳತು	46000-48500	ಹೊಸತು	34000-45000	ರಾಶಿ	42109-45399
ಚನ್ನಗಿರಿ		**ಸಾಗರ**		ತಟ್ಟಿಬೆಟ್ಟೆ	37609-37609
ರಾಶಿ	42599-48921	ಬಿಳಿಗೋಟು	23899-32699	**ಶಿರಸಿ**	
ಚಿತ್ರದುರ್ಗ		ಚಾಲಿ	34099-38899	ಬೆಟ್ಟೆ	36099-43899
ಅಪಿ	45019-45429	ಕೋಕ	16669-34099	ಬಿಳಿಗೋಟು	28310-36623
ಬೆಟ್ಟೆ	35429-35879	ಕೆಂಪುಗೋಟು	20899-34899	ಚಾಲಿ	36899-41558
ಕೆಂಪುಗೋಟು	29449-29859	ರಾಶಿ	34899-46710	ಕೆಂಪುಗೋಟು	24698-34299
ರಾಶಿ	44539-44969	ಸಿಪ್ಪೆಗೋಟು	17889-21333	ರಾಶಿ	44519-47409
ಹೊನ್ನಾವರ		**ಶಿವಮೊಗ್ಗ**		**ಯಲ್ಲಾಪುರ**	
ಹೊಸಚಾಲಿ	37500-41000	ಬೆಟ್ಟೆ	40069-53109	ಬಿಳಿಗೋಟು	25118-36169
ಕಾರ್ಕಳ		ಗೊರಬಲು	17009-38599	ಚಾಲಿ	35899-40750
ಹಳತು	30000-48500	ರಾಶಿ	35350-48921	ಕೋಕ	18418-31129
ಕುಮಟ		ಸರಕು	45159-83310	ಕೆಂಪುಗೋಟು	32199-34899
ಚಿಪ್ಪು	32099-34779	**ಸಿದ್ದಾಪುರ**		ರಾಶಿ	45710-53499
ಕೋಕ	16999-33100	ಬಿಳಿಗೋಟು	31019-35270	ತಟ್ಟಿಬೆಟ್ಟೆ	38119-44090
ಹಳೆಚಾಲಿ	37069-39079	ಚಾಲಿ	36299-40199		

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500 - 67,000/- SSLC, PUC,Degree ಸಂಪರ್ಕಿಸಿ 9945791526, 8861041526

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 13,000 - 17,000. 8951315839, 7022770052

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/10 ಶಿರಡಿ, ಪಂಡರಪುರ ಪ್ಯಾಕೇಜ್. 6/11 ಕಾಶಿ ಪ್ಯಾಕೇಜ್. 16/11 ದೆಹಲಿ, ವೈಷ್ಣೋದೇವಿ ಪ್ಯಾಕೇಜ್.9591017782,9964527782

Travel

ಶಿವನಂದಿ ಟ್ರಾವೆಲ್ಸ್, ಹನುಮಂತನಗರ, ಬೆಂಗಳೂರು.ಕಾಶಿಯಾತ್ರ ವಿಮಾನದಲ್ಲಿ 10ದಿನ 30.10.2023ದೆಹಲಿ,ಆಗ್ರಾ ಮಥುರಾ,ನೈಮಿಷಾರಣ್ಯ ಅಯೋಧ್ಯ,ಕಾಶಿ,ಗಯಾ ವಾರಾಣಸಿ,ಪ್ರಯಾಗ್ ರಾಜ್. 9036056352, 9481027363.

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ರೈಲು/ A/C ಬಸ್ಸಿನಲ್ಲಿ 08.10.2023 ಅಮೃತ್‌ಸರ್ ವೈಷ್ಣೋದೇವಿ ಕಾಶ್ಮೀರ,ಗುಲ್ಮಾರ್ಗ್. 26.10.2023 ಚಾರ್‌ಧಾಮ್. 05.11.2023 ನೇಪಾಳ,ಮುಕ್ತಿನಾಥ,ಪೋಕ್ರಾ. 17.11.2023 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ., 20.11.2023 ಕಾಶಿ,ಅಲಹಾಬಾದ್ ಬುದ್ಧಗಯಾ,ವೈದ್ಯನಾಥ್ ದಕ್ಷಿಣ/ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ. ಐಷನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

25.10.2023, 26.11.2023, ದೆಹಲಿ, ಹರಿದ್ವಾರ್, ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್25.11.2023 ರಾಜಸ್ಥಾನ್ ಪ್ರವಾಸ 3.12.2023 ಗುಜರಾತ್, ಮಧ್ಯಪ್ರದೇಶ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ವ್ಯಾಪಾರ

Business to Business

Others

ಮಹಿಳೆಯರಿಗೆ ರೇಷ್ಮೆ ಸೀರೆ, ಸಿಲ್ಕ್ ಸೀರೆ, ಕಾಟನ್ ಸೀರೆ, ಚೂಡಿದಾರಗಳು, ಕಂತಿನ ಮುಖಾಂತರ ಮಾರಾಟ ಮಾಡಲಾಗುತ್ತದೆ ಸಂಪರ್ಕಿಸಿ: 8892501007/ 9606701007

ಭವಿಷ್ಯ

Astrology

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2 ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ. 9880811806

ರೆಂಟಲ್ ಪ್ರಾಪರ್ಟೀಸ್

Accommodation Available

Commercial

4FLOOR COMMERCIAL Building For Rent Next to By-Pass on Hyd Main Rd Contact-9986670488/whats app

ವೈಯಕ್ತಿಕ

Change of Name

I,VINAYA KRISHNA Hegde residing in Bangalore have changed my name as Vinaya.G K

ಶಿಕ್ಷಣಕ್ಕೆ

ನಿಮ್ಮ ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ: 9845114560

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ನೀವು ನಿಮ್ಮ ಮನೆ/ಸೈಟ್ ಮಾರಾಟ/ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
#1 ಇಲ್ಲಿ ಜಾಹೀರಾತು ನೀಡಿರಿ

www.dhclassifieds.com ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ!
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9900428036 | +91 9886213331 |+91 9845114560| +91 9731810277 | 080- 45557163/164

ಏಕದಿನ ಕ್ರಿಕೆಟ್ ವಿಶ್ವಕಪ್ – 2023

ಹಾಲಿ ವಿಶ್ವ ಚಾಂಪಿಯನ್ ತಂಡಕ್ಕೆ ಸೋಲಿನ ಕಹಿ; ಮೊದಲ ಪಂದ್ಯದಲ್ಲೇ ವಿಜೃಂಭಿಸಿದ ನ್ಯೂಜಿಲೆಂಡ್

ಡೆವೊನ್–ರಚಿನ್ ‘ದ್ವಿಶತಕ’: ಬೆಚ್ಚಿದ ಇಂಗ್ಲೆಂಡ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ನ್ಯೂಜಿಲೆಂಡ್ ತಂಡದ ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಅವರ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮುಂದೆ ಹಾಲಿ ಚಾಂಪಿಯನ್ ಇಂಗ್ಲೆಂಡ್ ಮಣಿಯಿತು.

ಗುರುವಾರ ಆರಂಭವಾದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿಯೇ ಜೋಸ್ ಬಟ್ಲರ್ ಬಳಗಕ್ಕೆ ಕಿವೀಸ್ ತಂಡವು 9 ವಿಕೆಟ್‌ಗಳಿಂದ ಗೆದ್ದಿತು. 2019ರ ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡ್ ಎದುರು ಸೋತಿದ್ದ ನ್ಯೂಜಿಲೆಂಡ್ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮುಯ್ಯಿ ತೀರಿಸಿಕೊಂಡಿತು.

ಟಾಸ್ ಗೆದ್ದ ಕಿವೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜೋ ರೂಟ್ (77; 86ಎ, 4X4, 6X1) ಅವರ ಅರ್ಧಶತಕದ ಬಲದಿಂದ ಇಂಗ್ಲೆಂಡ್ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 282 ರನ್ ಗಳಿಸಿತು. ಇದಕ್ಕುತ್ತರವಾಗಿ ನ್ಯೂಜಿಲೆಂಡ್ 36.2 ಓವರ್‌ಗಳಲ್ಲಿ 1 ವಿಕೆಟ್‌ಗೆ 283 ರನ್ ಗಳಿಸಿ ಜಯಭೇರಿ ಬಾರಿಸಿತು. ಆರಂಭಿಕ ಬ್ಯಾಟರ್ ಕಾನ್ವೆ (ಅಜೇಯ 152) ಮತ್ತು ಯುವ ಆಟಗಾರ ರಚಿನ್ ರವೀಂದ್ರ (ಅಜೇಯ 123) ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ 273 ರನ್ ಸೇರಿಸಿದರು.

ಇಂಗ್ಲೆಂಡ್ ತಂಡದ ಕ್ರಿಸ್ ವೋಕ್ಸ್, ಸ್ಯಾಮ್ ಕರನ್ ಮತ್ತು ಮಾರ್ಕ್ ವುಡ್ ಅವರ ಸ್ವಿಂಗ್ ಅಸ್ತ್ರಗಳು ಈ ಜೋಡಿಯ ಮುಂದೆ ವಿಫಲವಾದವು.

ಇಂಗ್ಲೆಂಡ್ ತಂಡವು ಇತ್ತೀಚಿನ ದಿನಗಳಲ್ಲಿ ಅನುಸರಿಸುತ್ತಿರುವ ‘ಬಜ್ ಬಾಲ್’ ತಂತ್ರವನ್ನು ಕಿವೀಸ್ ಕೂಡ ಇಲ್ಲಿ ಬಳಸಿತು. ಈ ಸೂತ್ರದ ಪ್ರಕಾರ ಆಕ್ರಮಣಶೈಲಿಯ ಬ್ಯಾಟಿಂಗ್ ಮೂಲಕ ಬೌಲರ್‌ಗಳನ್ನು ಧೃತಿಗೆಡಿಸುವ ಕಾರ್ಯವನ್ನು ಇಬ್ಬರೂ ಬ್ಯಾಟರ್‌ಗಳು ಅಚ್ಚುಕಟ್ಟಾಗಿ ಮಾಡಿದರು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ವಿಲ್ ಯಂಗ್ ವಿಕೆಟ್ ಗಳಿಸಿದ ಇಂಗ್ಲೆಂಡ್ ಬೌಲರ್ ಸ್ಯಾಮ್ ಕರನ್ ಸಂಭ್ರಮಿಸಿದ್ದರು. ನಂತರದ ಅವಧಿಯಲ್ಲಿ ಅಂತಹ ಮತ್ತೊಂದು ಅವಕಾಶ ಯಾವುದೇ ಬೌಲರ್‌ಗೂ ಸಿಗಲಿಲ್ಲ.

ಕಾನ್ವೆ 121 ಎಸೆತಗಳನ್ನು ಆಡಿದರು. ಅದರಲ್ಲಿ 19 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು.

ನ್ಯೂಜಿಲೆಂಡ್ ತಂಡದ ಡೆವೊನ್ ಕಾನ್ವೆ ಅವರ ಬ್ಯಾಟಿಂಗ್ ವೈಖರಿ (ಎಡಚಿತ್ರ). ಶತಕ ಗಳಿಸಿದ ಸಂಭ್ರಮದಲ್ಲಿ ರಚಿನ್ ರವೀಂದ್ರ –ಪಿಟಿಐ ಚಿತ್ರ

ಅಜೇಯ 273

ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಅವರು ಎರಡನೇ ವಿಕೆಟ್‌ಗೆ ಅಜೇಯ 273 ರನ್ ಸೇರಿಸಿ ಜೊತೆಯಾಟದ ದಾಖಲೆ ಬರೆದರು. ನ್ಯೂಜಿಲೆಂಡ್ ತಂಡದ ಪರವಾಗಿ ದಾಖಲಾದ ಶ್ರೇಷ್ಠ ಜೊತೆಯಾಟವಾಗಿದೆ.

ಈ ಹಿಂದೆ ಮಾರ್ಟಿನ್ ಗಪ್ಟಿಲ್ ಮತ್ತು ವಿಲ್ ಯಂಗ್ ಅವರು 203 ರನ್ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಕಾನ್ವೆ ಮತ್ತು ರಚಿನ್ ಈ ಜೊತೆಯಾಟಕ್ಕಾಗಿ ಒಟ್ಟು 211 ಎಸೆತಗಳನ್ನು ಆಡಿದರು.

ಇನ್ನೊಂದೆಡೆ 23 ವರ್ಷದ ರಚಿನ್ ಏಕದಿನ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ದಾಖಲಿಸಿದರು. ಅವರ ವೃತ್ತಿಜೀವನದ 13ನೇ ಅಂತರರಾಷ್ಟ್ರೀಯ ಏಕದಿನ ಪಂದ್ಯವಾಗಿದೆ.

ನ್ಯೂಜಿಲೆಂಡ್‌ನಲ್ಲಿ ನೆಲೆಸಿರುವ ಭಾರತ ಮೂಲದ ಕುಟುಂಬದ ಎಡಗೈ ಆಲ್‌ರೌಂಡರ್ ರಚಿನ್ ಎದುರಾಳಿ ತಂಡದ ಅನುಭವಿಗಳ ಎದುರು ಭರ್ತಿ ಆತ್ಮವಿಶ್ವಾಸದಿಂದ ಆಡಿದರು.

ಕವರ್ ಡ್ರೈವ್, ಫ್ಲಿಕ್ ಮತ್ತು ಕಟ್‌ಗಳ ಅಮೋಘ ಆಟ ಅವರದ್ದಾಗಿತ್ತು. ಅವರು ಒಂದು ಹಂತದಲ್ಲಿ ಕಾನ್ವೆಗಿಂತಲೂ ವೇಗವಾಗಿ ಅವರು ಬ್ಯಾಟ್ ಬೀಸಿದರು. 128.12ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಕಿವೀಸ್ ತಂಡದಲ್ಲಿ ಅನುಭವಿ ನಾಯಕ ಕೇನ್ ವಿಲಿಯಮ್ಸನ್ ಮತ್ತು ಇಂಗ್ಲೆಂಡ್ ತಂಡದಲ್ಲಿ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರು ಈ ಪಂದ್ಯದಲ್ಲಿ ಕಣಕ್ಕಿಳಿಯಲಿಲ್ಲ.

ಸ್ಕೋರ್ ಕಾರ್ಡ್

ಇಂಗ್ಲೆಂಡ್ 9ಕ್ಕೆ 282 (50 ಓವರ್‌ಗಳಲ್ಲಿ)

ಜಾನಿ ಸಿ ಮಿಚೆಲ್ ಬಿ ಸ್ಯಾಂಟನರ್ 33 (35ಎ, 4X4, 6X1)
ಮಲಾನ್ ಸಿ ಲಥಾಮ್ ಬಿ ಮ್ಯಾಟ್ 14 (24ಎ, 4X2)
ರೂಟ್ ಬಿ ಫಿಲಿಪ್ಸ್ 77 (86ಎ, 4X4, 6X1)
ಬ್ರೂಕ್ ಸಿ ಕಾನ್ವೆ ಬಿ ರಚಿನ್ 25 (16ಎ, 4X4, 6X1)
ಮೋಯಿನ್ ಸಿ ಫಿಲಿಪ್ಸ್ 11 (17ಎ, 4X1)
ಬಟ್ಲರ್ ಸಿ ಲಥಾಮ್ ಬಿ ಹೆನ್ರಿ 43 (42ಎ, 4X2, 6X2)
ಲಿವಿಂಗ್‌ಸ್ಟೋನ್ ಸಿ ಹೆನ್ರಿ ಬಿ ಬೌಲ್ಟ್ 20 (22ಎ, 4X3)
ಸ್ಯಾಮ್ ಸಿ ಲಥಾಮ್ ಬಿ ಹೆನ್ರಿ 14 (19ಎ)
ಕ್ರಿಸ್ ಸಿ ಯಂಗ್ ಬಿ ಸ್ಯಾಂಟನರ್ 11 (12ಎ, 4X1)
ರಶೀದ್ ಔಟಾಗದೆ 15 (13ಎ, 6X1)
ವುಡ್ ಔಟಾಗದೆ 13 (14ಎ)
ಇತರೆ: 6 (ವೈಡ್ 6)
ವಿಕೆಟ್ ಪತನ: 1–40 (ಡೇವಿಡ್ ಮಲಾನ್;7.4), 2–64 (ಜಾನಿ ಬೆಸ್ಟೊ; 12.5), 3–94 (ಹ್ಯಾರಿ ಬ್ರೂಕ್;16.6), 4–118 (ಮೋಯಿನ್ ಅಲಿ; 21.2), 5–188 (ಜೋಸ್ ಬಟ್ಲರ್; 33.2), 6–221 (ಲಿಯಾಮ್ ಲಿವಿಂಗ್‌ಸ್ಟೋನ್; 38.5), 7–229 (ಜೋ ರೂಟ್;41.1), 8–250 (ಕ್ರಿಸ್ ವೋಕ್ಸ್; 44.6), 9–252 (ಸ್ಯಾಮ್ ಕರನ್; 45.4)
ಬೌಲಿಂಗ್: ಟ್ರೆಂಟ್ ಬೌಲ್ಟ್ 10–1–48–1, ಮ್ಯಾಟ್ ಹೆನ್ರಿ 10–1–48–3, ಮಿಚೆಲ್ ಸ್ಯಾಂಟನರ್ 10–0–37–2, ಜೇಮ್ಸ್ ನಿಶಾಮ್ 7–0–56–0, ರಚಿನ್ ರವೀಂದ್ರ 10–0–76–1, ಗ್ಲೆನ್ ಫಿಲಿಪ್ಸ್ 3–0–17–2

ನ್ಯೂಜಿಲೆಂಡ್ 1 ವಿಕೆಟ್‌ಗೆ 283 (36.2 ಓವರ್‌ಗಳಲ್ಲಿ)

ಕಾನ್ವೆ ಔಟಾಗದೆ 152 (121ಎ, 4X19, 6X3)
ಯಂಗ್ ಸಿ ಬಟ್ಲರ್ ಬಿ ಸ್ಯಾಮ್ 0 (1ಎ)
ರಚಿನ್ ಔಟಾಗದೆ 123 (96ಎ, 4X11, 6X5)
ಇತರೆ: 8 (ಬೈ 4, ಲೆಗ್‌ಬೈ 1, ವೈಡ್ 3)
ವಿಕೆಟ್ ಪತನ: 1–10 (ವಿಲ್ ಯಂಗ್; 1.1)
ಬೌಲಿಂಗ್: ಕ್ರಿಸ್ ವೋಕ್ಸ್ 6–0–45–0, ಸ್ಯಾಮ್ ಕರನ್ 6–2–47–1, ಮಾರ್ಕ್ ವುಡ್ 5–0–55–0, ಮೋಯಿನ್ ಅಲಿ 9.2–0–60–0, ಆದಿಲ್ ರಶೀದ್ 7–0–47–0, ಲಿಯಾಮ್ ಲಿವಿಂಗ್‌ಸ್ಟೋನ್ 3–0–24–0

ಫಲಿತಾಂಶ: ನ್ಯೂಜಿಲೆಂಡ್‌ಗೆ 9 ವಿಕೆಟ್ ಜಯ

ವಿಶ್ವಕಪ್ ಕ್ರಿಕೆಟ್ ಟೂರ್ನಿ: ನಿತಿನ್ ಮೆನನ್, ಶ್ರೀನಾಥ್ ಕಾರ್ಯನಿರ್ವಹಣೆ

ಬೆಂಗಳೂರು: ಭಾರತದಲ್ಲಿ ನಡೆಯಲಿರುವ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಐಸಿಸಿ ಅಂಪೈರ್ಸ್ ಎಲೀಟ್ ಪ್ಯಾನೆಲ್‌ನಲ್ಲಿರುವ ನಿತಿನ್ ಮೆನನ್ ಹಾಗೂ ರೆಫರಿ ಜಾವಗಲ್ ಶ್ರೀನಾಥ್ ಅವರು ಕಾರ್ಯನಿರ್ವಹಿಸುವರು.

ಕ್ರಿಸ್ಟೋಫರ್ ಗಫಾನಿ (ನ್ಯೂಜಿಲೆಂಡ್), ಕುಮಾರ ಧರ್ಮಸೇನ (ಶ್ರೀಲಂಕಾ), ಮರಾಯಸ್ ಯರಸ್ಮಸ್ (ದ.ಆಫ್ರಿಕಾ), ಮೈಕೆಲ್ ಗಾಫ್ (ಇಂಗ್ಲೆಂಡ್), ನಿತಿನ್ ಮೆನನ್ (ಭಾರತ). ಪಾಲ್ ರೀಫೆಲ್ (ಆಸ್ಟ್ರೇಲಿಯಾ), ರಿಚರ್ಡ್ ಇಲಿಂಗ್‌ವರ್ಥ್ (ಇಂಗ್ಲೆಂಡ್), ರಿಚರ್ಡ್ ಕೆಟಲ್‌ಬರೊ (ಇಂಗ್ಲೆಂಡ್), ರಾಡ್ ಟಕ್ಕರ್ (ಆಸ್ಟ್ರೇಲಿಯಾ), ಜೊಯೆಲ್ ವಿಲ್ಸನ್ (ವೆಸ್ಟ್ ಇಂಡೀಸ್), ಎಹಸಾನ್ ರಝಾ (ಪಾಕಿಸ್ತಾನ), ಏಡ್ರಿಯನ್ ಹೋಲ್ಡ್‌ಸ್ಟಾಕ್ (ದ.ಆಫ್ರಿಕಾ).

ರೆಫರಿಗಳು: ಜಾವಗಲ್ ಶ್ರೀನಾಥ್ (ಭಾರತ), ರಿಚಿ ರಿಚರ್ಡ್ಸನ್ (ವೆಸ್ಟ್ ಇಂಡೀಸ್), ಆ್ಯಂಡಿ ಪೈಕ್ರಾಫ್ಟ್ (ಜಿಂಬಾಬ್ವೆ), ಜೆಫ್ ಕ್ರೋವ್ (ನ್ಯೂಜಿಲೆಂಡ್)

ಪಾಕ್‌ಗೆ ಸುಲಭ ಜಯದ ನಿರೀಕ್ಷೆ

ಕ್ರಿಕೆಟ್: ಬಾಬರ್ ಬಳಗಕ್ಕೆ ಪೈಪೋಟಿ ನೀಡಲಿರುವ ಸ್ಕಾಟ್ ಎಡ್ವರ್ಡ್ಸ್ ಪಡೆ

ಹೈದರಾಬಾದ್ (ಪಿಟಿಐ): ಬಾಬರ್ ಆಜಂ ನಾಯಕತ್ವದ ಪಾಕಿಸ್ತಾನ ತಂಡವು ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಅಭಿಯಾನ ಆರಂಭಿಸಲಿದೆ. ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಾಕ್ ತಂಡವು ನೆದರ್ಲೆಂಡ್ಸ್ ವಿರುದ್ಧ ಆಡಲಿದೆ.

ಈಚೆಗೆ ನಡೆದ ಏಷ್ಯಾ ಕಪ್ ಟೂರ್ನಿಯಲ್ಲಿ ಸೋತಿದ್ದ ಪಾಕ್ ತಂಡವು ವಿಶ್ವಕಪ್ ಟೂರ್ನಿಯ ಎರಡು ಅಭ್ಯಾಸ ಪಂದ್ಯಗಳಲ್ಲಿಯೂ ನಿರಾಶೆ ಅನುಭವಿಸಿತ್ತು. ಏಕದಿನ ಕ್ರಿಕೆಟ್ ಮಾದರಿಯಲ್ಲಿ ತಮ್ಮ ಸಾಮರ್ಥ್ಯದ ಮಟ್ಟವನ್ನು ಸುಧಾರಿಸಿಕೊಳ್ಳಬೇಕಾದ ಅವಶ್ಯಕತೆ ಪಾಕ್ ತಂಡಕ್ಕೆ ಇದೆ.

ಆರಂಭಿಕ ಬ್ಯಾಟಿಂಗ್‌ನಿಂದಲೇ ತಂಡದ ದೌರ್ಬಲ್ಯಗಳು ಕಾಣುತ್ತಿವೆ. ಏಕದಿನ ಮಾದರಿಯಲ್ಲಿ 50ರ ಸರಸರಿ ಹೊಂದಿರುವ ಬ್ಯಾಟರ್ ಇಮಾಮ್ ಉಲ್ ಹಕ್ ಅವರು ಈಚೆಗೆ ಭಾರತ ಎದುರಿನ ಪಂದ್ಯಗಳಲ್ಲಿ ಎಡವಿದ್ದರು. ಅನುಭವಿ ಫಕಾರ್ ಜಮಾನ್ ಫಾರ್ಮ್‌ನಲ್ಲಿ ಇಲ್ಲ. ಅಬ್ದುಲ್ ಶಫೀಕ್ ಅವರಿಗೆ ವಿಶ್ವಕಪ್ ಟೂರ್ನಿಗಳಲ್ಲಿ ಆಡಿದ ಅನುಭವ ಇಲ್ಲ.

ನಾಯಕ ಬಾಬರ್ ಮತ್ತು ಮೊಹಮ್ಮದ್ ರಿಜ್ವಾನ್ ಅವರು ಕೂಡ ಅಸ್ಥಿರ ಫಾರ್ಮ್ ಹೊಂದಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಇಫ್ತಿಕಾರ್ ಅಹಮದ್ ಮತ್ತು ಸಲ್ಮಾನ್ ಆಘಾ ಅವರ ಮೇಲೆ ಕೊಂಚ ಭರವಸೆ ಇಡಬಹುದು. ಬೌಲಿಂಗ್‌ನಲ್ಲಿಯೂ ತಂಡವು ಶಾಹೀನ್ ಅಫ್ರಿದಿ ಮತ್ತು ಹ್ಯಾರಿಸ್ ರವೂಫ್ ಅವರನ್ನೇ ಅವಲಂಬಿಸಬೇಕಿದೆ. ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಅವರು 97 ರನ್‌ಗಳನ್ನು ಕೊಟ್ಟು ದುಬಾರಿಯಾಗಿದ್ದರು.

ಆದರೂ ಅನುಭವದ ಕೊರತೆ ಇರುವ ಮತ್ತು ಅಷ್ಟೇನೂ ಬಲಾಢ್ಯವಲ್ಲದ ನೆದರ್ಲೆಂಡ್ಸ್ ಎದುರು ಬಾಬರ್ ಬಳಗವೇ ಗೆಲುವಿನ ನೆಚ್ಚಿನ ತಂಡವಾಗಿದೆ. ಅದರ ಜೊತೆಗೆ ತನ್ನ ಸಾಮರ್ಥ್ಯ ಪರೀಕ್ಷಿಸಿಕೊಳ್ಳಲೂ ಅದಕ್ಕೆ ಇಲ್ಲಿ ಅವಕಾಶ ಸಿಗಲಿದೆ.

ಒಂದು ತಿಂಗಳು ಮುನ್ನವೇ ಭಾರತಕ್ಕೆ ಬಂದಿಳಿದಿರುವ ನೆದರ್ಲೆಂಡ್ಸ್ ತಂಡವು ಬೆಂಗಳೂರಿನ ಆಲೂರು ಕ್ರೀಡಾಂಗಣದಲ್ಲಿ ತಾಲೀಮು ನಡೆಸಿತ್ತು.

ನೆದರ್ಲೆಂಡ್ಸ್ 2011ರ ವಿಶ್ವಕಪ್ ಟೂರ್ನಿಯಲ್ಲಿ ಆಡಿತ್ತು. ಆಗ ತಂಡದಲ್ಲಿದ್ದ ವೆಸ್ಲಿ ಬಾರೆಸಿ ಈಗಲೂ ಇದ್ದಾರೆ. ಉಳಿದವರೆಲ್ಲರೂ ಹೊಸಬರು. ಆಂಧ್ರಪ್ರದೇಶ ಮೂಲಕ ತೇಜಾ ನಿಡಮಾನೂರು ಈ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿದ್ದಾರೆ. ಪಾಕ್ ತಂಡಕ್ಕೆ ಹೋಲಿಸಿದರೆ ದುರ್ಬಲ ಹೌದು. ಆದರೆ ಅಚ್ಚರಿಯ ಫಲಿತಾಂಶ ಕೊಡುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ತಂಡಗಳು: ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಇಮಾಮ್ ಉಲ್ ಹಕ್, ಫಕಾರ್ ಜಮಾನ್, ಮೊಹಮ್ಮದ್ ರಿಜ್ವಾನ್ (ವಿಕೆಟ್‌ಕೀಪರ್), ಇಫ್ತಿಕಾರ್ ಅಹಮದ್, ಮೊಹಮ್ಮದ್ ನವಾಜ್, ಶಾದಾಬ್ ಖಾನ್, ಹಸನ್ ಅಲಿ, ಹ್ಯಾರಿಸ್ ರವೂಫ್, ಮೊಹಮ್ಮದ್ ವಾಸೀಂ, ಶಾಹೀನ್ ಅಫ್ರಿದಿ, ಸಾದ್ ಶಕೀಲ್, ಆಘಾ ಸಲ್ಮಾನ್, ಉಸಾಮ ಮೀರ್, ಅಬ್ದುಲ್ಲಾ ಶಫೀಕ್.

ನೆದರ್ಲೆಂಡ್ಸ್: ಸ್ಕಾಟ್ ಎಡ್ವರ್ಡ್ಸ್ (ವಿಕೆಟ್ ಕೀಪರ್–ನಾಯಕ), ವಿಕ್ರಮಜೀತ್ ಸಿಂಗ್, ಮ್ಯಾಕ್ಸ್ ಒಡೋವ್ಡ್, ವೆಸ್ಲಿ ಬಾರೆಸಿ, ಬಾಸ್ ಡಿ ಲೀಡ್, ಕಾಲಿನ್ ಎಕರ್ಮನ್, ತೇಜಾ ನಿಡಮಾನೂರು, ರೋಲಾಫ್ ವ್ಯಾನ್ ಡೆರ್ ಮರ್ವೆ, ಸಕೀಬ್ ಝುಲ್ಫಿಕರ್, ಲೊಗಾನ್ ವ್ಯಾನ್ ಬೀಕ್, ಪಾಲ್ ವ್ಯಾನ, ಮೀಕರೆನ್, ರಿಯಾನ್ ಕ್ಲೀನ್, ಆರ್ಯನ್ ದತ್, ಸೈಬ್ರ್ಯಾಂಡ್ ಇಂಗೆಲ್‌ಬ್ರೆಚ್, ಶಾರೀಜ್ ಅಹಮದ್

ಪಂದ್ಯ ಆರಂಭ: ಮಧ್ಯಾಹ್ನ 2
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಹಾಟ್‌ಸ್ಟಾರ್ ಆ್ಯಪ್

ಪಾಕ್ ತಂಡದ ನಾಯಕ ಬಾಬರ್ ಆಜಂ (ಎಡಚಿತ್ರ) ನೆದರ್ಲೆಂಡ್ಸ್ ತಂಡದ ನಾಯಕ ಸ್ಕಾಟ್ ಎಡ್ವರ್ಡ್ಸ್

ನಾಯಕರ ಬಲಾಬಲ (ಏಕದಿನ ಕ್ರಿಕೆಟ್)	
ಬಾಬರ್ ಆಜಂ (ಪಾಕಿಸ್ತಾನ)	
ಪಂದ್ಯ	108
ರನ್	5409
ಶತಕ	19
ಅರ್ಧಶತಕ	28
ಸ್ಕಾಟ್ ಎಡ್ವರ್ಡ್ಸ್	
ಪಂದ್ಯಗಳು	38
ರನ್	1212
ಅರ್ಧಶತಕ	13

ಮೊದಲ ಪಂದ್ಯ: ಗ್ಯಾಲರಿ ಅರ್ಧಕ್ಕರ್ಧ ಖಾಲಿ

ಅಹಮದಾಬಾದ್ (ಪಿಟಿಐ): ಭಾರತದಲ್ಲಿ ಈಗ ಏಕಕಾಲದಲ್ಲಿ ಎರಡು ವಿಶ್ವಕಪ್‌ಗಳು ನಡೆಯುತ್ತಿರುವಂತೆ ಭಾಸವಾಗುತ್ತಿದೆ. ಒಂದು ಭಾರತ ಆಡುವ ಪಂದ್ಯಗಳು. ಈ ಪಂದ್ಯಗಳಿಗೆ ಟಿಕೆಟ್ ಸಿಗುವುದು ದೂರದ ಮಾತು. ಟಿಕೆಟ್‌ಗಳಿಗೆ ತಮ್ಮನ್ನು ಯಾರೂ ಕೇಳಬಾರದು ಎಂದು ಸ್ವತಃ ವಿರಾಟ್ ಕೊಹ್ಲಿ ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಸ್ಪಷ್ಟವಾಗಿಯೇ ಹೇಳಿದ್ದಾರೆ. ಕಿಕ್ಕಿರಿದ ಗ್ಯಾಲರಿಗಳನ್ನು ಕಂಡರೆ ಏಕದಿನ ಕ್ರಿಕೆಟ್ ಪಂದ್ಯದ ಜೀವಂತಿಕೆ ಎದ್ದುಕಾಣುತ್ತದೆ.

ಇನ್ನೊಂದು ದೃಶ್ಯ ಇದಕ್ಕೆ ಭಿನ್ನವಾಗಿದೆ. ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್ ನಡುವಣ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯಕ್ಕೆ ಹತ್ತು ಸಾವಿರ ಪ್ರೇಕ್ಷಕರೂ ಇರಲಿಲ್ಲ. ಸೂರ್ಯನ ತಾಪ ಇಳಿಯುತ್ತಿದ್ದಂತೆ ಈ ಸಂಖ್ಯೆ 15 ಸಾವಿರ ಆಸುಪಾಸು ಇತ್ತು. ಅಂತಿಮವಾಗಿ, ಕತ್ತಲು ಆವರಿಸಿದಾಗ, 1.32 ಲಕ್ಷ ಆಸನ ಸಾಮರ್ಥ್ಯದ ಈ ಕ್ರೀಡಾಂಗಣದಲ್ಲಿ ಸೇರಿದ ಪ್ರೇಕ್ಷಕರ ಸಂಖ್ಯೆ 47,000 ಕೂಡ ಆಗಲಿಲ್ಲ. 2019ರ ವಿಶ್ವಕಪ್‌ನಲ್ಲಿ ಮುಖಾಮುಖಿ ಆದ ಈ ಎರಡು ತಂಡಗಳಿಗೆ ಕ್ರೀಡಾಂಗಣ ಅರ್ಧದಷ್ಟು ಖಾಲಿಯಾಗಿರುವುದು ಊಹಿಸಲೂ ಕಷ್ಟವಾಗಿರಬಹುದು. ಐಸಿಸಿಯ ಜಾಗತಿಕ ರಾಯಭಾರಿ ಸಚಿನ್ ತೆಂಡೂಲ್ಕರ್ ಅವರು ಆಕರ್ಷಕ ಟ್ರೋಫಿಯೊಂದಿಗೆ ಬಂದಾಗ, ಪಂದ್ಯಕ್ಕೆ ಈ ರೀತಿಯ ಸಪ್ಪೆ ಪ್ರತಿಕ್ರಿಯೆ ನಿರೀಕ್ಷಿಸಿರಲಿಕ್ಕಿಲ್ಲ.

ಏಕದಿನ ಕ್ರಿಕೆಟ್ ಆಕರ್ಷಣೆ ಕಳೆದುಕೊಳ್ಳುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ. ಭಾರತದ ಕ್ರಿಕೆಟ್ ಅಭಿಮಾನಿಗಳು ತಮ್ಮ ಆಟಗಾರರನ್ನು ಆರಾಧಿಸುವ ರೀತಿಯೇ ಬೇರೆ. ಆದರೆ ಬೇರೆ ತಂಡಗಳು ಆಡುವಾಗ ಅವರು ಆಟದ ಮೇಲೆ ಇದೇ ರೀತಿಯ ಪ್ರೀತಿ ತೋರಿಸುವುದಿಲ್ಲ.

ಡ್ರೋನ್ ಕ್ಯಾಮೆರಾ ಒಂದು ಕೋನದಲ್ಲಿ ಕ್ರೀಡಾಂಗಣದ ಚಿತ್ರೀಕರಣ ಮಾಡಿದಾಗ ಬಹುತೇಕ ಖಾಲಿ ಗ್ಯಾಲರಿಗಳು ಎದ್ದುಕಂಡವು.

ಪಂದ್ಯಕ್ಕೆ ಮೊದಲು ಗುಜರಾತ್ ಕ್ರಿಕೆಟ್ ಸಂಸ್ಥೆಯ ಅಧಿಕಾರಿಯೊಬ್ಬರು 50 ಸಾವಿರದಿಂದ 60 ಸಾವಿರ ಪ್ರೇಕ್ಷಕರು ಸೇರಬಹುದೆಂದು ಸುದ್ದಿಸಂಸ್ಥೆ ಮುಂದೆ ನಿರೀಕ್ಷೆ ವ್ಯಕ್ತಪಡಿಸಿದ್ದರು.

ನೆಟ್ಸ್‌ನಲ್ಲಿ ಕಠಿಣ ಅಭ್ಯಾಸ ನಡೆಸಿದ ಆಫ್ ಸ್ಪಿನ್ನರ್

ಮೊದಲ ಪಂದ್ಯದಲ್ಲಿ ಅಶ್ವಿನ್ ಕಣಕ್ಕೆ?

ಚೆನ್ನೈ (ಪಿಟಿಐ): ಹಿರಿಯ ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು ಗುರುವಾರ ಭಾರತ ತಂಡದ ತಾಲೀಮಿನಲ್ಲಿ ಹೆಚ್ಚು ಅವಧಿಯನ್ನು ಕಳೆದರು. ಅವರು ತೊಡಗಿಸಿಕೊಂಡ ರೀತಿ ನೋಡಿದರೆ, ಭಾನುವಾರ ಆಸ್ಟ್ರೇಲಿಯಾ ವಿರುದ್ಧ ವಿಶ್ವಕಪ್‌ನಲ್ಲಿ ಮೊದಲ ಪಂದ್ಯ ಆಡಲಿರುವ ಭಾರತ ತಂಡದಲ್ಲಿ ಆಡುವ ಸಾಧ್ಯತೆ ಹೆಚ್ಚಿರುವಂತೆ ಕಾಣುತ್ತಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಅಶ್ವಿನ್ ಅವರು ರವೀಂದ್ರ ಜಡೇಜ, ಕುಲದೀಪ್ ಜೊತೆಗೆ ಮೂರನೇ ಸ್ಪಿನ್ನರ್ ಆಗಿ ಕಣಕ್ಕಿಳಿಯುವ ಸಾಧ್ಯತೆಯಿದೆ. ಡೇವಿಡ್ ವಾರ್ನರ್ ಮತ್ತು ಸ್ಟೀವ್ ಸ್ಮಿತ್ ವಿರುದ್ಧ ಅವರ ದಾಖಲೆ ಉತ್ತಮವಾಗಿರುವುದೂ ಅವರಿಗೆ ಆಯ್ಕೆಗೆ ಪೂರಕ ಆಗಬಲ್ಲದು. ಅಶ್ವಿನ್ ಅವರು ಟೆಸ್ಟ್ ಪಂದ್ಯಗಳಲ್ಲಿ 11 ಸಲ ವಾರ್ನರ್ ಅವರ ವಿಕೆಟ್ ಪಡೆದಿದ್ದಾರೆ.

ಏಕದಿನ ಪಂದ್ಯಗಳಲ್ಲಿ ಸ್ಥಿರತೆಯ ಆಟಕ್ಕೆ ಹೆಸರಾಗಿರುವ ಸ್ಮಿತ್ ಕೂಡ ಟೆಸ್ಟ್ ಪಂದ್ಯಗಳಲ್ಲಿ ಅಶ್ವಿನ್ ಅವರ ಎದುರು ಪರದಾಡಿದ್ದಾರೆ. ಹೀಗಾಗಿ ಶಾರ್ದೂಲ್ ಠಾಕೂರ್ ಬದಲು ಅಶ್ವಿನ್ ಅವರು ಅವಕಾಶ ಪಡೆದರೆ ಅಚ್ಚರಿಯೇನೂ ಇಲ್ಲ.

ಅಕ್ಷರ್ ಪಟೇಲ್ ಬದಲು ವಿಶ್ವಕಪ್ ತಂಡದಲ್ಲಿ ಅವಕಾಶ ಪಡೆದಿರುವ ಚೆನ್ನೈನ ಆಟಗಾರ, ನೆಟ್ಸ್‌ನಲ್ಲಿ ಹೆಚ್ಚುವರಿ ಅವಧಿಗೆ ಬೌಲ್ ಮಾಡಿದರು. ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಶಾರ್ದೂಲ್ ಅವರಿಗೆ ಬೌಲಿಂಗ್ ಮಾಡಿದರು. ಬೌಲಿಂಗ್ ಮೊದಲು ಅವರು ಬ್ಯಾಟ್ ಕೂಡ ಮಾಡಿದರು. ಎಂಟನೇ ಕ್ರಮಾಂಕದಲ್ಲಿ ಅವರು ಉಪಯುಕ್ತ ಇನಿಂಗ್ಸ್‌ಗಳನ್ನು ಆಡಿದ್ದಾರೆ.

ಭಾರತಕ್ಕೆ ಇದು ಎರಡನೇ ನೆಟ್ ಪ್ರಾಕ್ಟೀಸ್ ಆಗಿದೆ. ಶುಭಮನ್ ಗಿಲ್ ಬಿಟ್ಟು ಉಳಿದವರೆಲ್ಲಾ ಅಭ್ಯಾಸದಲ್ಲಿ ಕಾಣಿಸಿಕೊಂಡರು. ವಿರಾಟ್ ಕೊಹ್ಲಿ ಉತ್ತಮ ಲಯದಲ್ಲಿದ್ದಂತೆ ಕಂಡರು. ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಕೆ.ಎಲ್.ರಾಹುಲ್, ರವೀಂದ್ರ ಜಡೇಜ, ಇಶಾನ್ ಕಿಶನ್ ಕೂಡ ಬ್ಯಾಟಿಂಗ್‌ನಲ್ಲಿ ಕಸುವು ತೋರಿಸಿದರು. ಬೂಮ್ರಾ, ಕುಲದೀಪ್, ಠಾಕೂರ್ ಕೂಡ ಕೆಲಹೊತ್ತು ಬ್ಯಾಟ್ ಮಾಡಿದರು.

ಅಭ್ಯಾಸದಲ್ಲಿ ನಡೆಸಿದ ಅಶ್ವಿನ್ –ಪಿಟಿಐ ಚಿತ್ರ

ಬ್ಯಾಡ್ಮಿಂಟನ್: ಪ್ರಿ ಕ್ವಾರ್ಟರ್‌ಗೆ ಆಯುಷ್

ನವದೆಹಲಿ: ಭಾರತದ ಆಯುಷ್ ಶೆಟ್ಟಿ ಮತ್ತು ತಾರಾ ಶಾ ಅವರು ಅಮೆರಿಕದಲ್ಲಿ ನಡೆಯುತ್ತಿರುವ ಬಿಡಬ್ಲ್ಯುಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬಾಲಕಿಯರ ಸಿಂಗಲ್ಸ್‌ನಲ್ಲಿ ತಾರಾ ಶಾ 23-21, 21-16 ರಿಂದ ಕೆನಡಾದ ಅಲೆನಾ ಯು ಅವರನ್ನು ಮಣಿಸಿದರು. ಬಾಲಕರ ಸಿಂಗಲ್ಸ್‌ನಲ್ಲಿ ಆಯುಷ್ ಶೆಟ್ಟಿ 21-14, 13-21, 21-19 ರಿಂದ ಇಂಡೊನೇಷ್ಯಾದ ಮೊಹಮ್ಮದ್ ರೆಜಾ ಅಲ್ ಫಜ್ರಿ ಅವರನ್ನು ಮಣಿಸಿದರು.

ಪುರುಷರ ಡಬಲ್ಸ್‌ನಲ್ಲಿ ನಿಕೋಲಸ್ ರಾಜ್ ಮತ್ತು ತುಷಾರ್ ಸುವೀರ್ ಜೋಡಿ 21-10, 21-16ರಿಂದ ಸ್ಪೇನ್‌ನ ಡೇನಿಯಲ್ ಫ್ರಾಂಕೊ ಮತ್ತು ರೋಡ್ರಿಗೋ ಸಂಜುರ್ಜೊ ಅವರನ್ನು, ದಿವ್ಯಂ ಅರೋರಾ ಮತ್ತು ಮಯಾಂಕ್ ರಾಣಾ ಜೋಡಿ 21-19, 21-15 ರಿಂದ ಎಸ್ಟೋನಿಯಾದ ಆಂಡ್ರೆ ಸ್ಮಿತ್ ಮತ್ತು ಹ್ಯೂಗೋ ಥೀಮಾಸ್ ಅವರನ್ನು ಮಣಿಸಿತು.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್

ಕರ್ನಾಟಕ ತಂಡಕ್ಕೆ ಮಯಂಕ್ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಹ್ರಾಡೂನ್‌ನಲ್ಲಿ ನಡೆಯಲಿರುವ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕರ್ನಾಟಕ ತಂಡಕ್ಕೆ ಮಯಂಕ್ ಅಗರವಾಲ್ ನಾಯಕರಾಗಿದ್ದಾರೆ.

ಅಕ್ಟೋಬರ್ 16 ರಿಂದ 27ರವರೆಗೆ ಟೂರ್ನಿಯು ನಡೆಯಲಿದೆ. ಈ ಬಾರಿಯ ದೇಶಿ ಋತುವಿನಲ್ಲಿ ದುಲೀಪ್ ಟ್ರೋಫಿ ಮತ್ತು ದೇವಧರ್ ಟ್ರೋಫಿಯಲ್ಲಿ ಆಡಿದ್ದ ಕರ್ನಾಟಕದ ಆಟಗಾರರು ಉತ್ತಮ ಸಾಧನೆ ಮಾಡಿದ್ದರು. ಮುಂದಿನ ವರ್ಷ ಟಿ20 ವಿಶ್ವಕಪ್ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿ ನಡೆಯಲಿವೆ. ಆಯ್ಕೆಗಾರರ ಗಮನ ಸೆಳೆಯಲು ಕರ್ನಾಟಕದ ಆಟಗಾರರಿಗೆ ಈ ಟೂರ್ನಿಯು ಉತ್ತಮ ವೇದಿಕೆಯಾಗಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಗುರುವಾರ ಪ್ರಕಟಿಸಿದ ತಂಡ ಇಂತಿದೆ: ಮಯಂಕ್ ಅಗರವಾಲ್ (ನಾಯಕ), ದೇವದತ್ತ ಪಡಿಕ್ಕಲ್, ಎಲ್.ಆರ್. ಚೇತನ್, ಮನೀಷ್ ಪಾಂಡೆ (ಉಪನಾಯಕ), ಅಭಿನವ್ ಮನೋಹರ್, ಶುಭಾಂಗ್ ಹೆಗಡೆ, ಬಿ.ಆರ್. ಶರತ್ (ವಿಕೆಟ್‌ಕೀಪರ್), ಕೃಷ್ಣಪ್ಪ ಗೌತಮ್, ಪ್ರಸಿದ್ಧ ಎಂ ಕೃಷ್ಣ, ವಿದ್ವತ್ ಕಾವೇರಪ್ಪ, ವಿ. ಕೌಶಿಕ್, ವೈಶಾಖ ವಿಜಯಕುಮಾರ್, ಮನೋಜ್ ಬಾಂಢಗೆ, ಪ್ರವೀಣ ದುಬೆ, ಕೆ.ಎಲ್. ಶ್ರೀಜಿತ್ (ವಿಕೆಟ್‌ಕೀಪರ್), ಆರ್. ಸಮರ್ಥ್.

ಪಿ.ವಿ. ಶಶಿಕಾಂತ್ (ಕೋಚ್), ಮನ್ಸೂರ್ ಅಲಿ ಖಾನ್ (ಬೌಲಿಂಗ್ ಕೋಚ್), ಎ. ರಮೇಶ್ ರಾವ್ (ಮ್ಯಾನೇಜರ್), ಎ. ಜಾಬಪ್ರಭು (ಫಿಸಿಯೋಥೆರಪಿಸ್ಟ್), ಎ. ಕಿರಣ್ (ಸ್ಟ್ರೆಂಥ್–ಕಂಡಿಷನಿಂಗ್ ಕೋಚ್), ಸಿ.ಎಂ. ಸೋಮಸುಂದರ್(ಮಸಾಜ್), ಗಿರಿ (ವಿಡಿಯೊ ಅನಾಲಿಸ್ಟ್)

ಮಯಂಕ್ ಅಗರವಾಲ್

ಫುಟ್‌ಬಾಲ್ ಲೀಗ್: ಬಿಎಫ್‌ಸಿ ತಂಡ ಜಯಭೇರಿ

ಬೆಂಗಳೂರು: ಬಿಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವನ್ನು ಮಣಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ ಪರ ಪಿ. ಅಂಕಿತ್ (13ನೇ ನಿ.), ಓನಮ್ ರೋನೆಕ್ಸ್ (83ನೇ) ತಲಾ ಒಂದು ಗೋಲು ಗಳಿಸಿದರು. ಆರಿಫ್ ಶೇಖ್ (45 + 1ನೇ) ಸ್ಪೋರ್ಟಿಂಗ್ ಕ್ಲಬ್ ಪರ ಒಂದು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ ತಂಡವು 6–2ರಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ತಂಡವನ್ನು ಸೋಲಿಸಿತು. ಅಗ್ನಿಪುತ್ರ ತಂಡದ ಒಮೆಗಾ ವನ ಲಾಲ್‌ಹ್ರುಐತ್ಲುಂಗಾ (29, 66ನೇ) ಮತ್ತು ನಿಖಿಲ್ ರಾಜ್ (87, 90 + 7ನೇ) ತಲಾ ಎರಡು ಗೋಲು ಗಳಿಸಿ ಮಿಂಚಿದರು. ಎಂ. ರಾಹುಲ್ (30ನೇ), ಲಾಲ್ನುಂಜಮಾ (69) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಇಂಡಿಪೆಂಡೆಂಟ್ಸ್ ತಂಡದ ಪರ ಆರ್. ಶಿವಕುಮಾರ್ (11), ಸತೀಶ್ ಕುಮಾರ್ (74) ತಲಾ ಒಂದು ಗೋಲು ತಂದಿತ್ತರು.

ಹಾಕಿ: ಭಾರತ ವನಿತೆಯರ ಚಿನ್ನದ ಕನಸು ಭಗ್ನ

ಹಾಂಗ್‌ಝೌ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನ ಗೆಲ್ಲುವ ಭಾರತ ಮಹಿಳಾ ಹಾಕಿ ತಂಡದ ಕನಸು ಭಗ್ನಗೊಂಡಿತು. ಆತಿಥೇಯ ಚೀನಾ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 4–0 ಗೋಲುಗಳಿಂದ ಭಾರತ ತಂಡವನ್ನು ಸೋಲಿಸಿತು.

ಈ ಸೋಲಿನಿಂದ ವನಿತೆಯರ ತಂಡ ಚಿನ್ನದ ಪೈಪೋಟಿಯಿಂದ ಹೊರಬಿತ್ತು ಮಾತ್ರವಲ್ಲ, ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಪ್ರವೇಶ ಪಡೆಯುವ ಅವಕಾಶವೂ ಕೈತಪ್ಪಿತು. ಕಳೆದ ಆವೃತ್ತಿಯಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದ ಭಾರತ ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿದ್ದು, ಇಲ್ಲಿ ಅತಿ ಹೆಚ್ಚಿನ ರ‍್ಯಾಂಕಿಂಗ್ ಪಡೆದ ತಂಡವೆನಿಸಿತ್ತು.

ಜಿಯಾಕಿ ಝೂಂಗ್ (25ನೇ ನಿ), ಮೀರಾಂಗ್ ಝೌ (40ನೇ ನಿ), ಮೀಯು ಲಿಯಾಂಗ್ (55ನೇ ನಿ) ಮತ್ತು ಬಿಂಗ್‌ಫೆಂಗ್ ಗು (60ನೇ ನಿ) ಚೀನಾ ಪರ ಗೋಲುಗಳನ್ನು ಗಳಿಸಿದರು.

ಚೀನಾ ಆರಂಭದಿಂದಲೇ ಆಕ್ರಮಣದ ಕಡೆಯೇ ಲಕ್ಷ್ಯ ಕೊಟ್ಟು, ಭಾರತದ ರಕ್ಷಣಾ ವಿಭಾಗದ ಮೇಲೆ ಒತ್ತಡ ಹೇರಿತು. ಭಾರತದ ಗೋಲಿನ ಕಡೆ ಪದೇ ಪದೇ ದಾಳಿಗಳನ್ನು ನಡೆಸಿತು. ಆ ತಂಡಕ್ಕೆ ಆರನೇ ನಿಮಿಷ ಗೋಲಿನ ಅವಕಾಶ ಲಭಿಸಿದ್ದರೂ ಗೋಲ್‌ಕೀಪರ್ ಸವಿತಾ ಆ ಅವಕಾಶವನ್ನು ತಡೆದರು. 11ನೇ ಮತ್ತೊಂದು ಪೆನಾಲ್ಟಿ ಕಾರ್ನರ್‌ನಲ್ಲೂ ಗೋಲು ಬರಲಿಲ್ಲ.

ಚೀನಾದ ಈ ಪ್ರಾಬಲ್ಯದ ಮುಂದೆ ಭಾರತ ಕಕ್ಕಾಬಿಕ್ಕಿಯಾಯಿತು. ಇನ್ನೊಂದೆಡೆ 25 ನಿಮಿಷ ಐದನೇ ಪೆನಾಲ್ಟಿ ಕಾರ್ನರ್‌ಅನ್ನು ಝೊಂಗ್ ಗೋಲಾಗಿ ಪರಿವರ್ತಿಸಿ ಚೀನಾಕ್ಕೆ ಮುನ್ನಡೆ ಒದಗಿಸಿಕೊಟ್ಟರು.

ಈ ಒತ್ತಡದಲ್ಲಿ ಭಾರತ ರಕ್ಷಣೆಯತ್ತಲೇ ಗಮನಹರಿಸಿತು. ವಿರಾಮ ಕಳೆದು ಹತ್ತನೇ ನಿಮಿಷ ಚೀನಾ ಮುನ್ನಡೆ ಹೆಚ್ಚಿಸಿತು. ಭಾರತ ಈ ಮಧ್ಯೆ ಪ್ರತಿದಾಳಿಗೆ ಪ್ರಯತ್ನಿಸಿದರೂ ಉತ್ತಮ ಎನ್ನಬಹುದಾದ ಅವಕಾಶ ದೊರಕಲಿಲ್ಲ.

ನಾಲ್ಕನೇ ಕ್ವಾರ್ಟರ್‌ನಲ್ಲಿ ಭಾರತವೇ ಮೇಲುಗೈ ಸಾಧಿಸಿದರೂ ಗೋಲಾಗಿ ಪರಿವರ್ತಿಸಲು ಆಗಲಿಲ್ಲ. ಚೀನಾದ ಹೆಚ್ಚಿನ ಆಟಗಾರ್ತಿಯರು ಗೋಲು ಅವಕಾಶ ನಿರಾಕರಿಸುವ ಉದ್ದೇಶದಿಂದ ರಕ್ಷಣಾಕೋಟೆಯ ಕಡೆ ಕಾವಲು ಕಾದರು. ಈ ಮಧ್ಯೆ ಪ್ರತಿದಾಳಿಯಲ್ಲಿ ಲಿಯಾಂಗ್ ಮುನ್ನಡೆ ಹೆಚ್ಚಿಸಿದರು. ಪಂದ್ಯದ ಅಂತಿಮ ನಿಮಿಷ ಚೀನಾ ಅಂತರವನ್ನು 4–0 ಗೋಲುಗಳಿಗೆ ಏರಿಸಿತು. ಬಿಂಗ್‌ಫೆಂಗ್ ಗು ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಹೊಡೆದರು.

19th Asian Games
Hangzhou 2022

ಏಷ್ಯನ್ ಕ್ರೀಡಾಕೂಟ: ಕ್ರಿಕೆಟ್ ಸೆಮಿಫೈನಲ್ ಇಂದು

ಭಾರತಕ್ಕೆ ಬಾಂಗ್ಲಾದೇಶ ಸವಾಲು

ಹಾಂಗ್‌ಝೌ(ಪಿಟಿಐ): ಋತುರಾಜ್ ಗಾಯಕವಾಡ ನಾಯಕತ್ವದ ಭಾರತ ತಂಡವು ಶುಕ್ರವಾರ ಏಷ್ಯನ್ ಕ್ರೀಡಾಕೂಟದ ಟಿ20 ಕ್ರಿಕೆಟ್ ಸೆಮಿಫೈನಲ್‌ನಲ್ಲಿ ಬಾಂಗ್ಲಾ ವಿರುದ್ಧ ಆಡಲಿದೆ.

ಕ್ವಾರ್ಟರ್‌ಫೈನಲ್‌ನಲ್ಲಿ ನೇಪಾಳ ವಿರುದ್ಧ ಭಾರತ ತಂಡವು ಜಯಿಸಿತ್ತು. ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ಶತಕ ಹೊಡೆದಿದ್ದರು.

ಇದೇ ಮೊದಲ ಬಾರಿಗೆ ಏಷ್ಯನ್ ಕ್ರೀಡಾಕೂಟದಲ್ಲಿ ತಂಡವು ಆಡುತ್ತಿದೆ. ಮಹಿಳೆಯರ ತಂಡವು ಈಚೆಗೆ ಚಿನ್ನದ ಪದಕ ಜಯಿಸಿತ್ತು.

ಸಾಯಿಕಿಶೋರ್, ವಾಷಿಂಗ್ಟನ್ ಸುಂದರ್, ಶಿವಂ ದುಬೆ, ರವಿ ಬಿಷ್ಣೋಯಿ ಮತ್ತು ಆವೇಶ್ ಖಾನ್ ಅವರಂತಹ ಅನುಭವಿಗಳು ತಂಡದಲ್ಲಿದ್ದಾರೆ. ಆದ್ದರಿಂದಾಗಿ ಬಾಂಗ್ಲಾ ಎದುರು ಗೆದ್ದು ಫೈನಲ್ ಪ್ರವೇಶಿಸುವ ಉತ್ಸಾಹದಲ್ಲಿದೆ.

ಸೈಫ್ ಹುಸೇನ್ ನಾಯಕತ್ವದ ಬಾಂಗ್ಲಾ ತಂಡದಲ್ಲಿ ಯುವ ಆಟಗಾರರೇ ಹೆಚ್ಚಿದ್ದಾರೆ. ದೇಶದ ಸೀನಿಯರ್ ತಂಡವು ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸ್ಪರ್ಧಿಸುತ್ತಿದೆ.

ಅದರಿಂದಾಗಿ ಉಭಯ ತಂಡಗಳಲ್ಲಿ ಭಾರತವೇ ಹೆಚ್ಚು ಬಲಶಾಲಿ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತಿದೆ.

ಆರಂಭ: ಬೆಳಿಗ್ಗೆ 6.30
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಋತುರಾಜ್ ಗಾಯಕವಾಡ್

ಮ್ಯಾರಥಾನ್: ಮಾನ್‌ಗೆ 8ನೇ ಸ್ಥಾನ

ಹಾಂಗ್‌ಝೌ (ಪಿಟಿಐ): ಭಾರತದ ಮಾನ್ ಸಿಂಗ್ ಮತ್ತು ಅಪ್ಪಚಂಗಡ ಬೆಳ್ಳಿಯಪ್ಪ ಅವರು ಏಷ್ಯನ್ ಕ್ರೀಡಾಕೂಟದ ಪುರುಷರ ಮ್ಯಾರಥಾನ್ ಸ್ಪರ್ಧೆಯಲ್ಲಿ ಕ್ರಮವಾಗಿ 8 ಹಾಗೂ 12ನೇ ಸ್ಥಾನ ಸ್ಥಾನ ಪಡೆದರು.

ಗುರುವಾರ ಬೆಳಿಗ್ಗೆ ನಡೆದ ಸ್ಪರ್ಧೆಯನ್ನು ಪೂರೈಸಲು ಮಾನ್ ಸಿಂಗ್ ಅವರು 2 ಗಂಟೆ, 16.59 ಸೆಕೆಂಡುಗಳನ್ನು ತೆಗೆದುಕೊಂಡರು. ಬೆಳ್ಳಿಯಪ್ಪ 2 ಗಂಟೆ 20.52 ನಿಮಿಷಗಳಲ್ಲಿ ಓಟ ಪೂರೈಸಿದರು.

ಚೀನಾದ ಜೀ ಹೆ (2 ಗಂಟೆ, 13.02 ನಿ.) ಅಗ್ರಸ್ಥಾನ ತಮ್ಮದಾಗಿಸಿಕೊಂಡರು. ಮಹಿಳೆಯರ ವಿಭಾಗದ ಚಿನ್ನದ ಪದಕವನ್ನು ಬಹರೇನ್‌ನ ಯೂನಿಸ್ ಚೆಬಿಸಿ ಪಾಲ್ (2 ಗಂಟೆ 26.14 ನಿ.) ಗೆದ್ದುಕೊಂಡರು.

ಪುರುಷರ ಮತ್ತು ಮಹಿಳೆಯರ ಮ್ಯಾರಥಾನ್ ಸ್ಪರ್ಧೆಯೊಂದಿಗೆ ಏಷ್ಯನ್ ಗೇಮ್ಸ್‌ನ ಅಥ್ಲೆಟಿಕ್ಸ್‌ಗೆ ತೆರೆಬಿತ್ತು.

ಪುರುಷರ ಮತ್ತು ಮಹಿಳೆಯರ ಕಾಂಪೌಂಡ್ ತಂಡಗಳ ಸಾಧನೆ

ಆರ್ಚರಿ: ಭಾರತಕ್ಕೆ ಎರಡು ಚಿನ್ನ

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಸ್ಪರ್ಧಿಸಿದ ಪರನೀತ್ ಕೌರ್ (ಮಧ್ಯದಲ್ಲಿ). ಜ್ಯೋತಿ ಸುರೇಖಾ ವೆನ್ನಂ (ಎಡ) ಮತ್ತು ಅದಿತಿ ಸ್ವಾಮಿ ಇದ್ದಾರೆ –ಎಎಫ್‌ಪಿ ಚಿತ್ರ

ಹಾಂಗ್‌ಝೌ (ಪಿಟಿಐ): ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಆರ್ಚರಿ ಸ್ಪರ್ಧಿಗಳು ಪದಕದೆಡೆಗೆ ಗುರಿಯಿಡುವ ಸಾಮರ್ಥ್ಯ ಮುಂದುವರಿಸಿದ್ದು, ಎರಡು ಚಿನ್ನ ಗೆದ್ದು ಸಂಭ್ರಮಿಸಿದ್ದಾರೆ.

ಗುರುವಾರ ನಡೆದ ಕಾಂಪೌಂಡ್ ತಂಡ ವಿಭಾಗದ ಸ್ಪರ್ಧೆಗಳಲ್ಲಿ ಭಾರತದ ಪುರುಷರು ಮತ್ತು ಮಹಿಳೆಯರು ನಿಖರ ಪ್ರದರ್ಶನ ನೀಡಿದರು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಜ್ಯೋತಿ ಸುರೇಖಾ ವೆನ್ನಂ, ಅದಿತಿ ಸ್ವಾಮಿ ಮತ್ತು ಪರನೀತ್ ಕೌರ್ ಅವರನ್ನೊಳಗೊಂಡ ಭಾರತ ತಂಡ 230–229 ರಿಂದ ಚೀನಾ ತೈಪೆ ತಂಡವನ್ನು ಪರಾಭವಗೊಳಿಸಿತು.

ಚೆನ್ ಯಿ ಸುವಾನ್, ಹುವಾಂಗ್ ಜೌ ಮತ್ತು ವಾಂಗ್ ಲು ಯುನ್ ಅವರು ಒಡ್ಡಿದ ಸ್ಫೂರ್ತಿಯುತ ಸವಾಲನ್ನು ಬದಿಗೊತ್ತುವಲ್ಲಿ ಭಾರತದ ಆಟಗಾರ್ತಿಯರು ಯಶಸ್ವಿಯಾದರು.

ಜಿದ್ದಾಜಿದ್ದಿನ ಸೆಣಸಾಟ ನಡೆದ ಫೈನಲ್‌ನಲ್ಲಿ ಕೊನೆಯ ಸುತ್ತಿನ ಸ್ಪರ್ಧೆ ಬಾಕಿಯಿದ್ದಾಗ ಉಭಯ ತಂಡಗಳು 200–200 ರಲ್ಲಿ ಸಮಬಲ ಸಾಧಿಸಿದ್ದವು. ಕೊನೆಯ ಅವಕಾಶದಲ್ಲಿ ಭಾರತದ ಮೂವರೂ ಹತ್ತು ಪಾಯಿಂಟ್ಸ್‌ಗೆ ಗುರಿಯಿಟ್ಟರು. ಒಂದು ಪಾಯಿಂಟ್ಸ್ ಕಳೆದುಕೊಂಡು ಚೀನಾ ತೈಪೆ ತಂಡ ಬೆಳ್ಳಿಗೆ ಸಮಾಧಾನಪಟ್ಟುಕೊಂಡಿತು.

ಭಾರತ ಮಹಿಳಾ ತಂಡ ಎರಡು ತಿಂಗಳ ಹಿಂದೆ ನಡೆದಿದ್ದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿತ್ತು. ಇದೀಗ ಏಷ್ಯನ್ ಚಾಂಪಿಯನ್ ಆಗುವ ಮೂಲಕ ಮತ್ತೊಮ್ಮೆ ಪಾರಮ್ಯ ಮೆರೆದಿದೆ.

ಮಧ್ಯಾಹ್ನ ನಡೆದ ಪುರುಷರ ವಿಭಾಗದ ಫೈನಲ್‌ನಲ್ಲಿ ಭಾರತ 235–230 ರಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತು. ಅಭಿಷೇಕ್ ವರ್ಮಾ, ಓಜಸ್ ದೇವತಾಳೆ ಮತ್ತು ಪ್ರಥಮೇಶ್ ಜಾವ್ಕರ್ ಅವರು ನಿಖರ ಪ್ರದರ್ಶನ ನೀಡಿ ಭಾರತಕ್ಕೆ ಚಿನ್ನ ತಂದಿತ್ತರು.

ಕಾಂಪೌಂಡ್ ಸ್ಪರ್ಧೆಯ ತಂಡ ವಿಭಾಗದಲ್ಲಿ ಪಣಕ್ಕಿಟ್ಟಿದ್ದ ಎಲ್ಲ ಮೂರು ಚಿನ್ನದ ಪದಕಗಳನ್ನು ಭಾರತ ಗೆದ್ದುಕೊಂಡಿದೆ. ಜ್ಯೋತಿ ಮತ್ತು ಓಜಸ್ ಅವರನ್ನೊಳಗೊಂಡ ಮಿಶ್ರ ತಂಡ ಬುಧವಾರ ಬಂಗಾರಕ್ಕೆ ಗುರಿಯಿಟ್ಟಿತ್ತು. ಇವರಿಬ್ಬರೂ ತಲಾ ಎರಡು ಚಿನ್ನ ಗೆದ್ದ ಸಾಧನೆ ಮಾಡಿದರು.

ವಿಜಯವಾಡದ 27 ವರ್ಷದ ಜ್ಯೋತಿ ಅವರಿಗೆ ಚಿನ್ನದ 'ಹ್ಯಾಟ್ರಿಕ್' ಸಾಧನೆ ಮಾಡುವ ಅವಕಾಶ ಲಭಿಸಿದೆ. ಶನಿವಾರ ನಡೆಯಲಿರುವ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ಅವರು ದಕ್ಷಿಣ ಕೊರಿಯಾದ ಸೊ ಚಾಯೆವೊನ್ ವಿರುದ್ಧ ಪೈಪೋಟಿ ನಡೆಸುವರು.

ಆರ್ಚರಿಯಲ್ಲಿ ಭಾರತ ಐದು ಪದಕಗಳನ್ನು ಖಚಿತಪಡಿಸಿಕೊಂಡಿದೆ. ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದ ಫೈನಲ್‌ನಲ್ಲಿ ಓಜಸ್ ಮತ್ತು ಅಭಿಷೇಕ್ ಎದುರಾಗಲಿದ್ದು, ಚಿನ್ನ ಮತ್ತು ಬೆಳ್ಳಿ ಭಾರತಕ್ಕೆ ಲಭಿಸುವುದು ಖಾತರಿಯಾಗಿದೆ.

ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತದ ಆರ್ಚರಿ ಸ್ಪರ್ಧಿಗಳ ಈ ಹಿಂದಿನ ಅತ್ಯುತ್ತಮ ಪ್ರದರ್ಶನ 2014 ರಲ್ಲಿ ದಾಖಲಾಗಿತ್ತು. ಇಂಚೋನ್‌ನಲ್ಲಿ ನಡೆದಿದ್ದ ಕೂಟದಲ್ಲಿ ತಲಾ ಒಂದು ಚಿನ್ನ, ಬೆಳ್ಳಿ ಹಾಗೂ ಕಂಚು ಗೆದ್ದುಕೊಂಡಿತ್ತು.

'ಕಾಂಪೌಂಡ್ ಮಹಿಳೆಯರ ತಂಡದ ವಿಭಾಗದಲ್ಲಿ ಭಾರತ ಇದೇ ಮೊದಲ ಬಾರಿ ಚಿನ್ನ ಗೆದ್ದಿದೆ. ಆದ್ದರಿಂದ ಈ ಸಾಧನೆ ನಮಗೆ ಹೆಚ್ಚಿನ ಖುಷಿ ನೀಡಿದೆ' ಎಂದು ಜ್ಯೋತಿ ಪ್ರತಿಕ್ರಿಯಿಸಿದ್ದಾರೆ.

ಮುಖ್ಯಾಂಶಗಳು

- ಮಹಿಳೆಯರಿಗೆ ಚೀನಾ ತೈಪೆ ವಿರುದ್ಧ 230–229 ರಿಂದ ಗೆಲುವು
- ಫೈನಲ್‌ನಲ್ಲಿ ದಕ್ಷಿಣ ಕೊರಿಯಾ ಮಣಿಸಿದ ಪುರುಷರು
- ಓಜಸ್, ಜ್ಯೋತಿಗೆ ಎರಡನೇ ಚಿನ್ನ

ಮಹಿಳಾ ತಂಡದವರು ಕ್ವಾರ್ಟರ್ ಫೈನಲ್‌ನಲ್ಲಿ 11 ಪಾಯಿಂಟ್ಸ್‌ಗಳಿಂದ ಹಾಂಗ್‌ಕಾಂಗ್ (231–220) ತಂಡವನ್ನು ಮಣಿಸಿದ್ದರೆ, ಸೆಮಿಫೈನಲ್‌ನಲ್ಲಿ 14 ಪಾಯಿಂಟ್ಸ್‌ಗಳಿಂದ ಇಂಡೊನೇಷ್ಯಾ ವಿರುದ್ಧ ಗೆದ್ದಿದ್ದರು.

ಪುರುಷರ ತಂಡದವರು ಎಂಟರಘಟ್ಟದಲ್ಲಿ 235–221 ರಿಂದ ಭೂತಾನ್ ವಿರುದ್ಧ ಜಯಿಸಿದ್ದರೆ, ಸೆಮಿಯಲ್ಲಿ ಚೀನಾ ತೈಪೆಯನ್ನು ಪರಾಭವಗೊಳಿಸಿದ್ದರು.

ಪುರುಷರ ಕಾಂಪೌಂಡ್ ವಿಭಾಗದಲ್ಲಿ ಚಿನ್ನ ಗೆದ್ದ ಭಾರತ ತಂಡದ ಅಭಿಷೇಕ್ ವರ್ಮಾ, ಪ್ರಥಮೇಶ್ ಜಾವ್ಕರ್ ಮತ್ತು ಓಜಸ್ ದೇವತಾಳೆ ಅವರು ಸಂಭ್ರಮಿಸಿದರು –ಪಿಟಿಐ ಚಿತ್ರ

ಪದಕ ಪಟ್ಟಿ (ಅಗ್ರ 10 ದೇಶ)

ರ್‍ಯಾಂಕ್	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಚೀನಾ	179	99	55	333
2	ಜಪಾನ್	44	54	60	158
3	ದಕ್ಷಿಣ ಕೊರಿಯಾ	33	47	77	157
4	ಭಾರತ	21	32	33	86
5	ಉಜ್ಬೇಕಿಸ್ತಾನ	19	16	25	60
6	ಚೀನಾ ತೈಪೆ	15	15	23	53
7	ಉತ್ತರ ಕೊರಿಯಾ	10	16	9	35
8	ಥಾಯ್ಲೆಂಡ್	10	14	27	51
9	ಬಹರೇನ್	10	2	5	17
10	ಇರಾನ್	8	17	17	42

ಸ್ಕ್ವಾಷ್: ವೈಯಕ್ತಿಕ ವಿಭಾಗದಲ್ಲಿ ಸೌರವ್ ಘೋಷಾಲ್‌ಗೆ ಬೆಳ್ಳಿ

ದೀಪಿಕಾ ಜೋಡಿಗೆ ಬಂಗಾರ

ಸ್ಕ್ವಾಷ್ ಮಿಶ್ರ ಡಬಲ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ದೀಪಿಕಾ ಪಳ್ಳಿಕಲ್ ಮತ್ತು ಹರಿಂದರ್ ಪಾಲ್ ಸಿಂಗ್ ಸಂಧು –ಪಿಟಿಐ ಚಿತ್ರ

ಹಾಂಗ್‌ಝೌ (ಪಿಟಿಐ): ಕೆಲವು ಆತಂಕದ ಕ್ಷಣಗಳನ್ನು ಎದುರಿಸಿದರೂ, ಅನುಭವಿಗಳಾದ ದೀಪಿಕಾ ಪಳ್ಳಿಕಲ್ ಮತ್ತು ಹರಿಂದರ್ ಪಾಲ್ ಸಿಂಗ್ ಸಂಧು ಅವರು ಮಲೇಷ್ಯಾ ಜೋಡಿಯ ಪ್ರಬಲ ಹೋರಾಟ ಮೆಟ್ಟಿನಿಂತು ಏಷ್ಯನ್ ಕ್ರೀಡಾಕೂಟದ ಸ್ಕ್ವಾಷ್‌ನಲ್ಲಿ ಮಿಕ್ಸೆಡ್ ಡಬಲ್ಸ್ ಸ್ವರ್ಣ ಪದಕ ಗೆಲ್ಲುವಲ್ಲಿ ಯಶಸ್ವಿಯಾದರು. ಸಿಂಗಲ್ಸ್‌ನಲ್ಲಿ ಸೌರವ್ ಘೋಷಾಲ್ ಬೆಳ್ಳಿ ಗೆದ್ದರು.

35 ನಿಮಿಷಗಳವರೆಗೆ ನಡೆದ ತೀವ್ರ ಹೋರಾಟದ ಪಂದ್ಯದಲ್ಲಿ ದೀಪಿಕಾ–ಹರಿಂದರ್ ಪಾಲ್ 11–10, 11–10 ರಿಂದ ಮಲೇಷ್ಯಾದ ಅಯಿಫಾ ಬಿನ್ತಿ ಅಜಮಾನ್– ಮೊಹಮ್ಮದ್ ಸ್ಯಾಫಿಕ್ ಬಿನ್ ಮೊಹಮದ್ ಕಮಲ್ ಅವರನ್ನು ಸೋಲಿಸಿದರು. ಇದು ಭಾರತಕ್ಕೆ ಸ್ಕ್ವಾಷ್‌ನಲ್ಲಿ ಎರಡನೇ ಚಿನ್ನ.

ಭಾರತ 2014ರ ಇಂಚಿಯಾನ್ ಕ್ರೀಡೆಗಳಲ್ಲಿ ಒಂದು ಚಿನ್ನ (ಪುರುಷರ ತಂಡ ಸ್ಪರ್ಧೆ), ಎರಡು ಬೆಳ್ಳಿ, ಒಂದು ಕಂಚಿನ ಪದಕ ಗಳಿಸಿತ್ತು. ಅದು ಇದುವರೆಗಿನ ಶ್ರೇಷ್ಠ ಪ್ರದರ್ಶನವಾಗಿತ್ತು. ಇಲ್ಲಿ ಅದನ್ನು ಮೀರಿದ ಪ್ರದರ್ಶನ ಮೂಡಿಬಂದಿದೆ. ಎರಡು ಚಿನ್ನ, ಒಂದು ಬೆಳ್ಳಿ, ಒಂದು ಕಂಚಿನ ಪದಕ ಗೆದ್ದುಕೊಂಡಿದೆ.

'ಅಂಕಣದಲ್ಲೇನಾಯಿತು ಎಂಬುದನ್ನು ನಾನು ನೆನಪಿನಲ್ಲಿಡುವುದಿಲ್ಲ. ಅದು ಇಬ್ಬರಿಗೂ ಮಸುಕಾದಂತೆ. ಕೊನೆಯ ಪಾಯಿಂಟ್ ಒಂದು ನೆನಪಿನಲ್ಲಿರುತ್ತದೆ. ತೀವ್ರ ಸಂತಸವಾಗಿದೆ. ಚಿನ್ನ ಗೆದ್ದಿರುವುದರಿಂದ ಹೆಮ್ಮೆಯೆನಿಸಿದೆ' ಎಂದು ದೀಪಿಕಾ ಅವರು ಹೇಳಿದರು.

'ಮೊದಲ ಗೇಮ್‌ನಲ್ಲಿ ಭಾರತದ ಸ್ಪರ್ಧಿಗಳು ಎದುರಾಳಿಗಳಿಗೆ ಎರಡು ಸಲ ಗೇಮ್ ಪಾಯಿಂಟ್ ತಪ್ಪಿಸಿದರು. ಅಯಿಫಾ ಅವರ ಫೋರ್‌ಹ್ಯಾಂಡ್ ಹೊಡೆತ ನೆಟ್‌ಗೆ ಬಡಿದು ಭಾರತ ಕೊನೆಗೂ ಗೇಮ್ ಗಳಿಸಿತು.

ಒಂದು ಹಂತದಲ್ಲಿ ಎರಡನೇ ಗೇಮ್‌ನಲ್ಲಿ ಭಾರತ 9–3 ರಿಂದ ಮುಂದಿದ್ದು ನಿರಾಯಾಸ ಗೆಲುವಿನಂಚಿನಲ್ಲಿತ್ತು. ಆದರೆ ಮಲೇಷ್ಯಾದ ಜೋಡಿ ಸತತವಾಗಿ ಏಳು ಪಾಯಿಂಟ್ ಪಡೆದು ಅಂತರವನ್ನು 10–9ಕ್ಕೆ ಇಳಿಸಿದ್ದರಿಂದ ಹೋರಾಟ ತೀವ್ರಗೊಂಡಿತು. ಈ ಹಂತದಲ್ಲಿ, 34 ವರ್ಷದ ಹರಿಂದರ್ ಅವರ ಎರಡು ಬ್ಯಾಕ್‌ಹ್ಯಾಂಡ್ ಹೊಡೆತಗಳಿಂದ ಗೇಮ್ ಮತ್ತು ಪಂದ್ಯವನ್ನು ಭಾರತ ಕಡೆ ಇತ್ಯರ್ಥಗೊಳಿಸಿದರು.

ಸೌರವ್‌ಗೆ ಬೆಳ್ಳಿ: ಸೌರವ್ ಘೋಷಾಲ್, ಉತ್ತಮ ಹೋರಾಟ ಕಂಡ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಮಲೇಷ್ಯಾದ ಎನ್ ಯೊವ್ ಎನ್‌ಜಿ ಎದುರು ಸೋಲನುಭವಿಸಿದರು. ಸುಮಾರು ಒಂದು ಗಂಟೆಯ ಪಂದ್ಯದಲ್ಲಿ ಮಲೇಷ್ಯಾದ ಆಟಗಾರ 9–11, 11–9, 11–5, 11–7ರಲ್ಲಿ ಜಯಗಳಿಸಿದರು.

ಘೋಷಾಲ್ ಫೈನಲ್‌ವರೆಗೆ ಒಂದೂ ಗೇಮ್ ಕಳೆದುಕೊಂಡಿರಲಿಲ್ಲ. ಮೊದಲ ಗೇಮ್‌ನಲ್ಲಿ ಮಲೇಷ್ಯಾದ ಆಟಗಾರ 8–6 ಮುನ್ನಡೆಯಲ್ಲಿದ್ದರು. ಆದರೆ ಆಕರ್ಷಕ ಫೋರ್‌ಹ್ಯಾಂಡ್ ಹೊಡೆತಗಳ ಮೂಲಕ ಸ್ಕೋರ್ ಸಮಮಾಡಿಕೊಂಡ ಸೌರವ್ ನಂತರ ಆ ಗೇಮ್ ಕೂಡ ಪಡೆದು ಉತ್ತಮ ಆರಂಭ ಮಾಡಿದರು. ಆದರೆ ಎರಡನೇ ಗೇಮ್‌ನಲ್ಲಿ ಮತ್ತೆ ಹಿಡಿತ ಪಡೆದ ಎನ್‌ಜಿ ಅದನ್ನು 11–9ರಲ್ಲಿ ಪಡೆದರು. ಇದು ಘೋಷಾಲ್ ಏಕಾಗ್ರತೆಯ ಮೇಲೆ ಪರಿಣಾಮ ಬೀರಿತು. ಮೂರು ಮತ್ತು ನಾಲ್ಕನೇ ಗೇಮ್‌ನಲ್ಲಿ ಭಾರತದ ಆಟಗಾರ ಹೆಚ್ಚಿನ ಹೋರಾಟ ತೋರಲಿಲ್ಲ.

ಸ್ಕ್ವಾಷ್ ಸಿಂಗಲ್ಸ್‌ನಲ್ಲಿ ಬೆಳ್ಳಿ ಗೆದ್ದ ಸೌರವ್ ಘೋಷಾಲ್ (ಬಲ) ಆಟದ ವೈಖರಿ –ಪಿಟಿಐ ಚಿತ್ರ

ಕಜಕಸ್ತಾನ– ಭಾರತ ಮಹಿಳಾ ಪಂದ್ಯ 'ಡ್ರಾ'

ಚೆಸ್: ಪುರುಷರ ತಂಡಕ್ಕೆ ಜಯ

ಹಾಂಗ್‌ಝೌ (ಪಿಟಿಐ): ನಾಲ್ಕನೇ ಬೋರ್ಡ್‌ನಲ್ಲಿ ಅರ್ಜುನ್ ಇರಿಗೇಶಿ ದಾಖಲಿಸಿದ ಗೆಲುವಿನಿಂದ ಅಗ್ರ ಶ್ರೇಯಾಂಕದ ಭಾರತ ಪುರುಷರ ತಂಡ, ಏಷ್ಯನ್ ಗೇಮ್ಸ್ ಚೆಸ್ ತಂಡ ವಿಭಾಗದ ಏಳನೇ ಸುತ್ತಿನಲ್ಲಿ ಗುರುವಾರ ವಿಯೆಟ್ನಾಂ ಮೇಲೆ 2.5–1.5 ಅಂಕಗಳಿಂದ ಜಯಗಳಿಸುವಲ್ಲಿ ಯಶಸ್ವಿ ಆಯಿತು.

ಎರಡನೇ ಶ್ರೇಯಾಂಕದ ಭಾರತ ಮಹಿಳಾ ತಂಡ ಏಳನೇ ಸುತ್ತಿನಲ್ಲಿ ಕಜಕಸ್ತಾನ ತಂಡದ ಎದುರು 2–2 ರಿಂದ 'ಡ್ರಾ' ಮಾಡಿಕೊಳ್ಳಬೇಕಾಯಿತು.

ಭಾರತದ ಎರಡೂ ತಂಡಗಳು ತಲಾ 11 ಪಾಯಿಂಟ್ಸ್ ಕಲೆಹಾಕಿದ್ದು, ಎರಡನೇ ಸ್ಥಾನ ಕಾಪಾಡಿಕೊಂಡಿವೆ. ಇನ್ನು ಎರಡು ಸುತ್ತಿನ ಪಂದ್ಯಗಳು ಉಳಿದಿವೆ. ಇರಾನ್ (12) ಪುರುಷರ ವಿಭಾಗದಲ್ಲಿ ಅಗ್ರಸ್ಥಾನದಲ್ಲಿದೆ. ಉಜ್ಬೇಕಿಸ್ತಾನ (10) ಮೂರನೇ ಸ್ಥಾನದಲ್ಲಿದೆ.

ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿ.ಗುಕೇಶ್, ಆರ್.ಪ್ರಜ್ಞಾನಂದ ಮತ್ತು ವಿದಿತ್ ಎಸ್.ಗುಜರಾತಿ ತಮ್ಮ ಪಂದ್ಯಗಳನ್ನು ವಿಯೆಟ್ನಾಮಿನ ಎದುರಾಳಿಗಳ ಎದುರು ಡ್ರಾ ಮಾಡಿಕೊಂಡರು. ಇರಿಗೇಶಿ ಕೊನೆಯ ಬೋರ್ಡ್‌ನಲ್ಲಿ ತುವಾನ್ ಮಿನ್ ತ್ರಾನ್ ಎದುರು ಗೆದ್ದ ಕಾರಣ ಭಾರತ ಬಚಾವಾಯಿತು.

ಭಾರತ ಪುರುಷರ ತಂಡ ಶುಕ್ರವಾರ ಎಂಟನೇ ಸುತ್ತಿನಲ್ಲಿ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ.

ಮಹಿಳಾ ವಿಭಾಗದಲ್ಲಿ ಭಾರತ ಮೂರನೇ ಶ್ರೇಯಾಂಕದ ಕಜಕಸ್ತಾನ ಎದುರು ಡ್ರಾ ಮಾಡಿಕೊಂಡಿತು. ಎರಡನೇ ಬೋರ್ಡ್‌ನಲ್ಲಿ ಹಾರಿಕಾ, ಕಮಾಲಿದೇನೋವಾ ವಿರುದ್ಧ ಗೆದ್ದರೆ, ಮೂರನೇ ಬೋರ್ಡ್‌ನಲ್ಲಿ ವೈಶಾಲಿ, ಝಾನ್ಸಾಯಾ ಅಬ್ದುಮಲಿಕ್ ಎದುರು ಸೋಲನುಭವಿಸಿದರು. ಕೋನೇರು ಹಂಪಿ (ಮೊದಲ

ಅರ್ಜುನ್ ಇರಿಗೇಶಿ

ಮತ್ತು ವಂತಿಕಾ ಅಗರವಾಲ್ ಅವರು ಎದುರಾಳಿಗಳ ವಿರುದ್ಧ ಪಂದ್ಯಗಳನ್ನು ಡ್ರಾ ಮಾಡಿಕೊಂಡರು.

ಇಂಡೊನೇಷ್ಯಾ ತಂಡವನ್ನು 3.5–0.5ರಿಂದ ಸದೆಬಡಿದ ಅಗ್ರ ಶ್ರೇಯಾಂಕದ (13 ಪಾಯಿಂಟ್ಸ್) ಅಗ್ರಸ್ಥಾನದಲ್ಲಿ ಮುಂದುವರಿಸಿದೆ. ಭಾರತ ವಿರುದ್ಧ ಮುನ್ನಡೆಯನ್ನು ಎರಡು ಪಾಯಿಂಟ್‌ಗಳಿಗೆ ಬೆಳೆಸಿದೆ.

ಭಾರತ ಮಹಿಳಾ ತಂಡ ಎಂಟನೇ ಸುತ್ತಿನ ಪಂದ್ಯವನ್ನು ಶುಕ್ರವಾರ ಚೀನಾ ವಿರುದ್ಧ ಆಡಲಿದೆ

ಬ್ರಿಜ್: ಭಾರತ ತಂಡಕ್ಕೆ ಹಿನ್ನಡೆ

ಹಾಂಗ್‌ಝೌ (ಪಿಟಿಐ): ಭಾರತ ಪುರುಷರ ತಂಡದವರು ಏಷ್ಯನ್ ಗೇಮ್ಸ್ ಬ್ರಿಜ್ ಸ್ಪರ್ಧೆಯ ಫೈನಲ್‌ನಲ್ಲಿ ಮೊದಲ ಮೂರು ಸುತ್ತುಗಳ ಬಳಿಕ ಹಾಂಗ್‌ಕಾಂಗ್ ಎದುರು 91–132.10 ರಿಂದ ಹಿನ್ನಡೆ ಅನುಭವಿಸಿದ್ದಾರೆ.

ಬೆಳಿಗ್ಗೆ ನಡೆದ ಮೊದಲ ಅವಧಿಯ ಆಟದಲ್ಲಿ ಭಾರತಕ್ಕೆ 32–55 ರಿಂದ ಹಾಗೂ ಮಧ್ಯಾಹ್ನ ನಡೆದ ಎರಡನೇ ಅವಧಿಯಲ್ಲಿ 29–46 ರಿಂದ ಹಿನ್ನಡೆ ಎದುರಾಯಿತು.

ದಿನದ ಕೊನೆಯ ಸುತ್ತನ್ನು 30–28 ರಿಂದ ಗೆದ್ದು, ಚಿನ್ನ ಗೆಲ್ಲುವ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ. ಕೊನೆಯ ಮೂರು ಸುತ್ತಿನ ಪೈಪೋಟಿ ಶುಕ್ರವಾರ ನಡೆಯಲಿದೆ. ಭಾರತ ತಂಡವನ್ನು ಜಗ್ಗಿ ಶಿವದಾಸಾನಿ, ಸಂದೀಪ್ ಟಕರಾಲ್, ಸುಮಿತ್ ಮುಖರ್ಜಿ, ರಾಜೇಶ್ವರ್ ತಿವಾರಿ, ರಾಜು ತೊಲಾನಿ ಮತ್ತು ಅಜಯ್ ಖರೆ ಅವರು ಪ್ರತಿನಿಧಿಸಿದ್ದಾರೆ.

ಭಾರತದ ಇತರ ಪೈಲ್ವಾನರಿಗೆ ನಿರಾಸೆ; ಪೂಜಾ, ಮಾನಸಿಗೆ ಸೋಲು

ಕುಸ್ತಿ: ಅಂತಿಮ್ ಪಂಘಲ್‌ಗೆ ಕಂಚು

ಹಾಂಗ್‌ಝೌ (ಪಿಟಿಐ): ಯುವ ಕುಸ್ತಿಪಟು ಅಂತಿಮ ಪಂಘಲ್ ಅವರು ಟೋಕಿಯೊ ಒಲಿಂಪಿಕ್ಸ್ ಪದಕ ವಿಜೇತೆ ಮಂಗೋಲಿಯದ ಬೊಲೊರ್ತುಯ ಬಾತ್ ಒಚಿರ್ ಅವರನ್ನು ಮಣಿಸಿ ಕಂಚಿನ ಪದಕ ಜಯಿಸಿದರು. ಆದರೆ ಏಷ್ಯನ್ ಕ್ರೀಡಾಕೂಟದ ಕುಸ್ತಿಯಲ್ಲಿ ಗುರುವಾರ ಭಾರತದ ಇತರ ಪೈಲ್ವಾನರು ಮಿಂಚಲು ವಿಫಲರಾದರು.

ಮಹಿಳೆಯರ 53 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕದ 'ಪ್ಲೇ ಆಫ್' ಹೋರಾಟವನ್ನು ಅಂತಿಮ್ 3–1 ರಿಂದ ಗೆದ್ದರು.

19 ವರ್ಷದ ಅಂತಿಮ್, ಕ್ವಾರ್ಟರ್‌ಫೈನಲ್‌ನಲ್ಲಿ ಎರಡು ಬಾರಿಯ ವಿಶ್ವಚಾಂಪಿಯನ್ ಜಪಾನ್‌ನ ಅಕಾರಿ ಫುಜಿನಮಿ ಎದುರು ಪರಾಭವಗೊಂಡಿದ್ದರು. ಅವರು ಮೊದಲ ಸುತ್ತಿನಲ್ಲಿ 11–0 ಯಿಂದ ಉಜ್ಬೆಕಿಸ್ತಾನದ ಜಾಸ್ಮಿನಾ ಇಮಾಯೆವಾ ವಿರುದ್ಧ ಸುಲಭ ಜಯ ಸಾಧಿಸಿದ್ದರು.

ಅಂತಿಮ್ ಪಂಘಲ್

ಬೊಲೊತುರ್ಯ ವಿರುದ್ಧ ಆರಂಭದಲ್ಲೇ ಬಿಗಪಟ್ಟುಗಳನ್ನು ಹಾಕುವ ಮೂಲಕ 3–0 ರಿಂದ ಮುನ್ನಡೆ ಸಾಧಿಸಿದರು. ಕೊನೆಯಲ್ಲಿ ಮಂಗೋಲಿಯದ ಕುಸ್ತಿಪಟು ಮರುಹೋರಾಟ ನಡೆಸಿದರಾದರೂ, ಅಂತಿಮ್ ಅವರ ರಕ್ಷಣೆಯನ್ನು ಬೇಧಿಸಲು ಆಗಲಿಲ್ಲ.

ವಿನೇಶಾ ಫೋಗಟ್ ಅವರು ಗಾಯದಿಂದ ಹಿಂದೆ ಸರಿದ ಕಾರಣ ಅಂತಿಮ್ ಅವರಿಗೆ ಭಾರತ ಕುಸ್ತಿ ತಂಡದಲ್ಲಿ ಅವಕಾಶ ಲಭಿಸಿತ್ತು. ವಿನೇಶಾ ಅವರಿಗೆ ಏಷ್ಯನ್ ಕ್ರೀಡಾಕೂಟಕ್ಕೆ ನೇರ ಪ್ರವೇಶ ನೀಡಿದ್ದನ್ನು ಅಂತಿಮ್ ಅವರು ಪ್ರಶ್ನಿಸಿದ್ದರು.

ಮಹಿಳೆಯರ 50 ಕೆ.ಜಿ. ವಿಭಾಗದ ಕಂಚಿನ ಪದಕ 'ಪ್ಲೇ ಆಫ್'ನಲ್ಲಿ ಪೂಜಾ ಗೆಹಲೋತ್ 2–9 ರಿಂದ ಅಕ್ತೆಂಗೆ ಕುನಿಮ್‌ಜಯೆವಾ ಕೈಯಲ್ಲಿ ಪರಾಭವಗೊಂಡರು. 57 ಕೆ.ಜಿ. ವಿಭಾಗದಲ್ಲಿ ಮಾನಸಿ ಅಹ್ಲಾವತ್ ಅವರು ಉಜ್ಬೆಕಿಸ್ತಾನದ ಲಯ್ಲೊಕೊನ್ ಸೊಬಿರೊವಾ ಎದುರು ಸೋತರು.

ಗ್ರೀಕೊ ರೋಮನ್ ಸ್ಪರ್ಧೆಯ ಪುರುಷರ 97 ಕೆ.ಜಿ. ವಿಭಾಗದಲ್ಲಿ ನರೇಂದರ್ ಚೀಮಾ ಅವರು ಕ್ವಾರ್ಟರ್ ಫೈನಲ್‌ನಲ್ಲಿ 1–3 ರಿಂದ ದಕ್ಷಿಣ ಕೊರಿಯಾದ ಲೀ ಸೆಯೋಲ್‌ಗೆ ಮಣಿದರು. 130 ಕೆ.ಜಿ. ವಿಭಾಗದಲ್ಲಿ ನವೀನ್ ಅವರು 0–3 ರಿಂದ ಚೀನಾದ ಮೆಂಗ್ ಲಿಂಗ್‌ಝು ಎದುರು ಸೋತರು.

ಏಷ್ಯನ್ ಗೇಮ್ಸ್‌ಗೆ ನೇರ ಪ್ರವೇಶ ಪಡೆದಿರುವ ಬಜರಂಗ್ ಪೂನಿಯಾ (65 ಕೆ.ಜಿ) ಮತ್ತು ಪ್ರತಿಭಾನ್ವಿತ ಕುಸ್ತಿಪಟು ಅಮನ್ ಸೆಹ್ರಾವತ್ (56 ಕೆ.ಜಿ.) ಅವರು ಪದಕದೆಡೆಗಿನ ಅಭಿಯಾನವನ್ನು ಶುಕ್ರವಾರ ಆರಂಭಿಸಲಿದ್ದಾರೆ.

ಕಬಡ್ಡಿ: ಪುರುಷರ ತಂಡದ ಅಜೇಯ ಓಟ

ಭಾರತ–ಪಾಕ್ ಸೆಮಿ ಹಣಾಹಣಿ

ಹಾಂಗ್‌ಝೌ (ಪಿಟಿಐ): ಏಷ್ಯನ್ ಕ್ರೀಡಾಕೂಟದ ಕಬಡ್ಡಿಯಲ್ಲಿ ಅಜೇಯ ಓಟ ಮುಂದುವರಿಸಿದ ಭಾರತ ಪುರುಷರ ತಂಡದವರು ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ಸವಾಲು ಎದುರಿಸಲಿದ್ದಾರೆ.

ಗುರುವಾರ ನಡೆದ 'ಎ' ಗುಂಪಿನ ಕೊನೆಯ ಲೀಗ್ ಪಂದ್ಯದಲ್ಲಿ ಭಾರತ ತಂಡ 56–28 ರಿಂದ ಜಪಾನ್ ತಂಡವನ್ನು ಮಣಿಸಿತು. ಅದಕ್ಕೂ ಮುನ್ನ ನಡೆದಿದ್ದ ಪಂದ್ಯದಲ್ಲಿ 50–27 ರಿಂದ ಚೀನಾ ತೈಪೆ ತಂಡವನ್ನು ಸೋಲಿಸಿತ್ತು.

'ಎ' ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಭಾರತ ತಂಡ, ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಪಡೆದ ಪಾಕಿಸ್ತಾನ ವಿರುದ್ಧ ಆಡಲಿದೆ.

ಚೀನಾ ತೈಪೆ ಮತ್ತು ಜಪಾನ್ ತಂಡಗಳ ವಿರುದ್ಧ ಭಾರತ, ನಿರಾಯಾಸ ಗೆಲುವು ಸಾಧಿಸಿತು. ಚೀನಾ ತೈಪೆ ಎದುರು ವಿರಾಮದ ವೇಳೆಗೆ 28–12 ರಿಂದ ಮುನ್ನಡೆ ಸಾಧಿಸಿತ್ತು. ಪಂದ್ಯದಲ್ಲಿ ಒಟ್ಟು ಮೂರು ಸಲ ಎದುರಾಳಿಗಳನ್ನು ಆಲೌಟ್ ಮಾಡಿತಲ್ಲದೆ, ರೇಡರ್‌ಗಳು ನಾಲ್ಕು ಬೋನಸ್ ಪಾಯಿಂಟ್ಸ್ ತಂದಿತ್ತರು.

ಶುಕ್ರವಾರ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ನೇಪಾಳ ತಂಡವನ್ನು ಎದುರಿಸಲಿರುವ ಭಾರತ ಮಹಿಳಾ ತಂಡ, ಗೆಲುವಿನ ವಿಶ್ವಾಸದಲ್ಲಿದೆ

ಜಪಾನ್ ಎದುರಿನ ಪಂದ್ಯದಲ್ಲೂ ಪೂರ್ಣ ಪ್ರಾಬಲ್ಯ ಮೆರೆದ ಭಾರತದ ಆಟಗಾರರು, ವಿರಾಮದ ವೇಳೆಗೆ 24 ಪಾಯಿಂಟ್‌ಗಳ ಮುನ್ನಡೆ ಸಾಧಿಸಿದ್ದರು.

ಪುರುಷರ ವಿಭಾಗದ ಮತ್ತೊಂದು ನಾಲ್ಕರಘಟ್ಟದ ಹಣಾಹಣಿಯಲ್ಲಿ ಇರಾನ್ ಮತ್ತು ಚೀನಾ ತೈಪೆ ಹೋರಾಟ ನಡೆಸಲಿವೆ.

ಭಾರತ–ನೇಪಾಳ ಸೆಣಸು: ಶುಕ್ರವಾರ ನಡೆಯಲಿರುವ ಮಹಿಳೆಯರ ವಿಭಾಗದ ಸೆಮಿಫೈನಲ್‌ನಲ್ಲಿ ಭಾರತ– ನೇಪಾಳ ಎದುರಾಗಲಿವೆ. ಇನ್ನೊಂದು ಪಂದ್ಯದಲ್ಲಿ ಇರಾನ್– ಚೀನಾ ತೈಪೆ ತಂಡಗಳು ಆಡಲಿವೆ.

41 ವರ್ಷಗಳ ಬಳಿಕ ಪುರುಷರ ಸಿಂಗಲ್ಸ್‌ನಲ್ಲಿ ಭಾರತಕ್ಕೆ ಪದಕ ಖಚಿತ; ಚಿರಾಗ್–ಸಾತ್ವಿಕ್‌ಗೆ ಜಯ

ಸೆಮಿಫೈನಲ್ ಪ್ರವೇಶಿಸಿದ ಪ್ರಣಯ್

ಹಾಂಗ್‌ಝೌ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ ಎಚ್‌.ಎಸ್. ಪ್ರಣಯ್ ಏಷ್ಯನ್ ಕ್ರೀಡಾಕೂಟದಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ. ಪುರುಷರ ಸಿಂಗಲ್ಸ್‌ನಲ್ಲಿ ಮಲೇಷ್ಯಾದ ಲೀ ಝಿ ಜಿಯಾ ಅವರನ್ನು ಗುರುವಾರ ಮಣಿಸಿ, ಸೆಮಿಫೈನಲ್‌ಗೆ ಲಗ್ಗೆ ಹಾಕುವ ಮೂಲಕ ಪದಕ ಖಚಿತಪಡಿಸಿಕೊಂಡಿದ್ದಾರೆ. ಆದರೆ, ಮಹಿಳೆಯರ ಸಿಂಗಲ್ಸ್‌ನಲ್ಲಿ ಮಾಜಿ ವಿಶ್ವ ಚಾಂಪಿಯನ್ ಪಿ.ವಿ. ಸಿಂಧು ನಿರಾಸೆ ಅನುಭವಿಸಿದ್ದಾರೆ.

ಏಷ್ಯನ್ ಕ್ರೀಡಾಕೂಟದಲ್ಲಿ 41 ವರ್ಷಗಳ ಬಳಿಕ ಪುರುಷರ ಸಿಂಗಲ್ಸ್‌ನಲ್ಲಿ ಭಾರತಕ್ಕೆ ಪದಕ ಖಚಿತವಾಗಿದೆ. 1982ರಲ್ಲಿ (ನವದೆಹಲಿ) ನಡೆದ ಕೂಟದಲ್ಲಿ ಭಾರತ ಕೊನೆಯದಾಗಿ ಈ ವಿಭಾಗದಲ್ಲಿ ಪದಕ ಗೆದ್ದಿತ್ತು. ಅಂದು ಸೈಯದ್ ಮೋದಿ ಕಂಚು ಗೆದ್ದಿದ್ದರು.

ಬೆನ್ನುನೋವನ್ನು ಲೆಕ್ಕಿಸದೆ ದಿಟ್ಟ ಪ್ರದರ್ಶನ ತೋರಿದ ಭಾರತದ ಆಟಗಾರ, ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎದುರಾಳಿ ಆಟಗಾರನನ್ನು 21-16, 21-23, 22-20 ರಿಂದ ಹಿಮ್ಮೆಟ್ಟಿಸಿದರು. ತಂಡ ವಿಭಾಗದಲ್ಲಿ ಭಾರತದ ಪುರುಷರು ಭಾನುವಾರ ಬೆಳ್ಳಿ ಗೆದ್ದಿರುವುದರಿಂದ ಬ್ಯಾಡ್ಮಿಂಟನ್‌ನಲ್ಲಿ ಮತ್ತೊಂದು ಪದಕ ಪ್ರಣಯ್ ಮೂಲಕ ದೊರೆಯಲಿದೆ.

ಈಚೆಗೆ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಪ್ರಣಯ್, ಬೆನ್ನುನೋವಿನ ಕಾರಣದಿಂದ ಇಲ್ಲಿ ತಂಡ ವಿಭಾಗದ ಸ್ಪರ್ಧೆಯಿಂದ ಹೊರಗುಳಿದಿದ್ದರು. ಫೈನಲ್‌ನಲ್ಲಿ ಭಾರತ 2–3ರಿಂದ ಚೀನಾ ವಿರುದ್ಧ ಪರಾಭವಗೊಂಡಿತ್ತು.

ಆಲ್ ಇಂಗ್ಲೆಂಡ್ ಮಾಜಿ ಚಾಂಪಿಯನ್ ಆಗಿರುವ ಲೀ ಝಿ ಜಿಯಾ ಅವರು ಪ್ರಣಯ್‌ಗೆ ಉತ್ತಮ ಪೈಪೋಟಿ ನೀಡಿದರು. ಮೊದಲ ಗೇಮ್‌ನಲ್ಲಿ 5–11 ರಿಂದ ಹಿನ್ನಡೆಯಲ್ಲಿದ್ದಾಗ ಪುಟಿದೆದ್ದ ಭಾರತದ ಆಟಗಾರ ನಿಖರ ಆಟದ ಮೂಲಕ ಮುನ್ನಡೆ ಪಡೆದರು. ಆದರೆ, ನಂತರದಲ್ಲಿ ಪಾರಮ್ಯ ಸಾಧಿಸಿದ ಮಲೇಷ್ಯಾ ಆಟಗಾರ ಗೇಮ್ ಸಮಬಲಗೊಳಿಸಿದರು. ನಿರ್ಣಾಯಕ ಗೇಮ್‌ನಲ್ಲಿ 16–16 ಪಾಯಿಂಟ್ ಗಳಿಸಿದ್ದಾಗ ಪ್ರಣಯ್ ಬೆನ್ನು ನೋವು ತಡೆಯಲಾಗದೆ ವೈದ್ಯಕೀಯ ನೆರವು ಪಡೆದರು. ಛಲಬಿಡದೆ ಆಟ ಮುಂದುವರಿಸಿದ ಅವರು ನಾಲ್ಕರ ಘಟ್ಟಕ್ಕೆ ಸ್ಥಾನ ಖಚಿತ ಪಡಿಸಿಕೊಂಡರು.

78 ನಿಮಿಷಗಳ ಹೋರಾಟದಲ್ಲಿ ಗೆಲುವು ಸಾಧಿಸುತ್ತಿದ್ದಂತೆ ಪ್ರಣಯ್ ಅಂಗಣದಲ್ಲೇ ಮಲಗಿ ನಿಟ್ಟುಸಿರುಬಿಟ್ಟರು. ನಂತರ ಶರ್ಟ್ ಕಳಚಿ ಸಂಭ್ರಮಿಸಿ, ಮುಖ್ಯ ಕೋಚ್ ಪುಲ್ಲೇಲ ಗೋಪಿಚಂದ್ ಅವರನ್ನು ಬಿಗಿದಪ್ಪಿಕೊಂಡರು.

'ಈ ಪಂದ್ಯ ನಿಜವಾಗಿಯೂ ಕಠಿಣವಾಗಿತ್ತು. ಲೀ ಯಾವಾಗಲೂ ಪ್ರಬಲ ಎದುರಾಳಿ ಎಂದು ನಾನು ಭಾವಿಸುತ್ತೇನೆ. ನಾನು ದೈಹಿಕವಾಗಿ ಶೇ 80ರಷ್ಟು ಮಾತ್ರ ಸದೃಢನಾಗಿದ್ದೆ. ನನ್ನಲ್ಲಿನ ಹೋರಾಟ ಮನೋಭಾವಕ್ಕೆ ಫಲ ಸಿಕ್ಕಿದೆ' ಎಂದು ಪ್ರಣಯ್ ಪ್ರತಿಕ್ರಿಯಿಸಿದರು.

ಭಾರತದ ಎಚ್‌.ಎಸ್. ಪ್ರಣಯ್ –ಪಿಟಿಐ ಚಿತ್ರ

ಪಿ.ವಿ. ಸಿಂಧು ಹೋರಾಟ ಅಂತ್ಯ

ಮಹಿಳೆಯರ ಸಿಂಗಲ್ಸ್‌ನ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಹೋರಾಟ ಅಂತ್ಯಗೊಳಿಸಿದರು. ಈ ಮೂಲಕ ಒಂಬತ್ತು ವರ್ಷಗಳಲ್ಲಿ ಮೊದಲ ಬಾರಿ ಪ್ರಮುಖ ಕೂಟದಿಂದ ಬರಿಗೈಯಲ್ಲಿ ತವರಿಗೆ ಬರಬೇಕಿದೆ.

ಸಿಂಧು 16-21, 12-21 ರಿಂದ ಚೀನಾದ ಹೀ ಬಿಂಗ್ಜಿಯಾವೊ ಅವರಿಗೆ ಮಣಿದರು. ಮೊದಲ ಗೇಮ್‌ನ ಆರಂಭದಲ್ಲಿ ಸಮಬಲದ ಪೈಪೋಟಿ ನಡೆಸಿದ ಸಿಂಧು, ನಂತರ ಹಿಡಿತ ಕಳೆದುಕೊಂಡರು. ಎದುರಾಳಿ ಆಟಗಾರ್ತಿ ನಿಖರ ಪ್ಲೇಸ್‌ಮೆಂಟ್ ಮತ್ತು ಸ್ಮ್ಯಾಷ್‌ಗಳ ಮೂಲಕ ಮುನ್ನಡೆ ಸಾಧಿಸಿದರು.

ಸೆಮಿಗೆ ಸಾತ್ವಿಕ್–ಚಿರಾಗ್: ಗೆಲುವಿನ ಓಟ ಮುಂದುವರಿಸಿದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 21–7, 21–9 ರಿಂದ ಸಿಂಗಪುರದ ಎಂಗ್ ಜೂ ಜೀ ಮತ್ತು ಜೊಹಾನ್ ಪ್ರಜೊಗೊ ಅವರನ್ನು ಮಣಿಸಿತು.

ನಾಲ್ಕರಘಟ್ಟದ ಪಂದ್ಯದಲ್ಲಿ ಅವರು ಮಲೇಷ್ಯಾದ ಆ್ಯರನ್ ಚಿಯಾ ಮತ್ತು ಸೊಹ್ ವೂಯ್ ಯಿಕ್ ವಿರುದ್ಧ ಪೈಪೋಟಿ ನಡೆಸುವರು.

HONDA
Dio
Dio
WANNA
HAVE FUN?
Dio
With H-Smart Technology
Smart Key with H-Smart Technology | Sporty Look | Alloy Wheels
Intelligent Meter
Real-Time Mileage
Average Mileage
Distance To Empty
Dio 125
With H-Smart Technology
Powerful Muffler Sound | Sporty Look | Alloy Wheels and Wave Disc Brake
BOOK ONLINE NOW!
www.honda2wheelersindia.com
SUPER 6 OFFERS*
Low ROI @ 6.99%
No Cost EMI
Cashback Upto ₹5000
Down Payment ₹0
100 Pe100
No Hypothecation
1. Connect earphones
2. Scan QR code
3. Enjoy the video
To Know More, WhatsApp or missed call on 7230032200 or scan the QR Code
CLICK BOOK RELAX
Honda 2Wheelers
BOOK NOW
Honda Motorcycle & Scooter India Pvt. Ltd., Registered Office:
Plot No. 1, Sector - 03, IMT Manesar, Distt. Gurugram, (Haryana) - 122050, India; Website: www.honda2wheelersindia.com; Customer Care: customercare@honda2wheelersindia.com
*Terms and Condition apply. Product shown in the picture may vary from the actual product available in the market. Accessories shown in the product are not part of the standard equipment. Features may vary with colours & variants.
Honda Exclusive Authorised Dealerships: Ananda Honda - BOMMANAHALLI: 9738074162; HEBBAGODI: 9738074162; SARJAPUR RD: 9738074162; JIGANI: 9738066600; HOSA ROAD: 9738066600; Anekal Honda - ANEKAL: 080-27830234, 9880417779; City Honda - ST. JOHNS ROAD: 08025139199, 9480812350; H.R.B.R: 41614777, 9845941305; FRAZER TOWN: 9480812353; LALBAGH: 9480812397, 080-43333330; Haiku Honda - DOMLUR: 49656565, 9342432156; INDIRANAGAR: 9844478636; Dhruvdesh Honda - MEKHRI CIRCLE: 40500700, 9343968413; THANISANDRA (NAGAWARA): 7353030333; YELAHANKA: 40551122, 9343968407; VIDYARANYAPURA: 8150866333, 8152866333; Planet Honda - RAJAJINAGAR: 08068898888, 9980927735; PEENYA: 08068898888, 9980927730; SUNKADAKATTE: 08068898888, 9980927728; BASAWESHWAR NAGAR: 08068898888, 9980927726; Raja Honda - KORAMANGALA: 08067329000,9035310055; Prime Honda - VIJAYNAGAR: : 080 - 23010300, 8050503111; NAGARBHAVI: 080-23010700, 8095778000; KAMAKSHIPALYA: 080-23019700, 7829900444; Silicon Honda - RV ROAD: 9844502222, 9844726973; BANSHANKARI: 9844502444, 8722279009; R.R. NAGAR: 9964388333, 9071175200; MONOTYPE: 7353744400, JAYANAGAR: 8722801626; Saphire Honda - JP NAGAR: 7026000002; BG ROAD: 8553004004; KKP ROAD: 8553004002; PUTTENHALLI: 7353251007; GOTTIGERE: 8553004009; BTM: 7353252007; VFM Honda - KR PURAM: 9071858885, 9071858881; HENNUR ROAD: 9108989817, 9108989818; Tansi Honda - HOODI: 7259030091, 9741410101; MARTHAHALLI: 7259030100, 7259030093; VARTHUR RD: 8105597877, 9686573013; GUNJUR: 9606450642, 9606450643; Turbo Honda - DODDABALLAPURA: 7022620885; NELAMANAGALA: 080-27722333, 7022008894; Wings Honda - HOSKOTE: 7676907272; MALUR: 7676155600; TC PALYA: 9590815959; Sri Kausthub Honda - KOLAR: 9900018515, 9900018516;; KGF: 9900092115; MULBAGAL: 9008941044; SRINIVASAPUR: 8495956515; BANGARPET - 9980607661; Namma Honda - CHIKKABALLAPUR: 9606060610, 9611996114; CHINTAMANI: 9606060620, 9611996115; BAGEPALLI: 9611596112, 9611596110; Shankar Honda - GOWRIBIDANUR: 9900007422/33; SIDLAGHATTA: 9611596113; Century Honda - TUMKUR: 08162261939, 9620263388; SIRA: 9620267057, 9538392767; GUBBI: 9620267051; Shantinath Honda - TUMKUR: 08162279969, 9449334359; KUNIGAL: 7022276603; KUNIGAL ROAD: 9844351599, 9844351399; KORATAGERE: 9606955149; Honey Honda - PAVAGADA: 9535941215; Annapoorna Honda - MADHUGIRI: 9886627429; Vignesh Honda - TIPTUR: 9886711161; TURUVEKERE: 9448214014; Sri Srinivasa Honda - CHIKKANAYAKANAHALLI: 8722522221; Prestige Honda - RAMNAGARA: 9606490030, 9606036040; KANAKAPURA: 9606036053, 9606036054; CHANNAPATNA: 9606490034, 9035717953; ART Honda - BIDADI: 9945966771, 9164871007; Springs Honda - KENGERI: 9513771114; Nideesh Honda - DEVANAHALLI: 9108871999, 9686608579; VIJAYAPURA: 9108871999, 7899870207.
For Bulk/Institutional enquiries, please write us at: institutionalsales@honda2wheelersindia.com